# ಸನಾತನ ಭಾರತ

(ಮಹಾಕಾವ್ಯದಲ್ಲಿ ಮತ್ತು ಮಹಾವ್ಯಕ್ತಿಗಳಲ್ಲಿ)

ಸ್ವಾಮಿ ವಿವೇಕಾನಂದ

ಪ್ರಕಾಶಕರು :

ಶ್ರೀರಾಮಕೃಷ್ಣಾಶ್ರಮ

ಮೈಸೂರು

ಬೆಲೆ ೧—೮—೦

UNIVERSAL LIBRARY
OU_200003
UNIVERSAL LIBRARY

—28-4-81—10,000.

OSMANIA UNIVERSITY LIBRARY

Accession No.

t should be returned on or before the date last marked below

ಮೊದಲನೆ ಮುದ್ರಣ ೧೯೫೫

ಪ್ರಕಾಶಕರು.

ಸ್ವಾಮಿ ಶಾಂಭವಾನಂದ

ಅಧ್ಯಕ್ಷ

ಶ್ರೀರಾಮಕೃಷ್ಣಾಶ್ರಮ, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀಪಂಚಾಚಾರ್ಯ ಎಲೆಕ್ಟ್ರಿ ಪ್ರೆಸ್ಸಿನಲ್ಲಿ ಡಿ. ರಾಜರತ್ನಂ ಅವರಿಂದ ಮುದ್ರಿಸಲ್ಪಟ್ಟಿತು.

# ವಿಷಯಾನುಕ್ರಮಣಿಕೆ


| | | | ಪುಟ |
|---|---|---|---|
| ೧ | ರಾಮಾಯಣ | .... | ೧ |
| ೨ | ಮಹಾಭಾರತ | .... | ೨೦ |
| ೩ | ಗೀತಾ ವಿಚಾರ | .... | ೪೮ |
| ೪ | ಜಡಭರತ | .... | ೫೮ |
| ೫ | ಪ್ರಹಲ್ಲಾದ | .... | ೬೩ |
| ೬ | ಪ್ರಪಂಚದ ಮಹಾಗುರುಗಳು | .... | ೬೮ |
| ೭ | ಭಗವಾನ್ ಬುದ್ಧ | .... | ೮೯ |
| ೮ | ಜಗತ್ತಿಗೆ ಬುದ್ಧನ ಸಂದೇಶ | ..... | ೯೨ |
| ೯ | ಬಾಲ ಗೋಪಾಲ | .... | ೧೧೦ |
| ೧೦ | ಹಿಂದೂ ಧರ್ಮದ ತೂರ್ಯವಾಣಿ | .... | ೧೨೦ |

# ಸನಾತನ ಭಾರತ

## (ಮಹಾಕಾವ್ಯದಲ್ಲಿ ಮತ್ತು ಮಹಾವ್ಯಕ್ತಿಗಳಲ್ಲಿ)

೧

## ರಾಮಾಯಣ

ಸಂಸ್ಕೃತ ಸಾಹಿತ್ಯದಲ್ಲಿ ಬಹಳ ಪುರಾತನವಾದ ಎರಡು ಮಹಾಕಾವ್ಯಗಳಿವೆ. ಇದಲ್ಲದೆ ಬೇರೆ ನೂರಾರು ಮಹಾ ಕವಿತೆಗಳಿವೆ. ಕಳೆದ ಎರಡು ಸಾವಿರ ವರುಷಗಳಿಂದಲೂ ಸಂಸ್ಕೃತಭಾಷೆ ಮಾತನಾಡುವ ಭಾಷೆ ಅಲ್ಲದಿದ್ದರೂ ಸಂಸ್ಕೃತಭಾಷೆ ಮತ್ತು ಸಾಹಿತ್ಯ ಇಂದಿನವರೆಗೂ ಉಳಿದುಕೊಂಡು ಬಂದಿದೆ. ನಾನೀಗ ನಿಮಗೆ ಬಹಳ ಪುರಾತನವಾದ ರಾಮಾಯಣ ಮಹಾಭಾರತಗಳೆಂಬ ಎರಡು ಕಾವ್ಯಗಳ ವಿಚಾರವಾಗಿ ಮಾತನಾಡುವೆನು. ಇವರಲ್ಲಿ ಪುರಾತನ ಭಾರತೀಯರ ಆಚಾರ, ವ್ಯವಹಾರ, ಸಾಮಾಜಿಕಸ್ಥಿತಿ ಮತ್ತು ಸಂಸ್ಕೃತಿಯ ವಿಷಯಗಳಿವೆ. ಇವೆರಡರಲ್ಲಿ ಬಹಳ ಪುರಾತನವಾದುದನ್ನು ರಾಮಾಯಣ ಅಥವಾ ರಾಮಚರಿತೆ ಎಂದು ಕರೆಯುವೆವು. ಇದಕ್ಕೆ ಮುಂಚೆ ಎಷ್ಟೋ ಕಾವ್ಯಸಾಹಿತ್ಯವಿತ್ತು. ಹಿಂದೂಗಳ ಪವಿತ್ರಗ್ರಂಥವಾದ ವೇದಗಳ ಬಹುಭಾಗವೆಲ್ಲ ಒಂದು ರೀತಿಯ ಪ್ರಾಸದಲ್ಲಿ ಇದೆ. ಆದರೆ ರಾಮಾಯಣವನ್ನು ಎಲ್ಲರೂ ಒಮ್ಮತದಿಂದ ಆದಿಕಾವ್ಯವೆನ್ನುವರು.

ಈ ಕವಿಯ ಅಥವಾ ಋಷಿಯ ಹೆಸರು ವಾಲ್ಮೀಕಿ. ಕಾಲಾನಂತರ ಈ ಆದಿಕವಿಯೇ ಅನೇಕ ಕಾವ್ಯಗಳನ್ನು ಬರೆವನೆಂದೂ ಪಲವು ಆತನ ಹೆಸರಿನಲ್ಲಿ ಹೋಗುವುವು. ಕಾಲಕ್ರಮೇಣ ಇವನದಲ್ಲದ ಹಲವು ಕಾವ್ಯಗಳನ್ನು ಕೂಡ ಈತನೇ ಬರೆದ ಎನ್ನುವುದು ರೂಢಿಯಾಗಿ ಹೋಯಿತು. ಈ ಪ್ರಕ್ಷಿಪ್ತಭಾಗಗಳನ್ನು ಗಮನಕ್ಕೆ ತಂದುಕೊಳ್ಳದೇ ಇದ್ದರೂ ಪ್ರಪಂಚದ ಸಾಹಿತ್ಯದಲ್ಲಿ ಎಣೆಯಿಲ್ಲದ ಸುಂದರಮಹಾಕಾವ್ಯ ರಚನೆಯಾಗಿ ನಮ್ಮ ಭಾಗಕ್ಕೆ ಅದು ದೊರಕಿದೆ.

ಒಬ್ಬ ಯುವಕನಿದ್ದ. ಮತ್ತಾವರೀತಿಯಿಂದಲೂ ಅವನಿಗೆ ತನ್ನ ಸಂಸಾರವನ್ನು ನಿರ್ವಹಿಸುವುದಕ್ಕೆ ಆಗುತ್ತಿರಲಿಲ್ಲ. ಅವನೊಳ್ಳೆ ದೃಢಕಾಯನಾಗಿದ್ದ. ಕೊನೆಗೆ ಅವನು ಒಬ್ಬ ದರೋಡೆಕಾರನಾದ. ದಾರಿಯಲ್ಲಿ ಹೋಗುವವರ ಮೇಲೆ ಬಿದ್ದು ಅವರಲ್ಲಿದ್ದುದನ್ನೆಲ್ಲ ಅಪಹರಿಸಿ ಅವರಿಂದ ಬಂದ ಹಣದಿಂದ ತನ್ನ ತಾಯಿತಂದೆ ಹೆಂಡತಿಮಕ್ಕಳನ್ನು ಸಂರಕ್ಷಿಸುತ್ತಿದ್ದ. ಇದು ಹೀಗೆ ಅವಿಚ್ಛಿನ್ನವಾಗಿ ನಡೆಯುತ್ತಿದ್ದಾಗ ಒಂದುದಿನ ನಾರದರೆಂಬ ಮಹರ್ಷಿಗಳು ಆ ರಸ್ತೆಯಲ್ಲಿ ಹೋಗುತ್ತಿದ್ದರು. ಈ ದರೋಡೆಕಾರ ಅವರ ಮೇಲೆ ಬಿದ್ದನು. ನಾರದರು ಅವನನ್ನು "ನೀನು ಏತಕ್ಕೆ ನನ್ನಲ್ಲಿರುವುದನ್ನು ಅಪಹರಿಸುತ್ತಿ? ದರೋಡೆಮಾಡಿ ಜನರನ್ನು ಕೊಲ್ಲುವುದು ಮಹಾಪಾಪ. ಯಾರಿಗಾಗಿ ನೀನು ಈ ಪಾಪಕೃತ್ಯವನ್ನೆಲ್ಲ ಮಾಡುತ್ತಿರುವೆ?" ಎಂದು ಕೇಳಿದರು. ದರೋಡೆಕಾರ "ಏಕೆಂದರೆ ಈ ಹಣದಿಂದ ನನ್ನ ಸಂಸಾರವನ್ನು ನಿರ್ವಹಿಸಬೇಕಾಗಿದೆ. ಅದಕ್ಕೆ" ಎಂದ. "ಹಾಗಾದರೆ ಅವರು ನಿನ್ನ ಪಾಪದ ಪಾಲನ್ನು ತೆಗೆದುಕೊಳ್ಳುತ್ತಾರೆ ಎಂದು ತಿಳಿದೆಯಾ?" ಎಂದು ಕೇಳಿದರು. "ಹೌದು, ನಿಜವಾಗಿಯೂ" ಎಂದು ಉತ್ತರಕೊಟ್ಟ. ಆಗ ಋಷಿಗಳು, "ಒಳ್ಳೆಯದು ಎಲ್ಲಿಯೂ ಓಡಿ ಹೋಗದಂತೆ ನನ್ನನ್ನು ಇಲ್ಲಿ ಕಟ್ಟಿ ಹೋಗು. ಮನೆಯಲ್ಲಿ ವಿಚಾರಿಸಿ ಬಾ. ಅವರು ನಿನ್ನ ಹಣವನ್ನು ಹಂಚಿಕೊಳ್ಳುವಂತೆ ನಿನ್ನ ಪಾಪವನ್ನೂ ಹಂಚಿಕೊಳ್ಳುವರೇನೊ" ಎಂದು ಹೇಳಿದರು. ದರೋಡೆಕಾರ ಅವರಂತೆಯೇ ಮನೆಗೆ ಹೋಗಿ ತಂದೆಯನ್ನು "ಅಪ್ಪ, ನಿನಗೆ ಗೊತ್ತೆ, ನಾನು ಹೇಗೆ ನಿಮ್ಮನ್ನೆಲ್ಲಾ ಸಂರಕ್ಷಿಸುತ್ತಿರುವೆನು ಎಂದು?" ಎಂದು ಕೇಳಿದ.

ತಂದೆ "ನನಗೆ ಗೊತ್ತಿಲ್ಲ" ಎಂದ. ಅವನು "ನಾನೊಬ್ಬ ದರೋಡೆಗಾರ. ಜನರನ್ನು ಕೊಂದು ಅವರನ್ನು ಸುಲಿಗೆ ಮಾಡುತ್ತೇನೆ" ಎಂದ. "ಏನು! ಮಗು, ನೀನು ಅಂತಹ ಕೆಲಸಮಾಡುತ್ತಿರುವೆಯಾ? ತೊಲಗು ಪಾಪಿ, ಚಂಡಾಲ" ಎಂದನು. ಅನಂತರ ದರೋಡೆಕಾರ ತಾಯಿಯ ಹತ್ತಿರ ಹೋಗಿ "ಅಮ್ಮ ನಾನು ನಿಮ್ಮನ್ನು ಹೇಗೆ ಸಂರಕ್ಷಣೆ ಮಾಡುತ್ತಿರುವೆನು ಎಂಬುದು ಗೊತ್ತೆ?" ಎಂದು ಕೇಳಿದ. "ಇಲ್ಲ" ಎಂದಳು ಅವಳು. "ಕೊಲೆ ಮತ್ತು ಸುಲಿಗೆಯಿಂದ" ಎಂದ. "ಎಂತಹ ಭಯಂಕರ ಇದು!" ಎಂದು ಕಿರುಚಿಕೊಂಡಳು. ಮಗ, "ಆದರೆ ನೀನು ನನ್ನ ಪಾಪದ ಪಾಲನ್ನು ತೆಗೆದುಕೊಳ್ಳುವೆಯಾ?" ಎಂದು ಕೇಳಿದ. "ನಾನೇಕೆ ತೆಗೆದುಕೊಳ್ಳಬೇಕು. ನಾನೆಂದೂ ದರೋಡೆ ಮಾಡಿಲ್ಲ" ಎಂದಳು. ಅನಂತರ ಅವನು ಹೆಂಡತಿಯ ಬಳಿಗೆ ಹೋಗಿ "ನಾನು ಹೇಗೆ ನಿಮ್ಮನ್ನೆಲ್ಲಾ ಸಂರಕ್ಷಣೆಮಾಡುತ್ತಿರುವೆನು ಗೊತ್ತೆ?" ಎಂದು ಕೇಳಿದ. "ಗೊತ್ತಿಲ್ಲ" ಎಂದಳು ಅವಳು. "ನಾನೊಬ್ಬ ದರೋಡೆಕಾರ, [illegible] ದರೋಡೆಗಳಿಂದ ಜನರನ್ನು ಸುಲಿಗೆಮಾಡಿ ನಾನು ನಿಮ್ಮನ್ನೆಲ್ಲಾ ಸಂರಕ್ಷಿಸುತ್ತಿರುವೆನು. ನಾನೀಗ ತಿಳಿಯಬೇಕೆಂದು ಇರುವುದು ನೀನು ನನ್ನ ಪಾಪದಲ್ಲಿ ಭಾಗಿಯಾಗುತ್ತೀಯ ಎಂಬುದನ್ನು." "ಎಂದಿಗೂ ಇಲ್ಲ. ನೀನು ನನ್ನ ಗಂಡ. ನನ್ನನ್ನು ಸಂರಕ್ಷಣೆ ಮಾಡುವುದು ನಿನ್ನ ಕರ್ತವ್ಯ" ಎಂದಳು.

ದರೋಡೆಕಾರನ ಕಣ್ಣು ತೆರೆಯಿತು. "ಇದೇ ಪ್ರಪಂಚದ ಜನರ ಸ್ವಭಾವ. ನಾನು ಯಾರ ಹತ್ತಿರದ ನೆಂಟರಿಗೋಸ್ಕರ ದರೋಡೆ ಮಾಡುತ್ತಿರುವೆನೊ ಅವರು ಕೂಡ ನನ್ನ ಅದೃಷ್ಟದಲ್ಲಿ ಭಾಗಿಗಳಾಗುವುದಿಲ್ಲ." ಋಷಿಗಳನು ಕಟ್ಟಿ ಹಾಕಿದ ಸ್ಥಳಕ್ಕೆ ಹಿಂದಿರುಗಿ ಬಂದು ಅವರ ಕಟ್ಟನ್ನು ಸಡಿಲಿಸಿ ಅವರ ಕಾಲಿಗೆ ಬಿದ್ದು ಮನೆಯಲ್ಲಿ ನಡೆದ ಸಂಗತಿಯನ್ನೆಲ್ಲ ತಿಳಿಸಿ "ನೀವು ನನ್ನನ್ನು ರಕ್ಷಿಸಬೇಕು. ನಾನು ಈಗ ಏನು ಮಾಡಬೇಕು?" ಎಂದು ಬೇಡಿಕೊಂಡನು. ಆಗ ಋಷಿಗಳು ಹೇಳಿದರು: "ನೀನು ಈಗ ಮಾಡುತ್ತಿರುವ ವೃತ್ತಿಯನ್ನು ತೊರೆ. ನಿನ್ನ ಬಂಧುಗಳು ಯಾರೂ ನಿನ್ನನ್ನು ಪ್ರೀತಿಸುವುದಿಲ್ಲ. ಎನ್ನುವುದು ಗೊತ್ತಾಯಿತು. ಅವರು ನಿನ್ನನ್ನು ಪ್ರೀತಿಸುವರು ಎಂಬ ಭ್ರಾಂತಿಯನ್ನು ತೊರೆ-

ನೀನು ಹಣಗಾರನಾಗಿದ್ದಾಗ ಅವರು ಅದರ ಪಾಲಿಗೆ ಬರುವರು. ಆದರೆ ನಿನ್ನಲ್ಲಿ ಎಂದು ಏನೂ ಇರುವುದಿಲ್ಲವೋ ಆಗ ಅವರೆಲ್ಲ ತಿರಸ್ಕರಿಸುವರು. ನಿನ್ನ ಪಾಪಕ್ಕೆ ಭಾಗಿಗಳಾಗುವವರು ಯಾರೂ ಇಲ್ಲ. ಎಲ್ಲ ನಿನ್ನ ಪುಣ್ಯಕ್ಕೆ ಮಾತ್ರ ಭಾಗಿಗಳು. ನಾವು ಪಾಪಮಾಡಲಿ, ಪುಣ್ಯ ಮಾಡಲಿ ಯಾವಾಗಲೂ ನಮ್ಮೊಡನೆ ಇರುವವನನ್ನು ಮಾತ್ರ ಪೂಜಿಸು. ಅವನು ನಮ್ಮನ್ನು ಎಂದಿಗೂ ತ್ಯಜಿಸುವುದಿಲ್ಲ. ಪ್ರೇಮ ಎಂದಿಗೂ ಕೆಳಗೆ ಇಳಿಯುವುದಿಲ್ಲ. ಪ್ರೇಮಕ್ಕೆ ವ್ಯಾಪಾರ ಬುದ್ಧಿ ಇಲ್ಲ. ಅದಕ್ಕೆ ಸ್ವಾರ್ಥತೆ ಇಲ್ಲ."

ಆಗ ಋಷಿಗಳು ಭಗವಂತನನ್ನು ಹೇಗೆ ಉಪಾಸನೆಮಾಡಬೇಕೆಂಬುದನ್ನು ಅವನಿಗೆ ಬೋಧಿಸಿದರು. ಡಕಾಯಿತ ಸರ್ವಸಂಗಪರಿತ್ಯಾಗ ಮಾಡಿ ಕಾಡಿಗೆ ಹೋದನು. ಅಲ್ಲಿ ಪ್ರಾರ್ಥನೆ ಮತ್ತು ಧ್ಯಾನದಲ್ಲಿ ತನ್ಮಯನಾಗತೊಡಗಿದನು. ಅದರಲ್ಲೇ ಎಷ್ಟು ಮಟ್ಟಿಗೆ ತನ್ಮಯನಾದನೆಂದರೆ ಗೆದ್ದಲು ಬಂದು ಅವನ ಸುತ್ತಲೂ ಹುತ್ತವನ್ನು ಕಟ್ಟಿದವು. ಆದರೂ ಅವನಿಗೆ ಬಾಹ್ಯಪ್ರಜ್ಞೆಯೇ ಇರಲಿಲ್ಲ. ಹಲವು ವರ್ಷಗಳಾದಮೇಲೆ ಧ್ವನಿಯೊಂದು "ಏಳು ಓ! ಮಹಾಋಷಿ" ಎಂದು ಎಚ್ಚರಿಸಿತು. ಆಗ ಎಚ್ಚೆತ್ತವನು "ಮಹಾಋಷಿ! ಇಲ್ಲ. ನಾನು ಡಕಾಯಿತ" ಎಂದು ಬೆಸಗೊಂಡನು, ಆ ಧ್ವನಿ ಹೀಗೆಂದಿತು. "ನೀನಿನ್ನು ಡಕಾಯಿತನಲ್ಲ. ಪರಿಶುದ್ಧನಾದ ಮಹಾಋಷಿ. ನಿನ್ನ ಹಳೆಯ ಹೆಸರು ಹೋಯಿತು. ನಿನ್ನ ಸುತ್ತಲೂ ಬೆಳೆದ ಹುತ್ತದ ಪ್ರಜ್ಞೆ ಕೂಡ ನಿನಗೆ ಇಲ್ಲದಷ್ಟು ಮನಸ್ಸು ಏಕಾಗ್ರವಾಗಿದ್ದುದರಿಂದ ಇನ್ನು ಮೇಲೆ ನಿನ್ನ ಹೆಸರು ವಾಲ್ಮೀಕಿ. ಎಂದರೆ ಹುತ್ತದಲ್ಲಿ ಹುಟ್ಟಿದವನು ಎಂದು." ಹೀಗೆ ಅವನು ಮಹಾಋಷಿಯಾದ.

ಅವನು ಮಹಾಕವಿಯಾದದ್ದು ಹೀಗೆ. ಒಂದು ದಿನ ವಾಲ್ಮೀಕಿ ಮಹರ್ಷಿಗಳು ಗಂಗಾನದಿಗೆ ಸ್ನಾನಕ್ಕೆ ಹೋಗುತ್ತಿದ್ದಾಗ ಒಂದು ಜೊತೆ ಪಾರಿವಾಳ ಸುತ್ತಲೂ ಹಾರಾಡಿ ಮುದ್ದಾಡುತ್ತಿದ್ದುವು. ಋಷಿ ತಲೆ ಎತ್ತಿ ನೋಡಿ ಸಂತುಷ್ಟನಾದ. ಆದರೆ ಮರುಕ್ಷಣದಲ್ಲಿಯೇ ಬಾಣ ಒಂದು ಅವನ ಕಡೆಯಿಂದ ಹೋಗಿ ಗಂಡುಪಾರಿವಾಳವನ್ನು ಕೊಂದಿತು. ಅದು ಕೆಳಗೆ ಬೀಳುತ್ತಲೆ ಹೆಣ್ಣು ಹಕ್ಕಿ ದುಃಖದಿಂದ ತನ್ನ ಜೊತೆಗಾರ

ನಾದ ಗಂಡು ಹಕ್ಕಿಯ ಶವದ ಸುತ್ತಲೂ ಹಾರಾಡುತ್ತಿತ್ತು. ಋಷಿ ತಕ್ಷಣ ವ್ಯಥಿತನಾದ. ಹಿಂತಿರುಗಿ ನೋಡಿದಾಗ ಬೇಟೆಗಾರನಿದ್ದನು. "ನೀನೊಬ್ಬ ನೀಚ. ಸ್ವಲ್ಪವೂ ದಯೆಯಿಲ್ಲ. ಪ್ರೇಮದೆದುರಿಗೂ ನಿನ್ನ ಕೊಲೆಪಾತಕತನ ಕುಂಠಿತವಾಗಲಿಲ್ಲ" ಎಂದನು. ಕವಿ ತನಗೆ ತಾನೆ ತಕ್ಷಣ "ಇದೇನು, ನಾನೇನು ಹೇಳುತ್ತಿರುವೆ. ನಾನು ಹೀಗೆ ಎಂದೂ ಮಾತನಾಡಿರಲಿಲ್ಲ" ಎಂದುಕೊಂಡನು. ಆಗೊಂದು ಧ್ವನಿ ಕೇಳಿಸಿತು. "ನೀನು ಅಂಜದಿರು. ನಿನ್ನ ಬಾಯಿನಿಂದ ಬರುತ್ತಿರುವುದು ಕಾವ್ಯ. ಜಗದ ಹಿತಕ್ಕಾಗಿ ರಾಮಚರಿತೆಯನ್ನು ಕಾವ್ಯರೂಪದಲ್ಲಿ ಬರೆ" ಎಂದಿತು. ಕಾವ್ಯದ ಆದಿ ಇದು. ಆದಿಕವಿ ವಾಲ್ಮೀಕಿಯ ಬಾಯಿಂದ ಮೊದಲ ಶ್ಲೋಕ ಶೋಕದಿಂದ ಉದಿಸಿತು. ಅನಂತರವೆ ಅವನು ಅತಿ ಸುಂದರವಾದ ರಾಮಾಯಣವನ್ನು ಬರೆದನು.

ಹಿಂದೆ ಭರತಖಂಡದಲ್ಲಿ ಅಯೋಧ್ಯೆ ಎಂಬ ಊರು ಇತ್ತು. ಅದು ಈಗಲೂ ಇದೆ. ಅದು ಇರುವ ದೇಶವನ್ನು ಈಗಲೂ ಔದ್ ಎನ್ನುತ್ತಾರೆ. ನಿಮ್ಮಲ್ಲಿ ಹಲವರು ಅದನ್ನು ಇಂಡಿಯಾ ಭೂಪಟದ ಮೇಲೆ ನೋಡಿರಬಹುದು. ಇದೇ ಹಿಂದಿನ ಅಯೋಧ್ಯೆ. ಹಿಂದಿನ ಕಾಲದಲ್ಲಿ ದಶರಥನೆಂಬ ರಾಜ ಅದನ್ನು ಆಳುತ್ತಿದ್ದ. ಅವನಿಗೆ ಮೂರು ಜನ ರಾಣಿಯರಿದ್ದರು. ಆದರೆ ಯಾರಿಗೂ ಮಕ್ಕಳಿರಲಿಲ್ಲ. ಮಕ್ಕಳಿಗಾಗಿ ಎಲ್ಲಾ ಹಿಂದೂಗಳಂತೆ ತೀರ್ಥಯಾತ್ರೆ, ಉಪವಾಸ, ವ್ರತ ಮುಂತಾದುವನ್ನು ಮಾಡತೊಡಗಿದ್ದರು. ಕೆಲವು ಕಾಲದ ಮೇಲೆ ಅವರಿಗೆ ನಾಲ್ಕು ಜನ ಮಕ್ಕಳಾದರು. ಅವರಲ್ಲಿ ಹಿರಿಯವನೆ ರಾಮ.

ನಾಲ್ಕುಜನ ಸಹೋದರರು ನಿಯಮದಂತೆ ಎಲ್ಲಾ ಶಾಸ್ತ್ರಗಳಲ್ಲಿಯೂ ಪರಿಣತರಾದರು. ಮುಂದೆ ಜಗಳ ಬಾರದಂತೆ ನೋಡಿಕೊಳ್ಳುವುದಕ್ಕೆ ಹಿಂದಿನ ಭರತಖಂಡದಲ್ಲಿ ಒಂದು ರೂಢಿಯಿತ್ತು. ರಾಜ ತಾನು ಬದುಕಿರುವಾಗಲೆ ತನ್ನ ಜ್ಯೇಷ್ಠಪುತ್ರನನ್ನು ಯುವರಾಜನನ್ನಾಗಿ ನಾಮಕರಣ ಮಾಡುತ್ತಿದ್ದನು. ಅವನೇ ನಂತರ ರಾಜನಾಗುವನು.

ಜನಕನೆಂಬ ಮತ್ತೊಬ್ಬ ರಾಜನಿದ್ದ. ಅವನಿಗೆ ಸೀತೆಯೆಂಬ ಅತಿ ಚೆಲುವೆಯಾದ ಮಗಳಿದ್ದಳು. ಸೀತೆ ಒಂದು ಹೊಲದಲ್ಲಿ ಸಿಕ್ಕಿದವಳು. ಭೂದೇವಿಯ ಮಗಳು. ಅವಳಿಗೆ ಯಾವ ತಂದೆತಾಯಿಗಳೂ

ಇರಲಿಲ್ಲ. ಸೀತಾ ಎಂದರೆ ಸಂಸ್ಕೃತದಲ್ಲಿ ನೇಗಿಲಿನಿಂದ ಆದ ಗೆರೆ ಎಂದೂ ಹೆಸರು. ಭರತಖಂಡದ ಪುರಾಣದಲ್ಲಿ, ತಂದೆಗೋ ತಾಯಿಗೋ ಒಬ್ಬರಿಗೇ ಆದ ಮಕ್ಕಳು, ತಂದೆತಾಯಿಗಳಲ್ಲಿ ಜನಿಸಿದ ಮಕ್ಕಳು, ಯೋಗದಿಂದ ಜನಿಸಿದವರು, ಭೂಮಿಯಲ್ಲಿ ಜನಿಸಿದವರು, ಎಲ್ಲೋ ಮೇಲಿನ ಆಕಾಶದಿಂದ ಬಿದ್ದಂತೆ ಇದ್ದವರು ಇಂತಹ ಹಲವು ಬಗೆಯ ಜನನಗಳಿವೆ. ಈ ಬಗೆಯ ವಿಚಿತ್ರ ಜನನಗಳೆಲ್ಲ ಪುರಾಣ ಪ್ರಪಂಚದಲ್ಲಿ ಸಾಧಾರಣವಾಗಿದೆ.

ಸೀತೆ ಪೃಥ್ವಿಯ ಮಗಳಾದ್ದರಿಂದ ಪರಿಶುದ್ಧಳಾಗಿದ್ದಳು. ಅವಳಿಗೆ ಯಾವ ತಂದೆತಾಯಿಗಳೂ ಇರಲಿಲ್ಲ. ಜನಕರಾಜ ಅವಳನ್ನು ಸಾಕಿದನು. ಅವಳಿಗೆ ಪ್ರಾಪ್ತವಯಸ್ಸಾದಾಗ ಮದುವೆಮಾಡಿಕೊಡಲು ಯೋಗ್ಯವರನನ್ನು ಹುಡುಕತೊಡಗಿದನು.

ಹಿಂದೆ ಭರತಖಂಡದಲ್ಲಿ ಸ್ವಯಂವರ ಎಂಬುದು ರೂಢಿಯಲ್ಲಿತ್ತು. ಅಲ್ಲಿ ರಾಜಕುಮಾರಿ ವರನನ್ನು ತಾನೇ ಆರಿಸಿಕೊಳ್ಳುತ್ತಿದ್ದಳು. ದೇಶದ ಅನೇಕ ಕಡೆಯಿಂದ ಹಲವು ರಾಜಕುಮಾರರಿಗೆ ಆಮಂತ್ರಣ ಕಳುಹಿಸಿ ಕೊಡುತ್ತಿದ್ದರು. ರಾಜಕುಮಾರಿ ಅಲಂಕೃತಳಾಗಿ ಕೈಯಲ್ಲಿ ಒಂದು ಹೂಮಾಲೆಯನ್ನು ಹಿಡಿದುಕೊಂಡು ರಾಜಕುಮಾರರ ನಡುವೆ ಹೋಗುತ್ತಿದ್ದಳು. ಅವಳ ಜೊತೆಯಲ್ಲಿ ಆಯಾ ರಾಜಕುಮಾರರ ವಿಶೇಷ ಗುಣಗಳನ್ನು ಸಾರುತ್ತಿರುವ ಭಟರು ಇರುತ್ತಿದ್ದರು. ಅವರಲ್ಲಿ ಯಾರು ತನಗೆ ಮೆಚ್ಚುಗೆಯೋ ಅವನ ಕೊರಳಿಗೆ ಮಾಲೆಯನ್ನು ಹಾಕುವಳು. ಅನಂತರ ಅತಿ ವೈಭವದಿಂದ ಅವರ ಮದುವೆ ಮಾಡುತ್ತಿದ್ದರು.

ಅನೇಕ ರಾಜಕುಮಾರರು ಸೀತೆಯನ್ನು ಮದುವೆಮಾಡಿಕೊಳ್ಳಬೇಕೆಂದು ಇದ್ದರು. ಆದರೆ ಇದಕ್ಕೆ ಒಂದು ಪರೀಕ್ಷೆ ಇತ್ತು. ಯಾರು ಹರಧನುವನ್ನು ಭಂಜಿಸುವರೋ ಅವರು ಮದುವೆಗೆ ಯೋಗ್ಯ ವರರಾಗುತ್ತಿದ್ದರು. ಇದಕ್ಕಾಗಿ ರಾಜಕುಮಾರರು ತಮ್ಮ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಯತ್ನಿಸಿದರು. ಆದರೆ ಎಲ್ಲರೂ ವಿಮುಖರಾದರು. ಕೊನೆಗೆ ರಾಮ ಅದ್ಭುತಧನುಸ್ಸನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಲೀಲಾಜಾಲವಾಗಿ ಅದನ್ನು ಎರಡು ತುಂಡು ಮಾಡಿದನು. ದಶರಥರಾಜಕುಮಾರನಾದ

ರಾಮನನ್ನು ಸೀತೆ ವರಿಸಿದ್ದು ಹೀಗೆ. ಅನಂತರ ಅತಿ ವೈಭವದಿಂದ
ಅವರ ಲಗ್ನವಾಯಿತು. ರಾಮ ನಂತರ ಸೀತೆಯನ್ನು ಊರಿಗೆ ಕರೆದು
ಕೊಂಡು ಹೋದ. ದಶರಥ ತನಗೆ ಇನ್ನು ವಾನಪ್ರಸ್ಥಕ್ಕೆ ಕಾಲ
ವಾಗಿದೆ ಎಂದು ಭಾವಿಸಿ ರಾಮನನ್ನು ಯುವರಾಜನನ್ನಾಗಿ ಮಾಡಲು
ನಿಶ್ಚಯಿಸಿದನು. ಪಟ್ಟಾಭಿಷೇಕಕ್ಕೆ ಎಲ್ಲಾ ಅಣಿಯಾಯಿತು. ಇಡೀ
ದೇಶವೇ ಆನಂದೋತ್ಸಾಹದಲ್ಲಿ ಮುಳುಗಿತು. ಆಗ ಕಿರಿಯ ರಾಣಿ
ಕೈಕೇಗೆ ಅವಳ ಪರಿಚಾರಕಳೊಬ್ಬಳು ದಶರಥ ಹಿಂದೆ ಕೈಕೇಗೆ ಕೊಟ್ಟ
ವರವನ್ನು ಜ್ಞಾಪಿಸಿದಳು. ಹಿಂದೆ ಅವಳು ದಶರಥನ ಮೆಚ್ಚುಗೆಯನ್ನು
ಸಂಪಾದಿಸಿದ್ದಳು. ಆಗ ರಾಜ "ನಿನಗೆ ಬೇಕಾದ ನನ್ನ ವಶವಲ್ಲಿರುವ
ಎರಡು ವರವನ್ನು ಕೇಳು, ಕೊಡುತ್ತೇನೆ" ಎಂದಿದ್ದನು. ಆದರೆ
ಕೈಕೇಯಿ ಆಗ ಏನನ್ನೂ ಕೇಳಿಕೊಂಡಿರಲಿಲ್ಲ. ಇದನ್ನೆಲ್ಲ ಮರೆತು
ಬಿಟ್ಟಿದ್ದಳು. ಆ ದುಷ್ಟಸೇವಕಿ ರಾಮ ಯುವರಾಜನಾದರೆ ಕೈಕೇಯಿಗೆ
ಕಷ್ಟವಾಗುವುದೆಂದು ಅವಳ ಅಸೂಯೆಯನ್ನು ಕೆರಳಿಸಿದಳು. ಅವಳ
ಮಗ ಭರತನೆ ರಾಜನಾದರೆ ಎಷ್ಟು ಚೆನ್ನಾಗಿರುವುದು ಎಂದು ಅಸೂಯೆ
ಯಿಂದ ಅವಳು ಉನ್ಮತ್ತಳಾಗುವಂತೆ ಮಾಡಿದಳು. ಹಿಂದೆ ದಶರಥ
ಕೊಟ್ಟಿದ್ದ ಎರಡು ವರಗಳನ್ನು ಕೇಳುವಂತೆ ಹೇಳಿದಳು. ಅದರಲ್ಲಿ
ಒಂದನೆಯದೆ ಭರತ ರಾಜನಾಗುವುದು. ಎರಡನೆಯದೆ ರಾಮ
ಹದಿನಾಲ್ಕು ವರುಷ ವನವಾಸ ಮಾಡಬೇಕು ಎನ್ನುವುದು.

ರಾಮನೇ ಆ ವೃದ್ಧದೊರೆಯ ಪ್ರಾಣವಾಗಿದ್ದ. ಅವನಾತ್ಮ
ನಾಗಿದ್ದ. ಈ ದುಷ್ಟಕೋರಿಕೆಯನ್ನು ಅವನ ಮುಂದೆ ಇಟ್ಟಾಗ ತಾನು
ರಾಜನಾದುದರಿಂದ ಹಿಂದೆ ಆಡಿದ ಮಾತಿಗೆ ವಿರೋಧವಾಗಿ ಹೋಗಲು
ಆಗಲಿಲ್ಲ. ಆಗ ಏನು ಮಾಡಬೇಕೊ ಅದೂ ತೋಚಲಿಲ್ಲ. ಆಗ
ರಾಮನು ಅವನ ಸಹಾಯಕ್ಕೆ ಬಂದ. ತಂದೆ ಅಸತ್ಯಕ್ಕೆ ಗುರಿಯಾಗ
ದಿರಲಿ ಎಂದು ತಾನೇ ಸಿಂಹಾಸನವನ್ನು ತ್ಯಜಿಸಿ ವನವಾಸಕ್ಕೆ
ಹೋಗಲು ಒಪ್ಪಿಕೊಂಡನು. ತನ್ನ ಪ್ರಿಯತಮ ಸತಿಯಾದ ಸೀತೆ
ಮತ್ತು ಎಂದಿಗೂ ಅವನಿಂದ ಅಗಲುವುದಕ್ಕೆ ಒಪ್ಪಿಕೊಳ್ಳದ ಲಕ್ಷ್ಮಣ
ರೊಂದಿಗೆ ಹದಿನಾಲ್ಕು ವರುಷ ವನವಾಸಕ್ಕೆ ಹೊರಟನು.

ದಂಡಕಾರಣ್ಯದಲ್ಲಿ ಆಗ ಯಾರು ವಾಸವಾಗಿದ್ದರೆಂಬುದು

ಆರ್ಯರಿಗೆ ಗೊತ್ತಿರಲಿಲ್ಲ. ಆಗಿನ ಕಾಲದಲ್ಲಿ ಅರಣ್ಯದಲ್ಲಿ ವಾಸಿಸುತ್ತಿದ್ದವರನ್ನು ವಾನರರೆಂದು ಕರೆಯುತ್ತಿದ್ದರು. ಅವರಲ್ಲಿ ಕೆಲವರು ಬಹಳ ಪೌರುಷವಂತರಾಗಿ ಬಲಾಢ್ಯರಾಗಿದ್ದರೆ ಅಂತಹವರನ್ನು ರಾಕ್ಷಸರೆಂದು ಕರೆಯುತ್ತಿದ್ದರು.

ವಾನರರು ಮತ್ತು ರಾಕ್ಷಸರು ವಾಸಿಸುತ್ತಿದ್ದ ದಂಡಕಾರಣ್ಯಕ್ಕೆ ಸೀತಾರಾಮಲಕ್ಷ್ಮಣರು ಹೊರಟರು. ಸೀತೆ ರಾಮನೊಂದಿಗೆ ಬರುತ್ತೇನೆ ಎಂದಾಗ ಅವನು "ರಾಜಕುಮಾರಿಯಾದ ನೀನು ಅನಿರೀಕ್ಷಿತ ಅಪಾಯ ಬಹುಳವಾದ ಕಾಡಿಗೆ ನನ್ನೊಡನೆ ಬಂದು ಕಷ್ಟಪಡುತ್ತೀಯ" ಎಂದ. ಆಗ ಸೀತೆ ಹೀಗೆಂದಳು "ರಾಮ ಎಲ್ಲಿಗೆ ಹೋದರೆ ಸೀತೆ ಅಲ್ಲಿಗೆ ಹೋಗುತ್ತಾಳೆ. ರಾಜಕುಮಾರಿ, ರಾಜವಂಶಸ್ಥಳು ಎಂದು ಮಾತನಾಡುತ್ತಿರುವೆ? ನಾನು ನಿನ್ನ ಮುಂದೆ ಹೋಗುತ್ತೇನೆ." ಸೀತೆಯೂ ರಾಮನನ್ನು ಅನುಸರಿಸಿದಳು. ಅವನ ಕಿರಿಯ ತಮ್ಮನೂ ಅವನೊಡನೆ ಹೊರಟನು. ಗೋದಾವರಿ ನದಿ ಸಿಕ್ಕುವ ಪರ್ಯಂತ ಕಾಡಿನಲ್ಲೆ ಮುಂದೆ ಮುಂದೆ ಹೋದನು. ಆ ನದೀತೀರದಲ್ಲಿ ಒಂದು ಪರ್ಣಶಾಲೆಯನ್ನು ಕಟ್ಟಿದರು. ರಾಮಲಕ್ಷ್ಮಣರು ಜಿಂಕೆ ಮೊದಲಾದುವನ್ನು ಬೇಟೆಯಾಡಿ ಹಣ್ಣನ್ನು ಆರಿಸಿಕೊಂಡು ಬರುತ್ತಿದ್ದರು. ಕೆಲವು ದಿನ ಅವರು ಹೀಗೆ ಕಳೆದ ಮೇಲೆ ಅಲ್ಲಿಗೆ ಒಬ್ಬ ರಾಕ್ಷಸಿ ಬಂದಳು. ಅವಳು ಲಂಕೇಶನಾದ ರಾವಣನ ತಂಗಿ. ಕಾಡಿನಲ್ಲಿ ಸಂಚಾರ ಮಾಡುತ್ತಿದ್ದಾಗ ರಾಮ ಅವಳಿಗೆ ಗೋಚರಿಸಿದನು. ಅವನ ಸುಂದರಾಕಾರವನ್ನು ನೋಡಿ ಅವನನ್ನು ಮೋಹಿಸಿದಳು. ಆದರೆ ರಾಮ ಪರಿಶುದ್ಧಾತ್ಮ. ಅದೂ ಅಲ್ಲದೆ ಅವನಿಗೆ ಲಗ್ನ ಬೇರೆ ಆಗಿತ್ತು. ಆದಕಾರಣ ಅವಳನ್ನು ಪ್ರೀತಿಸಲಿಲ್ಲ. ಅವನ ಮೇಲೆ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ತನ್ನ ಅಣ್ಣ ರಾವಣಾಸುರನ ಬಳಿಗೆ ಹೋಗಿ ರಾಮನ ಸತಿ ಸೀತೆಯ ಲಾವಣ್ಯವನ್ನು ವಿವರಿಸತೊಡಗಿದಳು.

ರಾಮ ಪುರುಷರಲ್ಲಿ ಪರಾಕ್ರಮಶಾಲಿಯಾಗಿದ್ದ. ಯಾವ ಮನುಷ್ಯನಾಗಲಿ ರಾಕ್ಷಸನಾಗಲಿ ಅವನನ್ನು ಜಯಿಸುವುದಕ್ಕೆ ಸಾಧ್ಯವಿರಲಿಲ್ಲ. ಅದಕ್ಕಾಗಿ ರಾವಣಾಸುರ ಉಪಾಯಕ್ಕೆ ಕೈಹಾಕಿದನು. ಮಂತ್ರವಾದಿಯಾದ ಮತ್ತೊಬ್ಬ ಅಸುರನ ಸಹಾಯವನ್ನು ಪಡೆದು

ಅವನನ್ನು ಸುಂದರವಾದ ಸ್ವರ್ಣಮೃಗವನ್ನಾಗಿ ಮಾಡಿದ. ರಾಮ ಇರುವ ಕಡೆ ಜಿಂಕೆ ಚಲಿಸ ತೊಡಗಿತು. ಸೀತೆ ಆ ಮೃಗದ ಸೌಂದರ್ಯಕ್ಕೆ ಮನಸೋತು ಅದನ್ನು ತಂದುಕೊಡಬೇಕೆಂದು ರಾಮನನ್ನು ಕೇಳಿಕೊಂಡಳು. ರಾಮ ಲಕ್ಷ್ಮಣನನ್ನು ಸೀತೆಯ ಕಾವಲಿಗಿಟ್ಟು ಆ ಮಾಯಾಮೃಗವನ್ನು ಹಿಡಿಯುವುದಕ್ಕೆ ಕಾಡಿನ ಒಳಗೆ ಹೊರಟ. ಲಕ್ಷ್ಮಣ ಪರ್ಣಶಾಲೆಯ ಸುತ್ತಲೂ ಒಂದು ಅಗ್ನಿರೇಖೆ ಎಳೆದು ಸೀತೆಗೆ "ಇಂದು ನಿನಗೆ ಏನೋ ವಿಪತ್ತು ಸಂಭವಿಸಬಹುದು" ಎಂದ. ಅಷ್ಟು ಹೊತ್ತಿಗೆ ಮಾಯಾಮೃಗವನ್ನು ರಾಮ ಬಾಣದಿಂದ ಹೊಡೆದ. ತಕ್ಷಣ ಆ ಮೃಗ ತನ್ನ ಹಿಂದಿನ ರಾಕ್ಷಸ ರೂಪವನ್ನು ತಾಳಿ ಕಾಲವಾಯಿತು.

ಆಗ ಪರ್ಣಶಾಲೆಯ ಹತ್ತಿರ "ಓ ಲಕ್ಷ್ಮಣಾ ನನ್ನ ಸಹಾಯಕ್ಕೆ ಬಾ" ಎಂಬ ರಾಮನ ಧ್ವನಿ ಕೇಳಿಸಿತು. ಸೀತೆ "ಲಕ್ಷ್ಮಣಾ ರಾಮನ ಸಹಾಯಕ್ಕೆ ತಕ್ಷಣ ಹೋಗು" ಎಂದಳು. ಅದು ರಾಮನ ಧ್ವನಿಯಲ್ಲ ಎಂದು ಲಕ್ಷ್ಮಣ ಪ್ರತಿಭಟಿಸಿದ. ಆದರೆ ಸೀತೆ ಲಕ್ಷ್ಮಣನನ್ನು ಕಾಡಿ ಬೇಡಿದುದರಿಂದ ರಾಮನ ಸಹಾಯಕ್ಕೆ ಹೋಗಬೇಕಾಯಿತು. ಲಕ್ಷ್ಮಣ ಹೋದೊಡನೆಯೆ ರಾವಣಾಸುರ ಸನ್ಯಾಸಿಯ ರೂಪತಾಳಿ ಪರ್ಣಶಾಲೆಯ ಬಾಗಿಲಿನಲ್ಲಿ ನಿಂತು ಭಿಕ್ಷೆ ಬೇಡಿದ. "ನನ್ನ ಗಂಡ ಬರುವವರೆಗೆ ಸ್ವಲ್ಪ ತಾಳು. ಆಮೇಲೆ ಬೇಕಾದಷ್ಟು ಭಿಕ್ಷೆ ನೀಡುತ್ತೇನೆ" ಎಂದಳು ಸೀತೆ. ರಾವಣ "ನಾನು ಅಲ್ಲಿಯವರೆಗೆ ತಾಳಲಾರೆ. ತಾಯಿ, ತುಂಬಾ ಹಸಿವು. ಏನಿದೆಯೊ ಅದನ್ನು ಕೊಡು" ಎಂದ. ಆಗ ಸೀತೆ ಪರ್ಣಶಾಲೆಯಲ್ಲಿದ್ದ ಕೆಲವು ಹಣ್ಣುಗಳನ್ನು ತಂದಳು. ಸನ್ಯಾಸಿ "ನನಗೆ ಅದನ್ನು ಹೊರಗೆ ತಂದುಕೊಡಿ, ನಾನು ಯತಿ, ನಿಮಗೆ ಯಾವ ಅಂಜಿಕೆಯೂ ಇಲ್ಲ ನನ್ನಿಂದ" ಎಂದು ಮರುಳುಗೊಳಿಸಿದ. ಸೀತೆ ಮಂತ್ರದ ಗೆರೆಯನ್ನು ದಾಟಿ ಬಂದಳು. ತಕ್ಷಣ ಕಪಟ ಸನ್ಯಾಸಿ ರಾಕ್ಷಸನ ರೂಪನ್ನು ತಾಳಿ ಸೀತೆಯನ್ನು ತನ್ನ ಬಾಹುಗಳಿಂದ ಸೆಳೆದು ಮಂತ್ರರಥವನ್ನು ಕರೆದು ಅದರಲ್ಲಿ ಅವಳನ್ನು ಕುಳ್ಳಿರಿಸಿಕೊಂಡು ಅಳುತ್ತಿರುವ ಸೀತೆಯೊಡನೆ ಪಲಾಯನಮಾಡಿದನು. ರಾಕ್ಷಸ ಅವಳನ್ನು ಹೊತ್ತುಕೊಂಡು ಹೋಗುತ್ತಿರುವಾಗ ಸೀತೆ ತನ್ನ ಕೆಲವು ಆಭರಣಗಳನ್ನು ಕೈಯಿಂದ ಕೆಳಗೆ ಕೆಲವುವೇಳೆ ಎಸೆದಳು.

ರಾವಣಾಸುರ ಲಂಕಾದ್ವೀಪದಲ್ಲಿರುವ ತನ್ನ ರಾಜಧಾನಿಗೆ ಸೀತೆಯನ್ನು ಕರೆದುಕೊಂಡು ಹೋದನು. ತನ್ನ ರಾಣಿಯಾಗಬೇಕೆಂದು ಅವಳನ್ನು ಕೇಳಿಕೊಂಡನು. ತನ್ನ ಕೋರಿಕೆಗೆ ಒಡಂಬಡುವಂತೆ ಹಲವು ಆಸೆಯನ್ನು ಅವಳಿಗೆ ತೋರಿದ. ಆದರೆ ಸೀತೆ ಪಾತಿವ್ರತ್ಯವೇ ರೂಪುವೆತ್ತಂತೆ ಇದ್ದವಳು ರಾವಣಾಸುರನೊಡನೆ ಮಾತನ್ನು ಕೂಡ ಆಡಲಿಲ್ಲ. ಅವಳನ್ನು ಶಿಕ್ಷಿಸುವುದಕ್ಕಾಗಿ, ಹೆಂಡತಿಯಾಗುವುದಕ್ಕೆ ಒಪ್ಪಿಕೊಳ್ಳುವವರೆಗೆ ಅವಳನ್ನು ಒಂದು ವೃಕ್ಷದಡಿ ಇಟ್ಟನು.

ರಾಮಲಕ್ಷ್ಮಣರು ಪರ್ಣಶಾಲೆಗೆ ಹಿಂತಿರುಗಿ ಬಂದಾಗ ಸೀತೆ ಮಾಯವಾಗಿರುವುದನ್ನು ನೋಡಿದಾಗ ಅವರ ದುಃಖಕ್ಕೆ ಮೇರೆಯಿರಲಿಲ್ಲ. ಅವಳಿಗೆ ಏನಾಗಿದೆಯೊ ಅದನ್ನು ಊಹಿಸುವುದಕ್ಕೂ ಅವರಿಗೆ ಸಾಧ್ಯವಾಗಲಿಲ್ಲ. ಇಬ್ಬರು ಸಹೋದರರೂ ಸೀತೆಯನ್ನು ಎಲ್ಲೆಲ್ಲಿಯೂ ಹುಡುಕಾಡಿದರು. ಎಲ್ಲಿಯೂ ಅವಳ ಸುಳಿವೇ ಸಿಕ್ಕಲಿಲ್ಲ. ಕೆಲವು ದಿನ ಹುಡುಕಾಡಿದ ಮೇಲೆ ಕೆಲವು ವಾನರರ ಸಮೀಪಕ್ಕೆ ಬಂದರು. ಅಲ್ಲಿ ಅವರೊಡನೆ ಇದ್ದ ಹನುಮಂತನನ್ನು ಕಂಡರು. ವಾನರಶ್ರೇಷ್ಠನಾದ ಹನುಮಂತ ಶ್ರೀರಾಮನ ಶ್ರೇಷ್ಠಭೃತ್ಯನಾದನು. ನಾವು ಮುಂದೆ ನೋಡುವಂತೆ ಅವನು ಸೀತೆಯನ್ನು ಹುಡುಕುವುದಕ್ಕೆ ರಾಮನಿಗೆ ಸಹಾಯಮಾಡಿದನು. ರಾಮನ ಮೇಲೆ ಹನುಮಂತನಿಗೆ ಇದ್ದ ಭಕ್ತಿ ಅಪಾರವಾಗಿತ್ತು. ಈಗಲೂ ಕೂಡ ಹಿಂದೂಗಳು ಅವನನ್ನು ಭಗವಂತನ ಶ್ರೇಷ್ಠಭೃತ್ಯನೆಂದು ಪೂಜಿಸುವರು. ವಾನರರು ರಾಕ್ಷಸರು ಎಂದರೆ ದಾಕ್ಷಿಣಾತ್ಯದ ಆದಿವಾಸಿಗಳು.

ಕೊನೆಗೆ ರಾಮ ವಾನರರನ್ನು ಸೇರಿದನು. ಅವರು ಆಕಾಶದಲ್ಲಿ ಒಂದು ವಿಮಾನ ಸಂಚರಿಸುತ್ತಿದ್ದುದನ್ನು ತಾವು ನೋಡಿದೆವೆಂದೂ ಅದರಲ್ಲಿ ಒಬ್ಬ ರಾಕ್ಷಸ ಅತಿ ಸುಂದರಳಾದ ಸ್ತ್ರೀಯನ್ನು ಹೊತ್ತುಕೊಂಡು ಹೋಗುತ್ತಿದ್ದನೆಂದೂ ಸ್ತ್ರೀ ತುಂಬಾ ಅಳುತ್ತಿದ್ದಳೆಂದೂ ಹೇಳಿದರು. ವಿಮಾನ ತಮ್ಮ ತಲೆಯ ಮೇಲೆ ಹೋಗುತ್ತಿದ್ದಾಗ, ತಮ್ಮ ಲಕ್ಷ್ಯವನ್ನು ಸೆಳೆಯುವುದಕ್ಕಾಗಿ ಆಕೆ ತನ್ನ ಆಭರಣಗಳನ್ನು ಎಸೆದಳು ಎಂದರು. ಆಭರಣಗಳನ್ನು ರಾಮನಿಗೆ ತೋರಿಸಿದರು. ಲಕ್ಷ್ಮಣ ಆಭರಣಗಳನ್ನು ಕೈಗೆ ತೆಗೆದುಕೊಂಡು ಇವು ಯಾರವೊ ತನಗೆ ಗೊತ್ತಿಲ್ಲ ಎಂದನು.

ರಾಮ ಅವನ್ನು ತೆಗೆದುಕೊಂಡು ನೋಡಿ "ಹೌದು ಇವು ಸೀತೆಯ ಆಭರಣಗಳು" ಎಂದನು. ಲಕ್ಷ್ಮಣನಿಗೆ ಆಭರಣಗಳನ್ನು ಕಂಡುಹಿಡಿಯಲೂ ಆಗಲಿಲ್ಲ. ಏಕೆಂದರೆ ಇಂಡಿಯಾದೇಶದಲ್ಲಿ ಅಣ್ಣನ ಹೆಂಡತಿಯನ್ನು ಅಷ್ಟು ಗೌರವದಿಂದ ಕಾಣುವರು. ಅವಳ ಕೈ ಮತ್ತು ಕತ್ತನ್ನು ತಲೆ ಎತ್ತಿ ನೋಡುವುದಿಲ್ಲ. ಆದಕ್ಕೇ ಲಕ್ಷ್ಮಣನಿಗೆ ಗೊತ್ತಾಗದೆ ಇದ್ದುದು ಸೀತೆಯ ಕೊರಳಹಾರ. ಈ ಘಟನೆಯಲ್ಲಿ ಪುರಾತನ ಭರತ ಖಂಡದ ಒಂದು ಆಚಾರವಿದೆ. ಈ ರಾಕ್ಷಸನಾರು, ಅವನೆಲ್ಲಿರುವನು ಎಂಬುದನ್ನೆಲ್ಲ ಕಪಿಗಳು ರಾಮನಿಗೆ ಹೇಳಿದುವು. ಅನಂತರ ಅವನನ್ನು ಹುಡುಕಲು ಹೊರಟರು.

ರಾಜ್ಯಕ್ಕಾಗಿ ಕಪೀಶನಾದ ವಾಲಿ ಮತ್ತು ಅವನ ತಮ್ಮ ಸುಗ್ರೀವ ತಮ್ಮತಮ್ಮಲ್ಲೇ ವ್ಯಾಜ್ಯವಾಡುತ್ತಿದ್ದರು. ರಾಮ ಕಪಿಗಳಲ್ಲಿ ತಮ್ಮನಾದ ಸುಗ್ರೀವನಿಗೆ ಸಹಾಯಮಾಡಿದನು. ಇವನನ್ನು ಓಡಿಸಿದ ವಾಲಿಯಿಂದ ರಾಜ್ಯವನ್ನು ಹಿಂತಿರುಗಿ ಪಡೆದನು. ಇದಕ್ಕೆ ಪ್ರತಿಯಾಗಿ ರಾಮನಿಗೆ ಸಹಾಯಮಾಡುವೆನೆಂದು ಸುಗ್ರೀವ ಒಪ್ಪಿಕೊಂಡನು. ಸುತ್ತಲೂ ದೇಶವನ್ನೆಲ್ಲ ಹುಡುಕಿದರು. ಆದರೆ ಎಲ್ಲಿಯೂ ಸೀತೆ ಸಿಕ್ಕಲಿಲ್ಲ. ಕೊನೆಗೆ ಹನುಮಂತ ಇಂಡಿಯಾದೇಶದಿಂದ ಒಂದೇ ನೆಗೆತದಲ್ಲಿ ಲಂಕಾದ್ವೀಪಕ್ಕೆ ಹಾರಿದ. ಲಂಕೆಯಲ್ಲೆಲ್ಲಾ ಸೀತೆಯನ್ನು ಹುಡುಕಾಡಿದ. ಎಲ್ಲಿಯೂ ಸಿಕ್ಕಲಿಲ್ಲ.

ಪರಾಕ್ರಮಶಾಲಿಯಾದ ರಾವಣಾಸುರ ದೇವತೆಗಳನ್ನು ಗೆದ್ದಿದ್ದ. ಇಡೀ ಪ್ರಪಂಚವನ್ನೇ ಗೆದ್ದಿದ್ದ. ಅಲ್ಲಿರುವ ಸುಂದರ ಯುವತಿಯರನ್ನೆಲ್ಲಾ ಅಪಹರಿಸಿ ತನ್ನ ಅಂತಃಪುರಕ್ಕೆ ಸೇರಿಸಿಕೊಂಡಿದ್ದ. ಹನುಮಂತ ಆಲೋಚಿಸಿದ: "ಸೀತೆ ಉಳಿದ ಹೆಂಗಸರೊಂದಿಗೆ ಅರಮನೆಯಲ್ಲಿ ಇರಲಾರಳು. ಇಂಥ ಸ್ಥಳದಲ್ಲಿ ಇರುವ ಬದಲು ಅವಳು ಪ್ರಾಣವನ್ನಾದರೂ ಕಳೆದುಕೊಂಡಾಳು" ಎಂದು. ಹನುಮಂತ ಬೇರೆ ಕಡೆ ಅವಳನ್ನು ಹುಡುಕತೊಡಗಿದ. ಕೊನೆಗೆ ದಿಗಂತದ ಅಂಚಿನಲ್ಲಿರುವ ಶುಕ್ಲಪಕ್ಷದ ಚಂದ್ರನಂತೆ ಮ್ಲಾನಳಾಗಿ ಬಾಡಿಹೋದ ಸೀತೆಯನ್ನು ಹನುಮಂತ ಒಂದು ಮರದ ಕೆಳಗೆ ನೋಡಿದ. ಹನುಮಂತ ಸಣ್ಣ ಕಪಿಯಂತೆ ಆ ಮರದ ಮೇಲೆ ಕುಳಿತುಕೊಂಡ. ಸೀತೆಯನ್ನು ಒಪ್ಪಿಸು

ವುದಕ್ಕೆ ರಾವಣನಿಂದ ಕಳುಹಿಸಲ್ಪಟ್ಟ ರಾಕ್ಷಸಿಯರು ಸೀತೆಯನ್ನು ಅಂಜಿಸುತ್ತಿರುವುದನ್ನು ನೋಡಿದ. ಆದರೆ ಸೀತೆ ಆ ರಾಕ್ಷಸೇಶನ ಹೆಸರನ್ನು ಕೂಡ ಕೇಳಲು ಇಚ್ಛೆಪಡಲಿಲ್ಲ.

ಅನಂತರ ಹನುಮಂತ ಸೀತೆಯ ಸಮೀಪಕ್ಕೆ ಬಂದು ಸೀತೆಯನ್ನು ಹುಡುಕುವುದಕ್ಕೆ ರಾಮ ಕಳುಹಿಸಿದ ಚಾರ ತಾನು ಎಂಬುದನ್ನು ಹೇಳಿದ. ತನ್ನ ಗುರುತನ್ನು ತೋರುವುದಕ್ಕೆ ರಾಮ ಇತ್ತ ಉಂಗುರವನ್ನೆ ಸೀತೆಗೆ ಕೊಟ್ಟ. ರಾಮನಿಗೆ ಸೀತೆಯ ಸಮಾಚಾರ ತಿಳಿದೊಡನೆಯೆ ಸೈನ್ಯಸಮೇತ ಬಂದು ರಾವಣನನ್ನು ಸೋಲಿಸಿ ಸೀತೆಯನ್ನು ಕರೆದುಕೊಂಡು ಹೋಗುವನು ಎಂಬುದನ್ನೂ ಹೇಳಿದನು. ಆದರೂ ಸೀತೆ ತಾನು ಇಚ್ಛೆಪಟ್ಟರೆ ತನ್ನ ಹೆಗಲಮೇಲೆ ಒಂದೇ ನೆಗೆತದಲ್ಲಿ ಸಾಗರವನ್ನು ದಾರಿ ರಾಮನನ್ನು ಬೇಕಾದರೆ ಸೇರಬಹುದು ಎಂದನು. ಸೀತೆ ತಾನು ಪವಿತ್ರಾತ್ಮಳಾದುದರಿಂದ ಗಂಡನಲ್ಲದ ಪುರುಷನನ್ನು ಸ್ಪರ್ಶಮಾಡುವುದಿಲ್ಲ ಎಂದು ಹನುಮಂತನ ಸಲಹೆಗೆ ಒಪ್ಪಲಿಲ್ಲ. ಸೀತೆ ಅಲ್ಲಿಯೇ ಉಳಿದುಕೊಂಡಳು. ಸೀತೆ ತನ್ನ ಕೇಶದಲ್ಲಿದ್ದ ಒಂದು ಆಭರಣವನ್ನು ರಾಮನಿಗೆ ಕೊಟ್ಟಳು. ಇದರೊಡನೆ ಹನುಮಂತ ಹಿಂತಿರುಗಿದ.

ಹನುಮಂತನಿಂದ ಸೀತೆಯ ಸಮಾಚಾರವನ್ನೆಲ್ಲ ತಿಳಿದುಕೊಂಡು ರಾಮನು ವಾನರರೊಡನೆ ಭರತಖಂಡದ ದಕ್ಷಿಣದ ತುದಿಗೆ ಹೊರಟನು. ಅಲ್ಲಿ ರಾಮನ ವಾನರಸೇನೆ ' ಸೇತುಬಂಧ ' ಎಂಬ ಕಡೆ ಲಂಕಾನಗರಿಗೂ ಇಂಡಿಯಾದೇಶಕ್ಕೂ ಮಧ್ಯೆ ದೊಡ್ಡದೊಂದು ಸೇತುವೆಯನ್ನು ಕಟ್ಟಿತು. ಈಗಲೂ ಸಮುದ್ರ ಇಳಿದಾಗ ಆ ಮರಳ ದಿಣ್ಣೆಗಳ ಮೇಲಿನಿಂದಲೆ ಲಂಕಾಪಟ್ಟಣಕ್ಕೆ ಹೋಗಬಹುದು.

ರಾಮ ಒಬ್ಬ ಭಗವಂತನ ಅವತಾರ. ಇಲ್ಲದೆ ಇದ್ದರೆ ಅವನು ಇವನ್ನೆಲ್ಲ ಮಾಡಲು ಹೇಗೆ ಸಾಧ್ಯ? ಹಿಂದೂಗಳಿಗೆ ರಾಮ ಒಬ್ಬ ಭಗವಂತನ ಅವತಾರ. ರಾಮ ಭಗವಂತನ ಏಳನೇ ಅವತಾರವೆಂದು ಭರತಖಂಡದಲ್ಲಿ ಜನ ಅವನನ್ನು ಪರಿಗಣಿಸುವರು.

ವಾನರರು ದೊಡ್ಡ ದೊಡ್ಡ ಬೆಟ್ಟಗಳನ್ನು ಸಮುದ್ರದಲ್ಲಿಟ್ಟು ಅಲ್ಲಿ ಮರಳು ಮತ್ತು ಮರವನ್ನು ಇಟ್ಟು ದೊಡ್ಡ ಸೇತುವೆಯನ್ನು

ಕಟ್ಟಿದರು. ಅಲ್ಲೊಂದು ಸಣ್ಣ ಅಳಿಲು ಮರಳ ಮೇಲೆ ಹೊರಳಾಡಿ ಸೇತುವೆಯ ಹತ್ತಿರ ದೇಹವನ್ನು ಕೊಡಹಿ ಉದುರಿಸುತ್ತಿತ್ತಂತೆ. ಅಳಿಲು ತನ್ನ ಕೈಲಾದಮಟ್ಟಿಗೆ ರಾಮನ ಸೇತುಬಂಧನಕ್ಕೆ ಸಹಾಯ ಮಾಡುತ್ತಿತ್ತು. ವಾನರರು ಹೊರಳಾಡಿ ಕೆಲವು ಮರಳುಕಣ ಕೆಡವುತ್ತಿರುವ ಅಳಿಲನ್ನು ನೋಡಿ ನಕ್ಕರು. ಏಕೆಂದರೆ ಅವರು ದೊಡ್ಡ ದೊಡ್ಡ ಪರ್ವತಗಳು ಕಾಡುಮರಳಿನ ದಿಣ್ಣೆಗಳನ್ನೇ ತಂದುಹಾಕುತ್ತಿದ್ದರು. ಆದರೆ ರಾಮ ಇದನ್ನು ನೋಡಿ "ಧನ್ಯ ಅಳಿಲು, ತನ್ನ ಕೈಲಾದಷ್ಟು ಅದು ಮಾಡುತ್ತಿದೆ. ಆದಕಾರಣ ನಿಮ್ಮಲ್ಲಿರುವ ಪರಮ ಪೌರುಷವಂತನಿಗೆ ಸಮ" ಎಂದು ಅಳಿಲಿನ ಬೆನ್ನಮೇಲೆ ಪ್ರೀತಿಯಿಂದ ತನ್ನ ಬೆರಳನ್ನು ಸವರಿದನು. ಈಗಲೂ ಅಳಿಲಿನ ಮೇಲೆ ಇರುವ ರಾಮನ ಬೆರಳನ್ನು ನೋಡಬಹುದು.

ಸೇತುಬಂಧನವಾದ ಮೇಲೆ ರಾಮಲಕ್ಷ್ಮಣರ ನೇತೃತ್ವದಲ್ಲಿ ವಾನರಸೇನೆ ಲಂಕಾನಗರವನ್ನು ಪ್ರವೇಶಿಸಿತು. ಹಲವು ತಿಂಗಳು ಘೋರ ಯುದ್ಧ ಮತ್ತು ರಕ್ತಪಾತವಾಯಿತು. ಕೊನೆಗೆ ರಾವಣಾಸುರ ಸೋತನು. ಅವನ ಸಂಹಾರವಾಯಿತು. ಚಿನ್ನದಿಂದ ಮಾಡಿದ ಅವನ ಅರಮನೆ ಮುಂತಾದುವನ್ನೆಲ್ಲ ವಶಪಡಿಸಿಕೊಂಡರು. ಇಂಡಿಯಾದೇಶದ ದೂರದಲ್ಲಿರುವ ಜನರಿಗೆ ನಾನು ಲಂಕೆಗೆ ಹೋಗಿದ್ದೆ ಎಂದರೆ ಅವರು ಪುರಾಣದಲ್ಲಿ ಅಲ್ಲಿಯ ಮನೆಯೆಲ್ಲ ಚಿನ್ನದಿಂದ ಆಗಿದೆ ಎಂದು ಹೇಳುವರಲ್ಲ ಎಂದು ಪ್ರಶ್ನಿಸುವರು. ಈ ಚಿನ್ನದ ನಗರಿಯೆಲ್ಲ ರಾಮನ ವಶವಾಯಿತು. ಅವನು ರಾವಣನ ತಮ್ಮನಾದ ವಿಭೀಷಣನಿಗೆ ಇವನ್ನೆಲ್ಲ ಕೊಟ್ಟನು. ರಾಮನಿಗೆ ಯುದ್ಧದಲ್ಲಿ ಸಹಾಯಮಾಡಿದುದಕ್ಕಾಗಿ ಅವನನ್ನು ಲಂಕೆಗೆ ರಾಜನನ್ನಾಗಿ ಮಾಡಿದನು.

ಅನಂತರ ರಾಮ ಸೀತೆಯೊಡಗೂಡಿ ತನ್ನ ಪರಿವಾರದೊಡನೆ ಲಂಕೆಯನ್ನು ಬಿಟ್ಟನು. ಆದರೆ ಅವನ ಅನುಯಾಯಿಗಳಲ್ಲಿ ಕೆಲವರು "ಪರೀಕ್ಷೆ, ಪರೀಕ್ಷೆ" ಎಂದು ಅರಚಿಕೊಂಡರು. ರಾವಣನ ಅಧೀನದಲ್ಲಿದ್ದರೂ ಸೀತೆ ಪರಿಶುದ್ಧಾತ್ಮಳಾಗಿದ್ದಳು ಎಂಬುದನ್ನು ಅವರಿಗೆ ತೋರಿರಲಿಲ್ಲ. "ಪರಿಶುದ್ಧಳೆ! ಅವಳು ಪಾತಿವ್ರತ್ಯದ ಸಾಕಾರಮೂರ್ತಿ" ಎಂದ ರಾಮ. ಚಿಂತೆಯಿಲ್ಲ, ನಮಗೆ ಪರೀಕ್ಷೆಯಾಗಬೇಕು ಎಂದು ಅರಚಿ

ಕೊಂಡ ಜನ ಅಲ್ಲೊಂದು ದೊಡ್ಡ ಅಗ್ನಿಕುಂಡವನ್ನು ಅಣಿಗೊಳಿಸಿದರು. ಸೀತೆ ಅದನ್ನು ಪ್ರವೇಶಮಾಡಬೇಕಾಯಿತು. ರಾಮ ದುಃಖದಿಂದ ಕುದಿಯುತ್ತಿದ್ದ, ಸೀತೆ ಎಲ್ಲಿ ಸೀದುಹೋಗುವಳೊ ಎಂದು. ಆದರೆ ತಕ್ಷಣ ಅಗ್ನಿಕುಂಡದಿಂದ ಅಗ್ನಿಯೆ ತನ್ನ ತಲೆಯ ಮೇಲೆ ಒಂದು ಸಿಂಹಾಸನವನ್ನು ಹೊತ್ತು ತಂದನು. ಅದರಲ್ಲಿ ಸೀತೆ ಇದ್ದಳು. ಆಗ ಎಲ್ಲರಿಗೂ ಸಂತೋಷವಾಯಿತು. ಎಲ್ಲರಿಗೂ ತೃಪ್ತಿಯಾಯಿತು.

ರಾಮ ವನವಾಸದಲ್ಲಿದ್ದಾಗಲೆ ಅವನ ತಮ್ಮ ಭರತ ಬಂದು ದಶರಥನ ಮರಣದ ವಿಚಾರವನ್ನು ಹೇಳಿ ರಾಮ ಬಂದು ಸಿಂಹಾಸನವನ್ನು ಏರಬೇಕೆಂದು ಬಲಾತ್ಕರಿಸುತ್ತಿದ್ದನು. ರಾಮ ವನವಾಸದಲ್ಲಿರುವಾಗ ಭರತ ಸಿಂಹಾಸನವನ್ನು ಏರಲಿಲ್ಲ. ಅದರ ಮೇಲೆ ರಾಮನಿಗೆ ಬದಲು ಅವನ ಪಾದುಕೆಗಳನ್ನು ಇಟ್ಟು ಅದರ ಪರವಾಗಿ ರಾಜ್ಯವನ್ನು ನೋಡಿಕೊಳ್ಳುತ್ತಿದ್ದನು. ರಾಮ ಅಯೋಧ್ಯೆಗೆ ಹಿಂತಿರುಗಿ ಬಂದ ಮೇಲೆ ಜನರೆಲ್ಲರ ಕೋರಿಕೆಯ ಮೇಲೆ ಅವನು ರಾಜನಾದನು.

ರಾಮ ರಾಜನಾದ ಮೇಲೆ ಹಿಂದಿನ ಕಾಲದಲ್ಲಿ ರಾಜರು ಜನರ ಹಿತಕ್ಕೋಸುಗ ಆಚರಿಸುತ್ತಿದ್ದ ಕೆಲವು ಆವಶ್ಯಕವಾದ ವ್ರತಗಳನ್ನು ಪಾಲಿಸ ತೊಡಗಿದನು. ರಾಜ ಪ್ರಜೆಗಳ ಸೇವಕ. ನಾವು ಮುಂದೆ ನೋಡುವಂತೆ ಪ್ರಜಾಭಿಪ್ರಾಯಕ್ಕೆ ಮಾನ್ಯತೆ ಕೊಡಬೇಕು. ರಾಮ ಕೆಲವು ಕಾಲ ಸೀತೆಯೊಡನೆ ಸುಖವಾಗಿದ್ದ. ಪುನಃ ಜನ ರಾವಣ ಸೀತೆಯನ್ನು ಕದ್ದುಕೊಂಡು ಸಮುದ್ರದಾಚೆ ತೆಗೆದುಕೊಂಡು ಹೋಗಿದ್ದ ಎಂದು ಆಕ್ಷೇಪಣೆ ಮಾಡಿದರು. ಅವರು ಹಿಂದಿನ ಪರೀಕ್ಷೆಗೆ ತೃಪ್ತರಾಗಲಿಲ್ಲ. ಬೇರೊಂದು ಪರೀಕ್ಷೆ ಮಾಡಬೇಕೆಂದೂ ಇಲ್ಲದೆ ಇದ್ದರೆ ಅವಳನ್ನು ತ್ಯಜಿಸಬೇಕು ಎಂದರು.

ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುವುದಕ್ಕಾಗಿ ಸೀತೆಯನ್ನು ದೇಶದಿಂದ ಹೊರಗೆ ವಾಲ್ಮೀಕಿ ಮಹರ್ಷಿ ಇದ್ದ ಅರಣ್ಯದಲ್ಲಿ ಅವಳನ್ನು ಬಿಟ್ಟರು. ನೋಡಿಕೊಳ್ಳುವವರಾರೂ ಇಲ್ಲದೆ ಅಳುತ್ತಿದ್ದ ಸೀತೆಯನ್ನು ವಾಲ್ಮೀಕಿಗಳು ನೋಡಿ ಅವಳ ದುಃಖದ ಕಥೆಯನ್ನು ಕೇಳಿ ತಮ್ಮ ಆಶ್ರಮದಲ್ಲೇ ಅವಳನ್ನು ಇರಿಸಿಕೊಂಡರು. ಸೀತೆಗೆ ಹೆರಿಗೆಯ ಸಮಯ

ವಾಗಿತ್ತು. ಅವಳು ಅವಳಿಜವಳಿ ಮಕ್ಕಳಿಗೆ ಜನ್ಮವಿತ್ತಳು. ಕವಿ ಮಕ್ಕಳಿಗೆ ಅವರಾರು ಎಂಬುದನ್ನು ತಿಳಿಸಲಿಲ್ಲ. ಅವರನ್ನು ಬ್ರಹ್ಮಚಾರಿಗಳಂತೆ ಸಾಕಿದನು. ಆಗ ಅವನು ರಾಮಾಯಣವನ್ನು ಬರೆದು ಅದನ್ನು ಗಮಕವನ್ನಾಗಿ ಮಾಡಿ ಒಂದು ನಾಟಕವನ್ನು ಬರೆದನು.

ಭರತಖಂಡದಲ್ಲಿ ನಾಟಕ ಅತಿ ಪವಿತ್ರವಾದುದು. ನಾಟಕ ಮತ್ತು ಸಂಗೀತವನ್ನೇ ಧರ್ಮವೆಂದು ಭಾವಿಸುವರು. ಎಂತಹ ಹಾಡಾದರೂ ಆಗಲಿ, ಅದು ಪ್ರೀತಿಯದಾಗಲೀ ಅಥವಾ ಇನ್ನಾವುದಾದರೂ ಆಗಲಿ ಆ ಹಾಡನ್ನೇ ತದ್ಗತಪ್ರಾಣನಾಗಿ ಹಾಡಿದರೆ ಅವನಿಗೆ ಮುಕ್ತಿ ಲಭಿಸುವುದು. ಅವನು ಇನ್ನೇನೂ ಮಾಡಬೇಕಾಗಿಲ್ಲ. ಧ್ಯಾನದ ಗುರಿಯನ್ನೇ ಇದೂ ಸೇರುವುದು ಎನ್ನುವರು.

ವಾಲ್ಮೀಕಿ ರಾಮಾಯಣವನ್ನು ಒಂದು ಕಾವ್ಯವನ್ನಾಗಿ ಮಾಡಿ ಅದನ್ನು ಹೇಗೆ ಹಾಡಬೇಕೆಂಬುದನ್ನು ರಾಮನ ಇಬ್ಬರು ಮಕ್ಕಳಿಗೆ ಕಲಿಸಿದರು.

ಹಿಂದಿನಕಾಲದ ಅರಸರು ಮಾಡುತ್ತಿದ್ದಂತೆ ದೊಡ್ಡದೊಂದು ಯಾಗವನ್ನು ರಾಮ ಮಾಡಬೇಕಾದ ಸಮಯ ಬಂತು. ಆದರೆ ಇಂಡಿಯಾದೇಶದಲ್ಲಿ ಲಗ್ನವಾದವನು ಯಾವುದೊಂದು ಯಾಗ ಯಜ್ಞವನ್ನಾಗಲಿ ಹೆಂಡತಿಯಿಲ್ಲದೆ ಮಾಡಲಾರನು. ಅವನೊಡನೆ ಸಹಧರ್ಮಿಣಿ ಇರಬೇಕು ಸತಿಗೆ ಅವರು ಉಪಯೋಗಿಸುವ ಪದ ಇದು. ಹಿಂದೂ ಗೃಹಸ್ಥರು ನೂರಾರು ಪೂಜಾದಿಗಳನ್ನು ಮಾಡಬೇಕು. ಆದರೆ ಸಹಧರ್ಮಿಣಿ ಭಾಗಿಯಾಗದೆ ಇದ್ದರೆ ಅವನು ಏನನ್ನೂ ಶಾಸ್ತ್ರೀಯವಾಗಿ ಮಾಡಲಾರ.

ಸೀತೆಯನ್ನು ದೇಶಬಾಹಿರಳನ್ನಾಗಿ ಮಾಡಿದುವರಿಂದ ರಾಮನ ಸತಿ ಆ ಸಮಯದಲ್ಲಿ ಇರಲಿಲ್ಲ. ಪುನಃ ಮದುವೆಯಾಗೆಂದು ಜನ ಅವನನ್ನು ಕೋರಿಕೊಂಡರು. ಆದರೆ ಈ ಕೋರಿಕೆಗೆ ರಾಮ ಪ್ರಥಮ ಬಾರಿ ಪ್ರಜೆಗಳಿಗೆ ವಿರೋಧವಾಗಿ ನಿಂತನು. "ಇದು ಸಾಧುವಲ್ಲ, ನನ್ನ ಪ್ರಾಣ ಸೀತೆಯಲ್ಲಿದೆ" ಎಂದನು. ಯಾಗ ಮಾಡುವುದಕ್ಕಾಗಿ ಸೀತೆಗೆ ಬದಲಾಗಿ ಸೀತೆಯ ಒಂದು ಚಿನ್ನದ ವಿಗ್ರಹವನ್ನು ಮಾಡಿಸಿದನು. ಈ ಮಹೋತ್ಸವದ ಸಮಯದಲ್ಲಿ ಧರ್ಮೋದ್ದೀಪನೆಗೊಳಿಸು

ವುದಕ್ಕಾಗಿ ಒಂದು ನಾಟಕವನ್ನು ಆಡಿಸಿದರು. ಕವಿಯಾದ ವಾಲ್ಮೀಕಿ ಮಹರ್ಷಿಗಳು ತಮ್ಮ ಶಿಷ್ಯರಾದ ರಾಮನ ಅಜ್ಞಾತಮಕ್ಕಳಾದ ಲವಕುಶರೊಡನೆ ಬಂದರು. ಒಂದು ರಂಗಭೂಮಿಯನ್ನು ಅನುಗೊಳಿಸಿದರು. ನಾಟಕಕ್ಕೆ ಎಲ್ಲಾ ಅಣಿಯಾಯಿತು. ರಾಮ ಅವನ ಸಹೋದರರು ಜೊತೆಗೆ ದೊಡ್ಡ ದೊಡ್ಡ ಅಧಿಕಾರವರ್ಗವೆಲ್ಲ ಅದನ್ನು ನೋಡುವುದಕ್ಕೆ ನೆರೆದರು. ಪ್ರೇಕ್ಷಕರು ಕಿಕ್ಕಿರಿದಿದ್ದರು. ವಾಲ್ಮೀಕಿಯ ನೇತೃತ್ವದಲ್ಲಿ ಲವಕುಶರು ರಾಮನ ಜೀವನವನ್ನು ಹಾಡಿದರು. ಮಕ್ಕಳ ಗಾನದಿಂಪಿಗೆ ಮತ್ತು ಅವರ ಭವ್ಯಾಕೃತಿಗೆ ನೆರೆದವರೆಲ್ಲ ಮಾರುಹೋದರು. ಆದರೆ ಪಾಪ ರಾಮನಿಗೆ ಇದನ್ನು ಸಹಿಸಲು ಆಗಲಿಲ್ಲ. ಕಥೆಯಲ್ಲಿ ಸೀತಾಪರಿತ್ಯಾಗ ಬಂದಾಗಲಂತೂ ಏನು ಮಾಡಬೇಕೊ ಅವನಿಗೆ ಗೊತ್ತಾಗಲಿಲ್ಲ. ಆಗ ಋಷಿಗಳು "ವ್ಯಥೆಪಡಬೇಡ, ನಾನು ಸೀತೆಯನ್ನು ತೋರುತ್ತೇನೆ" ಎಂದರು. ಸೀತೆಯನ್ನು ರಂಗಭೂಮಿಯ ಮೇಲೆ ತಂದರು. ರಾಮನಿಗೆ ಸೀತೆಯನ್ನು ನೋಡಿ ಸಂತೋಷವಾಯಿತು. ತಕ್ಷಣ ಪರೀಕ್ಷೆಮಾಡಬೇಕು, ಪರೀಕ್ಷೆಮಾಡಬೇಕು ಎಂಬ ಹಿಂದಿನ ಗೋಣಗಾಟವೆ ಕೇಳಿಸಿತು. ಸೀತೆ ಜನ ತನ್ನ ಪಾತಿವ್ರತ್ಯವನ್ನು ಇಷ್ಟು ಅನುಮಾನಿಸುವರಲ್ಲ ಎಂದು ಅತಿ ದುಃಖಿತಳಾದಳು. ಇದನ್ನು ಸಹಿಸುವುದಕ್ಕೆ ಅವಳಿಗೆ ಆಗಲಿಲ್ಲ. ತನ್ನ ಪಾತಿವ್ರತ್ಯವನ್ನು ಪರೀಕ್ಷೆಮಾಡಿ ಸಾಧ್ವಿ ಎಂಬುದನ್ನು ತೋರಿ ಎಂದು ದೇವತೆಗಳನ್ನು ಬೇಡಿಕೊಂಡಳು. ಆಗ ಭೂಮಿ ಇಬ್ಭಾಗವಾಯಿತು. "ಇದೇ ಪರೀಕ್ಷೆ" ಎಂದು ಸೀತೆ ಅದರಲ್ಲಿ ಪ್ರವೇಶಿಸಿ ಮಾಯವಾದಳು. ನೆರೆದ ಜನ ಇಂತಹ ದುರಂತವನ್ನು ನೋಡಿ ಮೂಕರಾದರು. ರಾಮ ಶೋಕಾಕ್ರಾಂತನಾದನು.

ಸೀತೆ ಮಾಯವಾದ ಕೆಲವು ದಿನಗಳ ಮೇಲೆ ದೇವತೆಗಳಿಂದ ಬೇಹುಗಾರರು ಬಂದು ರಾಮನಿಗೆ ಪ್ರಪಂಚದಲ್ಲಿ ಅವನು ಮಾಡಬೇಕಾದ ಕೆಲಸ ತೀರಿತು ಇನ್ನು ಪುನಃ ಅಲ್ಲಿಗೆ ಹೊರಡಬೇಕು ಎಂದು ತಿಳಿಸಿದರು. ಈ ಸುದ್ದಿ ರಾಮನಿಗೆ ತನ್ನ ನೈಜಸ್ಥಿತಿಯ ಅರಿವನ್ನು ತಂದಿತು. ಅಯೋಧ್ಯಾನಗರದ ಸಮೀಪದಲ್ಲಿ ಹರಿಯುತ್ತಿದ್ದ ಸರಯೂ ನದಿಗೆ ಬಿದ್ದು ಬೇರೆ ಲೋಕದಲ್ಲಿ ಸೀತೆಯನ್ನು ಸೇರಿದನು.

ಇದೇ ಭರತಖಂಡದ ಪುರಾತನ ಮಹಾಕಾವ್ಯ. ಸೀತಾರಾಮರು ಹಿಂದೂ ಜನಾಂಗದ ಆದರ್ಶ. ಎಲ್ಲಾ ಮಕ್ಕಳಿಗೂ ಅದರಲ್ಲಿಯೂ ಹೆಣ್ಣು ಹುಡುಗಿಯರು ಸೀತೆಯನ್ನು ಪೂಜಿಸುವರು. ಸ್ತ್ರೀಯ ಆಕಾಂಕ್ಷೆಯ ಪರಮಾವಧಿಯು ಪರಿಶುದ್ಧಳಾದ, ಪತಿಪರಾಯಣೆಯಾದ ಜೀವನವೆಲ್ಲ ನೊಂದ ಸೀತೆಯಂತಾಗುವುದು. ನೀವು ಈ ಶೀಲಗಳನ್ನು ಪರಿಗಣಿಸಿದರೆ ಪೌರಾತ್ಯ ಪಾಶ್ಚಾತ್ಯ ಆದರ್ಶಗಳು ಎಷ್ಟು ಭಿನ್ನವಾಗಿವೆ ಎಂಬುದು ಗೊತ್ತಾಗುವುದು. ಇಡೀ ದೇಶಕ್ಕೆ ಸೀತೆ ಜಗದಲ್ಲಿ ಹೇಗೆ ದುಃಖವನ್ನು ಸಹಿಸಬೇಕು ಎಂಬುದಕ್ಕೆ ಆದರ್ಶವಾಗಿರುವಳು. ಪಾಶ್ಚಾತ್ಯರು "ಏನನ್ನಾದರೂ ಸಾಧಿಸಿ, ನಿಮ್ಮ ಪೌರುಷವನ್ನು ತೋರಿ" ಎನ್ನುವರು. ಭಾರತೀಯರು "ಸಹಿಸಿ ತೋರಿ" ಎನ್ನುವರು. ಪಾಶ್ಚಾತ್ಯರು ಜನ ಎಷ್ಟನ್ನು ಪಡೆಯಬಹುದು ಎಂಬ ಸಮಸ್ಯೆಯನ್ನು ಬಗೆಹರಿಸಿರುವರು. ಭಾರತೀಯ ಮನುಷ್ಯನಿಗೆ ಎಷ್ಟು ಸ್ವಲ್ಪ ಸಾಕು ಎಂಬ ಸಮಸ್ಯೆಯನ್ನು ಪರಿಹರಿಸುವನು. ಎರಡು ಅತಿಯನ್ನೂ ನೋಡಿ. ಸೀತೆ ಇಂಡಿಯಾದೇಶಕ್ಕೆ ಸರಿಹೊಂದಿಕೊಳ್ಳುವ ಶೀಲ, ಇಂಡಿಯಾದೇಶದ ಆದರ್ಶ ಶೀಲ. ಅವಳು ನಿಜವಾಗಿ ಪ್ರಪಂಚದಲ್ಲಿ ಇದ್ದಳೆ? ರಾಮಾಯಣ ನಿಜವಾಗಿ ಚರಿತ್ರೆಯೆ? ಇದಲ್ಲ ಪ್ರಶ್ನೆ. ಈ ಆದರ್ಶ ಅಲ್ಲಿದೆ. ಸೀತಾದೇವಿಯ ಶೀಲದಷ್ಟು ಮತ್ತಾವ ಪೌರಾಣಿಕ ವ್ಯಕ್ತಿಯೂ ಇಡೀ ಹಿಂದೂಜನಾಂಗವನ್ನು ವ್ಯಾಪಿಸಿ, ಅವರ ನಿತ್ಯ ಜೀವನಕ್ಕೆ ಪ್ರವೇಶಿಸಿ, ಸಮಾಜದ ಪ್ರತಿಯೊಂದು ಧಮನಿಯಲ್ಲಿ ಅನುರಣಿತವಾಗುತ್ತಿಲ್ಲ. ಭರತಖಂಡದಲ್ಲಿ ಎಲ್ಲಾ ಒಳ್ಳೆಯದಕ್ಕೆ ಪರಿಶುದ್ಧವಾಗಿರುವುದಕ್ಕೆ, ಪವಿತ್ರವಾಗಿರುವುದಕ್ಕೆ, ಸೀತೆ ಎಂದು ಹೆಸರು. ಸ್ತ್ರೀಯಲ್ಲಿ ಯಾವುದನ್ನು ಸ್ತ್ರೀತ್ವ ಎನ್ನುವೆವೊ ಅದೇ ಸೀತೆ. ಬ್ರಾಹ್ಮಣನೊಬ್ಬ ಸ್ತ್ರೀಯನ್ನು ಹರಸಬೇಕಾದರೆ "ಸೀತೆಯಂತಾಗು" ಎನ್ನುವನು. ಹುಡುಗಿಯನ್ನು ಹರಸುವಾಗ "ಸೀತೆಯಂತಾಗು" ಎನ್ನುವನು. ಅವರೆಲ್ಲ ಸೀತೆಯ ಮಕ್ಕಳು. ಶಾಂತಳಾದ ಸಹಿಷ್ಣುತಾ ಮೂರ್ತಿಯಂತಿರುವ, ಪತಿವ್ರತೆಯಾದ ನಿತ್ಯನಿರ್ಮಲಳಾದ ಸೀತೆಯಂತಾಗುವುದಕ್ಕೆ ಯತ್ನಿಸುತ್ತಿರುವರು. ಅವಳು ಅಷ್ಟೊಂದು ಕಷ್ಟವನ್ನು ಅನುಭವಿಸಿದರೂ ರಾಮನ ಮೇಲೆ ಒಮ್ಮೆಯಾದರೂ ಕಟುವಾಗಿ

ಮಾತನಾಡುವುದಿಲ್ಲ. ಇದೆಲ್ಲ ತನ್ನ ಕರ್ತವ್ಯವೆಂದು ತನ್ನ ಪಾಲಿಗೆ ಬಂದುದನ್ನು ತಾನು ನಿರ್ವಹಿಸುವಳು. ಅವಳನ್ನು ಕಾಡಿಗೆ ಅಟ್ಟಿದ ಆ ಭಯಾನಕವಾದ ಅನ್ಯಾಯವನ್ನು ನೋಡಿ! ಆದರೆ ಸೀತೆ ಯಾರನ್ನೂ ದೂರುವುದಿಲ್ಲ. ಪುನಃ ಇದು ಭಾರತೀಯರ ಆದರ್ಶ. ಬುದ್ಧ ಹೀಗೆ ಸಾರುವನು: “ಒಬ್ಬ ನಿನ್ನನ್ನು ನೋಯಿಸಿದಾಗ ನೀನು ಅವನಿಗೆ ಪ್ರತೀಕಾರ ಮಾಡುವುದಕ್ಕೆ ಹೋದರೆ ಮಾಡಿದ ಮೊದಲ ತಪ್ಪನ್ನು ಅದು ನಿವಾರಿಸಲಾರದು. ಪ್ರಪಂಚದಲ್ಲಿ ಮತ್ತೊಂದು ದುಷ್ಟಕೃತ್ಯ ಹೆಚ್ಚಾಗುವುದು.” ಸೀತೆ ಸ್ವಭಾವತಃ ಭಾರತೀಯಳು. ಹಿಂಸೆಗೆ ಪ್ರತಿಹಿಂಸೆಯನ್ನು ಅವಳು ಕೊಟ್ಟವಳಲ್ಲ.

ಯಾವುದು ನಿಜವಾದ ಆದರ್ಶ ಯಾರಿಗೆ ಗೊತ್ತು? ಪಾಶ್ಚಾತ್ಯರಲ್ಲಿರುವ ತಾತ್ಕಾಲಿಕವಾದ ಅಧಿಕಾರ ಮತ್ತು ಶಕ್ತಿಯೊ, ಅಥವಾ ಪೌರಾತ್ಯನ ಸಹಿಷ್ಣುತಾಶಕ್ತಿಯೊ?

ಪಾಶ್ಚಾತ್ಯ ಪಾಪವನ್ನು ಗೆದ್ದು ಅದನ್ನು ಕಡಿಮೆಮಾಡುವೆವು ಎನ್ನುವನು. ಪೌರಾತ್ಯನು “ಪಾಪವನ್ನು ಅನುಭವಿಸಿ ಅದನ್ನು ನಿರ್ಮೂಲಮಾಡುತ್ತೇನೆ. ಅದನ್ನು ಗಣನೆಗೇ ತರುವುದಿಲ್ಲ. ಅದೇ ಒಂದು ಆನಂದವಾಗುವುದು” ಎನ್ನುವನು. ಎರಡೂ ದೊಡ್ಡ ಆದರ್ಶಗಳೇ. ಕೊನೆಗೆ ಯಾವುದು ಉಳಿಯುವುದೊ ಯಾರಿಗೆ ಗೊತ್ತು? ಯಾವ ದೃಷ್ಟಿಯಿಂದ ಮಾನವಕೋಟಿಗೆ ಹೆಚ್ಚು ಮೇಲಾಗುವುದೊ ಯಾರಿಗೆ ಗೊತ್ತು? ಯಾವುದು ಮಾನವನ ಮೃಗೀಯತೆಯನ್ನು ಮೆಟ್ಟಿ ನಿಲ್ಲುವುದೊ, ಗೆಲ್ಲುವುದೊ ಯಾರಿಗೆ ಗೊತ್ತು? ಅನುಭವಿಸುವುದೋ ಅಥವಾ ಏನನ್ನಾದರೂ ಸಾಧಿಸುವುದೊ?

ಅಲ್ಲಿಯವರೆಗೆ ಒಬ್ಬರು ಇನ್ನೊಬ್ಬರ ಆದರ್ಶವನ್ನು ನಾಶಮಾಡದಿರುವ. ನಮ್ಮಿಬ್ಬರ ಗುರಿಯೂ ಒಂದೇ. ಅದೇ ಪಾಪದ ನಾಶ. ನೀವು ನಿಮ್ಮ ಆದರ್ಶವನ್ನು ತೆಗೆದುಕೊಳ್ಳಿ. ನಾವು ನಮ್ಮ ಆದರ್ಶವನ್ನು ತೆಗೆದುಕೊಳ್ಳುತ್ತೇವೆ. ಆದರ್ಶವನ್ನು ನಾಶಮಾಡದಿರುವ. ನಾನು ಪಾಶ್ಚಾತ್ಯನಿಗೆ ನನ್ನ ಆದರ್ಶವನ್ನು ತೆಗೆದುಕೊ ಎಂದು ಹೇಳುವುದಿಲ್ಲ. ಎಂದಿಗೂ ಹೀಗೆ ಹೇಳುವುದಿಲ್ಲ. ಗುರಿ ಒಂದೇ ಆದರೂ

ಮಾರ್ಗ ಒಂದೇ ಅಲ್ಲ. ಭರತಖಂಡದ ಆದರ್ಶಗಳನ್ನು ಕೇಳಾದಮೇಲೆ ನೀವು ಭಾರತೀಯರಿಗೆ "ಗುರಿ, ಆದರ್ಶ ಇಬ್ಬರಿಗೂ ಸರಿಯಾಗಿ ಇದೆ. ನೀವು ನಿಮ್ಮ ಆದರ್ಶವನ್ನು ಅನುಸರಿಸಿ. ನಿಮ್ಮ ರೀತಿಯಲ್ಲಿ ನೀವು ಮುಂದುವರಿಯಿರಿ. ದೇವರು ನಿಮಗೆ ಒಳ್ಳೆಯದು ಮಾಡಲಿ" ಎಂದು ಆಶೀರ್ವದಿಸುತ್ತೀರಿ ಎಂದು ಭಾವಿಸುತ್ತೇನೆ. ಜೀವನದಲ್ಲಿ ನನ್ನ ಸಂದೇಶವೆ ಪೌರಾತ್ಯರು ಪಾಶ್ಚಾತ್ಯರು ಭಿನ್ನಭಿನ್ನ ಆದರ್ಶಕ್ಕಾಗಿ ಹೋರಾಡಬೇಕಾಗಿಲ್ಲ. ಅದು ಎಷ್ಟೇ ವಿರೋಧವಾಗಿ ಕಂಡರೂ ಗುರಿ ಒಂದೇ ಎಂಬುದನ್ನು ತೋರುವುದು. ಈ ಜಟಿಲವಾದ ಸಂಸಾರ ಕಾನನದಲ್ಲಿ ಪ್ರಯಾಣಮಾಡುತ್ತಿರುವಾಗ ಒಬ್ಬರು ಇನ್ನೊಬ್ಬರಿಗೆ ಶುಭವನ್ನು ಕೋರೋಣ.

೨

# ಮಹಾಭಾರತ

ನಾನಿಂದಿನ ಸಂಜೆ ಮಾತಾಡಬೇಕೆಂದಿರುವ ಮತ್ತೊಂದು ಕಾವ್ಯವೇ ಮಹಾಭಾರತ. ದುಶ್ಯಂತ ಶಕುಂತಲೆಯರ ಮಗನಾದ ಭರತನ ವಂಶಜರ ಕಥೆ ಇದರಲ್ಲಿದೆ. ಮಹಾ ಎಂದರೆ ದೊಡ್ಡದು, ಭಾರತ ಎಂದರೆ ಭರತವಂಶಜರು. ಅವನಿಂದಲೇ ಭಾರತ ಎಂಬ ಹೆಸರು ಇಂಡಿಯಾದೇಶಕ್ಕೆ ಬಂದಿದೆ. ಮಹಾಭಾರತ ಎಂದರೆ ಬೃಹತ್ ಭರತ ಖಂಡ, ಅಥವಾ ಪ್ರಖ್ಯಾತ ಭರತವಂಶಜರ ಕಥೆ. ಕುರುದೇಶವೇ ಮಹಾಕಾವ್ಯದ ರಂಗಭೂಮಿ. ಕುರು ಮತ್ತು ಪಾಂಚಾಲರಿಗೆ ಆದ ಮಹಾಯುದ್ಧದ ಮೇಲೆ ಈ ಕಥೆ ಬೆಳೆದಿದೆ. ಆದಕಾರಣ ಯುದ್ಧ ನಡೆದ ಸ್ಥಳವೇನೂ ದೊಡ್ಡದಲ್ಲ. ಭರತಖಂಡದಲ್ಲೆಲ್ಲಾ ಹೆಚ್ಚು ಜನ ಪ್ರಿಯವಾಗಿರುವುದು ಈ ಕಾವ್ಯ. ಹೋಮರನ ಕಾವ್ಯ ಗ್ರೀಕರ ಮೇಲೆ ಯಾವ ಪ್ರಭಾವವನ್ನು ಬೀರಿತೋ ಅದೇ ಪ್ರಭಾವವಿದೆ ಇದಕ್ಕೆ. ಕಾಲ ಕಳೆದಂತೆ ಇದಕ್ಕೆ ಹೆಚ್ಚು ಹೆಚ್ಚು ಕಥಾಸಾಮಗ್ರಿ ಸೇರಿ ಸುಮಾರು ಒಂದು ಲಕ್ಷ ಶ್ಲೋಕಗಳಿರುವ ಒಂದು ಬೃಹತ್ ಗ್ರಂಥವಾಗಿದೆ. ಎಲ್ಲಾ ಬಗೆಯ ಕಥೆ, ದಂತಕಥೆ, ಪುರಾಣ, ತತ್ತ್ವ, ಇತಿಹಾಸ ಮುಂತಾದ ವಿಷಯಗಳೆಲ್ಲ ಕಾಲಕಾಲಕ್ಕೆ ಸೇರಿ ಅದೊಂದು ವಿಶಾಲವಾದ ಮಹಾ ಕಾವ್ಯವಾಗಿದೆ. ಅದರಲ್ಲೆಲ್ಲ ಹಳೆಯ ಆದಿಕಥೆಯೊಂದು ಹರಿಯುತ್ತಿದೆ.

ಮಹಾಭಾರತದ ಮುಖ್ಯ ಕಥೆಯೇ ಇಂಡಿಯಾದೇಶದ ಚಕ್ರಾಧಿಪತ್ಯಕ್ಕಾಗಿ ಕೌರವಪಾಂಡವರೆಂಬ ದಾಯಾದಿಗಳಿಗೆ ನಡೆದ ಯುದ್ಧ.

ಆರ್ಯರು ಸಣ್ಣ ಸಣ್ಣ ಪಂಗಡಗಳಾಗಿ ಭರತಖಂಡಕ್ಕೆ ಬಂದರು. ಕ್ರಮೇಣ ಅವರು ವಿಸ್ತರಿಸುತ್ತಾ ಹೋದರು. ಕೊನೆಗೆ ಅವರು ಭರತ ಖಂಡದ ನಿರ್ವಿವಾದ ಪ್ರಭುಗಳಾದರು. ಅನಂತರವೇ ದಾಯಾದಿಗಳಲ್ಲಿ ತಾವು ಚಕ್ರವರ್ತಿಗಳಾಗಬೇಕೆಂಬ ಕಲಹ ಪ್ರಾರಂಭವಾಯಿತು. ಯಾರು ಭಗವದ್ಗೀತೆಯನ್ನು ಓದಿರುವರೊ ಅವರಿಗೆ ಕಾದಲನುವಾಗಿ ಎರಡು ಸೇನೆಗಳು ನೆರೆದ ಕುರುಕ್ಷೇತ್ರ ಸಮರಾಂಗಣದ ವಿವರಣೆಯೊಂದಿಗೆ ಗೀತೆ ಪ್ರಾರಂಭವಾಗುವುದು ಎಂಬುದು ಗೊತ್ತಿದೆ.

ಚಕ್ರವರ್ತಿಯ ಮಕ್ಕಳಾದ ಇಬ್ಬರು ಸಹೋದರರಿದ್ದರು. ಹಿರಿಯನೆ ಧೃತರಾಷ್ಟ್ರ, ಕಿರಿಯನೆ ಪಾಂಡು. ಹಿರಿಯನಾದ ಧೃತರಾಷ್ಟ್ರ ಹುಟ್ಟು ಕುರುಡ. ಇಂಡಿಯಾದೇಶದ ಕಾನೂನಿಗೆ ಅನುಸಾರವಾಗಿ ಯಾವ ಕುರುಡನೆ ಆಗಲಿ ತೊದಲು ಮಾತನಾಡುವವನು ಅಥವಾ ಯಾವ ಬಗೆಯ ಹೀನಾಂಗನೇ ಆಗಲಿ ರಾಜನಾಗಲಾರ. ಅವನಿಗೆ ಜೀವನಾಂಶ ಮಾತ್ರ ಸಿಕ್ಕುವುದು. ಆದಕಾರಣ ಧೃತರಾಷ್ಟ್ರ ಹಿರಿಯನಾದರೂ ರಾಜನಾಗಲಿಲ್ಲ. ಪಾಂಡು ರಾಜನಾದ.

ಧೃತರಾಷ್ಟ್ರನಿಗೆ ನೂರು ಜನ ಮಕ್ಕಳಿದ್ದರು; ಪಾಂಡುವಿಗೆ ಐದು ಜನ ಮಕ್ಕಳಿದ್ದರು. ಪಾಂಡು ಬಾಲ್ಯದಲ್ಲೇ ತೀರಿಹೋಗಲು ಧೃತರಾಷ್ಟ್ರ ರಾಜನಾಗಿ ಪಾಂಡುರಾಜನ ಮಕ್ಕಳನ್ನು ತನ್ನ ಮಕ್ಕಳೊಡನೆ ನೋಡಿಕೊಳ್ಳುತ್ತಿದ್ದನು. ಅವರು ಪ್ರಾಪ್ತವಯಸ್ಕರಾದ ಮೇಲೆ ಪ್ರಖ್ಯಾತ ಬ್ರಾಹ್ಮಣಯೋಧ ದ್ರೋಣಾಚಾರ್ಯರ ಕೆಳಗೆ ಅವರನ್ನು ಬಿಟ್ಟನು. ರಾಜರಿಗೆ ಯೋಗ್ಯವಾದ ಹಲವು ಶಸ್ತ್ರಾಸ್ತ್ರಗಳ ವಿದ್ಯೆಯಲ್ಲಿ ದ್ರೋಣ ಅವರನ್ನು ಪರಿಣತರನ್ನಾಗಿ ಮಾಡಿದನು. ವಿದ್ಯೆ ಪೂರೈಸಿದ ಮೇಲೆ ಪಾಂಡುರಾಜನ ಹಿರಿಯಮಗನಾದ ಯುಧಿಷ್ಠಿರನನ್ನು ತನ್ನ ತಂದೆಯ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಯುಧಿಷ್ಠಿರನ ಶೀಲಸಂಪತ್ತು ಮತ್ತು ಅವನ ತಮ್ಮಂದಿರ ಪೌರುಷ ಮತ್ತು ಶ್ರದ್ಧಾಭಕ್ತಿಗಳು ಧೃತರಾಷ್ಟ್ರನ ಮಕ್ಕಳಲ್ಲಿ ಅಸೂಯೆಯನ್ನು ಕೆರಳಿಸಿತು. ಅವರಲ್ಲಿ ಹಿರಿಯನಾದ ದುರ್ಯೋಧನನ ಪ್ರೇರೇಪಣೆಯಂತೆ ವಾರಣಾ

ವತದಲ್ಲಿ ಆಗುತ್ತಿದ್ದ ಯಾವುದೋ ಒಂದು ಮೇಳವನ್ನು ನೋಡಲು ಹೋಗುವಂತೆ ಪಾಂಡವರನ್ನು ಕಳುಹಿಸಿದರು. ಅಲ್ಲಿ ಅವರು ದುರ್ಯೋಧನನ ಆಣತಿಯಂತೆ ಅರಗು ಕರ್ಪೂರ ಮುಂತಾದ ಹತ್ತಿಕೊಂಡು ಉರಿಯುವ ವಸ್ತುಗಳಿಂದ ಮಾಡಿದ ಮನೆಯಲ್ಲಿ ತಂಗುವಂತೆ ಮಾಡಿದರು. ಅನಂತರ ಅದಕ್ಕೆ ರಹಸ್ಯವಾಗಿ ಬೆಂಕಿ ಇಟ್ಟರು. ಆದರೆ ಇದಕ್ಕೆ ಮುಂಚೆ ಧೃತರಾಷ್ಟ್ರನ ಮಲತಮ್ಮನಾದ ಸಾಧು ವಿದುರನಿಗೆ ದುರ್ಯೋಧನ ಮತ್ತು ಅವನ ಅನುಯಾಯಿಗಳ ದುಷ್ಟಪ್ರೇರಣೆ ಗೊತ್ತಾಗಿ ಪಾಂಡವರಿಗೆ ಎಚ್ಚರಿಕೆ ಕೊಟ್ಟಿದ್ದನು. ಇದರಿಂದ ಯಾರಿಗೂ ತಿಳಿಯದೆ ಪಾಂಡವರು ತಪ್ಪಿಸಿಕೊಂಡು ಹೋಗಲು ಸಾಧ್ಯವಾಯಿತು. ಕೌರವರು ಮನೆ ಭಸ್ಮೀಭೂತವಾಗಿ ಹೋದುದನ್ನು ನೋಡಿ ತಮ್ಮ ಮಾರ್ಗದ ವಿಘ್ನಗಳೆಲ್ಲ ನಿವಾರಣೆಯಾಯಿತೆಂದು ಸಮಾಧಾನಪಟ್ಟರು. ಆಗ ಧೃತರಾಷ್ಟ್ರನ ಮಕ್ಕಳು ರಾಜರಾದರು. ಪಾಂಡವ ಸಹೋದರರು ತಾಯಿಯಾದ ಕುಂತೀ ಸಮೇತ ಕಾಡಿಗೆ ಓಡಿಹೋಗಬೇಕಾಯಿತು. ಅಲ್ಲಿ ಬ್ರಾಹ್ಮಣ ವಟುಗಳಂತೆ ವೇಷ ಮರೆಸಿಕೊಂಡು ಭಿಕ್ಷೆಯಲ್ಲಿ ಕಾಲಯಾಪನೆ ಮಾಡಬೇಕಾಯಿತು. ಗೊಂಡಾರಣ್ಯದಲ್ಲಿ ಅವರು ಎಷ್ಟೋ ಕಷ್ಟಪಡಬೇಕಾಯಿತು. ಎಷ್ಟೋ ಸಾಹಸಗಳನ್ನು ಮಾಡಬೇಕಾಯಿತು. ಆದರೆ ಅವರ ಧೈರ್ಯ ಪೌರುಷ ಪರಾಕ್ರಮದಿಂದ ಎಲ್ಲಾ ಅಪಾಯಗಳಿಂದಲೂ ಪಾರಾಗಿ ಬಂದರು. ಹೀಗೆ ಕಾಲಕಳೆಯುತ್ತಿದ್ದಾಗ ಪಕ್ಕದ ರಾಷ್ಟ್ರದ ರಾಜಕುಮಾರಿಗೆ ಸ್ವಯಂವರ ಎಂಬ ಸುದ್ದಿ ಕೇಳಿತು.

ನಾನು ಕಳೆದ ರಾತ್ರಿ ಪುರಾತನ ಭರತಖಂಡದಲ್ಲಿ ಬಳಕೆಯಲ್ಲಿದ್ದ ಮದುವೆಯಾಗುವ ಒಂದು ವಿಚಿತ್ರ ಅಭ್ಯಾಸವನ್ನು ನಿಮಗೆ ಹೇಳಿದ್ದೆ. ಇದೇ ಸ್ವಯಂವರ; ಎಂದರೆ ರಾಜಕುಮಾರಿ ತಾನೇ ವರನನ್ನು ಆರಿಸಿಕೊಳ್ಳುವುದು. ಅನೇಕ ಜನ ರಾಜಕುಮಾರರು ಮತ್ತು ಶ್ರೀಮಂತರು ನೆರೆಯುತ್ತಿದ್ದರು. ಇವರಿಂದ ರಾಜಕುಮಾರಿ ತನಗೆ ಬೇಕಾದ ವರನನ್ನು ಆರಿಸಿಕೊಳ್ಳುತ್ತಿದ್ದಳು. ತನ್ನ ಹೊಗಳುಭಟ್ಟರು ಮತ್ತು ಮಾಗಧಿಗಳೊಂದಿಗೆ ಹಾರ ಹಿಡಿದುಕೊಂಡು ಹೋಗುತ್ತಿದ್ದಳು. ಇವಳನ್ನು ವರಿಸಲು ನೆರೆದ ಸಿಂಹಾಸನದ ಮೇಲೆ ಮಂಡಿಸಿದ ಪ್ರತಿಯೊಬ್ಬ ರಾಜಕುಮಾರನ ಸಮೀಪಕ್ಕೆ ಬಂದಾಗಲೂ ಆ ರಾಜಕುಮಾ

ರನನ್ನು ಮಾಗಧಿಗಳು ಹೊಗಳುವರು. ಅವನು ಯುದ್ಧದಲ್ಲಿ ತೋರಿದ ಪ್ರತಾಪಗಳನ್ನು ಬಣ್ಣಿಸುವರು. ರಾಜಕುಮಾರಿ ಯಾರನ್ನು ತನ್ನ ವರನೆಂದು ನಿಶ್ಚಯಿಸುವಳೊ ಅವನ ಕೊರಳಿಗೆ ಒಂದು ಸ್ವಯಂವರದ ಮಾಲೆಯನ್ನು ಹಾಕುತ್ತಿದ್ದಳು. ಅನಂತರ ಲಗ್ನ ನಿಶ್ಚಯವಾಗುತ್ತಿತ್ತು. ಪಾಂಚಾಲ ರಾಜನಾದ ದೃಪದ ಪ್ರಖ್ಯಾತನಾಗಿದ್ದ. ಅವನ ಮಗಳು ಸೌಂದರ್ಯ ಮತ್ತು ಕುಶಲತೆಗೆ ಹೆಸರಾಂತವಳು. ಒಬ್ಬ ಶೂರನನ್ನು ಪತಿಯಾಗಿ ಆರಿಸಿಕೊಳ್ಳುವಳಾಗಿದ್ದಳು.

ಸ್ವಯಂವರದಲ್ಲಿ ಯಾವಾಗಲೂ ಶಸ್ತ್ರಾಸ್ತ್ರಗಳ ಪ್ರೌಢಿಮೆ ಮತ್ತು ಇತರ ದೃಶ್ಯಗಳನ್ನು ಪ್ರದರ್ಶಿಸುತ್ತಿದ್ದರು. ಈ ಸಮಯದಲ್ಲಿ ಒಂದು ಮತ್ಸ್ಯವನ್ನು ಲಕ್ಷ್ಯವಾಗಿ ಮೇಲೆ ಆಕಾಶದಲ್ಲಿಟ್ಟರು. ಅದರ ಕೆಳಗೆ ಒಂದು ಸುತ್ತುತ್ತಿರುವ ಚಕ್ರ ಆ ಚಕ್ರದಲ್ಲಿ ಒಂದು ರಂಧ್ರವಿತ್ತು. ಕೆಳಗೆ ನೆಲದ ಮೇಲೆ ಒಂದು ಪಾತ್ರೆಯಲ್ಲಿ ನೀರಿಟ್ಟರು. ಕೆಳಗೆ ಇರುವ ಪಾತ್ರೆಯಲ್ಲಿ ಬೀಳುವ ಪ್ರತಿಬಿಂಬವನ್ನು ನೋಡಿ ಮೇಲಿರುವ ಚಕ್ರದ ಮೂಲಕ ಮೀನಿನ ಕಣ್ಣನ್ನು ಭೇದಿಸಬೇಕು. ಯಾರು ಇದರಲ್ಲಿ ಜಯಶೀಲರಾಗುವರೊ ಅವರನ್ನು ರಾಜಕುಮಾರಿ ಮದುವೆಯಾಗುವಳು. ರಾಜಕುಮಾರಿಯನ್ನು ಪಡೆಯಬೇಕೆಂಬ ಉತ್ಸಾಹದಿಂದ ಭರತಖಂಡದ ನಾನಾ ಕಡೆಗಳಿಂದ ರಾಜರು ರಾಜಕುಮಾರರು ನೆರೆದರು. ಒಬ್ಬರಾದ ಮೇಲೆ ಒಬ್ಬರು ಮತ್ಸ್ಯಯಂತ್ರವನ್ನು ಭೇದಿಸಲು ಪ್ರಯತ್ನಪಟ್ಟು ನಿರಾಶರಾಗಿ ಹೋದರು.

ಇಂಡಿಯಾ ದೇಶದಲ್ಲಿ ಚತುರ್ವರ್ಣಗಳಿವೆ ಎಂಬುದು ನಿಮಗೆ ಗೊತ್ತಿದೆ. ಮೊದಲನೆಯದೆ ಅನುವಂಶಿಕವಾಗಿ ಬಂದ ಬ್ರಾಹ್ಮಣ ಪುರೋಹಿತ. ಎರಡನೆಯದೆ ರಾಜರು ಯೋಧರನ್ನೊಳಗೊಂಡ ಕ್ಷತ್ರಿಯರು, ಮೂರನೆಯವರೆ ವ್ಯಾಪಾರಸ್ಥರಾದ ವೈಶ್ಯರು. ಕೊನೆಯವರೆ ಊಳಿಗದವರಾದ ಶೂದ್ರರು. ರಾಜಕುಮಾರಿ ಎರಡನೆ ಗುಂಪಿಗೆ ಸೇರಿದ ಕ್ಷತ್ರಿಯಳು.

ನೆರೆದ ಕ್ಷತ್ರಿಯರು ಮತ್ಸ್ಯಯಂತ್ರವನ್ನು ಭೇದಿಸದೆ ಹೋದಾಗ ದ್ರುಪದನ ಮಗ ಸಭೆಯಲ್ಲಿ ಎದ್ದು “ಈಗ ಕ್ಷತ್ರಿಯರು ಸೋತರು, ಇತರ ವರ್ಗದವರು ಬೇಕಾದರೆ ಪ್ರಯತ್ನಿಸಬಹುದು, ಬ್ರಾಹ್ಮಣ

ನಾಗಲಿ, ಶೂದ್ರನಾದರೂ ಚಿಂತೆಯಿಲ್ಲ ಪ್ರಯತ್ನಿಸಬಹುದು. ಯಾರು ಯಂತ್ರವನ್ನು ಭೇದಿಸುವರೊ ಅವರನ್ನು ದ್ರೌಪದಿ ವರಿಸುವಳು" ಎಂದನು.

ಬ್ರಾಹ್ಮಣ ಸಭೆಯಲ್ಲಿ ಪಂಚಪಾಂಡವ ಸಹೋದರರು ಕುಳಿತಿದ್ದರು. ಮೂರನೆಯವನಾದ ಅರ್ಜುನನೆ ಧನುರ್ವಿದ್ಯೆಗೆ ಹೆಸರಾಂತವನು. ಅವನು ಎದ್ದು ಮುಂದೆ ಬಂದ. ಒಟ್ಟಿನಲ್ಲಿ ಬ್ರಾಹ್ಮಣರು ಶಾಂತಪ್ರಿಯರು ಸ್ವಲ್ಪ ಅಂಜುಕುಳಿಗಳು. ಧರ್ಮಶಾಸ್ತ್ರ ಪ್ರಕಾರ ಅವರು ಶಸ್ತ್ರಗಳನ್ನು ಮುಟ್ಟಕೂಡದು. ಕತ್ತಿಯನ್ನು ಧರಿಸಬಾರದು. ಅಪಾಯಕರವಾದ ಯಾವ ಪ್ರಸಂಗದಲ್ಲಿಯೂ ಭಾಗಿಗಳಾಗಕೂಡದು. ಅವರ ಜೀವನವೆ ಧ್ಯಾನ, ಅಧ್ಯಯನ, ಸಂಯಮಪೂರಿತವಾದುದು. ಅವರು ಎಂತಹ ಸಮಾಧಾನಚಿತ್ತರು ಮತ್ತು ಶಾಂತಿಪ್ರಿಯರು ಎಂಬುದನ್ನು ನೀವೆ ಊಹಿಸಬಹುದು. ಅರ್ಜುನ ಬ್ರಾಹ್ಮಣರ ಗುಂಪಿನಿಂದ ಎದ್ದು ಬಂದಾಗ ಅವರು ತಾವೆಲ್ಲ ಕ್ಷತ್ರಿಯರ ಕೋಪಕ್ಕೆ ತುತ್ತಾಗಿ ನಾಶವಾಗಿ ಹೋಗುವೆವು ಎಂದು ಭಾವಿಸಿದರು. ಆದಕಾರಣ ಅವರೆಲ್ಲ ಅರ್ಜುನನಿಗೆ ಸುಮ್ಮನೆ ಕುಳಿತುಕೊಳ್ಳುವಂತೆ ಹೇಳಿದರು. ಆದರೆ ಅರ್ಜುನ ಯೋಧನಾದುದರಿಂದ ಅವರ ಮಾತನ್ನು ಕೇಳಲಿಲ್ಲ. ಅವನು ಬಿಲ್ಲನ್ನು ಕೈಯಲ್ಲಿ ತೆಗೆದುಕೊಂಡು ಲೀಲಾಜಾಲವಾಗಿ ಹೆದೆಯೇರಿಸಿ ಚಕ್ರದ ಮೂಲಕ ಮತ್ಸ್ಯಯಂತ್ರವನ್ನು ಭೇದಿಸಿದನು.

ಅನಂತರ ದೊಡ್ಡ ಸಂಭ್ರಮವಾಯಿತು. ರಾಜಕುಮಾರಿ ದ್ರೌಪದಿ ಸುಂದರವಾದ ಪುಷ್ಪಮಾಲೆಯನ್ನು ಅರ್ಜುನನ ಕೊರಳಿಗೆ ಹಾಕಿದಳು. ಆದರೆ ಕ್ಷತ್ರಿಯರು ಇದನ್ನು ಸಹಿಸಲಿಲ್ಲ. ಇಷ್ಟೊಂದು ಜನ ಕ್ಷತ್ರಿಯರು ನೆರೆದಿದ್ದರೂ ಕ್ಷತ್ರಿಯಕುಲಕ್ಕೆ ಸೇರಿದ ದ್ರೌಪದಿ ಅವರಾರಿಗೂ ದಕ್ಕದೆ ಒಬ್ಬ ದರಿದ್ರ ಬ್ರಾಹ್ಮಣನನ್ನು ಮದುವೆಯಾಗಬೇಕಾಯಿತಲ್ಲ ಎಂದು ಅವರಿಗೆ ಅಸಮಾಧಾನ. ಆದಕಾರಣ ಅರ್ಜುನನೊಡನೆ ಯುದ್ಧಮಾಡಿ ಬಲಾತ್ಕಾರದಿಂದ ಅವಳನ್ನು ಅಪಹರಿಸಬೇಕೆಂದು ಯತ್ನಿಸಿದರು. ಪಾಂಡವರು ಕ್ಷತ್ರಿಯರೊಡನೆ ಭೀಷಣವಾಗಿ ಕಾದಾಡಬೇಕಾಯಿತು. ಆದರೂ ಸೋಲದೆ ಕೊನೆಗೆ ಗೆದ್ದು ದ್ರೌಪದಿಯನ್ನು ಪಡೆದರು.

ಪಂಚಪಾಂಡವರು ಕುಂತಿಯ ಬಳಿಗೆ ಬಂದರು. ಬ್ರಾಹ್ಮಣರು ಭಿಕ್ಷೆಯಿಂದ ಜೀವಿಸಬೇಕಾಗಿತ್ತು. ಆದಕಾರಣ ಬ್ರಾಹ್ಮಣರಾದ ಇವರು ಭಿಕ್ಷೆಮಾಡಿ ಸಿಕ್ಕಿದುದನ್ನು ಮನೆಗೆ ತರುತ್ತಿದ್ದರು. ತಾಯಿ ಅದನ್ನು ಎಲ್ಲರಿಗೂ ಹಂಚುತ್ತಿದ್ದಳು. ತಾಯಿ ಇದ್ದ ಗುಡಿಸಿಲಿಗೆ ದ್ರೌಪದೀ ಸಮೇತ ಪಾಂಡವರು ಬಂದರು. ಅವರು ಸಂತೋಷದಿಂದ ತಾಯಿಗೆ "ಅಮ್ಮ ಇವತ್ತು ಒಂದು ವಿಚಿತ್ರವಾದ ಭಿಕ್ಷೆಯನ್ನು ತಂದಿರುವೆವು" ಎಂದು ಕೂಗಿಕೊಂಡರು. ತಾಯಿ "ನೀವೆಲ್ಲರೂ ಸರಿಯಾಗಿ ಹಂಚಿಕೊಳ್ಳಿ" ಎಂದಳು. ಕುಂತಿ ನೋಡಿದಾಗ ದ್ರೌಪದಿ ಆ ಭಿಕ್ಷೆಯಾಗಿದ್ದಳು. "ಅಯ್ಯೋ! ನಾನೇನೆಂದೆ; ಇದೊಂದು ಹುಡುಗಿ!" ಎಂದಳು. ಆದರೆ ಮಾಡುವುದೇನು? ಆಗಲೇ ತಾಯಿ ಮಾತನಾಡಿಬಿಟ್ಟಿದ್ದಳು. ಅದನ್ನು ಪಾಲಿಸದೆ ವಿಧಿಯಿಲ್ಲ. ಅದನ್ನು ಸನ್ಮಾನಿಸಲೇ ಬೇಕು. ತಾಯಿಮಾತು ಸುಳ್ಳಾಗಕೂಡದು. ಹಾಗೆ ಹಿಂದೆ ಎಂದೂ ಆಗಿರಲಿಲ್ಲ. ಆದಕಾರಣ ದ್ರೌಪದಿ ಪಂಚಪಾಂಡವರಿಗೆಲ್ಲ ಸತಿಯಾದಳು.

ಪ್ರತಿಯೊಂದು ಸಮಾಜದಲ್ಲಿಯೂ ಅದು ವಿಕಾಸವಾಗುತ್ತಿರುವ ಹಂತಗಳಿವೆ. ಈ ಕಾವ್ಯದಲ್ಲಿ ಪುರಾತನ ಇತಿಹಾಸಕಾಲದ ಒಂದು ವಿಚಿತ್ರವಾದ ರೂಢಿಯಲ್ಲಿದ್ದ ಆಚಾರವನ್ನು ನೋಡಬಹುದು. ಕವಿ ಐದುಜನ ಸಹೋದರರು ಒಬ್ಬಳೇ ಹೆಂಗಸನ್ನು ಮದುವೆಯಾಗುವುದನ್ನು ಹೇಳುವನು. ಅವನು ಹೀಗೆ ಮಾಡಿದುದಕ್ಕೆ ಏನೊ ಒಂದು ಪರಿಹಾರವನ್ನು ಹೇಳಿ ಸಮಾಧಾನ ಮಾಡಲೆತ್ನಿಸುವನು. ಇದು ತಾಯಾಜ್ಞೆ. ಅವಳೇ ಈ ಪವಿತ್ರ ವಿವಾಹಕ್ಕೆ ಸಮ್ಮತಿಕೊಟ್ಟಳು ಎಂದು ಹೇಳುವನು. ಪ್ರತಿಯೊಂದು ದೇಶದಲ್ಲಿ ಸಮಾಜ ಒಂದು ಹಂತದಲ್ಲಿ ಏಕಕಾಲದಲ್ಲಿ ಬಹುಪತಿಗಳಿಗೆ ಅನುಮತಿಕೊಡುವುದು. ಒಂದು ಮನೆಯ ಸಹೋದರರೆಲ್ಲ ಒಬ್ಬ ಹೆಂಗಸನ್ನು ಮದುವೆಯಾಗುತ್ತಿದ್ದರು. ಇದು ಕಳೆದ ಕಾಲದಿಂದ ಉಳಿದುಬಂದ ಬಹುಪತೀತ್ವದ ಒಂದು ಆಚಾರ.

ಅಷ್ಟುಹೊತ್ತಿಗೆ ರಾಜಕುಮಾರಿಯ ಅಣ್ಣನಿಗೆ ಆಶ್ಚರ್ಯವಾಯಿತು. "ಈ ಜನ ಯಾರು? ನನ್ನ ತಂಗಿ ಮದುವೆಯಾಗುವ ಈತ ಯಾರು? ಅವರಲ್ಲಿ ರಥ, ಕುದುರೆ ಏನೂ ಇಲ್ಲ. ಪಾದಚಾರಿಗಳಾಗಿರುವರು!" ಎಂದು ತರ್ಕಿಸತೊಡಗಿದ. ಸ್ವಲ್ಪದೂರದಿಂದ ಅವರ ಹಿಂದೆಯೇ

ಹೋಗಿ ರಾತ್ರಿ ಅವರ ಸಂಭಾಷಣೆಯನ್ನು ಕೇಳಿ ಅವರು ನಿಜವಾಗಿ ಕ್ಷತ್ರಿಯರು ಎಂದು ತನ್ನ ಸಂದೇಹವನ್ನು ದೂರಮಾಡಿಕೊಂಡನು. ಅನಂತರ ದ್ರುಪದರಾಜನಿಗೆ ಅವರಾರೆಂಬುದು ಗೊತ್ತಾಗಿ ಅವನಿಗೆ ತುಂಬಾ ಸಂತೋಷವಾಯಿತು.

ಮೊದಲು ಅವರ ಮದುವೆಗೆ ಬೇಕಾದಷ್ಟು ಆಕ್ಷೇಪಣೆ ತಂದೊಡ್ಡಿದರೂ ವ್ಯಾಸರು ಈ ರಾಜಕುಮಾರಿಗೆ ಇಂತಹ ಮದುವೆಯಾಗಲು ಯಾವ ಬಾಧಕವೂ ಇಲ್ಲ ಎಂದು ಹೇಳಿದ ಮೇಲೆ ದ್ರುಪದ ಇದಕ್ಕೆ ಒಪ್ಪಬೇಕಾಯಿತು. ರಾಜಕುಮಾರಿ ಪಂಚಪಾಂಡವರನ್ನು ಮದುವೆಯಾದಳು.

ಅನಂತರ ಪಾಂಡವರು ನೆಮ್ಮದಿಯಿಂದ ಸುಖವಾಗಿ ಬಾಳತೊಡಗಿದರು. ದಿನಕಳೆದಂತೆ ಅವರು ಹೆಚ್ಚು ಪ್ರಖ್ಯಾತರಾಗುತ್ತ ಬಂದರು. ದುರ್ಯೋಧನ ಮತ್ತು ಅವನ ಅನುಯಾಯಿಗಳು ಪಾಂಡವರನ್ನು ನಾಶಮಾಡುವುದಕ್ಕೆ ಬೇರೆ ಬೇರೆ ಉಪಾಯಗಳನ್ನು ಕುರಿತು ಯೋಚಿಸಿದರೂ ಹಿರಿಯರು ಧೃತರಾಷ್ಟ್ರನಿಗೆ ಬುದ್ಧಿ ಹೇಳಿ ಪಾಂಡವರೊಡನೆ ರಾಜಿಮಾಡಿಕೊ ಎಂದರು. ಅವರನ್ನು ಹಿಂದಕ್ಕೆ ಕರೆಸಿದನು. ಜನರೆಲ್ಲ ಪಾಂಡವರ ಬರವನ್ನು ಕುರಿತು ಸಂತೋಷಪಟ್ಟರು. ಧೃತರಾಷ್ಟ್ರ ಅವರಿಗೆ ಅರ್ಧರಾಜ್ಯವನ್ನು ಕೊಟ್ಟನು. ಪಂಚಪಾಂಡವರು ಇಂದ್ರಪ್ರಸ್ಥ ಎಂಬ ರಾಜಧಾನಿಯನ್ನು ಕಟ್ಟಿ ತಮ್ಮ ಆಡಳಿತವನ್ನು ವಿಸ್ತರಿಸಿದರು. ಜನರೆಲ್ಲ ಅವರಿಗೆ ಕಪ್ಪಕಾಣಿಕೆಯನ್ನು ಸಲ್ಲಿಸಬೇಕಾಯಿತು. ಅವರಲ್ಲಿ ಹಿರಿಯನಾದ ಯುಧಿಷ್ಠಿರ ಭರತಖಂಡದ ಚಕ್ರಾಧಿಪತಿಯಾಗಲು ಒಂದು ರಾಜಸೂಯಯಾಗವನ್ನು ಮಾಡಿದನು. ಈ ಯಾಗಕ್ಕೆ ತಾವು ಗೆದ್ದ ರಾಜರೆಲ್ಲ ಕಪ್ಪಕಾಣಿಕೆ ಸಮೇತ ಬಂದು ಯುಧಿಷ್ಠಿರನನ್ನು ಚಕ್ರವರ್ತಿಯೆಂದು ಒಪ್ಪಿಕೊಂಡು ಯಾಗಕ್ಕೆ ತಮ್ಮ ಸಹಾಯವನ್ನು ನೀಡಬೇಕಾಯಿತು. ಶ್ರೀಕೃಷ್ಣ ಅವರ ನೆಂಟನಾಗಿದ್ದನು. ಈಗ ಅವರ ಸ್ನೇಹಿತನಾಗಿ ಇವರ ಬಳಿಗೆ ಬಂದು ರಾಜಸೂಯಯಾಗಕ್ಕೆ ತನ್ನ ಅನುಮತಿಯನ್ನು ಇತ್ತನು. ಆದರೆ ಅದನ್ನು ಸಾಂಗವಾಗಿ ನೆರವೇರಿಸುವುದಕ್ಕೆ ಒಂದು ವಿಘ್ನವಿತ್ತು. ಜರಾಸಂಧನೆಂಬ ರಾಜನು ನೂರುಜನ ರಾಜರನ್ನು ದೇವಿಗೆ ಬಲಿ

ಕೊಡುತ್ತೇನೆಂದು ಅದಕ್ಕಾಗಿ ಎಂಬತ್ತಾರು ರಾಜರನ್ನು ಸೆರೆಯಲ್ಲಿಟ್ಟಿದ್ದನು. ಅವನ ಮೇಲೆ ಯುದ್ಧಮಾಡುವಂತೆ ಶ್ರೀಕೃಷ್ಣ ಬೋಧಿಸಿದನು. ಶ್ರೀಕೃಷ್ಣ ಭೀಮ ಅರ್ಜುನರು ಜರಾಸಂಧನಲ್ಲಿಗೆ ಹೋಗಿ ಅವನನ್ನು ಯುದ್ಧಕ್ಕೆ ಕರೆದರು. ಅವನು ಯುದ್ಧಮಾಡುವುದಕ್ಕೆ ಒಪ್ಪಿಕೊಂಡನು. ಭೀಮ ಅವನೊಡನೆ ಹದಿನಾಲ್ಕು ದಿನ ಯುದ್ಧಮಾಡಿ ಅವನನ್ನು ಸೋಲಿಸಿದನು. ಅನಂತರ ಅವನು ಸೆರೆಯಲ್ಲಿಟ್ಟ ರಾಜರನ್ನೆಲ್ಲಾ ಬಿಡಿಸಿದನು.

ನಾಲ್ಕು ಜನ ಸಹೋದರರು ಅನಂತರ ಸೇನಾಸಮೇತ ಜೈತ್ರಯಾತ್ರೆಗೆ ಹೊರಟರು. ಪ್ರತಿಯೊಬ್ಬರೂ ಒಂದೊಂದು ದಿಕ್ಕಿಗೆ ಹೋಗಿ ಆಯಾ ರಾಜರನ್ನು ಯುಧಿಷ್ಠಿರನ ಆಡಳಿತದ ಅಡಿಗೆ ತಂದರು. ಹಿಂತಿರುಗಿ ಬಂದಾಗ ಮಹಾಯಾಗಕ್ಕಾಗಿ ತಾವು ಶೇಖರಿಸಿದ ನಿಧಿರಾಶಿಯನ್ನೆಲ್ಲಾ ಅಣ್ಣನ ಮುಂದೆ ಇಟ್ಟರು.

ರಾಜಸೂಯ ಯಾಗಕ್ಕೆ ಬಿಡುಗಡೆಯಾದ ರಾಜಕುಮಾರರ ಜೊತೆಗೆ ಪಾಂಡವರು ಯಾರನ್ನು ಗೆದ್ದರೋ ಅವರೆಲ್ಲರೂ ಬಂದು ಯುಧಿಷ್ಠಿರನಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸಿದರು. ಧೃತರಾಷ್ಟ್ರನಿಗೂ ಕೂಡ ತನ್ನ ಮಕ್ಕಳೊಡನೆ ಬಂದು ಯಾಗದಲ್ಲಿ ಭಾಗಿಯಾಗಬೇಕೆಂದು ಆಮಂತ್ರಣ ಕಳುಹಿಸಿದರು. ಯಾಗದ ಕೊನೆಯಲ್ಲಿ ಯುಧಿಷ್ಠಿರನಿಗೆ ಚಕ್ರವರ್ತಿ ಬಿರುದನ್ನು ಕೊಟ್ಟು ಅವನ ಸಾರ್ವಭೌಮತ್ವವನ್ನು ಎಲ್ಲರೂ ಒಪ್ಪಿಕೊಂಡರು. ಇದೇ ಮುಂದಿನ ಕಲಹಕ್ಕೆ ಬೀಜ ನೆಟ್ಟಂತೆ. ಯುಧಿಷ್ಠಿರನ ಮೇಲೆ ಅಸೂಯೆಪಡುತ್ತ ದುರ್ಯೋಧನ ಹಿಂತಿರುಗಿದನು. ಅವರ ಸಾರ್ವಭೌಮತ್ವ, ಅಧಿಕಾರ, ಐಶ್ವರ್ಯವನ್ನು ಇವನು ಸಹಿಸಲಾರದೆ ಹೋದ. ಶಕ್ತಿಯ ಮೂಲಕ ಅವರನ್ನು ಗೆಲ್ಲಲು ಸಾಧ್ಯವಿಲ್ಲವೆಂದು ಅರಿತು ಯುಕ್ತಿಯಿಂದ ಅವರ ಪತನಕ್ಕೆ ಯೋಚನೆಗಳನ್ನು ಚಿಂತಿಸತೊಡಗಿದನು. ಯುಧಿಷ್ಠಿರ ರಾಜನಿಗೆ ಪಗಡೆಯಾಟದ ಮೇಲೆ ಆಸಕ್ತಿ. ದುರ್ಯೋಧನನ ಕುಯುಕ್ತಿಯಿಂದ ಪ್ರೇರಿತನಾಗಿ, ಚಮತ್ಕಾರವಾಗಿ ಪಗಡೆಯಾಟವಾಡಬಲ್ಲ ಶಕುನಿ ಯುಧಿಷ್ಠಿರನನ್ನು ವಿಷಗಳಿಗೆಯಲ್ಲಿ ಆಟಕ್ಕೆ ಕರೆದನು. ಹಿಂದಿನ ಕಾಲದಲ್ಲಿ ಕ್ಷತ್ರಿಯರನ್ನು ಯಾರಾದರೂ ಹೋರಾಡಲು ಕರೆದರೆ ಏನಾದರೂ ಆಗಲಿ ತನ್ನ ಗೌರವಕ್ಕೆ ಕಳಂಕ ಬರದಂತೆ ಹೋರಾಡಲು ಅನುವಾಗಬೇಕು. ಪಗಡೆ

ಯಾಟಕ್ಕೆ ಅವನನ್ನು ಕರೆದರೆ ತನ್ನ ಗೌರವ ಕಾಪಾಡಿಕೊಳ್ಳುವುದಕ್ಕೆ ಆಡಲೇಬೇಕು, ಇಲ್ಲದಿದ್ದರೆ ಅದು ಅಗೌರವ. ಯುಧಿಷ್ಠಿರನು ಎಲ್ಲಾ ಶ್ರೇಷ್ಠಗುಣಗಳಿಗೂ ತೌರುಮನೆಯಾಗಿದ್ದನು. ಇಂತಹ ರಾಜಋಷಿ ಕೂಡ ಆಟವನ್ನು ಆಡಲು ಒಪ್ಪಿಕೊಳ್ಳಲೇಬೇಕಾಯಿತು. ಶಕುನಿ ಮತ್ತು ಅವನ ಕಡೆಯವರ ಕಪಟದಿಂದ ಯುಧಿಷ್ಠಿರ ಪ್ರತಿಸಲವೂ ಸೋಲುತ್ತಾ ಬಂದ. ಸೋಲಿನಿಂದ ಉನ್ಮತ್ತನಾಗಿ ತನ್ನಲ್ಲಿರುವುದನ್ನೆಲ್ಲಾ ಪಣ ಒಡ್ಡಿ ಆಡುತ್ತಾ ಹೋದ. ಕೊನೆಗೆ ಸರ್ವಸ್ವವನ್ನೂ ತನ್ನ ರಾಜ್ಯವನ್ನೂ ಸೋತ. ಕಟ್ಟ ಕೊನೆಗೆ ಪಣ ಒಡ್ಡುವುದಕ್ಕೆ ಅವನಲ್ಲಿ ಏನೂ ಇರಲಿಲ್ಲ. ತನ್ನ ಸಹೋದರರು, ತಾನು, ಕೊನೆಗೆ ಸುಂದರಾಂಗನೆ ದ್ರೌಪದಿ ಎಲ್ಲರನ್ನೂ ಸೋತನು. ಈಗ ಅವರು ಸಂಪೂರ್ಣವಾಗಿ ಕೌರವರು ಹೇಳಿದಂತೆ ಕೇಳಬೇಕು. ಕೌರವರು ಪಾಂಡವರನ್ನು ಎಲ್ಲಾ ಬಗೆಯ ಅಪಹಾಸ್ಯಕ್ಕೆ ಗುರಿಮಾಡಿದರು. ದ್ರೌಪದಿಯನ್ನು ಅತಿ ನೀಚವಾಗಿ ಕಂಡರು. ಕೊನೆಗೆ ಧೃತರಾಷ್ಟ್ರ ಮಧ್ಯೆಬಂದು ಪಾಂಡವರು ಮುಕ್ತರಾಗಿ ಊರಿಗೆ ಹಿಂತಿರುಗಿ ರಾಜ್ಯಭಾರಮಾಡುವಂತೆ ಹೇಳಿದನು. ಆದರೆ ದುರ್ಯೋಧನನಿಗೆ ಇದರಿಂದ ಮುಂದೆ ಬರುವ ಅಪಾಯದ ಸುಳಿವು ಗೊತ್ತಾಯಿತು. ಮತ್ತೊಮ್ಮೆ ಆಟವಾಡುವುದಕ್ಕೆ ಅವಕಾಶ ಕೊಡೆಂದು ತಂದೆಯ ಅನುಮತಿಯನ್ನು ಬಲಾತ್ಕಾರದಿಂದ ಪಡೆದನು. ಇದರಲ್ಲಿ ಸೋತವರು ಹನ್ನೆರಡು ವರುಷ ವನವಾಸ ಒಂದು ವರುಷ ಅಜ್ಞಾತವಾಸ ಮಾಡಬೇಕು. ಅಜ್ಞಾತವಾಸ ಮಾಡುವ ಸಮಯದಲ್ಲಿ ಅವರನ್ನು ಕಂಡುಹಿಡಿದರೆ ಪುನಃ ಹನ್ನೆರಡು ವರುಷ ವನವಾಸ ಮಾಡಬೇಕು. ಅನಂತರ ಮಾತ್ರ ಅವರಿಗೆ ರಾಜ್ಯ ದೊರಕುವುದು ಎಂದನು. ಈ ಕೊನೆಯ ಆಟದಲ್ಲಿಯೂ ಯುಧಿಷ್ಠಿರನು ಸೋತು ತನ್ನ ಸಹೋದರರು ಮತ್ತು ದ್ರೌಪದಿಯೊಡನೆ ವನವಾಸಕ್ಕೆ ಹೋದನು. ಹನ್ನೆರಡು ವರುಷ ಅವರು ಗಿರಿ ವನಗಳಲ್ಲಿ ವಾಸಿಸಿದರು. ಅವರು ಅಲ್ಲಿ ಎಷ್ಟೋ ಧರ್ಮಕಾರ್ಯಗಳನ್ನು ಮಾಡಿದರು, ಸಾಹಸ ಕೃತ್ಯಗಳನ್ನು ಮಾಡಿದರು. ಅನೇಕ ವೇಳೆ ದೂರ ದೂರದ ಪುಣ್ಯ ಸ್ಥಳಗಳಿಗೆ ಯಾತ್ರೆ ಹೋಗುತ್ತಿದ್ದರು. ಈ ಭಾಗದ ಕಥೆ ಬಹಳ ರಸಭರಿತವಾಗಿದೆ. ಈ ಭಾಗದಲ್ಲಿ ಎಷ್ಟೋ ಘಟನೆಗಳು, ಕಥೆ

ಉಪಕಥೆಗಳು ಇವೆ. ಪುರಾತನ ಭರತಖಂಡದ ಧರ್ಮ ಮತ್ತು ತತ್ತ್ವಕ್ಕೆ ಸಂಬಂಧಪಟ್ಟ ಹಲವು ಭವ್ಯ ಕಥೆಗಳಿವೆ. ಅವರು ವನವಾಸದಲ್ಲಿದ್ದಾಗ ದೊಡ್ಡ ದೊಡ್ಡ ಋಷಿಗಳು ಬಂದು ವನವಾಸದ ಕಷ್ಟವನ್ನು ಹಗುರಮಾಡಲು ಬೋಧಪ್ರದವಾದ ಹಲವು ಹಿಂದಿನ ಕಾಲದ ಕಥೆಗಳನ್ನು ಹೇಳುತ್ತಿದ್ದರು. ಅವರಲ್ಲಿ ಒಂದನ್ನು ಮಾತ್ರ ನಿಮಗೆ ಹೇಳುತ್ತೇನೆ.

ಅಶ್ವಪತಿಯೆಂಬ ರಾಜನಿದ್ದ. ಅವನಿಗೊಬ್ಬಳು ಮಗಳಿದ್ದಳು. ಅವಳು ಬಹಳ ಒಳ್ಳೆಯವಳು ಮತ್ತು ಅತಿ ಸುಂದರವಾಗಿದ್ದಳು. ಅವಳಿಗೆ ಸಾವಿತ್ರಿ ಎಂದು ಹೆಸರು ಕೊಟ್ಟರು. ಸಾವಿತ್ರಿ ಎಂಬುದು ಹಿಂದೂಗಳ ಒಂದು ಪವಿತ್ರ ಪ್ರಾರ್ಥನೆ. ಸಾವಿತ್ರಿ ಪ್ರಾಪ್ತವಯಸ್ಕಳಾದಾಗ ತಂದೆ ಮಗಳಿಗೆ ನೀನೇ ಒಬ್ಬ ವರನನ್ನು ಆರಿಸಿಕೋ ಎಂದನು. ನೋಡಿ, ಪುರಾತನಕಾಲದ ಭಾರತದ ರಾಜಕುವರಿಯರು ಬಹಳ ಸ್ವತಂತ್ರ ಪ್ರಿಯರು, ಅವರು ತಾವೇ ಅರಸು ಮಕ್ಕಳನ್ನು ಆರಿಸಿಕೊಳ್ಳುತ್ತಿದ್ದರು.

ಸಾವಿತ್ರಿ ಒಪ್ಪಿ ಚಿನ್ನದ ರಥವೇರಿ ದೂರದೇಶಕ್ಕೆ ಅವರ ತಂದೆ ನೇಮಿಸಿದ ಸೇವಕರು ಮತ್ತು ವೃದ್ಧ ಊಳಿಗದವರೊಡನೆ ಹೊರಟಳು. ಎಷ್ಟೋ ರಾಜಧಾನಿಯಲ್ಲಿ ತಂಗಿ, ಎಷ್ಟೋ ರಾಜಕುಮಾರರನ್ನು ನೋಡಿದಳು. ಆದರೆ ಯಾರೂ ಸಾವಿತ್ರಿಯ ಒಪ್ಪಿಗೆಗೆ ಅರ್ಹರಾಗಿರಲಿಲ್ಲ. ಕೊನೆಗೆ ಅವರೊಂದು ಪರ್ಣಶಾಲೆಗೆ ಬಂದರು. ಅದು ಕೇವಲ ಮೃಗಗಳಿಗೆ ಮಾತ್ರಾ ಮೀಸಲಾಗಿದ್ದ ಸ್ಥಳ. ಅಲ್ಲಿ ಯಾವ ಪ್ರಾಣಿಗಳನ್ನೂ ಕೊಲ್ಲಬಾರದಾಗಿತ್ತು. ಮೃಗಗಳಿಗೆ ಮನುಷ್ಯರ ಭಯವಿರಲಿಲ್ಲ. ಸರೋವರದಲ್ಲಿರುವ ಮೀನುಗಳು ಕೂಡ ಹತ್ತಿರ ಬಂದು ಕೈಯಿಂದ ಆಹಾರವನ್ನು ತೆಗೆದುಕೊಳ್ಳುತ್ತಿದ್ದವು. ಸಾವಿರಾರು ವರ್ಷಗಳಿಂದ ಅಲ್ಲಿ ಯಾರೂ ಏನನ್ನೂ ಕೊಂದಿರಲಿಲ್ಲ. ಋಷಿಗಳು ಮತ್ತು ವೃದ್ಧರು, ಪಕ್ಷಿಗಳು ಮತ್ತು ಜಿಂಕೆಗಳೊಡನೆ ಅಲ್ಲಿ ವಾಸಿಸಲು ಹೋಗುತ್ತಿದ್ದರು. ತಪ್ಪಿತಸ್ಥರಿಗೂ ಕೂಡ ಅಲ್ಲಿ ಯಾವ ಅಪಾಯವೂ ಇರಲಿಲ್ಲ. ಜನರಿಗೆ ಜೀವನ ಜುಗುಪ್ಸೆಯಾದರೆ ಕಾಡಿಗೆ ಹೋಗಿ ಋಷಿಗಳೊಡನೆ ಧಾರ್ಮಿಕ ವಿಚಾರಗಳನ್ನು ಮಾತನಾಡುತ್ತಾ ತಮ್ಮ ಕೊನೆಗಾಲವನ್ನು ಕಳೆಯುತ್ತಿದ್ದರು.

ದ್ಯುಮತ್ಸೇನನೆಂಬ ರಾಜನಿದ್ದ. ಅವನು ವೈರಿಗಳ ಕೈಯಲ್ಲಿ ಸೋತು, ರಾಜ್ಯವನ್ನು ಕಳೆದುಕೊಂಡು ವೃದ್ಧನಾಗಿ ಕಣ್ಣನ್ನು ಕಳೆದು ಕೊಂಡ. ಈ ವೃದ್ಧನಾದ ದರಿದ್ರ ಅಂಧದೊರೆ ತನ್ನ ರಾಣಿ ಮತ್ತು ಮಗನೊಂದಿಗೆ ಕಾಡಿನಲ್ಲಿ ಆಶ್ರಯ ಪಡೆದು ತಪಸ್ಸಿನಲ್ಲಿ ನಿರತನಾಗಿದ್ದನು. ಆ ಮಗನ ಹೆಸರು ಸತ್ಯವಾನ್.

ಹಲವು ಅರಸರ ಆಸ್ಥಾನಗಳನ್ನೆಲ್ಲಾ ನೋಡಿದ ಮೇಲೆ ಸಾವಿತ್ರಿ ಈ ಪರ್ಣಶಾಲೆಗೆ ಬಂದಳು. ಎಂತಹ ದೊಡ್ಡರಾಜನಾಗಲಿ ಪರ್ಣ ಶಾಲೆಯ ಮುಂದೆ ಹೋಗುವಾಗ ಅಲ್ಲಿರುವ ಋಷಿಗಳಿಗೆ ಗೌರವ ತೋರದೆ ಇರಲಿಲ್ಲ. ಏಕೆಂದರೆ ಋಷಿಗಳನ್ನು ಇಂತಹ ಪೂಜ್ಯದೃಷ್ಟಿಯಿಂದ ಗೌರವದಿಂದ ನೋಡುತ್ತಿದ್ದರು. ಭರತಖಂಡದ ಚಕ್ರವರ್ತಿ ಸಾರ್ವಭೌಮನು ಕೂಡ ತನ್ನ ಮೂಲ ಪುರುಷರು ಅರಣ್ಯದಲ್ಲಿ ಕಂದ ಮೂಲ ತಿಂದು ನಾರುಡುಗೆ ಉಟ್ಟ ಋಷಿ ಎಂದು ಅರಿಯಲು ಸಂತೋಷ ಪಡುವನು. ನಾವೆಲ್ಲ ಋಷಿಪುತ್ರರು. ಧರ್ಮಕ್ಕೆ ಕೊಡುವ ಗೌರವ ಇದು. ರಾಜರು ಪರ್ಣಶಾಲೆಯ ಸಮೀಪದಲ್ಲಿ ಹೋಗುತ್ತಿದ್ದರೆ ಒಳಗೆ ಹೋಗಿ ಋಷಿಗಳಿಗೆ ಗೌರವ ತೋರುವುದು ಒಂದು ಭಾಗ್ಯವೆಂದು ಭಾವಿಸುವರು. ಕುದುರೆಯ ಮೇಲೆ ಬಂದರೆ ಇಳಿದು ಸ್ವಲ್ಪ ದೂರ ನಡೆದುಕೊಂಡು ಹೋಗುವರು. ರಥಪದಾತಿಗಳೊಡನೆ ಬಂದರೆ ಕಾಡಿನ ಹೊರಗೆ ಅದನ್ನು ಬಿಟ್ಟು ಅನಂತರ ಪ್ರವೇಶಿಸಬೇಕು.

ಸಾವಿತ್ರಿ ಪರ್ಣಶಾಲೆಗೆ ಬಂದು ಋಷಿಯ ಮಗ ಸತ್ಯವಾನನನ್ನು ಕಂಡಳು. ಅವನು ಅವಳ ಹೃದಯವನ್ನು ತಕ್ಷಣ ಒಲಿಸಿಕೊಂಡನು. ಎಲ್ಲಾ ಆಸ್ಥಾನ ಅರಮನೆಯಲ್ಲಿರುವ ಅರಸು ಮಕ್ಕಳಿಂದ ಪಾರಾಗಿ ಬಂದವಳನ್ನು ದ್ಯುಮತ್ಸೇನನ ಪರ್ಣಶಾಲೆಯಲ್ಲಿದ್ದ ಸತ್ಯವಾನ್ ಅವಳೊಲುಮೆಯನ್ನು ಗೆದ್ದನು.

ಸಾವಿತ್ರಿ ತಂದೆಯ ಮನೆಗೆ ಹಿಂತಿರುಗಿ ಬಂದಮೇಲೆ ತಂದೆ "ಮಗು ಸಾವಿತ್ರಿ ಮಾತಾಡು, ನೀನು ಮದುವೆಯಾಗಬಲ್ಲ ಯಾರನ್ನಾದರೂ ನೋಡಿದೆಯಾ?" ಎಂದು ಕೇಳಿದ. ಸಾವಿತ್ರಿ ಮೆಲುಧ್ವನಿಯಲ್ಲಿ ಲಜ್ಜೆಯಿಂದ "ಹೌದು ಅಪ್ಪ" ಎಂದಳು. ತಂದೆ ಆ ರಾಜ ಕುಮಾರನ ಹೆಸರೇನು ಎಂದನು. "ಅವನು ರಾಜಕುಮಾರನಲ್ಲ

ರಾಜ್ಯವನ್ನು ಕಳೆದುಕೊಂಡ ಧ್ಯುಮತ್ಸೇನನ ಮಗ. ರಾಜ್ಯವಿಲ್ಲದ ರಾಜಕುಮಾರ, ಆಶ್ರಮವಾಸಿ ಅವನು, ಸನ್ಯಾಸಿಯಂತೆ ಇರುವನು. ಒಂದು ಪರ್ಣಶಾಲೆಯಲ್ಲಿರುವ ವೃದ್ಧ ತಂದೆ ತಾಯಿಗಳನ್ನು ಕಂದ ಮೂಲಗಳನ್ನು ಆಯ್ದು ತಂದು ನೋಡಿಕೊಳ್ಳುತ್ತಿರುವನು '' ಎಂದಳು.

ಇದನ್ನು ಕೇಳಿದ ಮೇಲೆ ರಾಜನು ಅಂದು ಅಲ್ಲಿಗೆ ಬಂದಿದ್ದ ನಾರದರ ಸಲಹೆಯನ್ನು ಕೇಳಿದನು. ಇದರಷ್ಟು ಅಮಂಗಳವಾದ ಆಯ್ಕೆಯೇ ಇಲ್ಲ ಎಂದರು ಅವರು. ರಾಜ ಇದು ಹೇಗೆ ಎಂದು ಕೇಳಿದಾಗ " ಮದುವೆಯಾದ ಹನ್ನೆರಡು ತಿಂಗಳಿಗೆ ಆ ಯುವಕ ಸಾಯುವನು " ಎಂದನು. ರಾಜ ಭಯದಿಂದ ಕಂಪಿತನಾಗಿ " ಸಾವಿತ್ರಿ, ಹನ್ನೆರಡು ತಿಂಗಳಲ್ಲಿ ಆ ಹುಡುಗ ಸಾಯುವನು, ನೀನು ವಿಧವೆಯಾಗುವೆ ; ಇದನ್ನು ಆಲೋಚಿಸಿ ನೋಡು ! ಮಗು ಈ ವರನನ್ನು ತೊರೆ, ಇಂತಹ ಅಲ್ಪಾಯುಷಿಗೆ ನಿನ್ನನ್ನು ಎಂದಿಗೂ ಲಗ್ನ ಮಾಡಿಕೊಡುವುದಿಲ್ಲ" ಎಂದನು. '' ತಂದೆ, ಚಿಂತೆಯಿಲ್ಲ, ಇನ್ನೊಬ್ಬನನ್ನು ಮದುವೆಯಾಗಿ ನನ್ನ ಮನದ ಪಾತಿವ್ರತ್ಯವನ್ನು ಬಲಿಕೊಡು ಎನ್ನಬೇಡ. ನಾನು ಅವನನ್ನು ಪ್ರೀತಿಸುತ್ತೇನೆ. ಆ ಶೀಲಸಂಪನ್ನ, ಧೀರ ಸತ್ಯವಾನನನ್ನು ಮಾತ್ರ ನಾನು ಪತಿಯೆಂದು ಮನದಲ್ಲಿ ಸ್ವೀಕರಿಸುವೆನು. ಕನ್ಯೆ ಆರಿಸಿಕೊಳ್ಳುವುದು ಒಂದೇಬಾರಿ, ಅವಳು ಅದಕ್ಕೆ ವಿಮುಖಳಾಗುವುದಿಲ್ಲ '' ಎಂದಳು. ಸಾವಿತ್ರಿ ಮನದಲ್ಲಿ ಛಲದಲ್ಲಿ ಜಾರದಿರುವುದನ್ನು ನೋಡಿ ಮದುವೆಗೆ ಒಪ್ಪಬೇಕಾಯಿತು. ಸಾವಿತ್ರಿ ಸತ್ಯವಾನನನ್ನು ಮದುವೆಯಾಗಿ ತನ್ನ ತಂದೆಯ ಅರಮನೆಯಿಂದ ವನವಾಸಕ್ಕೆ ಯಾವ ಉದ್ವೇಗವೂ ಇಲ್ಲದೆ ತಾನೊಲಿದ ಪತಿಯೊಂದಿಗೆ ಬಾಳಲು, ಅವನ ಮಾತಾಪಿತೃಗಳನ್ನು ಸೇವಿಸಲು ಹೊರಟಳು. ಸತ್ಯವಾನ್ ಎಂದು ಸಾಯುವನು ಎಂದು ಸರಿಯಾಗಿ ಅವಳಿಗೆ ಗೊತ್ತಿದ್ದರೂ ಅದನ್ನು ಪತಿಗೆ ತಿಳಿಸಲಿಲ್ಲ. ಪ್ರತಿ ದಿನ ಸತ್ಯವಾನ್ ಕಾಡಿಗೆ ಹೋಗಿ ಹಣ್ಣು ಹೂಗಳನ್ನು ಆಯ್ದು ಕಟ್ಟಿಗೆಯನ್ನು ಹೊತ್ತು ಪರ್ಣಶಾಲೆಗೆ ತರುತ್ತಿದ್ದನು. ಸಾವಿತ್ರಿ ಅಡಿಗೆಮಾಡಿ ವೃದ್ಧರ ಶುಶ್ರೂಷೆ ಮಾಡುತ್ತಿದ್ದಳು. ಹೀಗೆ ಅವರ ಜೀವನ ಸಾಗಿತು. ದುರಂತದ ದಿನ ಬಳಿ ಸಾರಿತು. ಅದಕ್ಕೆ ಕೇವಲ ಮೂರು ದಿನಗಳು ಮಾತ್ರ ಉಳಿದಿತ್ತು. ಮೂರು ದಿನ ಉಪವಾಸ ಪ್ರಾರ್ಥನೆಯ ಕಠಿಣ

ವ್ರತವನ್ನು ಕೈಕೊಂಡಳು. ದುಃಖದಿಂದ ನಿದ್ರೆಮಾಡದೆ ರಾತ್ರಿಯನ್ನೆಲ್ಲಾ ಪ್ರಾರ್ಥನೆಯಲ್ಲಿ ಕಳೆದಳು. ಇತರರಿಗೆ ಕಾಣದೆ ಕಣ್ಣೀರು ಸುರಿಸಿದಳು. ದುರಂತದ ದಿನ ಕೊನೆಗೆ ಸಾಗಿ ಬಂತು. ಅಂದು ಸತ್ಯವಾನನಿಂದ ಕ್ಷಣವಾದರೂ ಸಾವಿತ್ರಿ ಅಗಲಿರಲು ಬಯಸಲಿಲ್ಲ. ಗಂಡ ಹಣ್ಣು ಹಂಪಲುಗಳನ್ನು ತರಲು ಕಾಡಿಗೆ ಹೋದಾಗ ತನಗೂ ಅವನೊಡನೆ ಹೋಗಲು ಅಪ್ಪಣೆಕೊಡಿ ಎಂದು ಅತ್ತೆಮಾವಂದಿರನ್ನು ಕೇಳಿ ಗಂಡನನ್ನು ಹಿಂಬಾಲಿಸಿದಳು. ಸತ್ಯವಾನ್ ತನಗೆ ಸಾಕಾಗುತ್ತಿದೆ ಎಂದು ನಿಂತು ನಿಂತು ಹೇಳಿದನು. "ಪ್ರಿಯೆ ಸಾವಿತ್ರಿ, ನನ್ನ ತಲೆ ಏಕೋ ಸುತ್ತುತ್ತಿದೆ, ಕೈಕಾಲುಗಳು ಸೋಲುತ್ತಿವೆ. ಕತ್ತಲು ನನ್ನನ್ನು ಕವಿಯುವಂತಿದೆ. ಸ್ವಲ್ಪ ನಿನ್ನ ಸಮೀಪದಲ್ಲಿ ಮಲಗುತ್ತೇನೆ" ಎಂದ. "ಪ್ರಿಯತಮ, ನನ್ನ ತೊಡೆಯಮೇಲೆ ಮಲಗಿ" ಎಂದಳು ಸಾವಿತ್ರಿ. ಸುಡುತ್ತಿರುವ ತನ್ನ ತಲೆಯನ್ನು ಹೆಂಡತಿಯ ತೊಡೆಯಮೇಲೆ ಇಟ್ಟೊಡನೆಯೆ ನಿಟ್ಟುಸಿರುಬಿಟ್ಟು ಪ್ರಾಣವನ್ನು ತೊರೆದನು. ಅವನನ್ನು ಅಪ್ಪಿಕೊಂಡು ಕಂಬನಿಕರೆಯುತ್ತಾ ಆ ನಿರ್ಜನಾರಣ್ಯದಲ್ಲಿ ಒಬ್ಬಳೇ ಕುಳಿತಳು. ಆಗ ಯಮದೂತರು ಸತ್ಯವಾನನ ಪ್ರಾಣವನ್ನು ತೆಗೆದುಕೊಂಡು ಹೋಗಲು ಬಂದರು. ಆದರೆ ಯಾವ ಮೃತನ ಕಳೇಬರ ಸಾವಿತ್ರಿಯ ತೊಡೆಯಮೇಲೆ ಇತ್ತೋ ಅವಳ ಸಮೀಪಕ್ಕೆ ಇವರು ಬರಲು ಆಗಲಿಲ್ಲ ಎಂಬುದನ್ನು ಯಮಧರ್ಮನಿಗೆ ವಿವರಿಸಿದರು.

ಆಗ ಮೃತರನ್ನು ಪರೀಕ್ಷಿಸುವ ಯಮಧರ್ಮನೇ ಬಂದನು. ಅವನೇ ಪೃಥ್ವಿಯಲ್ಲಿ ಕಾಲವಾದವರಲ್ಲಿ ಮೊದಲನೆಯವನು. ಅವನು ಅನಂತರ ಕಾಲವಾಗುವವರಿಗೆಲ್ಲ ರಾಜನಾದನು. ಮನುಷ್ಯ ಕಾಲವಾದ ಮೇಲೆ ಅವನನ್ನು ಶಿಕ್ಷಿಸಬೇಕೇ ರಕ್ಷಿಸಬೇಕೇ ಎಂಬುದನ್ನು ನಿರ್ಧರಿಸುವನು. ಈಗ ಅವನೇ ಪ್ರತ್ಯಕ್ಷವಾಗಿ ಬಂದನು. ಅವನು ದೇವರಾದುದರಿಂದ ಅಗ್ನಿಚಕ್ರದೊಳಗೆ ಹೋಗಬಲ್ಲವನಾಗಿದ್ದನು. "ಮಗಳೆ, ಈ ಮೃತದೇಹವನ್ನು ತೊರೆ. ಮರ್ತ್ಯರೆಲ್ಲ ಮೃತರಾಗಲೇಬೇಕು. ಮೃತನಾದ ಮೊದಲ ಮರ್ತ್ಯ ನಾನೆ. ಅಂದಿನಿಂದ ಪ್ರತಿಯೊಬ್ಬರೂ ಸಾಯಲೇಬೇಕಾಗಿದೆ. ಮನುಷ್ಯರೆಲ್ಲ ಸಾಯಲೇಬೇಕಾಗಿದೆ" ಎಂದನು ಯಮರಾಜ. ಹೀಗೆ ಹೇಳಿದ ಮೇಲೆ ಸಾವಿತ್ರಿ ಹಿಂದೆ ಸರಿದಳು.

ಯಮ ಸತ್ಯವಾನನ ಪ್ರಾಣವನ್ನು ಸೆಳೆದುಕೊಂಡನು. ಯಮ ಅವನ ಪ್ರಾಣವನ್ನು ತೆಗೆದುಕೊಂಡು ಮುಂದೆ ನಡೆದ. ಅವನು ಸ್ವಲ್ಪ ದೂರ ಹೋಗುವುದರೊಳಗೆ ಹಿಂದೆ ತರಗೆಲೆಯ ಮೇಲೆ ಕಾಲ ಸಪ್ಪಳ ಕೇಳಿಸಿತು. "ಮಗಳೆ ಸಾವಿತ್ರಿ, ನೀನು ಏತಕ್ಕೆ ನನ್ನನ್ನು ಹಿಂಬಾಲಿಸುತ್ತಿರುವಿ? ಎಲ್ಲ ಮಾನವರ ಅಂತ್ಯವೇ ಇದು" ಎಂದನು. ಸಾವಿತ್ರಿ "ತಂದೆ, ನಾನು ನಿನ್ನನ್ನು ಅನುಸರಿಸುತ್ತಿಲ್ಲ. ಆದರೆ ಇದು ಹೆಂಗಸರ ಗತಿ. ಅವಳ ಪತಿ ಹೋದೆಡೆ ಅವನನ್ನು ಹಿಂಬಾಲಿಸಬೇಕು. ಸನಾತನ ಧರ್ಮ ಪ್ರೀತಿಸುತ್ತಿದ್ದ ಪತಿ, ಪತಿವ್ರತಳಾದ ಸತಿಯನ್ನು ಎಂದೂ ಅಗಲಿಸಲಾರದು" ಎಂದಳು. ಆಗ ಯಮಧರ್ಮ "ನಿನ್ನ ಗಂಡನ ಪ್ರಾಣವನ್ನು ಹೊರತು ಮತ್ತಾವುದಾದರೊಂದು ವರವನ್ನು ಕೇಳು" ಎಂದನು. "ನೀನು ನನಗೆ ವರವನ್ನು ಕರುಣಿಸುವ ಹಾಗಿದ್ದರೆ ನನ್ನ ಮಾವ ಅಂಧತ್ವದಿಂದ ಪಾರಾಗಿ ಸುಖವಾಗಿರಲಿ" ಎಂದು ಬೇಡಿಕೊಂಡಳು. "ಕರ್ತವ್ಯಪರಾಯಣಳಾದ ಮಗಳೆ ನಿನ್ನ ಶುಭೇಚ್ಛೆ ಫಲಿಸಲಿ" ಎಂದನು. ಅನಂತರ ಯಮಧರ್ಮ ಸತ್ಯವಾನನ ಪ್ರಾಣದೊಂದಿಗೆ ಮುಂದುವರಿದನು. ಪುನಃ ಹಿಂದಿನಿಂದ ಅದೇ ಕಾಲ ಸಪ್ಪಳ ಕೇಳಿಸಿತು. ಹಿಂತಿರುಗಿ ನೋಡಿದ. "ಮಗಳೆ ಸಾವಿತ್ರಿ, ನೀನು ಪುನಃ ನನ್ನನ್ನೇ ಅನುಸರಿಸುತ್ತಿರುವೆಯಲ್ಲ?" ಎಂದು ಕೇಳಿದ. "ಹೌದು ತಂದೆ, ಹಾಗೆ ಮಾಡದೆ ವಿಧಿಯಿಲ್ಲ. ನಾನು ಹಿಂತಿರುಗಿ ಹೋಗಬೇಕೆಂದು ಎಷ್ಟೋ ಪ್ರಯತ್ನಿಸುವೆನು. ಆದರೆ ಮನಸ್ಸು ಸತ್ಯವಾನನನ್ನೇ ಅನುಸರಿಸುವುದು. ದೇಹವೂ ಅದನ್ನೇ ಹಿಂಬಾಲಿಸುವುದು. ನನ್ನ ಜೀವ ಎಂದೋ ಹೋಯಿತು. ಅವನ ಜೀವದಲ್ಲಿ ನನ್ನದೂ ಇದೆ. ನೀನು ಜೀವವನ್ನು ಸೆಳೆದರೆ ದೇಹವೂ ಹಿಂಬಾಲಿಸುವುದಿಲ್ಲವೆ?" ಎಂದಳು. "ನಿನ್ನ ಮಾತಿನಿಂದ ನನಗೆ ತೃಪ್ತಿಯಾಯಿತು. ಸಾವಿತ್ರಿ ನೀನು ಮತ್ತೊಂದು ವರವನ್ನು ಕೇಳು. ಆದರೆ ಅದು ಸತ್ಯವಾನನ ಪ್ರಾಣವಾಗಿರಬಾರದು" ಎಂದನು. "ತಂದೆ ನೀನು ಇನ್ನೊಂದು ವರವನ್ನು ಕರುಣಿಸಬೇಕೆಂದು ಕೃಪೆಮಾಡಿದರೆ ನನ್ನ ಮಾವನ ಕಳೆದು ಹೋದ ರಾಜ್ಯ ಮತ್ತು ಐಶ್ವರ್ಯ ಹಿಂತಿರುಗಲಿ" ಎಂದಳು. "ಪ್ರಿಯ ಮಗಳೆ, ಈ ವರವನ್ನು ಕರುಣಿಸಿದೆ. ಆದರೆ ಈಗ ಹಿಂತಿರುಗು.

ಬದುಕಿರುವವರು ಯಮನನ್ನು ಹಿಂಬಾಲಿಸಲಾರರು " ಎಂದ. ಯಮ ಮುಂದೆ ಹೊರಟ. ಆದರೆ ಪತಿವ್ರತಳಾದ ಸಾಧ್ವಿ ಸಾವಿತ್ರಿ ತನ್ನ ಪತಿಯನ್ನು ಅನುಸರಿಸಿದಳು. ಯಮ ಹಿಂತಿರುಗಿ ನೋಡಿ " ಸಾಧ್ವಿ ಸಾವಿತ್ರಿ, ವೃಥಾ ನನ್ನನ್ನು ಹಿಂಬಾಲಿಸಬೇಡ " ಎಂದನು. " ನೀನು ನನ್ನ ಪ್ರಿಯತಮನನ್ನು ಒಯ್ಯುವೆಡೆ ನಾನು ಬರದೆ ವಿಧಿಯಿಲ್ಲ " ಎಂದಳು. " ಸಾವಿತ್ರಿ, ಹಾಗಾದರೆ ನಿನ್ನ ಗಂಡ ದುರಾತ್ಮನಾದರೆ ನರಕಕ್ಕೆ ಹೋಗಬೇಕಾಗುವುದು. ಆಗ ಸಾವಿತ್ರಿ ತಾನು ಪ್ರೀತಿಸು ವವನನ್ನೇ ಹಿಂಬಾಲಿಸುವಳೇನು? " ಎಂದು ಯಮ ಕೇಳಿದ. " ಅವನು ಹೋದೆಡೆ ಸಂತೋಷದಿಂದ ಹೋಗುವೆನು, ಜನನವಾಗಲೀ, ಮರಣವಾಗಲೀ, ಸ್ವರ್ಗವಾಗಲೀ, ನರಕವಾಗಲೀ " ಎಂದಳು ಆ ಪ್ರಿಯ ಸತಿ. " ಮಗು ಧನ್ಯವಾದ ಮಾತುಗಳಿವು. ನಿನ್ನನ್ನು ಕಂಡು ನನಗೆ ತುಂಬಾ ಸಂತೋಷವಾಯಿತು. ಮತ್ತೊಂದು ವರವನ್ನು ಕೇಳು. ಆದರೆ ಮೃತರು ಬದುಕಲಾರರು " ಎಂದ ಯಮ. " ನೀನು ಹಾಗೆ ಮತ್ತೊಂದು ವರವನ್ನು ಕರುಣಿಸುವುದಕ್ಕೆ ಒಪ್ಪಿಕೊಂಡಿರುವುದರಿಂದ ನನ್ನ ಮಾವನ ವಂಶ ನಾಶವಾಗದಿರಲಿ. ಅವನ ರಾಜ್ಯ ಸತ್ಯವಾನನ ಮಕ್ಕಳಿಗೆ ಬರಲಿ " ಎಂದಳು. ಆಗ ಯಮ ಮಂದಹಾಸದಿಂದ " ಮಗಳೆ, ನಿನ್ನ ಇಚ್ಛೆ ಪೂರ್ಣವಾಗಲಿ. ನಿನ್ನ ಪತಿಯ ಪ್ರಾಣವಿಲ್ಲಿದೆ ತೆಗೆದುಕೋ, ಅವನು ಪುನಃ ಜೀವಿಸುವನು. ಅವನೊಬ್ಬ ತಂದೆ ಯಾಗುವನು. ಕಾಲಕ್ರಮೇಣ ನಿಮ್ಮ ಮಕ್ಕಳು ರಾಜ್ಯವಾಳುವರು. ಈಗ ಮನೆಗೆ ಮರಳು. ಪ್ರೇಮ ಮೃತ್ಯುವನ್ನು ಜಯಿಸಿತು. ನಿನ್ನಂತೆ ಯಾವ ಹೆಂಗಸೂ ಪ್ರೀತಿಸಿಲ್ಲ. ನಿಜವಾದ ಪ್ರೇಮಶಕ್ತಿಯ ಎದುರಿಗೆ ನಾನು ಮೃತ್ಯುರಾಜನಾದವನೂ ಕೂಡ ಸೋತೆನೆಂಬುದಕ್ಕೆ ನೀನೊಂದು ಉದಾಹರಣೆ ! " ಎಂದನು.

ಇದೇ ಸಾವಿತ್ರಿಯ ಕಥೆ. ಭರತಖಂಡದಲ್ಲಿ ಪ್ರತಿಯೊಬ್ಬ ಹುಡುಗಿಯೂ ಸಾವಿತ್ರಿಯಂತಾಗಬೇಕು. ಮೃತ್ಯು ಅವಳ ಪ್ರೇಮವನ್ನು ಜಯಿಸಲಾರದೆಹೋಯಿತು, ಅವಳು ಪ್ರೇಮದ ಅದ್ಭುತಶಕ್ತಿಯಿಂದ ಯಮನ ಕೈಗಳಿಂದಲೂ ತನ್ನ ಪತಿಯ ಪ್ರಾಣವನ್ನು ತೆಗೆದುಕೊಂಡು ಬಂದಳು.

ಕಾವ್ಯದಲ್ಲಿ ಇಂತಹ ನೂರಾರು ಸುಂದರವಾದ ಕಥೆಗಳಿವೆ. ಪ್ರಪಂಚದಲ್ಲಿ ಮಹಾಭಾರತ ಒಂದು ಅತಿದೊಡ್ಡ ಗ್ರಂಥ. ಹದಿನೆಂಟು ಪರ್ವಗಳನ್ನೊಳಗೊಂಡ ಸುಮಾರು ಒಂದು ಲಕ್ಷ ಶ್ಲೋಕಗಳಿವೆ ಅದರಲ್ಲಿ.

ನಮ್ಮ ಮೂಲಕಥೆಗೆ ಈಗ ಹಿಂತಿರುಗೋಣ. ಪಾಂಡವರನ್ನು ವನವಾಸದಲ್ಲಿ ಬಿಟ್ಟಿದ್ದೆವು. ಅಲ್ಲಿ ಕೂಡ ದುರ್ಯೋಧನನ ಕುತಂತ್ರಗಳ ದೆಸೆಯಿಂದ ನೆಮ್ಮದಿಯಿಂದ ಇರಲಿಲ್ಲ. ಆದರೆ ಅವನ ಕುತಂತ್ರಗಳೆಲ್ಲ ವ್ಯರ್ಥವಾದವು.

ಅವರ ವನವಾಸದ ಒಂದು ಕಥೆಯನ್ನು ನಿಮಗೆ ಹೇಳುತ್ತೇನೆ. ಒಂದುದಿನ ಅವರಿಗೆ ಕಾಡಿನಲ್ಲಿ ಬಾಯಾರಿಕೆಯಾಯಿತು. ಯುಧಿಷ್ಠಿರ ನಕುಲನಿಗೆ ನೀರು ತರುವಂತೆ ಹೇಳಿಕಳುಹಿಸಿದನು. ನಕುಲ ತಕ್ಷಣ ಹೊರಟು ಒಂದು ಸ್ವಚ್ಛವಾದ ಸರೋವರ ಇರುವ ಕಡೆ ಬಂದು ಆ ನೀರನ್ನು ಕುಡಿಯುವುದರಲ್ಲಿದ್ದನು. ಆಗ ಒಂದು ಧ್ವನಿಯು "ಮಗು ಸ್ವಲ್ಪತಾಳು, ನಾನು ಕೇಳುವ ಪ್ರಶ್ನೆಗೆ ಉತ್ತರವಿತ್ತು ನೀರು ಕುಡಿ" ಎಂದಿತು. ಆದರೆ ನಕುಲನಿಗೆ ಬಹಳ ಬಾಯಾರಿಕೆಯಾಗಿದ್ದುದರಿಂದ ಅದನ್ನು ಲಕ್ಷ್ಯಮಾಡದೆ ನೀರು ಕುಡಿದು ಸತ್ತುಬಿದ್ದ. ನಕುಲ ಬಾರದೆ ಇರುವುದನ್ನು ನೋಡಿ ಯುಧಿಷ್ಠಿರ ನಕುಲನನ್ನು ಹುಡುಕಿಕೊಂಡು ನೀರನ್ನು ತರುವಂತೆ ಸಹದೇವನಿಗೆ ಹೇಳಿದನು. ಸಹದೇವ ಸರೋವರದ ಸಮೀಪಕ್ಕೆ ಹೋದಾಗ ನಕುಲ ಸತ್ತು ಬಿದ್ದಿರುವುದನ್ನು ಕಂಡನು. ತಮ್ಮನ ಮರಣದಿಂದ ದುಃಖಿತನಾಗಿ ಬಾಯಾರಿದ್ದುದರಿಂದ ನೀರು ಕುಡಿಯಲು ಹೋದನು. ಆಗ ಪುನಃ ಅದೇ ಧ್ವನಿ ಕೇಳಿಸಿತು. "ಮಗು, ಮೊದಲು ನನ್ನ ಪ್ರಶ್ನೆಗೆ ಉತ್ತರಕೊಟ್ಟು ಅನಂತರ ಜಲಪಾನ ಮಾಡು" ಎಂದಿತು. ಅವನು ಇದನ್ನು ಲಕ್ಷ್ಯಮಾಡದೆ ನೀರನ್ನು ಕುಡಿದುದರಿಂದ ಸತ್ತು ಬಿದ್ದನು. ಕ್ರಮೇಣ ಅರ್ಜುನ ಭೀಮರನ್ನು ಅದೇ ಕೆಲಸಕ್ಕೆ ಕಳುಹಿಸಿದ. ಅವರೂ ನೀರು ಕುಡಿದು ಸತ್ತು ಬಿದ್ದರು. ಯಾರೂ ಹಿಂತಿರುಗಿ ಬರಲಿಲ್ಲ. ಕೊನೆಗೆ ಆ ರಮ್ಯತಟಾಕದ ಸಮೀಪಕ್ಕೆ ಯುಧಿಷ್ಠಿರನೇ ಬಂದಾಗ ತನ್ನ ತಮ್ಮಂದಿರೆಲ್ಲ ಅಲ್ಲಿ ಸತ್ತುಬಿದ್ದಿರುವುದನ್ನು ಕಂಡನು. ಇದನ್ನು ನೋಡಿ ತುಂಬಾ ವ್ಯಥೆಪಟ್ಟನು. ರೋಧಿಸಲು ಆರಂಭಿಸಿ-

ದನು. ಆಗ ಅದೇ ಧ್ವನಿ ಕೇಳಿಸಿತು. "ಮಗು, ಅವಸರದಿಂದ ವರ್ತಿಸಬೇಡ. ನಾನು ಸಣ್ಣ ಮೀನನ್ನು ತಿನ್ನುತ್ತಿರುವ ಬಕನಂತೆ ಇರುವ ಯಕ್ಷ. ನಿನ್ನ ತಮ್ಮಂದಿರೆಲ್ಲ ಸತ್ತಿದ್ದು ನನ್ನಿಂದ. ನೀನು ಕೂಡ ನಾನು ಕೇಳುವ ಪ್ರಶ್ನೆಗೆ ಉತ್ತರ ಕೊಟ್ಟು ಅನಂತರ ನೀನು ಎಷ್ಟು ಬೇಕಾದರೂ ನೀರನ್ನು ತೆಗೆದುಕೊಂಡು ಹೋಗಬಹುದು" ಎಂದನು. "ನಿನ್ನ ಪ್ರಶ್ನೆಗೆ ನನ್ನ ಬುದ್ಧಿ ತೋರಿದಂತೆ ಉತ್ತರ ಕೊಡುತ್ತೇನೆ. ಪ್ರಶ್ನೆ ಕೇಳು" ಎಂದನು ಧರ್ಮರಾಜ. ಹಾಕಿದ ಪ್ರಶ್ನೆಗಳಲ್ಲಿ ಒಂದು "ಪ್ರಪಂಚದಲ್ಲಿ ಯಾವುದು ಅತಿ ವಿಚಿತ್ರವಾಗಿರುವುದು ?" ಎಂಬುದು. "ಸುತ್ತಲೂ ನಮ್ಮ ಜನ ಸಾಯುವುದನ್ನು ಪ್ರತಿದಿನ ನೋಡುತ್ತಿರುವೆವು. ಆದರೆ ಉಳಿದವರು ನಾವು ಸಾಯುವುದಿಲ್ಲ ಎಂದು ಬಗೆಯುವರು. ಇದೇ ಒಂದು ದೊಡ್ಡ ವಿಚಿತ್ರ. ಸುತ್ತಲೂ ಸಾವನ್ನು ನೋಡುತ್ತಿದ್ದರೂ ತಾವು ಸಾಯುತ್ತೇವೆ ಎಂದು ಭಾವಿಸುವುದೇ ಇಲ್ಲ." ಎಂದನು ಧರ್ಮರಾಯ. ಹಾಕಿದ ಮತ್ತೊಂದು ಪ್ರಶ್ನೆಯೇ ಧರ್ಮರಹಸ್ಯವನ್ನು ಅರಿಯುವುದು ಹೇಗೆ ಎಂಬುದು. "ವಾದದಿಂದ ಯಾವುದನ್ನೂ ನಿರ್ಧರಿಸಲಾಗುವುದಿಲ್ಲ. ಎಷ್ಟೋ ಸಿದ್ಧಾಂತಗಳಿವೆ, ಎಷ್ಟೋ ಶಾಸ್ತ್ರಗಳಿವೆ. ಒಂದನ್ನೊಂದು ವಿರೋಧಿಸುತ್ತಿರುತ್ತವೆ. ಏಕಾಭಿಪ್ರಾಯವಿರುವ ಇಬ್ಬರು ಕೂಡ ಇಲ್ಲ. ಧರ್ಮದ ರಹಸ್ಯ ಎಲ್ಲೋ ಗಾಢಾಂಧಕಾರದ ಗುಹೆಯಲ್ಲಿ ಹುದುಗಿದಂತೆ ಇದೆ. ಆದಕಾರಣ ಹಿಂದಿನ ಮಹಾಪುರುಷರು ಯಾವ ಮಾರ್ಗದಲ್ಲಿ ಹೋದರೋ ಅದನ್ನು ಅನುಸರಿಸುವುದೇ ಸರಿಯಾದ ಮಾರ್ಗ" ಎಂದನು ಧರ್ಮರಾಯ. ಆಗ ಯಕ್ಷ ಹೇಳಿದ "ನಾನು ಸಂತುಷ್ಟನಾದೆ. ಬಕನಂತೆ ಇರುವ ಧರ್ಮವೇ ನಾನು. ನಾನು ನಿನ್ನನ್ನು ಪರೀಕ್ಷಿಸುವುದಕ್ಕೆ ಬಂದೆ. ಈಗ ನೋಡು. ನಿನ್ನ ತಮ್ಮಂದಿರು ಯಾರೂ ಸತ್ತಿಲ್ಲ. ಇದೆಲ್ಲ ನನ್ನ ಮಾಯೆ. ಸುಖಕ್ಕಿಂತ, ಲಾಭಕ್ಕಿಂತ, ಅಹಿಂಸೆಯೇ ಪರಮಧರ್ಮವೆಂದು ಸಾರಿದುದರಿಂದ, ಹೇ ಭರತರ್ಷಭಾ ನಿನ್ನ ತಮ್ಮಂದಿರೆಲ್ಲ ಬದುಕಲಿ." ಎಂದಿತು ಧರ್ಮ. ಯಕ್ಷ ಹೀಗೆ ಹೇಳಿದ ಮೇಲೆ ಪಾಂಡವರೆಲ್ಲ ಎಚ್ಚೆತ್ತರು.

ಯುಧಿಷ್ಠಿರನ ಸ್ವಭಾವದ ಒಂದು ಉದಾಹರಣೆ ಇದು. ಅವನ

ಉತ್ತರದಿಂದ ಅವನು ರಾಜನಿಗಿಂತ ಹೆಚ್ಚಾಗಿ ಒಬ್ಬ ಜ್ಞಾನಿಯಾಗಿದ್ದ, ಯೋಗಿಯಾಗಿದ್ದ ಎಂಬುದು ಗೊತ್ತಾಗುವುದು. ಅವರ ವನವಾಸದ ಹನ್ನೆರಡನೆಯ ವರುಷ ಪೂರೈಸುತ್ತ ಬರಲು ಯಕ್ಷ ವಿರಾಟನ ದೇಶದಲ್ಲಿ ತಮಗೆ ತೋರಿದರೀತಿ ಅಜ್ಞಾತವಾಸವನ್ನು ಕಳೆಯಿರಿ ಎಂದು ಹೇಳಿದನು.

ಹನ್ನೆರಡು ವರುಷ ವನವಾಸವಾದಮೇಲೆ ಉಳಿದ ಒಂದು ವರುಷ ಅಜ್ಞಾತವಾಸವನ್ನು ಕಳೆಯಲು ವಿರಾಟನಗರಿಗೆ ಬೇರೆ ಬೇರೆ ವೇಷದಲ್ಲಿ ಹೋದರು. ರಾಜನ ಊಳಿಗದವರಲ್ಲಿ ಸೇವಕರಾಗಿ ನಿಂತರು. ಯುಧಿಷ್ಠಿರ ಪಗಡೆಯಾಟದಲ್ಲಿ ನಿಪುಣನಾದ ವಿರಾಟನ ಅರಮನೆಯಲ್ಲಿ ಬ್ರಾಹ್ಮಣ ಆಸ್ಥಾನಿಕನಾದನು. ಭೀಮ ಅಡುಗೆಯವನಾದ. ಅರ್ಜುನ ಬೃಹನ್ನಳೆಯಾಗಿ ರಾಜಕುಮಾರಿ ಉತ್ತರೆಗೆ ನೃತ್ಯ ಮತ್ತು ಸಂಗೀತ ಶಾಸ್ತ್ರವನ್ನು ಕಲಿಸುತ್ತ ಅಂತಃಪುರದಲ್ಲಿದ್ದನು. ನಕುಲ ರಾಜನ ಕುದುರೆಯನ್ನು ನೋಡಿಕೊಳ್ಳುವವನಾದ. ಸಹದೇವ ಅವನ ಗೋವುಗಳನ್ನು ಕಾಯತೊಡಗಿದ. ದ್ರೌಪದಿ ಒಬ್ಬ ಪರಿಚಾರಿಕೆಯಂತೆ ರಾಣಿಯ ಊಳಿಗಕ್ಕೆ ಸೇರಿದಳು. ಹೀಗೆ ತಮ್ಮ ವ್ಯಕ್ತಿತ್ವವನ್ನು ಮರೆಮಾಚಿಕೊಂಡು ಒಂದು ವರುಷ ಅಜ್ಞಾತವಾಸವನ್ನು ಜಯಪ್ರದವಾಗಿ ಕಳೆದರು- ಅವರನ್ನು ಕಂಡುಹಿಡಿಯಬೇಕೆಂಬ ದುರ್ಯೋಧನನ ಪ್ರಯತ್ನ ವಿಫಲವಾಯಿತು. ಸರಿಯಾಗಿ ಒಂದು ವರುಷ ಕಳೆದ ಮೇಲೆ ಮಾತ್ರ ಅವರನ್ನು ಕಂಡುಹಿಡಿದರು.

ಅನಂತರ ಯುಧಿಷ್ಠಿರ ಒಬ್ಬ ರಾಯಭಾರಿಯನ್ನು ದುರ್ಯೋಧನನ ಬಳಿಗೆ ಕಳುಹಿಸಿ ಅವರಿಗೆ ಸಲ್ಲಬೇಕಾದ ಅರ್ಧ ರಾಜ್ಯವನ್ನು ಕೊಡಬೇಕೆಂದು ಕೇಳಿದನು. ಆದರೆ ದುರ್ಯೋಧನನಿಗೆ ತನ್ನ ದಾಯಾದಿಗಳನ್ನು ಕಂಡರೆ ಆಗುತ್ತಿರಲಿಲ್ಲ. ಅವರ ನ್ಯಾಯವಾದ ಬೇಡಿಕೆಯನ್ನು ಆಲಿಸಲಿಲ್ಲ. ಪಾಂಡವರು ತಮಗೆ ಒಂದು ನಾಡನ್ನೊ ಅಥವಾ ಐದು ಹಳ್ಳಿಗಳನ್ನಾದರೂ ಕೊಟ್ಟಿದ್ದರೆ ಒಪ್ಪಿಕೊಳ್ಳುತ್ತಿದ್ದರು. ಆದರೆ ಭಂಡನಾದ ದುರ್ಯೋಧನ ಒಂದು ಸೂಜಿಮೊನೆಯಷ್ಟು ಜಾಗವನ್ನಾದರೂ ಯುದ್ಧವಿಲ್ಲದೆ ಬಿಟ್ಟುಕೊಡುವುದಿಲ್ಲ ಎಂದನು. ಧೃತರಾಷ್ಟ್ರ ಶಾಂತಿಗಾಗಿ ಮತ್ತೆ ಮತ್ತೆ ಪ್ರಯತ್ನಿಸಿದನು. ಆದರೂ ಕೌರವರು ಒಪ್ಪಲಿಲ್ಲ. ಕೃಷ್ಣನೂ ಕೂಡ ಹೋಗಿ ಮುಂದೊದಗುವ ಯುದ್ಧವನ್ನು ನಿಲ್ಲಿಸುವುದಕ್ಕೆ,

ಬಂಧುಹತ್ಯವನ್ನು ತಡೆಗಟ್ಟುವುದಕ್ಕೆ ಪ್ರಯತ್ನಿಸಿದ. ಆಸ್ಥಾನದ ಧರ್ಮಜ್ಞರಾದ ಹಿರಿಯರೆಲ್ಲ ಯತ್ನಿಸಿದರು. ಶಾಂತಿಯಿಂದ ದೇಶವನ್ನು ಭಾಗಮಾಡಿಕೊಡುವ ಪ್ರಯತ್ನವೆಲ್ಲ ನಿಷ್ಫಲವಾಯಿತು. ಕೊನೆಗೆ ಇಬ್ಬರೂ ಯುದ್ಧಕ್ಕೆ ಸಿದ್ಧರಾದರು. ಎಲ್ಲಾ ಕ್ಷತ್ರಿಯ ರಾಜರೂ ಯುದ್ಧದಲ್ಲಿ ಭಾಗವಹಿಸಿದರು.

ಆಗಿನ ಕಾಲದಲ್ಲಿ ಕ್ಷತ್ರಿಯರಲ್ಲಿ ಬಳಕೆಯಲ್ಲಿದ್ದ ರೂಢಿಯನ್ನೇ ಅನುಸರಿಸಿದರು. ದುರ್ಯೋಧನ ಒಂದು ಪಕ್ಷ, ಯುಧಿಷ್ಠಿರ ಒಂದು ಪಕ್ಷ ವಹಿಸಿಕೊಂಡರು. ನೆರೆಯ ರಾಷ್ಟ್ರಗಳಿಗೆ ಯುಧಿಷ್ಠಿರ ಅವರ ಸಹಾಯವನ್ನು ಕೋರಿ ದೂತರನ್ನು ಕಳುಹಿಸಿದ. ಗೌರವಸ್ಥರು ತಮ್ಮನ್ನು ಯಾರು ಮೊದಲು ಕೋರುವರೋ ಅವರಿಗೆ ಸಹಾಯ ನೀಡುವರು. ಅವರವರ ಕೋರಿಕೆಗೆ ಅನುಸಾರವಾಗಿ ಕೆಲವರು ಕೌರವನ ಪಕ್ಷ, ಮತ್ತೆ ಕೆಲವರು ಪಾಂಡವರ ಪಕ್ಷವನ್ನು ವಹಿಸಿಕೊಂಡು ದೇಶದ ನಾನಾ ಕಡೆಗಳಿಂದ ಯೋಧರು ನೆರೆದರು. ಇದರಲ್ಲಿ ತಮ್ಮ ಒಂದು ಪಕ್ಷಕ್ಕೆ ಅಣ್ಣ ಒಂದು ಪಕ್ಷಕ್ಕೆ ಸೇರಿದ್ದರು, ತಂದೆ ಒಂದು ಪಕ್ಷಕ್ಕೆ ಮಗ ಒಂದು ಪಕ್ಷಕ್ಕೆ ಸೇರಿದ್ದರು. ಆಗಿನ ಕಾಲದ ಯುದ್ಧ ನೀತಿ ಒಂದು ವಿಚಿತ್ರವಾದುದು. ದಿನದ ಯುದ್ಧ ಕಳೆದು ಸಂಜೆಯಾದೊಡನೆ ವಿರೋಧ ಪಕ್ಷದವರು ಸ್ನೇಹಿತರಾಗುತ್ತಿದ್ದರು. ಮಹಮ್ಮದೀಯರ ಧಾಳಿಯವರೆವಿಗೂ ಹಿಂದುಗಳಲ್ಲಿದ್ದ ಒಂದು ಅಪೂರ್ವ ಸ್ವಭಾವ ಇದು. ಅಶ್ವಾರೂಢ ಪದಾತಿಯನ್ನು ಕೊಲ್ಲಕೂಡದು, ಅಸ್ತ್ರಗಳಿಗೆ ವಿಷ ಮಿಶ್ರಮಾಡಕೂಡದು. ಅಸಮಾನಸ್ಥರೊಂದಿಗೆ ಯುದ್ಧಮಾಡಿ ಅಥವಾ ಅನ್ಯಾಯದಿಂದ ವೈರಿಗಳನ್ನು ಸೋಲಿಸಕೂಡದು. ಒಬ್ಬನು ಮತ್ತೊಬ್ಬನು ಅಸಹಾಯ ಸ್ಥಿತಿಯಲ್ಲಿದ್ದಾಗ ಅವನೊಂದಿಗೆ ಯುದ್ಧಮಾಡಕೂಡದು. ಹೀಗೆ ಎಷ್ಟೋ ವಿಧಿನಿಯಮಗಳಿದ್ದುವು. ಯಾರಾದರೂ ಈ ವಿಧಿನಿಯಮಗಳನ್ನು ವಿರೋಧಿಸಿದರೆ ಅವನನ್ನು ತುಚ್ಛವಾಗಿ ಕಾಣುತ್ತಿದ್ದರು, ಬಾಹಿರನನ್ನಾಗಿ ಮಾಡುತ್ತಿದ್ದರು. ಕ್ಷತ್ರಿಯರನ್ನು ಈ ರೀತಿಯಲ್ಲಿ ತರಪೇತು ಮಾಡಿದ್ದರು. ಮಧ್ಯ ಏಷ್ಯಾದಿಂದ ಹೊರಗಿನವರು ಧಾಳಿ ಇಟ್ಟಾಗ ಹಿಂದುಗಳು ಇದೇ ರೀತಿ ಅವರನ್ನು ಕಂಡರು. ಅವರನ್ನು ಎಷ್ಟೋ ವೇಳೆ ಸೋಲಿ

ಸಿವರು. ಆದರೆ ಪ್ರತಿಸಲವೂ ಅವರಿಗೆ ಬಹುಮಾನಗಳನ್ನು ಕೊಟ್ಟು ಮನೆಗೆ ಕಳುಹಿಸಿದರು. ಮತ್ತೊಬ್ಬರ ದೇಶವನ್ನು ಅಪಹರಿಸಬಾರದು ಎಂಬುದೇ ಇದ್ದ ನೀತಿ. ಒಬ್ಬನನ್ನು ಸೋಲಿಸಿದರೆ ಅವನ ಸ್ಥಾನಕ್ಕೆ ಸಲ್ಲುವ ಗೌರವ ತೋರಿ ಅವನನ್ನು ಹಿಂದಕ್ಕೆ ಕಳುಹಿಸಬೇಕಾಗಿತ್ತು. ಆದರೆ ಮುಹಮ್ಮದೀಯ ವಿಜಯಿಗಳು ಬೇರೆವಿಧದಿಂದ ಹಿಂದುಗಳನ್ನು ಕಂಡರು. ಒಂದು ಸಲ ಅವರನ್ನು ಸೋಲಿಸಿದರೆ ನಿಷ್ಕರುಣೆಯಿಂದ ವೈರಿಗಳನ್ನು ನಾಶಮಾಡುತ್ತಿದ್ದರು.

ಇದನ್ನು ಲಕ್ಷ್ಯದಲ್ಲಿಡಿ. ಈ ನಮ್ಮ ಕಥೆ ನಡೆಯುತ್ತಿದ್ದ ಕಾಲದಲ್ಲಿ ಶಸ್ತ್ರವಿದ್ಯೆ ಎಂದರೆ ಬರೀ ಬಿಲ್ಲುಬಾಣಗಳ ಉಪಯೋಗವಲ್ಲ. ಅದು ಮಂತ್ರವಿದ್ಯೆಯೂ ಆಗಿತ್ತು. ಅಲ್ಲಿ ಮಂತ್ರ ಮತ್ತು ಏಕಾಗ್ರತೆ ಬಹು ಮುಖ್ಯ ಎಂಬುದನ್ನು ಕಾವ್ಯ ಹೇಳುವುದು. ಒಬ್ಬನು ಲಕ್ಷಾಂತರ ಜನರೊಂದಿಗೆ ಯುದ್ಧಮಾಡಿ ಅವರನ್ನು ದಹಿಸಬಹುದಾಗಿತ್ತು. ಅವನು ಒಂದು ಬಾಣವನ್ನು ಕಳುಹಿಸಿದರೆ ಅದೊಂದು ಬಾಣದ ಮಳೆಯಾಗಿ ಸಿಡಿಲು ಗುಡುಗುಗಳನ್ನು ಕಾರಿ ಬೀಳುತ್ತಿತ್ತು. ಅವನು ಯಾವುದನ್ನು ಬೇಕಾದರೂ ದಹಿಸಬಹುದಾಗಿತ್ತು. ಇವೆಲ್ಲ ದೈವದತ್ತಮಂತ್ರವಿದ್ಯೆಯಾಗಿತ್ತು. ರಾಮಾಯಣ ಮಹಾಭಾರತಗಳೆರಡರಲ್ಲಿಯೂ ಮಂತ್ರಾಸ್ತ್ರಗಳು ಪ್ರಯೋಗದಲ್ಲಿರುವಾಗಲೂ ಪಿರಂಗಿಗಳು ಬಳಕೆಯಲ್ಲಿತ್ತು ಎಂಬುದನ್ನು ಕಾವ್ಯದ ಮೂಲಕ ತಿಳಿಯುವೆವು. ಈ ಪಿರಂಗಿ ಬಹಳ ಪುರಾತನವಾದುದು. ಚೈನಿಯರು ಮತ್ತು ಹಿಂದುಗಳು ಇದನ್ನು ಅನುಷ್ಠಾನದಲ್ಲಿ ತಂದಿದ್ದರು. ನಗರದ ಕೋಟೆಯ ಗೋಡೆಯ ಮೇಲೆ ಟೊಳ್ಳು ಕಬ್ಬಿಣದ ಕೊಳವಿಯಿಂದ ಮಾಡಿರುವ ನೂರಾರು ವಿಚಿತ್ರ ಅಸ್ತ್ರಗಳಿದ್ದುವು. ಅದರಲ್ಲಿ ಮದ್ದು ಮತ್ತು ಗುಂಡು ತುಂಬಿ ಕನೇಕ ಜನರನ್ನು ಕೊಲ್ಲುತ್ತಿದ್ದರು. ಜನ ಚೈನೀಯರು ಮಂತ್ರದಿಂದ ಕೊಳವಿಯಲ್ಲಿ ಒಂದು ಭೂತವನ್ನು ಕೂಡಿಡುತ್ತಿದ್ದರು, ಅವಕ್ಕೆ ಒಂದು ಕಿಡಿ ತಾಕಿದೊಡನೆಯೆ ಅದು ಗರ್ಜನೆ ಮಾಡುತ್ತ ಕೊಳವಿಯಿಂದ ಹೊರಗೆ ಬಂದು ನೂರಾರು ಜನರನ್ನು ಕೊಲ್ಲುತ್ತಿತ್ತು ಎಂದು ನಂಬಿದ್ದರು.

ಅಂದಿನ ಕಾಲದಲ್ಲಿ ಯೋಧರು ಮಂತ್ರಾಸ್ತ್ರಗಳಿಂದ ಯುದ್ಧ ಮಾಡುತ್ತಿದ್ದರು. ಒಬ್ಬ ಲಕ್ಷಾಂತರ ಜನರೊಂದಿಗೆ ಬೇಕಾದರೆ ಯುದ್ಧ

ಮಾಡಬಹುದಾಗಿತ್ತು. ಅದರಲ್ಲಿಯೂ ಸಮರ ವ್ಯೂಹ ಮತ್ತು ತಂತ್ರ ಗಳಿದ್ದವು. ಅವರಲ್ಲಿಯೂ ಪದಾತಿಗಳು ಅಶ್ವಾರೂಢರು ಇದ್ದರು. ಇನ್ನೆರಡು ಭಾಗವೇ ಆಧುನಿಕರು ಮರೆತು ಅದನ್ನು ತ್ಯಜಿಸಿರುವರು. ಅವೇ ಗಜಸಮೂಹ. ನೂರಾರು ಗಜಗಳಿದ್ದುವು. ಅವುಗಳ ಮೇಲೆ ಉಕ್ಕಿನ ಕವಚಧಾರಿಗಳಾದ ಯೋಧರು ಇರುತ್ತಿದ್ದರು. ಈ ಆನೆಗಳು ವೈರಿ ಸಮೂಹದ ಮೇಲೆ ನುಗ್ಗಾಡುತ್ತಿದ್ದುವು. ಅನಂತರ ರಥಗಳಿದ್ದುವು. (ಇಂತಹ ಹಳೆಯ ಚಿತ್ರಗಳನ್ನು ನೀವೆಲ್ಲರೂ ನೋಡಿರುವಿರಿ. ಎಲ್ಲಾ ದೇಶಗಳಲ್ಲಿಯೂ ಅವು ಬಳಕೆಯಲ್ಲಿದ್ದುವು.) ಆಗಿನ ಕಾಲದ ಸೇನೆಯ ನಾಲ್ಕು ವಿಭಾಗಗಳು ಇವು.

ಉಭಯ ಪಕ್ಷದವರೂ ಕೃಷ್ಣನ ಸಹಾಯವನ್ನು ಪಡೆಯಲು ಇಚ್ಛಿಸಿದರು. ಆದರೆ ಕೃಷ್ಣ ಯುದ್ಧದಲ್ಲಿ ಭಾಗಿಯಾಗಲು ಇಚ್ಛಿಸಲಿಲ್ಲ. ಪಾಂಡವರ ಸಲಹೆಗಾರ ಮತ್ತು ಸ್ನೇಹಿತನಾಗಿ ಅರ್ಜುನನ ಸಾರಥಿಯಾಗಲು ಒಪ್ಪಿಕೊಂಡನು. ದುರ್ಯೋಧನನಿಗೆ ತನ್ನ ಶ್ರೇಷ್ಠಯೋಧರಿಂದೊಡಗೂಡಿದ ಸೈನ್ಯವನ್ನು ಕೊಟ್ಟನು. ಅನಂತರ ಕುರುಕ್ಷೇತ್ರದ ವಿಶಾಲ ಸಮರಾಂಗಣದಲ್ಲಿ ಘೋರ ಯುದ್ಧ ನಡೆಯಿತು. ಭೀಷ್ಮ, ದ್ರೋಣ, ಕರ್ಣ, ದುರ್ಯೋಧನ ಮತ್ತು ಅವನ ಸಹೋದರರು ಉಭಯ ಪಕ್ಷದ ಬಂಧುಗಳು ಮತ್ತು ಹಲವು ಯೋಧರು ಮಡಿದರು. ಯುದ್ಧ ಹದಿನೆಂಟು ದಿನ ಜರುಗಿತು. ನೆರೆದ ಹದಿನೆಂಟು ಅಕ್ಷೋಹಿಣಿ ಸೈನ್ಯದಲ್ಲಿ ಎಲ್ಲೋ ಕೆಲವರು ಮಾತ್ರ ಉಳಿದರು. ದುರ್ಯೋಧನನ ಮರಣದಿಂದ ಪಾಂಡವರ ಪರವಾಗಿ ಯುದ್ಧ ಕೊನೆಗೊಂಡಿತು. ಅನಂತರ ಗಾಂಧಾರಿ, ರಾಣಿ ಮತ್ತು ಇತರ ಸ್ತ್ರೀಯರ ಶೋಕ ಮೊದಲಾಯಿತು. ಮಡಿದ ಯೋಧರ ಅಂತ್ಯಕ್ರಿಯೆಯಾಯಿತು.

ಯುದ್ಧದಲ್ಲಿ ನಡೆದ ದೊಡ್ಡ ಘಟನೆಯೆ ಅದ್ಭುತವಾದ ಅಮರ ಕಾವ್ಯ ಭಗವದ್ಗೀತೆಯ ಉದಯ. ಇದು ಜನಾವರಣೀಯವಾದ ಗ್ರಂಥ, ಶ್ರೇಷ್ಠತಮವಾದ ಬೋಧನೆ. ಕುರುಕ್ಷೇತ್ರದಲ್ಲಿ ಯುದ್ಧಾರಂಭಕ್ಕೆ ಮುಂಚೆ ಕೃಷ್ಣಾರ್ಜುನರಿಗೆ ನಡೆದ ಸಂಭಾಷಣೆ ಇದರಲ್ಲಿದೆ. ಯಾರು ಅದನ್ನು ಓದಿಲ್ಲವೋ ಅವರಿಗೆ ಓದುವಂತೆ ಹೇಳುತ್ತೇನೆ. ನಿಮ್ಮ ದೇಶದ ಜನರ ಮೇಲೆ ಅದು ಎಷ್ಟೊಂದು ಪ್ರಭಾವವನ್ನುಂಟುಮಾಡಿದೆ ಎಂಬುದು

ನಿಮಗೆ ಗೊತ್ತಿದ್ದರೆ, ಎಮರ್‌ಸನ್ನನ ಸ್ಫೂರ್ತಿಮೂಲ ನಿಮಗೆ ಗೊತ್ತಾಗಬೇಕಾದರೆ, ಅದೇ ಈ ಭಗವದ್ಗೀತೆ. ಎಮರ್‌ಸನ್ ಕಾರ್ಲೈಲ್‌ನನ್ನು ನೋಡಲು ಹೋದಾಗ ಕಾರ್ಲೈಲ್ ಗೀತೆಯನ್ನು ಬಹುಮಾನವಾಗಿ ಕೊಟ್ಟನು. ಆ ಸಣ್ಣ ಪುಸ್ತಕವೇ 'ಕನಕಾರ್ಡ್'ನ ಚಳುವಳಿಗೆ ಕಾರಣ. ಅಮೆರಿಕಾ ದೇಶದ ಉದಾರ ಸ್ವಭಾವದ ಚಳುವಳಿಗಳು ಒಂದಲ್ಲ ಒಂದು ರೀತಿಯಲ್ಲಿ ಕನಕಾರ್ಡ್ ಪಾರ್ಟಿಗೆ ಋಣಿ.

ಗೀತೆಯ ಮುಖ್ಯ ವ್ಯಕ್ತಿಯೇ ಕೃಷ್ಣ. ನೀವು ನಜರೇತಿನ ಜೀಸಸ್ಸನ್ನು ಹೇಗೆ ಭಗವಂತನ ಅವತಾರವೆಂದು ಪೂಜಿಸುತ್ತೀರೋ ಹಾಗೆಯೇ ಹಿಂದೂಗಳು ಹಲವು ಭಗವಂತನ ಅವತಾರಗಳನ್ನು ಪೂಜಿಸುತ್ತಾರೆ. ಹಿಂದುಗಳು ಎಲ್ಲೋ ಒಂದೆರಡು ದೇವರ ಅವತಾರದಲ್ಲಿ ನಂಬುವುದಿಲ್ಲ. ಪ್ರಪಂಚದ ಆವಶ್ಯಕತೆಗೆ ತಕ್ಕಂತೆ ಧರ್ಮಸಂಸ್ಥಾಪನೆಗೆ, ಅಧರ್ಮನಾಶಕ್ಕೆ ಪ್ರಪಂಚಕ್ಕೆ ಬಂದ ಹಲವು ಅವತಾರಗಳನ್ನು ನಂಬುವರು. ಪ್ರತಿಯೊಂದು ಪಂಗಡದವರಿಗೂ ಒಂದೊಂದು ಅವತಾರವಿದೆ. ಕೃಷ್ಣ ಅವರಲ್ಲಿ ಒಬ್ಬ. ಭರತಖಂಡದಲ್ಲಿ ಶ್ರೀಕೃಷ್ಣನ ಅನುಯಾಯಿಗಳು ಭಗವಂತನ ಪೂರ್ಣಾವತಾರ ಕೃಷ್ಣ ಎಂದು ಭಾವಿಸುವರು. ಏತಕ್ಕೆ? ಎಂದರೆ ಬುದ್ಧ ಮುಂತಾದವರನ್ನು ನೋಡಿ. ಅವರೆಲ್ಲ ಸನ್ಯಾಸಿಗಳಾಗಿದ್ದರು. ಅವರಿಗೆ ಗೃಹಸ್ಥರ ಮೇಲೆ ಕರುಣೆಯಿರಲಿಲ್ಲ. ಅವರಿಗೆ ಕರುಣೆ ಹೇಗೆ ಇರಬಲ್ಲದು? ಆದರೆ ಕೃಷ್ಣನನ್ನು ನೋಡಿ, ಅವನು ಆದರ್ಶ ಮಗನಾಗಿದ್ದ, ರಾಜನಾಗಿದ್ದ, ತಂದೆಯಾಗಿದ್ದ, ಅವನು ಇದೇ ಜೀವನದಲ್ಲಿ ಏನನ್ನು ಬೋಧಿಸಿದನೊ "ಯಾರು ಕರ್ಮದಲ್ಲಿ ಅಕರ್ಮವನ್ನು ನೋಡುವರೋ, ಅಕರ್ಮದಲ್ಲಿ ಕರ್ಮವನ್ನು ನೋಡುವರೋ ಅವರಿಗೆ ಜೀವನರಹಸ್ಯ ಗೊತ್ತಿದೆ,'' ಎಂಬುದಕ್ಕೆ ಜಾಜ್ವಲ್ಯಮಾನವಾದ ಉದಾಹರಣೆಯಾಗಿರುವನು. ಕೃಷ್ಣ ಅನಾಸಕ್ತನಾಗಿ ಇದನ್ನು ಹೇಗೆ ಮಾಡುವುದು ಎಂಬುದಕ್ಕೆ ಮಾರ್ಗದರ್ಶಕನಾಗಿರುವನು. ಎಲ್ಲವನ್ನೂ ಮಾಡು. ಆದರೆ ಯಾವುದಕ್ಕೂ ಆಸಕ್ತನಾಗಬೇಡ. ನೀನು ಆತ್ಮ, ಪರಿಶುದ್ಧ, ನಿತ್ಯಮುಕ್ತ, ಸಾಕ್ಷಿ. ಕರ್ಮದಿಂದಲ್ಲ ನಮಗೆ ದುಃಖಪ್ರಾಪ್ತಿ, ನಾವು ಆಸಕ್ತರಾಗಿರುವುದರಿಂದ. ಉದಾಹರಣೆಗೆ ಹಣವನ್ನು ತೆಗೆದುಕೊಳ್ಳಿ. ಹಣವಿರುವುದು

ಒಳ್ಳೆಯದು ಅದನ್ನು ಸಂಪಾದಿಸಿ, ಅದನ್ನು ಆರ್ಜಿಸಲು ಕಷ್ಟಪಡಿ ಎನ್ನುವನು ಕೃಷ್ಣ. ಆದರೆ ಆಸಕ್ತರಾಗಬೇಡಿ ಎನ್ನುವನು. ಇದರಂತೆಯೇ ಮಕ್ಕಳು, ಗಂಡಹೆಂಡತಿ, ಬಂಧುಬಳಗ, ಕೀರ್ತಿ ಮುಂತಾದುವು ಕೂಡ. ಅವನ್ನು ನೀನು ತ್ಯಜಿಸಬೇಕಾಗಿಲ್ಲ. ಆದರೆ ಅದರಲ್ಲಿ ಆಸಕ್ತನಾಗಬೇಡ. ಒಬ್ಬರಿಗೆ ಮಾತ್ರ ಆಸಕ್ತರಾಗಿರಬೇಕು. ಅದೇ ದೇವರಿಗೆ, ಅನ್ಯರಿಗಲ್ಲ. ಅವರಿಗಾಗಿ ಕೆಲಸಮಾಡಿ, ಅವರಿಗೆ ಒಳ್ಳೆಯದನ್ನು ಮಾಡಿ, ಅವರನ್ನು ಪ್ರೀತಿಸಿ, ಅವರಿಗಾಗಿ ಸಾಧ್ಯವಾದರೆ ನೂರು ಜನ್ಮವನ್ನಾದರೂ ಅರ್ಪಿಸಿ. ಆದರೆ ಎಂದಿಗೂ ಆಸಕ್ತರಾಗಿರಬೇಡಿ. ಅವನ ಜೀವನವೇ ಆದಕ್ಕೆ ಸರಿಯಾದ ಉದಾಹರಣೆಯಾಗಿತ್ತು.

ಕೃಷ್ಣನ ಜೀವನವನ್ನು ವಿವರಿಸುವ ಗ್ರಂಥ ಹಲವು ಸಾವಿರ ವರುಷಗಳಷ್ಟು ಪುರಾತನ ಎಂಬುದನ್ನು ನೆನಪಿನಲ್ಲಿಡಿ. ಅದರಲ್ಲಿ ಕೆಲವು ಭಾಗ ನಜರೇತಿನ ಜೀಸಸ್ಸಿನ ಜೀವನದಂತೆಯೆ ಇವೆ. ಕೃಷ್ಣ ರಾಜವಂಶಿ. ಕಂಸನೆಂಬ ಕ್ರೂರಿ ದೊರೆಯಿದ್ದ. ಯಾವುದೋ ಒಂದು ವಂಶದಲ್ಲಿ ಹುಟ್ಟುವವನು ಮುಂದೆ ರಾಜನಾಗುವನೆಂಬ ಭವಿಷ್ಯವಿತ್ತು. ಆದಕಾರಣ ಎಲ್ಲಾ ಗಂಡುಮಕ್ಕಳನ್ನೂ ಕೊಲ್ಲುವಂತೆ ಕಂಸ ಆಜ್ಞೆ ಮಾಡಿದನು. ಕೃಷ್ಣನ ತಾಯಿತಂದೆಗಳನ್ನು ಕಂಸ ಸೆರೆಮನೆಗೆ ನೂಕಿದ. ಅವರಿಗೊಂದು ಮಗು ಜನಿಸಿತು. ಸೆರೆಮನೆಯಲ್ಲಿ ಒಂದು ಜ್ಯೋತಿ ಪ್ರಕಾಶಿಸಿತು. ಮಗು ಹೇಳಿತು "ನಾನು ಜಗದ ಬೆಳಕು, ಜಗದುದ್ಧಾರಕ್ಕಾಗಿ ಜನಿಸಿರುವೆನು" ಎಂದು. ಕೃಷ್ಣನನ್ನು ಔಪಮಾನಿಕವಾಗಿ ಗೋಪಾಲ ಎಂದು ಚಿತ್ರಿಸಿರುವರು. ದೇವರೇ ಜನಿಸಿದ ಎಂದು ಋಷಿಗಳು ಹೇಳಿ ಅವನನ್ನು ಗೌರವಿಸುವುದಕ್ಕೆ ಹೋಗುವರು. ಜೀವನದ ಇತರ ಭಾಗದಲ್ಲಿ ಕ್ರಿಸ್ತ ಮತ್ತು ಕೃಷ್ಣನ ಜೀವನಕ್ಕೆ ಸಾಮ್ಯವಿಲ್ಲ.

ಕೃಷ್ಣ ಕ್ರೂರಿ ಕಂಸನನ್ನು ಗೆದ್ದನು. ಆದರೆ ಸಿಂಹಾಸನವನ್ನು ತಾನು ಪಡೆಯುವ ಯೋಚನೆ ಮಾಡಲಿಲ್ಲ. ಅದನ್ನು ಸ್ವೀಕರಿಸಲೂ ಇಲ್ಲ. ಅದಕ್ಕೂ ಇವನಿಗೂ ಏನೂ ಸಂಬಂಧವಿರಲಿಲ್ಲ. ಅವನು ತನ್ನ ಕರ್ತವ್ಯವನ್ನು ಮಾಡಿದ ಅಲ್ಲಿಗೇ ಅದು ಕೊನೆಯಾಯಿತು. ಕುರುಕ್ಷೇತ್ರ ಯುದ್ಧವಾದ ಮೇಲೆ ಹದಿನೆಂಟು ದಿನದಲ್ಲಿ ಹತ್ತು ದಿನ ಯುದ್ಧ

ಮಾಡಿದ ಪ್ರಖ್ಯಾತ ಯೋಧ ಪೂಜ್ಯಪಿತಾಮಹ ಭೀಷ್ಮಾಚಾರ್ಯರು ಶರಪಂಜರದಲ್ಲಿ ಮಲಗಿರುವಾಗ ಯುಧಿಷ್ಠರನಿಗೆ ರಾಜರ ಕರ್ತವ್ಯ, ನಾಲ್ಕು ವರ್ಣ ಮತ್ತು ಆಶ್ರಮ, ಮದುವೆ ಮತ್ತು ದಾನಕ್ಕೆ ಸಂಬಂಧ ಪಟ್ಟ ವಿಷಯಗಳನ್ನು ಹಿಂದಿನ ಋಷಿಗಳ ಬೋಧನೆಗೆ ತಕ್ಕಂತೆ ಬೋಧಿಸಿದರು. ಅವನಿಗೆ ಸಾಂಖ್ಯಯೋಗ ತತ್ತ್ವಗಳನ್ನು ವಿವರಿಸು ವರು. ಎಷ್ಟೋ ರಾಜರು, ಋಷಿಗಳು, ದೇವತೆಗಳಿಗೆ ಸಂಬಂಧಪಟ್ಟ ಐತಿಹ್ಯಗಳನ್ನು ಹೇಳುವರು, ಕಥೆಗಳನ್ನು ಹೇಳುವರು. ಈ ಭಾಗವೇ ಒಟ್ಟು ಪುಸ್ತಕದಲ್ಲಿ ನಾಲ್ಕನೇ ಒಂದು ಭಾಗವಾಗುವುದು. ಇದು ಹಿಂದೂಗಳ ನೀತಿ ಮತ್ತು ಧಾರ್ಮಿಕ ಶಾಸ್ತ್ರದ ಮಹಾನಿಧಿಯಾಗಿದೆ. ಯುಧಿಷ್ಠಿರನಿಗೆ ಚಕ್ರವರ್ತಿ ಪಟ್ಟಾಭಿಷೇಕವಾಯಿತು. ಆದರೆ ಅಷ್ಟೊಂದು ರಕ್ತಪಾತ ಅಷ್ಟೊಂದು ಜನ ಗುರುಹಿರಿಯ ಬಂಧುಬಳಗ ದವರ ಕೊಲೆಯಿಂದ ತುಂಬಾ ವ್ಯಥಿತನಾದನು. ಅನಂತರ ವ್ಯಾಸರ ಸಲಹೆ ಮೇರೆ ಅಶ್ವಮೇಧ ಯಜ್ಞವನ್ನು ಮಾಡುವನು. ಯುದ್ಧವಾದ ಮೇಲೆ ಹದಿನೈದು ವರುಷಗಳು ಧೃತರಾಷ್ಟ್ರ ಗೌರವದಿಂದ ಯುಧಿಷ್ಠಿರ ಮತ್ತು ಅವನ ಸಹೋದರರ ಮಾತಿನಂತೆ ನೆಮ್ಮದಿಯಾಗಿದ್ದ. ಅನಂತರ ವಯಸ್ಸಾದ ಧೃತರಾಷ್ಟ್ರ ಯುಧಿಷ್ಠಿರನನ್ನು ಸಿಂಹಾಸನದ ಮೇಲೆ ಬಿಟ್ಟು ಪತಿಪರಾಯಣೆಯಾದ ತನ್ನ ಸತಿ ಗಾಂಧಾರಿ ಮತ್ತು ಪಾಂಡವರ ತಾಯಿಯಾದ ಕುಂತಿಯೊಂದಿಗೆ ವಾನಪ್ರಸ್ಥಾಶ್ರಮದಲ್ಲಿ ಕಳೆಯಲು ಕಾಡಿಗೆ ಹೋದರು.

ಯುಧಿಷ್ಠಿರ ಸಿಂಹಾಸನಕ್ಕೆ ಬಂದು ಮೂವತ್ತಾರು ವರುಷ ಗಳಾದವು. ಆಗ ಕೃಷ್ಣ ಕಾಲವಾದ ಎಂಬ ಸಮಾಚಾರ ಬಂದಿತು. ಕೃಷ್ಣ ಋಷಿಯಾದವನು, ತನ್ನ ಸಖ ಆಪ್ತ ಗುರು ಪ್ರಪಂಚವನ್ನು ತೊರೆದಿದ್ದನು. ಅರ್ಜುನ ಅವಸರದಿಂದ ದ್ವಾರಕಿಗೆ ಹೋದನು. ಕೃಷ್ಣ ಮತ್ತು ಯಾದವರೆಲ್ಲ ನಾಶವಾದುದು ನಿಜವೆಂಬ ಸುದ್ದಿಯನ್ನು ತಂದನು. ಆಗ ರಾಜ ಮತ್ತು ಅವನ ಸಹೋದರರು ದುಃಖಾಕ್ರಾಂತ ರಾದರು. ಪ್ರಪಂಚವನ್ನು ತೊರೆಯುವುದಕ್ಕೆ ತಮಗೂ ಕಾಲ ಬಂದಿದೆ ಎಂದು ಹೇಳಿದರು. ಚಕ್ರವರ್ತಿಯ ಜವಾಬ್ದಾರಿಯನ್ನು ಕಿತ್ತೊಗೆದು, ಅರ್ಜುನನ ಮೊಮ್ಮಗನಾದ ಪರೀಕ್ಷಿತ ರಾಜನನ್ನು ಸಿಂಹಾಸನದ

ಮೇಲೆ ಕುಳ್ಳಿರಿಸಿ, ಮಹಾಪ್ರಸ್ಥಾನಕ್ಕಾಗಿ ಹಿಮಾಲಯಕ್ಕೆ ಹೋದರು. ಇದೊಂದು ವಿಧದ ಸನ್ಯಾಸ. ವಯಸ್ಸಾದ ರಾಜರು ವಾನಪ್ರಸ್ಥಿಗಳಾಗುವುದು ರೂಢಿ. ಹಿಂದಿನ ಕಾಲದಲ್ಲಿ ವಯಸ್ಸಾದ ಮೇಲೆ ಅವರು ಎಲ್ಲವನ್ನೂ ತ್ಯಜಿಸುತ್ತಿದ್ದರು. ಅದರಂತೆಯೇ ರಾಜರೂ ಕೂಡ ಮಾಡಿದರು. ಮನುಷ್ಯನಿಗೆ ಇನ್ನು ಹೆಚ್ಚು ಬದುಕಿರಬೇಕೆಂಬ ಇಚ್ಛೆ ಇಲ್ಲದೇ ಇದ್ದರೆ ಹಿಮಾಲಯದಲ್ಲಿ ಏನನ್ನೂ ತಿನ್ನದೆ, ಕುಡಿಯದೆ ಅವರ ದೇಹ ಸೋಲುವವರೆಗೆ ನಡೆದುಕೊಂಡು ಹೋಗುತ್ತಿದ್ದರು. ಸದಾ ದೇವರನ್ನೇ ಕುರಿತು ಆಗ ಚಿಂತಿಸುತ್ತಿದ್ದರು. ಪ್ರಾಣವಿರುವ ಪರಿಯಂತರ ಹೀಗೆ ನಡೆದುಕೊಂಡು ಹೋಗುತ್ತಿದ್ದರು.

ಆಗ ಋಷಿಗಳು ಮತ್ತು ದೇವತೆಗಳು ಬಂದು ಯುಧಿಷ್ಠಿರನಿಗೆ ನೀನು ಸ್ವರ್ಗಕ್ಕೆ ಹೋಗಬೇಕು ಎಂದರು. ಒಬ್ಬ ಸ್ವರ್ಗಕ್ಕೆ ಹೋಗಬೇಕಾದರೆ ಹಿಮಾಲಯದ ದೊಡ್ಡ ಶಿಖರಗಳನ್ನು ದಾಟಬೇಕು. ಹಿಮಾಲಯದ ಆಚೆ ಮೇರುಪರ್ವತವನ್ನು ದಾಟಬೇಕು. ಮೇರು ಪರ್ವತದಮೇಲೆ ಸ್ವರ್ಗವಿರುವುದು. ಈ ದೇಹದಲ್ಲಿ ಯಾರೂ ಅಲ್ಲಿಗೆ ಹೋಗಿಲ್ಲ. ದೇವತೆಗಳು ಅಲ್ಲಿ ವಾಸಮಾಡುವರು. ದೇವತೆಗಳು ಯುಧಿಷ್ಠಿರನಿಗೆ ಸ್ವರ್ಗಕ್ಕೆ ಹೋಗಬೇಕೆಂದು ಹೇಳಿದರು.

ಪಂಚಪಾಂಡವರು ಮತ್ತು ಅವರ ಸತಿ ದ್ರೌಪದಿ ನಾರುಡುಗೆ ಯುಟ್ಟು ಪಯಣಕ್ಕೆ ಹೊರಟರು. ದಾರಿಯಲ್ಲಿ ಒಂದು ನಾಯಿ ಅವರನ್ನು ಹಿಂಬಾಲಿಸಿತು. ಮುಂದೆ ಮುಂದೆ ಹೋದರು. ಸೋತ ಕಾಲಿನಲ್ಲಿ ಹಿಮಾಲಯದ ಭವ್ಯ ಶಿಖರಗಳಿರುವ ಉತ್ತರದ ಕಡೆ ನಡೆದು ಕೊಂಡು ಹೋದರು. ಕೊನೆಗೆ ಅಗಾಧವಾದ ಮೇರುಪರ್ವತವನ್ನು ಮುಂದೆ ನೋಡಿದರು. ಮೌನವಾಗಿ ಆ ಹಿಮಾಲಯದ ಮೇಲೆ ನಡೆದು ಕೊಂಡು ಹೋದರು. ಆಗ ರಾಣಿ ದ್ರೌಪದಿ ನೆಲಕ್ಕೆ ಬಿದ್ದಳು, ಪುನಃ ಏಳಲಿಲ್ಲ. ಮುಂದೆ ಹೋಗುತ್ತಿದ್ದ ಯುಧಿಷ್ಠಿರನಿಗೆ ಭೀಮ "ನೋಡು ರಾಜ, ರಾಣಿ ಬಿದ್ದಳು" ಎಂದ. ಯುಧಿಷ್ಠಿರ ಕಂಬನಿದುಂಬಿದನು. ಆದರೆ ಹಿಂತಿರುಗಿ ನೋಡಲಿಲ್ಲ. "ನಾವು ಕೃಷ್ಣನನ್ನು ನೋಡುವುದಕ್ಕೆ ಹೋಗುತ್ತಿರುವೆವು. ಹಿಂದಿರುಗಿ ನೋಡುವುದಕ್ಕೆ ಸಮಯವಿಲ್ಲ, ಮುಂದೆ" ಎಂದನು. ಕೆಲವು ಕಾಲದ ಮೇಲೆ ಭೀಮ "ನೋಡು,

ನಮ್ಮ ತಮ್ಮ ಸಹದೇವ ಬಿದ್ದನು" ಎಂದನು. ಅರಸ ಕಂಬನಿದುಂಬಿದ. ಆದರೆ ಹಿಂತಿರುಗಿ ನೋಡಲಿಲ್ಲ. "ಮುಂದೆ ಸಾಗಿ" ಎಂದ. ಒಬ್ಬೊಬ್ಬರಾಗಿ ಆ ಹಿಮದಲ್ಲಿ ಚಳಿಯಲ್ಲಿ ನಾಲ್ಕು ಜನ ಸಹೋದರರೂ ಸತ್ತು ಬಿದ್ದರು. ಅಚಲನಾಗದೆ ಯುಧಿಷ್ಠಿರ ಮುಂದೆ ಸಾಗಿದ. ಹಿಂತಿರುಗಿ ನೋಡಿದಾಗ ವಿಧೇಯವಾದ ನಾಯೊಂದು ಹಿಂಬಾಲಿಸುತ್ತಿದ್ದುದನ್ನು ನೋಡಿದನು. ರಾಜ ಮತ್ತು ನಾಯಿ ಇಬ್ಬರೂ ಹಿಮದಲ್ಲಿ ಮಂಜಿನ ಮೇಲೆ ಕಣಿವೆ ಇಳಿದು ಏರನೇರಿ ಮೇರುಪರ್ವತ ಸಿಕ್ಕುವವರೆಗೆ ಹತ್ತಿ ಕಂಡನು. ಅಲ್ಲಿ ಸ್ವರ್ಗದ ಮಂಗಳಧ್ವನಿ ಕೇಳಿಸಿತು. ಧರ್ಮಾತ್ಮನಾದ ದೊರೆಯ ಮೇಲೆ ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ಆಗ ದೇವತೆಗಳ ವಿಮಾನ ಕೆಳಗಿಳಿಯಿತು. ಆಗ ಇಂದ್ರ "ವಿಮಾನವನ್ನೇರು ನರಶ್ರೇಷ್ಠನೆ, ಮಾನವ ದೇಹವನ್ನು ಬದಲಾಯಿಸದೆ ಸ್ವರ್ಗಕ್ಕೆ ಬರುವುದಕ್ಕೆ ನಿನಗೊಬ್ಬನಿಗೆ ಮಾತ್ರ ಸಾಧ್ಯವಾಯಿತು" ಎಂದನು. ಆದರೆ ಅವನ ನೆಚ್ಚಿನ ಸಹೋದರರಿಲ್ಲದೆ, ದ್ರೌಪದಿ ಇಲ್ಲದೆ, ಧರ್ಮರಾಯ ವಿಮಾನವನ್ನು ಏರಲಿಲ್ಲ. ಆಗ ಇಂದ್ರ, ಸಹೋದರರೆಲ್ಲ ಆಗಲೆ ಸ್ವರ್ಗವಲ್ಲಿ ಇರುವರೆಂದನು.

ಯುಧಿಷ್ಠಿರ ಸುತ್ತಲೂ ನೋಡಿ ನಾಯಿಗೆ "ಮಗು ವಿಮಾನ ಏರು" ಎಂದ. ಇಂದ್ರನಿಗೆ ಆಶ್ಚರ್ಯವಾಯಿತು. "ಏನು! ನಾಯಿ? ನಾಯನ್ನು ಆಚೆಗೆ ಓಡಿಸು. ನಾಯಿ ಸ್ವರ್ಗಕ್ಕೆ ಹೋಗಲಾರದು. ಏನು ಮಹಾರಾಜ ಇದು. ನೀನೇನು ಹುಚ್ಚನೆ? ಮಾನವ ಕೋಟಿಯಲ್ಲಿ ಧರ್ಮಶ್ರೇಷ್ಠನಾದ ನೀನೊಬ್ಬನೆ ನಿನ್ನ ದೇಹದಲ್ಲಿ ಸ್ವರ್ಗವ ನೇರುವವನು" ಎಂದನು.

ಯುಧಿಷ್ಠಿರ "ನಾನು ಮಂಜಿನ ಮೇಲೆ ನಡೆಯುವಾಗಲೆಲ್ಲ ನನ್ನ ಆಪ್ತಮಿತ್ರನಾಗಿರುವನು. ನನ್ನ ಸಹೋದರರು ಮಡಿದ ಮೇಲೆ ನನ್ನ ರಾಣಿ ಮಡಿದ ಮೇಲೆ ಇದೊಂದೆ ನನ್ನನ್ನು ಅಗಲಲಿಲ್ಲ. ಈಗ ಅದನ್ನು ಹೇಗೆ ತ್ಯಜಿಸಲಿ?"

ಇಂದ್ರ: "ನಾಯೊಂದಿಗೆ ಬರುವವರಿಗೆ ಸ್ವರ್ಗದಲ್ಲಿ ಸ್ಥಳವಿಲ್ಲ. ಅದನ್ನು ಹಿಂದೆಯೇ ಬಿಡಬೇಕು. ಅದರಲ್ಲಿ ಅಧರ್ಮವೇನೂ ಇಲ್ಲ."

ಯುಧಿಷ್ಠಿರ : "ನಾನು ಸ್ವರ್ಗಕ್ಕೆ ಹೋಗುವುದಿಲ್ಲ. ನಾಯಿ ಇಲ್ಲಿದೆ. ಯಾರು ನನ್ನಲ್ಲಿ ಆಶ್ರಯ ಪಡೆದಿರುವರೋ ಅವರನ್ನು ನನ್ನ ಪ್ರಾಣವಿರುವ ಪರಿಯಂತರ ತ್ಯಜಿಸಲಾರೆ. ನಾನೆಂದಿಗೂ ಧರ್ಮದಿಂದ ವಿಮುಖನಾಗಲಾರೆ. ಸ್ವರ್ಗಸುಖವಾಗಲಿ ದೇವತೆಗಳ ಆಜ್ಞೆಯಾಗಲಿ ಚಿಂತೆಯಿಲ್ಲ."

ಇಂದ್ರ: "ಹಾಗಾದರೆ ಒಂದು ಷರತ್ತಿನ ಮೇಲೆ ನಾಯಿ ಸ್ವರ್ಗಕ್ಕೆ ಹೋಗುವುದು. ನೀನು ಮಾನವರಲ್ಲಿ ಧರ್ಮಶ್ರೇಷ್ಠನಾಗಿರುವೆ. ಆದರೆ ಅದು ನಾಯಿ, ಮೃಗಗಳನ್ನು ಕೊಂದು ತಿನ್ನುತ್ತಿತ್ತು. ಅದು ಪಾಪಿ ಬೇಟೆಯಾಡಿ ಪ್ರಾಣ ತೆಗೆಯುತ್ತಿತ್ತು. ನೀನು ಬೇಕಾದರೆ ನಿನ್ನ ಬದಲು ಅದಕ್ಕೆ ಸ್ವರ್ಗವನ್ನು ಕೊಡಬಹುದು."

ಯುಧಿಷ್ಠಿರ : "ಆಗಲಿ ನಾಯೇ ಸ್ವರ್ಗಕ್ಕೇರಲಿ."

ತಕ್ಷಣ ದೃಶ್ಯ ಬದಲಾಯಿಸಿತು. ಯುಧಿಷ್ಠಿರನ ಧರ್ಮವಾಕ್ಯವನ್ನು ಕೇಳಿ, ನಾಯಿ ಧರ್ಮನ ಆಕಾರವನ್ನು ತಾಳಿತು. ಅದೇ ಯಮಧರ್ಮರಾಯ. ಮುಂದೆ ಇಂತೆಂದನು : "ನೋಡು ರಾಜ, ನಿನ್ನಂಥ ನಿಸ್ವಾರ್ಥಿಗಳು ಇನ್ನಿಲ್ಲ. ಒಂದು ನಿಕೃಷ್ಟ ನಾಯಿಗಾಗಿ ತನ್ನ ಸ್ವರ್ಗಸುಖವನ್ನೇ ಬಲಿಯಿತ್ತೆ. ಅದಕ್ಕಾಗಿ ಅದರಲ್ಲಿ ಯಾವ ಸುಗುಣಗಳೂ ಇಲ್ಲ. ಅದನ್ನೇ ಸ್ವರ್ಗಕ್ಕೆ ಕಳುಹಿಸಿ ನೀನು ನರಕಕ್ಕೆ ಹೋಗಲು ಸಿದ್ಧನಾಗಿರುವೆ. ಹೇ ರಾಜರಾಜನೇ, ಧನ್ಯ ನಿನ್ನ ಬಾಳು. ಎಲ್ಲಾ ಪ್ರಾಣಿಗಳ ಮೇಲೂ ನಿನಗೆ ಕರುಣೆಯಿದೆ. ಇದೊಂದು ಅದಕ್ಕೆ ಉದಾಹರಣೆ. ಅಮರಲೋಕ ನಿನ್ನದು. ರಾಜ, ನೀನದನ್ನು ಸಂಪಾದಿಸಿರುವೆ. ಅಮೃತಸ್ವರೂಪವಾದ ದಿವ್ಯನಾಮ ನಿನ್ನದು."

ಅನಂತರ ಯುಧಿಷ್ಠಿರ ಧರ್ಮ ಮತ್ತು ಇತರ ದೇವತೆಗಳೊಡನೆ ಪುಷ್ಪಕ ವಿಮಾನದಲ್ಲಿ ಸ್ವರ್ಗಕ್ಕೇರಿದರು. ದಾರಿಯಲ್ಲಿ ಸ್ವಲ್ಪ ಕಷ್ಟ ಅನುಭವಿಸಿ, ಅಮರ ನದಿಯಲ್ಲಿ ಮಿಂದು ಹೊಸದೇಹ ಧರಿಸುವನು. ಈಗ ಅಮರರಾದ ತನ್ನ ಸಹೋದರರನ್ನು ಸಂಧಿಸುವನು. ಕೊನೆಗೆಲ್ಲ ಮಂಗಳವಾಗುವುದು, ಅಧರ್ಮನಾಶ, ಧರ್ಮವಿಜಯವನ್ನು ವಿವರಿಸುವ ದಿವ್ಯಕಾವ್ಯವಾದ ಮಹಾಭಾರತದ ಕಥೆ ಕೊನೆಗಾಣುವುದು ಹೀಗೆ.

ಮಹಾಭಾರತ ವಿಷಯವಾಗಿ ನಿಮಗೆ ಮಾತನಾಡುವಾಗ ಅಸಾಧಾರಣ ಪ್ರತಿಭಾನ್ವಿತ ಮಹಾಮೇಧಾವಿ ವ್ಯಾಸರು ಚಿತ್ರಿಸುವ ಕೊನೆಮೊದಲಿಲ್ಲದ ನಾಯಕವರೇಣ್ಯರ ಭವ್ಯಗಂಭೀರ ವ್ಯಕ್ತಿಗಳ ಶೀಲವನ್ನು ನಿಮ್ಮ ಮುಂದಿಡಲು ನನಗೆ ಸಾಧ್ಯವಿಲ್ಲ. ಧರ್ಮಾತ್ಮ ಪಾಪಭೀರು, ಆದರೂ ದುರ್ಬಲ ತನ್ನ ಮಕ್ಕಳ ಮೇಲಿನ ಮಮತೆ ಒಂದು ಕಡೆ, ಇದರ ಘರ್ಷಣೆಯಲ್ಲಿ ಸಿಕ್ಕಿರುವ ಅಂಧನಾದ ವೃದ್ಧ ಧೃತರಾಷ್ಟ್ರ, ಭೀಷ್ಮಪಿತಾಮಹ, ಹೈಮಾಚಲ ಸದೃಶ ಗಾಂಭೀರ್ಯ, ಧರ್ಮಾತ್ಮನಾದ ಉದಾತ್ತ ಯುಧಿಷ್ಠಿರ ಮತ್ತು ಅವನ ನಾಲ್ಕು ಜನ ಸಹೋದರರು, ಶೌರ್ಯದಲ್ಲಿ ಹೇಗೆ ಅಪ್ರತಿಮರೋ ಹಾಗೆಯೇ ಶ್ರದ್ಧೆ ಭಕ್ತಿಗಳಲ್ಲಿ ಅಗ್ರಗಣ್ಯರು. ಮಾನವನ ಜ್ಞಾನದ ಪರಾಕಾಷ್ಠತೆಯನ್ನು ಮೀರಿದ ಆ ಅನುಪಮ ಶ್ರೀಕೃಷ್ಣನ ಚಾರಿತ್ರ್ಯ, ಅದಕ್ಕಿಂತ ಕಡಿಮೆ ಏನೂ ಅಲ್ಲದ ಸ್ತ್ರೀ ಶೀಲಗಳು, ರಾಜಮಹಿಷಿ ಗಾಂಧಾರಿ, ಒಲುಮೆಯ ತಾಯಿ ಕುಂತಿ, ಪತಿಪರಾಯಣೆಯಾದ ಕಷ್ಟವನ್ನೆಲ್ಲ ಸಹಿಸಿದ ದ್ರೌಪದಿ, ಹೀಗೆ ರಾಮಾಯಣ ಮತ್ತು ಮಹಾಭಾರತದಲ್ಲಿ ಬರುವ ನೂರಾರು ಶೀಲಗಳು ಸಾವಿರಾರು ವರುಷಗಳಿಂದ ಹಿಂದೂಗಳಿಗೆ ಸಂಸ್ಕೃತಿಯ ಪುಣ್ಯ ನಿಧಿಯಾಗಿದೆ. ಇದೇ ಅವರ ಭಾವನೆ ನೀತಿ ಧರ್ಮಕ್ಕೆ ಮೂಲವಾಗಿದೆ. ರಾಮಾಯಣ ಮಹಾಭಾರತಗಳೆರಡೂ ಪುರಾತನ ಆರ್ಯರ ಜೀವನ ಮತ್ತು ಧರ್ಮವನ್ನು ವಿವರಿಸುವ ವಿಶ್ವ ಕೋಶಗಳಾಗಿವೆ. ಮಾನವಕೋಟಿ ಇನ್ನೂ ಸಾಧಿಸಬೇಕಾಗಿರುವ ಆದರ್ಶವನ್ನು ಇವು ಚಿತ್ರಿಸುತ್ತವೆ.

# ಗೀತಾ ವಿಚಾರ

ಕ್ರಿ. ಶ. ೧೮೯೭ ರಲ್ಲಿ ಸ್ವಾಮಿ ವಿವೇಕಾನಂದರು ಕಲ್ಕತ್ತೆಯಲ್ಲಿದ್ದಾಗ ಬಹು ಕಾಲವನ್ನೆಲ್ಲ ಆಗ ಶ್ರೀರಾಮಕೃಷ್ಣ ಸಂಘದ ಕೇಂದ್ರವಾದ ಆಲಂಬಜಾರಿನ ಮಠದಲ್ಲಿ ಕಳೆಯುತ್ತಿದ್ದರು. ಇದೇ ಕಾಲದಲ್ಲಿ ಕೆಲವು ಕಾಲದಿಂದ ಸಾಧುಜೀವನಕ್ಕೆ ಸಿದ್ಧರಾಗುತ್ತಿದ್ದ ಕೆಲವು ಯುವಕರು ಅವರ ಸುತ್ತ ನೆರೆದರು, ಸ್ವಾಮಿಜಿಯವರಿಂದ ಬ್ರಹ್ಮಚರ್ಯ ಮತ್ತು ಸನ್ಯಾಸದೀಕ್ಷೆ ತೆಗೆದುಕೊಂಡರು. ಸ್ವಾಮಿಜಿಯವರು ಅವರನ್ನು ಭವಿಷ್ಯ ಕಾರ್ಯಕ್ಕೆ ತರಬೇತು ಮಾಡತೊಡಗಿದರು. ಗೀತೆ ಮತ್ತು ವೇದಾಂತದ ಮೇಲೆ ಪ್ರವಚನವನ್ನು ಅವರಿಗೆ ಮಾಡುತ್ತಿದ್ದರು. ಹೀಗೆ ಪ್ರವಚನ ಮಾಡುವಾಗ ಒಂದು ವೇಳೆ ಬಂಗಾಳಿಯಲ್ಲಿ ಗೀತೆಯ ಮೇಲೆ ಅತ್ಯಮೋಘವಾದ ಭಾಷಣ ಮಾಡಿದರು. ಅದರ ಸಾರಾಂಶ ಇದು :

ಗೀತೆ ಎಂಬ ಗ್ರಂಥ ಮಹಾಭಾರತದ ಒಂದು ಭಾಗ. ಗೀತೆಯನ್ನು ಚೆನ್ನಾಗಿ ಅರಿಯಬೇಕಾದರೆ ಹಲವು ವಿಷಯಗಳನ್ನು ತಿಳಿದುಕೊಳ್ಳುವುದು ಆವಶ್ಯಕ. ಮೊದಲನೆಯದು ಅದು ಮಹಾಭಾರತದ ಒಂದು ಭಾಗವಾಗಿತ್ತೆಂಬುದು. ಅಂದರೆ ಅದನ್ನು ವೇದವ್ಯಾಸರು ಬರೆದರೆ ಅಥವಾ ಅದು ಒಂದು ಪ್ರಕ್ಷಿಪ್ತಭಾಗವೆ ? ಎರಡನೆಯದಾಗಿ ಶ್ರೀಕೃಷ್ಣ ಎಂಬ ಚಾರಿತ್ರಿಕ ವ್ಯಕ್ತಿ ಇದ್ದನೆ? ಮೂರನೆಯದಾಗಿ ಗೀತೆಯಲ್ಲಿ ಉಕ್ತವಾಗಿರುವ ಮಹಾಭಾರತ ಯುದ್ಧ ನಿಜವಾಗಿ ಜರುಗಿತೆ? ನಾಲ್ಕನೆಯದೆ ಅರ್ಜುನ ಮುಂತಾದವರು ಚಾರಿತ್ರಿಕ ವ್ಯಕ್ತಿಗಳೆ?

ಮೊದಲನೆಯದಾಗಿ ಇಂತಹ ವಿಮರ್ಶೆಗೆ ಆಸ್ಪದವಿದೆಯೆ ಎಂಬುದನ್ನು ನೋಡೋಣ. ವೇದವ್ಯಾಸರೆಂದು ಕರೆಯಿಸಿಕೊಂಡ ಹಲವರಿದ್ದರು ಎಂಬುದು ನಮಗೆ ಗೊತ್ತಿದೆ. ಅದರಲ್ಲಿ ನಿಜವಾಗಿ ಗೀತೆಯನ್ನು ಬರೆದವರು ಯಾರು? ಬಾದರಾಯಣ ವ್ಯಾಸನೆ? ದ್ವೈಪಾಯನ ವ್ಯಾಸನೆ? ವ್ಯಾಸ ಎನ್ನುವುದು ಕೇವಲ ಒಂದು ಬಿರುದು. ಯಾರು ಹೊಸದಾಗಿ ಒಂದು ಪುರಾಣವನ್ನು ಬರೆದರೋ ಅವರನ್ನೆಲ್ಲ ವ್ಯಾಸ ಎಂದು ಕರೆಯುತ್ತಿದ್ದರು. ವಿಕ್ರಮಾದಿತ್ಯ ಎಂಬ ರೂಢಿಯಲ್ಲಿರುವ ಸಾಮಾನ್ಯ ಪದದಂತೆ. ಮತ್ತೊಂದು ವಿಷಯವೆ ಶಂಕರಾಚಾರ್ಯರು ಭಾಷ್ಯ ಬರೆದು ಪ್ರಸಿದ್ಧಿಮಾಡುವುದಕ್ಕೆ ಮುಂಚೆ ಸಾಧಾರಣ ಜನರಿಗೆ ಹೆಚ್ಚು ಗೊತ್ತಿರಲಿಲ್ಲ. ಇದಕ್ಕಿಂತಲೂ ಬಹಳ ಮುಂಚೆ ಗೀತೆಯ ಮೇಲೆ ಬೋಧಾಯನ ವೃತ್ತಿ ಎಂಬುದೊಂದು ಇತ್ತು. ಇದನ್ನು ನಾವು ಸಪ್ರಮಾಣವಾಗಿ ಧೃಡಪಡಿಸಿದರೆ ಗೀತೆಯ ಪುರಾತನತ್ವ ಮತ್ತು ವೇದವ್ಯಾಸರೆ ಅದರ ಕರ್ತೃಗಳು ಎಂಬುದನ್ನು ತೋರಲು ಬಹಳ ಅವಕಾಶವಾಗುವುದೆಂಬುದರಲ್ಲಿ ಸಂದೇಹವೇನೂ ಇಲ್ಲ. ಆದರೆ ಬೋಧಾಯನರು ವೇದಾಂತಸೂತ್ರದ ಮೇಲೆ ಬರೆದ ಭಾಷ್ಯ (ಇದರಿಂದಲೇ ರಾಮಾನುಜರು ಶ್ರೀಭಾಷ್ಯವನ್ನು ಕ್ರೋಢೀಕರಿಸಿದರು. ಶಂಕರಾಚಾರ್ಯರು ಈ ಹೆಸರನ್ನು ಹೇಳುವರು ಮತ್ತು ಕೆಲವುವೇಳೆ ಅದರಿಂದ ತಮ್ಮ ಭಾಷ್ಯದಲ್ಲಿ ಉದಹರಿಸುವರು. ಸ್ವಾಮಿ ದಯಾನಂದರು ಇದನ್ನೇ ಬಹಳ ಚರ್ಚಿಸುವರು) ಭರತಖಂಡವನ್ನೆಲ್ಲಾ ನಾನು ಸಂಚಾರಮಾಡುವಾಗ ನನಗೆ ಎಲ್ಲೂ ಸಿಕ್ಕಲಿಲ್ಲ. ರಾಮಾನುಜರು ಕೂಡ ತಮಗೆ ಸಿಕ್ಕಿದ ಯಾವುದೋ ಬಹಳ ಪುರಾತನವಾದ ಹುಳು ತಿಂದುಹೋದ ಓಲೆಗರಿಯಿಂದ ಅವನ್ನು ಕ್ರೋಢೀಕರಿಸಿದರಂತೆ. ವೇದಾಂತಸೂತ್ರದ ಮೇಲೆ ಪ್ರಖ್ಯಾತವಾದ ಬೋಧಾಯನಭಾಷ್ಯವೆ ಅನುಮಾನಾಸ್ಪದವಾದ ಕಾರ್ಗತ್ತಲಲ್ಲಿ ಹುದುಗಿದ್ದರೆ ಗೀತೆಯ ಮೇಲೆ ಬೋಧಾಯನ ಭಾಷ್ಯವಿತ್ತು ಎಂಬುದನ್ನು ದೃಢಪಡಿಸಲು ಸಾಧ್ಯವೇ ಇಲ್ಲ. ಕೆಲವರು ಶಂಕರಾಚಾರ್ಯರೇ ಗೀತೆಯ ಕರ್ತೃಗಳೆಂದು ಅವರೇ ಅದನ್ನು ಮಹಾಭಾರತದಲ್ಲಿ ಸೇರಿಸಿದರೆಂದೂ ಹೇಳುವರು.

ಚರ್ಚೆಯ ಎರಡನೆಯ ವಿಷಯವಾದ ಕೃಷ್ಣನ ವ್ಯಕ್ತಿತ್ವದ ವಿಷಯದಲ್ಲಿ ಎಷ್ಟೋ ಸಂದೇಹವಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಒಂದುಕಡೆ ದೇವಕೀಪುತ್ರನಾದ ಕೃಷ್ಣ ಗೋರಾ ಎಂಬ ಯೋಗಿಯಿಂದ ಉಪದೇಶ ಪಡೆದನೆಂದು ಹೇಳಿದೆ. ಮಹಾಭಾರತದಲ್ಲಿ ಕೃಷ್ಣ ದ್ವಾರಕಿಯ ರಾಜ. ವಿಷ್ಣುಪುರಾಣದಲ್ಲಿ ಅವನ ಗೋಪಲೀಲೆಯ ವಿವರಣೆಯನ್ನು ನೋಡುತ್ತೇವೆ. ಪುನಃ ಭಾಗವತದಲ್ಲಿ ಅವನ ರಾಸ ಲೀಲೆಯ ವರ್ಣನೆಯನ್ನು ವಿವರವಾಗಿ ಕೊಡುವರು. ಬಹಳ ಹಿಂದೆ ನಮ್ಮ ದೇಶದಲ್ಲಿ ಮದನೋತ್ಸವ ಎಂಬುದು ರೂಢಿಯಲ್ಲಿತ್ತು. ಅದನ್ನೇ ಡೋಲಜಾತ್ರೆಯನ್ನಾಗಿ ಮಾಡಿ ಕೃಷ್ಣನ ಮೇಲೆ ಆರೋಪ ಮಾಡಿದರು. ಅವನಿಗೆ ಸಂಬಂಧಿಸಿದ ರಾಸಲೀಲೆ ಮುಂತಾದುವುಗಳನ್ನು ಹೀಗೆಯೇ ಆರೋಪ ಮಾಡಿಲ್ಲ ಎಂದು ಹೇಳುವುದಕ್ಕೆ ಯಾರಿಗೆ ಧೈರ್ಯವಿದೆ? ಪರಿಶೋಧನಾತ್ಮಕ ದೃಷ್ಟಿಯಿಂದ ಚಾರಿತ್ರಿಕ ಸತ್ಯಗಳನ್ನು ತಿಳಿದುಕೊಳ್ಳಬೇಕೆಂಬ ಸ್ವಭಾವವೇ ಹಿಂದಿನ ಕಾಲದಲ್ಲಿ ನಮ್ಮಲ್ಲಿ ಇರಲಿಲ್ಲ. ಪ್ರತಿಯೊಬ್ಬರೂ ತಮಗೆ ತೋಚಿದುದನ್ನೇ ಸಾಕಷ್ಟು ಪ್ರಮಾಣಗಳಿಲ್ಲದೆ ಇದೇ ಸರಿ ಎಂದು ವಾದಿಸುತ್ತಿದ್ದರು. ಮತ್ತೊಂದು ವಿಷಯ ಆಗಿನ ಕಾಲದಲ್ಲಿ ಕೀರ್ತಿ ಮತ್ತು ಹೆಸರಿನ ಆಸೆ ಅವರಲ್ಲಿ ಇರಲಿಲ್ಲ. ಒಬ್ಬ ಒಂದು ಗ್ರಂಥವನ್ನು ಬರೆದು ಅದನ್ನು ತನ್ನ ಗುರುವಿನ ಹೆಸರಿನಲ್ಲೋ ಅಥವಾ ಇನ್ನೊಬ್ಬನ ಹೆಸರಿನಲ್ಲೋ ಬಳಕೆಗೆ ತರುತ್ತಿದ್ದ. ಅನೇಕವೇಳೆ ಹೀಗೆ ಆಗುತ್ತಿತ್ತು. ಇಂತಹ ಸ್ಥಿತಿಯಲ್ಲಿ ಚಾರಿತ್ರಿಕ ಸತ್ಯಗಳನ್ನು ಕಂಡುಹಿಡಿಯಬೇಕೆನ್ನುವವನಿಗೆ ಅವಕಾಶವೇ ಇರುವುದಿಲ್ಲ. ಆಗಿನ ಕಾಲದಲ್ಲಿ ಭೂಗೋಳಜ್ಞಾನವೇ ಇರಲಿಲ್ಲ. ಕಲ್ಪನೆ ಲಂಗು ಲಗಾಮಿಲ್ಲದೆ ಓಡುತ್ತಿತ್ತು. ಆದಕಾರಣವೇ ಎಷ್ಟೋ ಮನೋಕಲ್ಪಿತ ದಧಿಸಾಗರ, ಮಧುಸಾಗರ, ಮಜ್ಜಿಗೆಸಾಗರ ಮುಂತಾದುವು ಇವೆ. ಪುರಾಣದಲ್ಲಿ ಒಬ್ಬ ಹತ್ತುಸಾವಿರ ವರುಷ ಬದುಕುವನು, ಮತ್ತೊಬ್ಬ ಒಂದು ಲಕ್ಷ ವರುಷ ಬದುಕುವನು. ಆದರೆ ವೇದ "ಶತಾಯುರ್ವೈ ಪುರುಷಃ" ಎಂದು ಹೇಳುವುದು. ಆದಕಾರಣ ಕೃಷ್ಣನ ವಿಷಯದಲ್ಲಿ ಒಂದು ಸರಿಯಾದ ನಿರ್ಧಾರಕ್ಕೆ ಬರುವುದೇ ದುಸ್ಸಾಧ್ಯ.

ಒಬ್ಬ ಮಹಾಪುರುಷನ ಜೀವನದ ಸುತ್ತಲೂ ಎಷ್ಟೋ ಅಲೌಕಿಕ ವಿಶೇಷಣಗಳನ್ನು ಆರೋಪಮಾಡುವುದು ಮಾನವನ ಸ್ವಭಾವ. ಕೃಷ್ಣನ ವಿಷಯದಲ್ಲಿಯೂ ಹೀಗೆಯೇ ಆಗಿರಬಹುದು. ಅವನು ಬಹುಶಃ ರಾಜನಾಗಿದ್ದಿರಬಹುದು. ನಾನು ಬಹುಶಃ ಎಂದು ಹೇಳುತ್ತೇನೆ. ಏಕೆಂದರೆ ನಮ್ಮ ದೇಶದಲ್ಲಿ ಹಿಂದಿನ ಕಾಲದಲ್ಲಿ ಬ್ರಹ್ಮಜ್ಞಾನವನ್ನು ಬೋಧಿಸಲು ತೊಂದರೆ ತೆಗೆದುಕೊಳ್ಳುತ್ತಿದ್ದವರು ರಾಜರಾಗಿದ್ದರು. ನಾವು ವಿಶೇಷವಾಗಿ ಗಮನಿಸಬೇಕಾದ ಮತ್ತೊಂದು ವಿಷಯವೆ ಗೀತೆಯ ಕರ್ತೃಗಳು ಯಾರಾದರೂ ಆಗಿರಲಿ ಗೀತೆಯ ಬೋಧನೆ ಮಹಾಭಾರತದ ಬೋಧನೆಯಂತೆಯೇ ಇದೆ. ಇದರಿಂದ ಮಹಾಭಾರತದ ಕಾಲದಲ್ಲಿ ಒಬ್ಬ ಮಹಾಪುರುಷನೇ ಹೊಸ ರೀತಿಯಲ್ಲಿ ಆಗಿನ ಸಮಾಜಕ್ಕೆ ಬ್ರಹ್ಮಜ್ಞಾನವನ್ನು ಬೋಧಿಸಿದನು ಎಂದು ಧೈರ್ಯವಾಗಿ ಹೇಳಬಹುದು. ಮತ್ತೊಂದು ಸಂಗತಿ ಇಲ್ಲಿ ವ್ಯಕ್ತವಾಗುವುದು. ಅದೇ ಒಂದು ಪಂಗಡವಾದ ಮೇಲೆ ಮತ್ತೊಂದು ಪಂಗಡ ಬಂದಾಗ ಯಾವುದಾದರೂ ಹೊಸದೊಂದು ಶಾಸ್ತ್ರ ಬಳಕೆಗೆ ಬರುತ್ತಿತ್ತು. ಮತ್ತೊಂದು ಕೂಡಾ ಆಗುತ್ತಿತ್ತು. ಅದೇ ಕಾಲಕ್ರಮೇಣ ಹೊಸ ಪಂಗಡ ಮತ್ತು ಜಾರಿಗೆ ಬಂದ ಹೊಸ ಶಾಸ್ತ್ರಕೂಡ ಹೆಸರಿಲ್ಲದೆ ಹೋಗುತ್ತಿತ್ತು. ಹೀಗೆಯೇ ಗೀತೆಯು ಕೂಡ ಅಂತಹ ಒಂದು ಹೊಸ ಪಂಗಡದ ಶಾಸ್ತ್ರವಾಗಿದ್ದಿರಬಹುದು. ಅದರಲ್ಲಿ ಬಹಳ ಶ್ರೇಷ್ಠವಾದ ಭವ್ಯವಿಷಯಗಳಿದ್ದವು.

ಮೂರನೆಯ ವಿಷಯವಾದ ಕುರುಕ್ಷೇತ್ರ ಯುದ್ಧದ ವಿಷಯವಾಗಿ ಅದನ್ನು ಸಾಧಿಸುವ ವಿಶೇಷ ಪ್ರಮಾಣಗಳಾವುವೂ ಇಲ್ಲ. ಕುರು ಮತ್ತು ಪಾಂಚಾಲರಿಗೆ ಯುದ್ಧ ನಡೆಯಿತು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಮತ್ತೊಂದು ವಿಷಯವೆ, ಕಾದಲನುವಾಗಿ ಕೊನೆಯ ಸಂಜ್ಞೆಗೆ ಕಾದು ನಿಂತಿದ್ದ ಆ ಸೇನಾಸಮೂಹದಿಂದ ತುಂಬಿದ ಸಮರಾಂಗಣದಲ್ಲಿ ಜ್ಞಾನ, ಭಕ್ತಿ ಮತ್ತು ಮಾನವ ವಿಷಯದಲ್ಲಿ ಇಷ್ಟೊಂದು ದೀರ್ಘ ಚರ್ಚೆಗೆ ಅವಕಾಶವಿದೆಯೆ? ಆ ರಣಕೋಲಾಹಲದ ಮಧ್ಯದಲ್ಲಿ ಕೃಷ್ಣಾರ್ಜುನರಿಗೆ ನಡೆದ ಸಂಭಾಷಣೆಯನ್ನು ತೆಗೆದುಕೊಳ್ಳುವುದಕ್ಕೆ ಯಾರಾದರೂ ಒಬ್ಬ

ಶೀಘ್ರಲಿಪಿಕಾರನಿದ್ದನೇನು? ಕೆಲವರ ದೃಷ್ಟಿಯಲ್ಲಿ ಕುರುಕ್ಷೇತ್ರವೆಂಬುದು ಕೇವಲ ಅರ್ಥಾಂತರೋಕ್ತಿ. ಅದರ ಅಂತರಾರ್ಥವನ್ನು ಬಿಡಿಸಿ ಹೇಳಿದರೆ, ಅನವರತ ಮನುಷ್ಯನಲ್ಲಿ ಅವನ ದುಷ್ಟ ಸ್ವಭಾವಕ್ಕೂ ಸತ್‌ಸ್ವಭಾವಕ್ಕೂ ನಡೆಯುತ್ತಿರುವ ಘರ್ಷಣೆಯೇ ಯುದ್ಧ. ಇದೂ ಕೂಡ ವಿಚಾರಸರಣಿಗೆ ವಿರೋಧವಲ್ಲ.

ನಾಲ್ಕನೆಯ ವಿಷಯವಾದ ಅರ್ಜುನ ಮುಂತಾದವರು ಚಾರಿತ್ರಿಕ ವ್ಯಕ್ತಿಗಳು ಎನ್ನುವ ವಿಷಯದಲ್ಲಿ ಎಷ್ಟೋ ಸಂದೇಹವಿದೆ. ಅದೇ ಇದು. ಶತಪಥಬ್ರಾಹ್ಮಣ ಬಹಳ ಪುರಾತನ ಗ್ರಂಥ. ಅಲ್ಲಿ ಅಶ್ವಮೇಧ ಯಜ್ಞವನ್ನು ಮಾಡಿದವರ ಹೆಸರೆಲ್ಲ ಇದೆ. ಆದರೆ ಅಲ್ಲಿ ಅರ್ಜುನನ ಮತ್ತು ಅವನ ಸಹೋದರರ ಹೆಸರಾಗಲೀ, ಅಂತಹವರಿದ್ದರು ಎಂಬ ಸೂಚನೆಯಾಗಲೀ ಇಲ್ಲ. ಅಲ್ಲಿ ಅರ್ಜುನನ ಮೊಮ್ಮಗನಾದ, ಪರೀಕ್ಷಿತನ ಮಗನಾದ ಜನಮೇಜಯನ ಹೆಸರಿದೆ. ಆದರೂ ಮಹಾಭಾರತದಲ್ಲಿ ಯುಧಿಷ್ಠಿರ, ಅರ್ಜುನ ಮುಂತಾದವರು ಅಶ್ವಮೇಧಯಾಗವನ್ನು ಮಾಡಿದರು ಎಂದು ಬರೆದಿದೆ.

ನಾವು ಮತ್ತೊಂದು ವಿಷಯವನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು. ಅದೇ ಚಾರಿತ್ರಿಕ ಸಂಶೋಧನೆಗೂ ನಿಜವಾದ ನಮ್ಮ ಉದ್ದೇಶಕ್ಕೂ ಯಾವ ಸಂಬಂಧವೂ ಇಲ್ಲ ಎಂಬುದು ನಮ್ಮ ಗುರಿ. ಯಾವ ಜ್ಞಾನವನ್ನು ಅರಿತರೆ ನಾವು ಧರ್ಮಾತ್ಮರಾಗುತ್ತೇವೆಯೋ ಅದು ಚಾರಿತ್ರಿಕ ದೃಷ್ಟಿಯಿಂದ ಇವೆಲ್ಲ ಶುದ್ಧ ಸುಳ್ಳು ಎಂದು ನಿರ್ವಿವಾದವಾಗಿ ಸಾಧಿಸಿದರೂ ಅದರಿಂದ ನಮಗೆ ಲವಲೇಶವೂ ನಷ್ಟವಿಲ್ಲ. ಹಾಗಾದರೆ ಇಷ್ಟೊಂದು ಚಾರಿತ್ರಿಕ ಪರಿಶೋಧನೆ ಏಕೆ ಎನ್ನಬಹುದು. ಇದರಿಂದಲೂ ಪ್ರಯೋಜನವಿದೆ. ನಾವು ಸತ್ಯವನ್ನು ಅರಿಯಬೇಕಾಗಿದೆ. ಅಜ್ಞಾನದಿಂದ ತಪ್ಪು ಭಾವನೆಗಳನ್ನು ನೆಚ್ಚಿಕೊಂಡಿರುವುದು ಯೋಗ್ಯವಲ್ಲ. ಈ ದೇಶದಲ್ಲಿ ಇಂತಹ ವಿಮರ್ಶೆಗೆ ಪ್ರಾಧಾನ್ಯವನ್ನೇ ಕೊಡುವುದಿಲ್ಲ. ಕೆಲವು ಪಂಗಡದವರು ಹಲವರಿಗೆ ಉಪಯೋಗಕರವಾದ ಒಳ್ಳೆಯ ವಿಷಯವನ್ನು ಹೇಳಬೇಕಾದರೆ ಒಂದು ಸುಳ್ಳನ್ನು ಹೇಳಿದರೂ ಚಿಂತೆಯಿಲ್ಲವೆಂದು ಭಾವಿಸುವರು. ಅಂದರೆ ಗುರಿ ಮುಖ್ಯವೇ ಹೊರತು ದಾರಿಯಲ್ಲ. ಆದಕಾರಣ ನಮ್ಮ ಹಲವು

ತಂತ್ರಶಾಸ್ತ್ರ ಮಹದೇವ ಪಾರ್ವತಿಗೆ ಹೇಳಿದ ಎಂದು ಪ್ರಾರಂಭ ವಾಗುವುದು. ಆದರೆ ನಾವು ನಂಬುವುದು ಸತ್ಯವೇ ಎಂಬುದನ್ನು ವಿಮರ್ಶಿಸುವುದು ನಮ್ಮ ಕರ್ತವ್ಯ. ಸತ್ಯದಲ್ಲಿ ಮಾತ್ರಾ ನಂಬುವುದು ನಮ್ಮ ಕರ್ತವ್ಯ. ಮೂಢನಂಬಿಕೆ ಅಥವಾ ಹಿಂದಿನಿಂದ ಬಂದ ಕಂದಾಚಾರಗಳನ್ನು ವಿವೇಚನೆ ಇಲ್ಲದೆ ನಂಬುವುದು ಎಷ್ಟು ಬಲವಾಗಿದೆ ಎಂದರೆ ಮುಂದೆ ಹೋಗದಂತೆಯೇ ಇಲ್ಲಿ ನಾವು ನಮ್ಮ ಕೈಕಾಲುಗಳನ್ನು ಕಟ್ಟಿದಂತೆ ಇದೆ. ಏಸುಕ್ರಿಸ್ತ ಮಹಮುದ್ ಮುಂತಾದ ಮಹಾಪುರುಷರೆ ಇಂತಹ ಹಲವು ಮೂಢನಂಬಿಕೆಗಳನ್ನು ನಂಬಿದ್ದರು. ಅದರಿಂದ ಪಾರಾಗಿರಲಿಲ್ಲ. ನಿಮ್ಮ ದೃಷ್ಟಿ ಯಾವಾಗಲೂ ಸತ್ಯದ ಕಡೆಗೆ ಇರಬೇಕು. ಎಲ್ಲ ಬಗೆಯ ಮೂಢನಂಬಿಕೆಯನ್ನು ನಿರ್ಲಕ್ಷಿಸಬೇಕು.

ಗೀತೆಯಲ್ಲಿ ಏನಿದೆ ಎಂಬುದನ್ನು ನಾವೀಗ ನೋಡಬೇಕಾಗಿದೆ. ನಾವು ಉಪನಿಷತ್ತನ್ನು ಓದುವಾಗ, ಎಷ್ಟೋ ಅನಾವಶ್ಯಕವಾದ ವಿಷಯಗಳ ಮೂಲಕ ಹೋಗುತ್ತಿರುವಾಗ ಇದ್ದಕ್ಕಿದ್ದಂತೆ ಒಂದು ದೊಡ್ಡ ತಾತ್ತ್ವಿಕ ಜಿಜ್ಞಾಸೆ ಪ್ರಾರಂಭವಾಗುವುದು. ಒಂದು ದೊಡ್ಡ ಕಾಡಿನಲ್ಲಿ ಸಂಚಾರ ಮಾಡುತ್ತಿರುವಾಗ ಪ್ರಯಾಣ ಅನಿರೀಕ್ಷಿತವಾಗಿ ಅನನ್ಯಸಾಧಾರಣವಾಗಿ ಸುಂದರವಾಗಿರುವ ಒಂದು ಗುಲಾಬಿ ಹೂವು ಗಿಡದ ಮುಳ್ಳು, ಬಳ್ಳಿ, ಬೇರುಗಳಲ್ಲಿ ಸಿಕ್ಕಿಕೊಂಡಿರುವುದನ್ನು ನೋಡಿದಂತೆ. ಅದರೊಡನೆ ಹೋಲಿಸಿದರೆ ಗೀತೆ ಚೆನ್ನಾಗಿ ಅಣಿಮಾಡಿದ ಅಥವಾ ಅಪೂರ್ವ ಪುಷ್ಪಗಳನ್ನೊಳಗೊಂಡ ತುರಾಯಿಯಂತೆ ಇದೆ. ಉಪನಿಷತ್ತು ಅನೇಕ ಕಡೆ ಶ್ರದ್ಧೆಯ ವಿಷಯವಾಗಿ ಮಾತನಾಡುವುದು, ಆದರೆ ಅಲ್ಲೆಲ್ಲೂ ಭಕ್ತಿಯ ಮಾತೇ ಇಲ್ಲ. ಆದರೆ ಗೀತೆಯಲ್ಲಿ ಭಕ್ತಿಯ ವಿಷಯವನ್ನು ಮತ್ತೆ ಮತ್ತೆ ಹೇಳುವುದು ಮಾತ್ರವಲ್ಲ, ಅಲ್ಲಿ ಭಕ್ತಿಭಾವ ತನ್ನ ಪರಾಕಾಷ್ಠತೆಯನ್ನು ಮುಟ್ಟುವುದು.

ಈಗ ಗೀತೆಯಲ್ಲಿ ಚರ್ಚಿಸುವ ಕೆಲವು ಮುಖ್ಯ ವಿಷಯಗಳನ್ನು ತೆಗೆದುಕೊಳ್ಳೋಣ. ಗೀತೆ ಅದಕ್ಕೆ ಹಿಂದೆ ಇದ್ದ ಶಾಸ್ತ್ರಗಳಿಗಿಂತ ಯಾವ ವಿಧದಲ್ಲಿ ವಿಶೇಷವಾಗಿರುವುದು? ಅದೇ ಇದು. ಗೀತೆಗೆ ಮುಂಚೆ ಜ್ಞಾನ, ಭಕ್ತಿ ಯೋಗಗಳ ಉಗ್ರ ಅನುಯಾಯಿಗಳಿದ್ದರೂ

ಎಲ್ಲರೂ ತಮ್ಮತಮ್ಮೊಳಗೆ ಕಾದಾಡುತ್ತಿದ್ದರು. ಪ್ರತಿಯೊಬ್ಬರೂ ತಮ್ಮದೇ ಶ್ರೇಷ್ಠಮಾರ್ಗ ಎಂದು ಹೇಳುತ್ತಿದ್ದರು. ಯಾರೂ ಭಿನ್ನ ಭಿನ್ನ ಮಾರ್ಗಗಳನ್ನು ಸೌಹಾರ್ದಭಾವದಿಂದ ನೋಡಲು ಯತ್ನಿಸಲಿಲ್ಲ. ಗೀತೆಯ ಕರ್ತೃ ಪ್ರಥಮಬಾರಿ ಇವುಗಳನ್ನು ಒಂದು ಸೌಹಾರ್ದದೃಷ್ಟಿ ಯಿಂದ ನೋಡಲು ಯತ್ನಿಸಿದನು. ಆಗಿನ ಕಾಲದಲ್ಲಿ ಪ್ರತಿಯೊಂದು ಪಂಗಡದವರೂ ಕೊಟ್ಟ ಶ್ರೇಷ್ಠಭಾವನೆಗಳನ್ನೆಲ್ಲಾ ತೆಗೆದುಕೊಂಡು ಅವನ್ನೆಲ್ಲಾ ಗೀತೆಯಲ್ಲಿ ಪೋಣಿಸಿರುವನು. ಎಲ್ಲಿ ಶ್ರೀಕೃಷ್ಣನೂ ಕೂಡಾ ಸಮನ್ವಯವನ್ನು ತರಲು ಸಾಧ್ಯವಾಗಲಿಲ್ಲವೋ ಅಲ್ಲಿ ಶ್ರೀರಾಮಕೃಷ್ಣರು ಹತ್ತೊಂಬತ್ತನೇ ಶತಮಾನದಲ್ಲಿ ಅವನ್ನು ಸಾಧಿಸಿದರು.

ಅನಂತರವೇ ನಿಷ್ಕಾಮಕರ್ಮ. ಈಗ ಜನರು ಅದನ್ನು ಬಹು ವಿಧದಲ್ಲಿ ಅರ್ಥಮಾಡಿಕೊಳ್ಳುವರು. ಅನಾಸಕ್ತಿ ಎಂದರೆ ಯಾವ ವಿಧವಾದ ಗೊತ್ತುಗುರಿ ಇಲ್ಲವೆ ಕೆಲಸ ಮಾಡುವುದು ಎಂದು ಕೆಲವರು ಭಾವಿಸುವರು. ಇದೇ ನಿಜವಾದ ಅರ್ಥ ಎಂದರೆ ನಿರ್ದಯರಾದ ಮೂಢರು ಮತ್ತು ಗೋಡೆಗಳೆ ನಿಷ್ಕಾಮಕಾರ್ಯಕ್ಕೆ ಉದಾಹರಣೆ ಯಾಗುವುವು. ಮತ್ತೆ ಕೆಲವರು ಜನಕನ ಉದಾಹರಣೆ ಕೊಡುವರು, ತಾವೇ ನಿಷ್ಕಾಮಕರ್ಮದಲ್ಲಿ ನಿಪುಣರು ಎಂದು ಜನ ಭಾವಿಸಲಿ ಎಂದು ಕುತೂಹಲರಾಗಿರುವರು. ಆದರೆ ಜನಕ ಸಂತಾನೋತ್ಪತ್ತಿಯಿಂದ ನಿಷ್ಕಾಮಕರ್ಮಕ್ಕೆ ಉದಾಹರಣೆಯಾಗಲಿಲ್ಲ. ಆದರೆ ಇವರೆಲ್ಲ ಒಂದು ಮಕ್ಕಳ ಪಡೆಗೆ ತಂದೆಯಾಗಿರುವುದೊಂದೇ ಇವರ ವಿಶೇಷ. ಇದ ರಿಂದಲೇ ಇವರು ಜನಕರಾಗ ಬಯಸುವರು. ಹಾಗಲ್ಲ, ನಿಜವಾದ ನಿಷ್ಕಾಮಕರ್ಮಿ ಮೂಢನೂ ಅಲ್ಲ, ಜಡನೂ ಅಲ್ಲ, ನಿರ್ದಯನೂ ಅಲ್ಲ. ಅವನು ತಾಮಸಿಕನಲ್ಲ, ಶುದ್ಧ ಸಾತ್ತ್ವಿಕಸ್ವಭಾವದವನು. ಅವನ ಹೃದಯ ಪ್ರೀತಿ ಸಹಾನುಭೂತಿಯಿಂದ ತುಂಬಿ ತುಳುಕಾಡುತ್ತಿರು ವುದು. ಅವನು ಇಡೀ ವಿಶ್ವವನ್ನು ಪ್ರೀತಿಯಿಂದ ಆಲಿಂಗಿಸಬಲ್ಲ. ಜನ ಅವನ ಪ್ರೀತಿಯನ್ನು ವಿಶ್ವಕಾರುಣ್ಯವನ್ನು ಸಾಧಾರಣವಾಗಿ ಅರಿಯು ಲಾರರು. ಭಿನ್ನಭಿನ್ನ ಮಾರ್ಗಗಳ ಸಮನ್ವಯತೆ ಮತ್ತು ನಿಷ್ಕಾಮ ಕರ್ಮ ಇವೇ ಗೀತೆಯ ಎರಡು ಮುಖ್ಯ ವಿಶೇಷ.

ಈಗ ಎರಡನೆ ಅಧ್ಯಾಯದಿಂದ ಸ್ವಲ್ಪ ಓದೋಣ.

|| ಸಂಜಯ ಉವಾಚ ||

**ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಂ**
**ವಿಶೀದಂತಮಿದಂ ವಾಕ್ಯಮುವಾಚ ಮಧುಸೂದನಃ ||೧||**

|| ಶ್ರೀ ಭಗವಾನುವಾಚ ||

**ಕುತಸ್ತ್ವಾ ಕಶ್ಮಲಮಿದಂ ವಿಶಮೇ ಸಮುಪಸ್ಥಿತಮ್**
**ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ||೨||**

**ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ವಯ್ಯುಪಪದ್ಯತೆ**
**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ||೩||**

ಸಂಜಯ ಉವಾಚ:--ಕೃಪೆ ಮತ್ತು ದುಃಖದಿಂದ ಪರವಶನಾಗಿ ದುಃಖಾಶ್ರುಗಳಿಂದ ಕೂಡಿದ ಅರ್ಜುನನಿಗೆ ಮಧುಸೂಧನ ಹೀಗೆ ಹೇಳಿದನು.

ಭಗವಾನುವಾಚ:—ಓ ಅರ್ಜುನ ಇಂತಹ ಸ್ಥಿತಿಯಲ್ಲಿ ನೀನು ಹೇಗೆ ಖಿನ್ನನಾಗಬಲ್ಲೆ. ಇದು ಅನಾರ್ಯರ ರೀತಿ, ಇದರಿಂದ ಸ್ವರ್ಗ ಪ್ರಾಪ್ತಿಯಿಲ್ಲ.

ಕ್ಲೈಬ್ಯಕ್ಕೆ ವಶನಾಗದಿರು. ಕುಂತೀಕುಮಾರನೆ, ನಿನಗೆ ಇದು ಯೋಗ್ಯವಲ್ಲ. ವೈರಿಭಯಂಕರನೆ, ಹೃದಯ ದೌರ್ಬಲ್ಯದಿಂದ ಪಾರಾಗಿ ಮೇಲೇಳು.

"ತಂ ತಥಾ ಕೃಪಯಾವಿಷ್ಟ" ಎಂಬ ಶ್ಲೋಕದಿಂದ ಎಷ್ಟು ಸುಂದರವಾಗಿ ಕಾವ್ಯರೀತಿಯಲ್ಲಿ ಅರ್ಜುನನ ನಿಜಸ್ಥಿತಿ ಚಿತ್ರಿತವಾಗಿರುವುದು. ಅನಂತರ ಕೃಷ್ಣ ಅರ್ಜುನನಿಗೆ ಬೋಧನೆ ಮಾಡಿದನು. ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ಮುಂತಾದ ಪದಗಳಿಂದ ಅರ್ಜುನನನ್ನು ಯುದ್ಧಕ್ಕೆ ಏತಕ್ಕೆ ಪ್ರೇರೇಪಿಸುತ್ತಿರುವನು? ಏಕೆಂದರೆ ಅರ್ಜುನ ಯುದ್ಧ ಮಾಡದೆ ಇರುವುದಕ್ಕೆ ಸತ್ತ್ವಗುಣಾಧಿಕ್ಯನಲ್ಲ. ಅದೆಲ್ಲ ತಾಮಸದಿಂದ ಪ್ರೇರಿತವಾದುದು. ಸತ್ತ್ವಗುಣಿಯ ಸ್ವಭಾವ ಜಯಾಪಜಯಗಳಲ್ಲಿ ಅನುದ್ವಿಗ್ನನಾಗಿರುವುದು. ಆದರೆ ಅರ್ಜುನನಿಗೆ ಅಂಜಿಕೆಯಾ

ಗಿತ್ತು. ಅವನು ಕೃಪೆಯಿಂದ ಪ್ರೇರಿತನಾಗಿದ್ದನು. ಅವನು ಯುದ್ಧ ಮಾಡುವುದಕ್ಕೆ ಬಂದಿದ್ದುದರಿಂದ ಯುದ್ಧ ಮಾಡುವುದು ಅವನ ಸ್ವಭಾವ ವಾಗಿತ್ತು. ಮತ್ತು ಅದರಲ್ಲಿ ಆಸಕ್ತಿ ಇತ್ತು ಎನ್ನುವುದು ಗೊತ್ತಾಗು ವುದು. ನಮ್ಮ ಜೀವನದಲ್ಲಿ ಕೂಡ ಕೆಲವು ವೇಳೆ ಇಂತಹ ಘಟನೆಗಳಾ ಗುವುವು. ಹಲವರು ತಾವು ಸಾತ್ತ್ವಿಕರೆಂದು ಭಾವಿಸುವರು, ಆದರೆ ಅದು ತಾಮಸವಲ್ಲದೆ ಬೇರಲ್ಲ. ಹಲವರು ಅಶುಚಿಯಾಗಿ ಜೀವಿಸಿ ತಾವು ಪರಮಹಂಸರೆಂದು ಭಾವಿಸುವರು. ಏಕೆಂದರೆ ಶಾಸ್ತ್ರ ಪರಮ ಹಂಸರು ಉನ್ಮತ್ತನಂತೆ, ಜಡನಂತೆ, ಪಿಶಾಚಿಯಂತೆ ಇರುವರೆಂದು ಹೇಳುವುದು. ಪರಮಹಂಸರನ್ನು ಶಿಶುಗಳಿಗೆ ಹೋಲಿಸುವರು, ಆದರೆ ಯಾವುದೋ ಒಂದು ಸ್ವಭಾವವನ್ನು ಮಾತ್ರ ಅವರು ಇಲ್ಲಿ ಹೋಲಿಸು ವರೆಂಬುದನ್ನು ತಿಳಿಯಬೇಕು. ಪರಮಹಂಸರಿಗೂ ಮಕ್ಕಳಿಗೂ ವ್ಯತ್ಯಾಸವಿಲ್ಲದೆ ಇಲ್ಲ. ಇಬ್ಬರೂ ಒಂದು ಅತಿರೇಕದ ಕೊನೆಯಾಗಿರು ವುದರಿಂದ ಒಂದರಂತೆಯೇ ಕಾಣುವರು. ಒಬ್ಬ ಜ್ಞಾನವನ್ನು ಮೀರಿ ಹೋಗಿರುವನು. ಮತ್ತೊಬ್ಬನಿಗೆ ಎಳ್ಳಷ್ಟು ಜ್ಞಾನ ಬಂದಿಲ್ಲ. ಅತಿ ತೀವ್ರವಾದ ಮತ್ತು ಅತಿ ಮಂದವಾದ ಬೆಳಕಿನ ಸ್ಪಂದನಗಳೆರಡೂ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆದರೆ ಒಂದರಲ್ಲಿ ಶಾಖದ ಅತಿ ಇದೆ. ಮತ್ತೊಂದರಲ್ಲಿ ಶಾಖವೇ ಇಲ್ಲ. ಅದರಂತೆಯೇ ಪರಸ್ಪರ ವಿರೋಧ ವಾಗಿರುವ ಸತ್ತ್ವ ಮತ್ತು ತಮೋಗುಣಗಳು ಕೆಲವು ವಿಧದಲ್ಲಿ ಅವು ಒಂದೇ ಬಗೆಯಾಗಿ ತೋರಬಹುದು. ಆದರೆ ಅವುಗಳಲ್ಲಿ ಧ್ರುವದಷ್ಟು ಅಂತರವಿದೆ. ತಮೋಗುಣ ಸತ್ತ್ವದ ಸೋಗಿನಲ್ಲಿ ಹೋಗಲಿಚ್ಛಿಸುವುದು. ವೀರಯೋಧ ಅರ್ಜುನನಲ್ಲಿ ಇದು ದಯೆಯ ರೂಪದಲ್ಲಿ ಬಂದಿರುವುದು.

ಅರ್ಜುನನು ವಶನಾದ ಈ ಭ್ರಾಂತಿಯನ್ನು ಹೋಗಲಾಡಿಸಲು ಭಗವಂತನು ಏನು ಹೇಳಿದ ? ಒಬ್ಬ ಮನುಷ್ಯನನ್ನು ಪಾಪಿ ಎಂದು ಎಂದಿಗೂ ತೆಗಳಕೂಡದು. ಅವನಲ್ಲಿರುವ ಅನಂತ ಶಕ್ತಿಯ ಕಡೆ ಅವನ ಮನಸ್ಸನ್ನು ಸೆಳೆಯಬೇಕೆಂದು ನಾನು ಯಾವಾಗಲೂ ಹೇಳುವಂತೆ ಭಗವಂತ ಅರ್ಜುನನಿಗೆ " ನಿನಗೆ ಇದು ತರವಲ್ಲ " ಎನ್ನುವನು. ನೀನು ಎಲ್ಲಾ ಪಾಪಗಳ ಆಚೆ ಇರುವ ಅವಿನಾಶಿಯಾದ ಆತ್ಮ. ನಿನ್ನ ನಿಜ ವಾದ ಸ್ವಭಾವವನ್ನು ಮರೆತು ಪಾಪಿ ಎಂದು ಭಾವಿಸಿ, ದೇಹ ಮನಸ್ಸಿನ

ಉಪಾಧಿಗಳಿಗೆ ವಶನಾಗಿ ನೀನು ಹಾಗೆ ಆಗಿರುವೆ. ಆದಕಾರಣ ನಿನಗೆ ಇದು ಯೋಗ್ಯವಲ್ಲ ಎನ್ನುವನು. "ಎಂದಿಗೂ ಕ್ಲೈಬ್ಯಕ್ಕೆ ವಶನಾಗ ಬೇಡ ಕುಂತೀಸುತ." ಪ್ರಪಂಚದಲ್ಲಿ ವ್ಯಸನವೂ ಇಲ್ಲ, ಪಾಪವೂ ಇಲ್ಲ, ರೋಗವೂ ಇಲ್ಲ, ಶೋಕವೂ ಇಲ್ಲ. ಪ್ರಪಂಚದಲ್ಲಿ ಪಾಪವೆನ್ನುವದೇನಾ ದರೂ ಇದ್ದರೆ ಅದೇ ಅಂಜಿಕೆ. ಸುಪ್ತವಾದ ನಿನ್ನ ಶಕ್ತಿಯನ್ನು ಯಾವುದು ವ್ಯಕ್ತಗೊಳಿಸುವಂತೆ ಮಾಡುವುದೋ ಅದೇ ಪುಣ್ಯ. ಯಾವುದು ನಿನ್ನ ದೇಹ ಮತ್ತು ಮನಸ್ಸನ್ನು ದುರ್ಬಲಗೊಳಿಸುವುದೋ ಅದೇ ನಿಜವಾದ ಪಾಪ. ಈ ದೌರ್ಬಲ್ಯದಿಂದ ಪಾರಾಗು, ಹೇಡಿತನ ದಿಂದ ಪಾರಾಗು. "ನೀನು ವೀರ. ನಿನಗೆ ಇದು ಯೋಗ್ಯವಲ್ಲ."

ನನ್ನ ಮಕ್ಕಳಾದ ನೀವು "ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ವಮುಪಪದ್ಯತೆ" ಎಂಬ ಸಂದೇಶವನ್ನು ಜಗತ್ತಿಗೆ ಸಾರಿದರೆ ಮೂರು ದಿನದಲ್ಲಿ ರೋಗ, ಶೋಕ, ಪಾಪ, ವ್ಯಸನಗಳೆಲ್ಲ ಪ್ರಪಂಚ ದಿಂದ ಕಣ್ಮರೆಯಾಗುವುದು. ಈ ದೌರ್ಬಲ್ಯದ ಚಿಹ್ನೆಯೇ ಇರುವುದಿಲ್ಲ. ಈ ಅಂಜಿಕೆಯ ಭಾವನಾತರಂಗ ಈಗ ಎಲ್ಲೆಲ್ಲಿಯೂ ಇರುವುದು. ಇದನ್ನು ಹಿಂತಿರುಗಿಸಿ, ಇದಕ್ಕೆ ವಿರೋಧವಾದ ಭಾವನೆಯನ್ನು ತನ್ನಿ, ಅನಂತರ ನೋಡಿ, ಪ್ರಪಂಚದಲ್ಲಿ ಪವಾಡದಂತೆ ಆಗುವ ಬದಲಾವಣೆ ಯನ್ನು. ನೀನು ಸರ್ವಶಕ್ತ, ಹೋಗು, ಹೋಗು ಫಿರಂಗಿಯ ಬಾಯಿಗೆ ಬೇಕಾದರೆ, ಅಂಜಬೇಡ. ಎಂತಹ ಅಧಮಾಧಮನನ್ನೂ ದ್ವೇಷಿಸ ಬೇಡ, ಅವನ ಬಾಹ್ಯವನ್ನು ನೋಡಬೇಡ. ಪರಮಾತ್ಮನಿರುವ ಅಂತರಂಗದ ಕಡೆ ನೋಡು. ಇಡೀಪ್ರಪಂಚಕ್ಕೇ ಶೌರ್ಯವಾಣಿಯಲ್ಲಿ ಸಾರಿಹೇಳಿ "ನಿನ್ನಲ್ಲಿ ಪಾಪವಿಲ್ಲ, ನಿನ್ನಲ್ಲಿ ವ್ಯಸನವಿಲ್ಲ, ಅನಂತಶಕ್ತಿಯ ಅನಂತ ನೀನು." ಏಳಿ, ಜಾಗ್ರತರಾಗಿ, ನಿಮ್ಮ ಪವಿತ್ರತೆಯನ್ನು ವ್ಯಕ್ತ ಗೊಳಿಸಿ.

**"ಕ್ಲೈಬ್ಯಂ ಮಾ ಸ್ಮಗಮಃ ಪಾರ್ಥ ನೈತತ್ವಮುಪಪದ್ಯತೇ ।**
**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥**

ಒಬ್ಬ ಮೇಲಿನ ಶ್ಲೋಕವೊಂದನ್ನು ಓದಿದರೆ ಇಡೀ ಗೀತಾ ಪಾರಾಯಣದ ಫಲ ಬರುವುದು. ಈ ಒಂದು ಶ್ಲೋಕದಲ್ಲಿ ಗೀತಾ ಬೋಧನೆಯ ಸಾರವೆಲ್ಲ ಅಂತರ್ಗತವಾಗಿದೆ.

೪

# ಜಡಭರತ

ಹಿಂದೆ ಭರತನೆಂಬ ಚಕ್ರವರ್ತಿ ಇದ್ದ. ಹೊರಗಿನವರು ಯಾವ ದೇಶವನ್ನು ಇಂಡಿಯಾ ಎಂದು ಕರೆಯುವರೋ ಅದು ಆ ದೇಶದವರಿಗೆ ಭರತವರ್ಷ. ಪ್ರತಿಯೊಬ್ಬ ಹಿಂದೂ ಕೂಡ ವಯಸ್ಸಾದ ಮೇಲೆ ಲೌಕಿಕ ವ್ಯವಹಾರವನ್ನೆಲ್ಲಾ ಮಗನಿಗೆ ಕೊಟ್ಟು ಐಶ್ವರ್ಯ ಸುಖಭೋಗಗಳನ್ನೆಲ್ಲಾ ತ್ಯಜಿಸಿ ವಾನಪ್ರಸ್ಥನಾಗಿ ಹೋಗಬೇಕು. ಅಲ್ಲಿ ತನ್ನ ಏಕಮಾತ್ರ ಸತ್ಯವಾದ ಆತ್ಮನನ್ನು ಕುರಿತು ಚಿಂತಿಸುತ್ತಾ ಪ್ರಪಂಚದ ಬಂಧನಗಳನ್ನೆಲ್ಲಾ ಖಂಡಿಸಬೇಕು. ಕ್ಷತ್ರಿಯನಾಗಲೀ, ಬ್ರಾಹ್ಮಣನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ, ಗಂಡಸಾಗಲೀ, ಹೆಂಗಸಾಗಲೀ ಯಾರೂ, ತಮ್ಮ ಕರ್ತವ್ಯದಿಂದ ವಿಮುಖರಾಗಲಾರರು. ಎಲ್ಲರಿಗೂ ಮಗ, ಸಹೋದರ ಪತಿ, ಪಿತ, ಸುತೆ, ಸತಿ, ತಾಯಿ ಮುಂತಾದ ಕರ್ತವ್ಯಗಳೆಲ್ಲಾ, ಆತ್ಮನನ್ನು ಬಂಧಿಸಿರುವ ಬಂಧನಗಳನ್ನೆಲ್ಲಾ ಎಂದೆಂದಿಗೂ ಖಂಡಿಸುವ ಸ್ಥಿತಿಗೆ ನಮ್ಮನ್ನು ಒಯ್ಯುವುದಕ್ಕೆ ಸಹಕಾರಿ.

ಭರತಮಹಾರಾಜ ವೃದ್ಧಾಪ್ಯದಲ್ಲಿ ತನ್ನ ರಾಜ್ಯವನ್ನು ಮಗನಿಗೊಪ್ಪಿಸಿ ಕಾಡಿಗೆ ಹೋದನು. ಸಹಸ್ರಾರು ಜನರನ್ನು ಆಳುತ್ತಿದ್ದವನು, ಚಿನ್ನ ಬೆಳ್ಳಿಯಿಂದ ಕೆತ್ತನೆಮಾಡಿದ ಅಮೃತಶಿಲಾಸೌಧಗಳಲ್ಲಿ ವಿಹರಿಸುತ್ತಿದ್ದವನು, ವಜ್ರ ವೈಢೂರ್ಯ ಕೆತ್ತನೆಯ ಬಟ್ಟಲಲ್ಲಿ ಕುಡಿಯುತ್ತಿದ್ದ ರಾಜ. ತನ್ನ ಕೈಗಳಿಂದಲೇ ಹುಲ್ಲಿನಿಂದ ನದೀತೀರದಲ್ಲಿ, ಹಿಮಾಲಯದಲ್ಲಿ, ಒಂದು ಪರ್ಣಶಾಲೆಯನ್ನು ಕಟ್ಟಿದನು. ಅಲ್ಲಿ

ತಾನೇ ಆಯ್ದು ತಂದ ಕಂದಮೂಲಗಳ ಮೇಲೆ ಜೀವಿಸುತ್ತ ಅಂತರ್ಯಾಮಿಯಾದ ಪರಮಾತ್ಮನನ್ನು ಕುರಿತು ಚಿಂತಿಸುತ್ತಿದ್ದನು. ಹೀಗೆ ದಿನ, ಮಾಸ, ವರುಷಗಳು ಕಳೆದುವು. ಒಂದು ದಿನ ಜಿಂಕೆಯೊಂದು ರಾಜಋಷಿ ತಪಸ್ಸುಮಾಡುತ್ತಿದ್ದ ಸ್ಥಳಕ್ಕೆ ನೀರು ಕುಡಿಯಲು ಬಂದಿತು. ಅದೇ ಸಮಯದಲ್ಲಿ ಒಂದು ಸಿಂಹ ಅನತಿದೂರದಲ್ಲಿ ಘರ್ಜಿಸಿತು. ಜಿಂಕೆಗೆ ಬಹಳ ಭಯವಾಗಿ ನೀರನ್ನು ಕುಡಿಯದೆ ನದಿಯನ್ನು ದಾಟಲು ನೆಗೆಯಿತು. ಜಿಂಕೆ ಗರ್ಭಿಣಿಯಾಗಿತ್ತು. ಅಂಜಿಕೆ ಕಷ್ಟದಿಂದ ಹಾರುವಾಗ ಮರಿಹಾಕಿ ಸತ್ತುಹೋಯಿತು. ಮರಿ ನೀರಿಗೆ ಬಿದ್ದು ವೇಗವಾಗಿ ಹರಿಯುವ ನದಿಯಲ್ಲಿ ಕೊಚ್ಚಿಕೊಂಡು ಹೋಗುತ್ತಿತ್ತು. ಆಗ ದೊರೆಗೆ ಈ ದೃಶ್ಯ ಕಂಡಿತು. ರಾಜ ಧ್ಯಾನದಿಂದೆದ್ದು ಆ ಮರಿಯನ್ನು ಸಂರಕ್ಷಿಸಿ ಪರ್ಣಶಾಲೆಗೆ ತೆಗೆದುಕೊಂಡುಹೋಗಿ ಬೆಂಕಿ ಹತ್ತಿಸಿ ಅದರ ಮುಂದೆ ಸುಧಾರಿಸಿ, ಮುದ್ದಿಸಿ, ಚೇತರಿಸಿಕೊಳ್ಳುವಂತೆ ಮಾಡಿದನು. ಆ ದಯಾಪೂರಿತನಾದ ರಾಜ ಅದನ್ನು ಸಂರಕ್ಷಿಸ ತೊಡಗಿದನು. ಅದಕ್ಕೆ ಗರಿಕೆಹುಲ್ಲು ಮತ್ತು ಹಣ್ಣನ್ನು ತಿನ್ನಿಸ ತೊಡಗಿದನು. ನಿವೃತ್ತ ಚಕ್ರವರ್ತಿಯ ಪಿತೃಸಹಜ ರೀತಿಯ ಆಶ್ರಯದಲ್ಲಿ ಆ ಮರಿ ಬೆಳೆದು ಚೆನ್ನಾದ ಜಿಂಕೆಯಾಯಿತು. ಅಧಿಕಾರ, ಅಂತಸ್ತು, ಬಂಧುಬಳಗಗಳ ಆಕರ್ಷಣೆಯಿಂದ ಪಾರಾಗಿ ಬಂದವನು ಇಲ್ಲಿ ತಾನು ಸಂರಕ್ಷಿಸಿದ ಜಿಂಕೆಮರಿಯಲ್ಲಿ ಆಸಕ್ತನಾದನು. ಜಿಂಕೆಯ ಮೇಲೆ ಪ್ರೇಮ ಹೆಚ್ಚಿದಂತೆಲ್ಲಾ ಪರಮಾತ್ಮನನ್ನು ಕುರಿತು ಚಿಂತಿಸುವುದು ಕಡಿಮೆಯಾಯಿತು. ಜಿಂಕೆ ಮೇಯುವುದಕ್ಕೆ ಕಾಡಿಗೆ ಹೋಗಿ ಕಾಲಕ್ಕೆ ಸರಿಯಾಗಿ ಬರದೇ ಇದ್ದರೆ ರಾಜಋಷಿ ವ್ಯಾಕುಲನಾಗಿ ಕಾತರಪಡುತ್ತಿದ್ದನು. ಅಯ್ಯೋ ಪಾಪ, ಆ ಮರಿಯನ್ನು ಯಾವುದೋ ಹುಲಿ ಹಿಡಿದಿರಬಹುದು, ಅಥವಾ ಇನ್ನೇನೋ ವಿಪತ್ತು ಸಂಭವಿಸಿರಬಹುದು. ಇಲ್ಲದೇ ಇದ್ದರೆ ಏತಕ್ಕೆ ಇನ್ನೂ ಬರಲಿಲ್ಲವಲ್ಲ ಎಂದು ಚಿಂತಾಕ್ರಾಂತನಾಗುವನು.

ಹೀಗೆ ಕೆಲವು ವರುಷಗಳು ಕಳೆಯಿತು. ಒಂದು ದಿನ ಮೃತ್ಯು ಬಂತು. ಅದರ ಹಿಂದೆ ಇವನು ಹೋಗಬೇಕಾಯಿತು. ಆದರೆ ಅವನ ಮನಸ್ಸು ಪರಮಾತ್ಮನನ್ನು ಕುರಿತು ಚಿಂತಿಸುವ ಬದಲು ಜಿಂಕೆಯನ್ನು

ಕುರಿತು ಚಿಂತಿಸುತ್ತಿತ್ತು. ತನ್ನ ಪ್ರೀತಿಗೆ ಪಾತ್ರವಾದ ಆ ಜಿಂಕೆಯ ದುಃಖದ ಮೊಗವನ್ನು ನೋಡುತ್ತಾ ಅವನು ಪ್ರಾಣಬಿಟ್ಟನು. ಇದರಿಂದ ಅವನು ಮುಂದಿನ ಜನ್ಮದಲ್ಲಿ ಜಿಂಕೆಯುಹಾಗೇ ಹುಟ್ಟಿದನು. ಆದರೆ ಯಾವ ಕರ್ಮವೂ ನಾಶವಾಗಲಾರದು. ಅವನು ರಾಜನಾಗಿದ್ದಾಗ ಋಷಿಯಾದ ಮೇಲೆ ಮಾಡಿದ ಪುಣ್ಯಕರ್ಮಗಳೆಲ್ಲಾ ಫಲಿಸಿತು. ಈಗ ಜಿಂಕೆ ಜಾತಿ ಸ್ಮರನಾಗಿತ್ತು. ಜಿಂಕೆ ದೇಹದಲ್ಲಿದ್ದರೂ, ಮೂಕವಾಗಿದ್ದರೂ, ಅದಕ್ಕೆ ತನ್ನ ಹಿಂದಿನ ಜನ್ಮದ ಜ್ಞಾಪಕವಿತ್ತು. ತನ್ನ ಬಳಗದ ಜಿಂಕೆಯಿಂದ ಯಾವಾಗಲೂ ದೂರಹೋಗಿ ಉಪನಿಷತ್ತನ್ನು ಅಧ್ಯಯನಮಾಡುತ್ತಿದ್ದ, ಯಾಗಯಜ್ಞಗಳಿಗೆ ಹವಿಸ್ಸನ್ನು ಅರ್ಪಿಸುತ್ತಿದ್ದ ಪರ್ಣಶಾಲೆಯ ಸಮಿಾಪದಲ್ಲಿ ಮೇಯುತ್ತಿತ್ತು.

ಜಿಂಕೆಜನ್ಮವನ್ನು ಬಾಳಿ ಆದಮೇಲೆ, ಅದು ಕಾಲವಾಗಿ ಒಬ್ಬ ಶ್ರೀಮಂತ ಬ್ರಾಹ್ಮಣನ ಕಿರಿಯ ಮಗನಾಗಿ ಹುಟ್ಟಿದನು. ಈ ಜನ್ಮದಲ್ಲಿಯೂ ಅವನಿಗೆ ತನ್ನ ಹಿಂದಿನ ಜನ್ಮಗಳೆಲ್ಲ ಜ್ಞಾಪಕವಿತ್ತು. ಮಗುವಾದಾಗಲೇ ಮತ್ತೊಮ್ಮೆ ಪಾಪಪುಣ್ಯಗಳ ಬಲೆಗೆ ಬೀಳುವುದಿಲ್ಲವೆಂದು ಸಂಕಲ್ಪಮಾಡಿಕೊಂಡನು. ಮಗು ಬೆಳೆದಂತೆ ಬಲವಾಗಿ ದೃಢವಾಗುತ್ತಾ ಬಂತು. ಆದರೆ ಒಂದು ಮಾತನ್ನೂ ಆಡುತ್ತಿರಲಿಲ್ಲ. ಪ್ರಪಂಚದಲ್ಲಿ ಮತ್ತೊಮ್ಮೆ ಎಲ್ಲಿ ಬೀಳುವೆನೋ ಎಂದು ಜಡನಂತೆ ಹುಚ್ಚನಂತೆ ಇದ್ದನು. ಅವನು ಯಾವಾಗಲೂ ಅಂತರಾತ್ಮನನ್ನು ಕುರಿತು ಚಿಂತಿಸುತ್ತ ತನ್ನ ಪ್ರಾರಬ್ಧಕರ್ಮವನ್ನು ಸವೆಸುವುದಕ್ಕೆ ಮಾತ್ರ ಇದ್ದನು. ಕಾಲಕ್ರಮೇಣ ತಂದೆ ಕಾಲವಾದಮೇಲೆ ಮಕ್ಕಳು ಆಸ್ತಿಯನ್ನು ತಮ್ಮಲ್ಲೇ ಹಂಚಿಕೊಂಡರು. ಕೊನೆಯವನು ಮೂಗ, ಯಾವುದಕ್ಕೂ ಪ್ರಯೋಜನವಿಲ್ಲವೆಂದು ಅವನ ಪಾಲನ್ನು ಇವರೇ ಕಸಿದುಕೊಂಡರು. ಅವನು ಪ್ರಾಣದಿಂದಿರುವುದಕ್ಕೆ ಸ್ವಲ್ಪ ಆಹಾರವನ್ನು ಮಾತ್ರ ಕೊಡುತ್ತಿದ್ದರು. ಇಷ್ಟೇ ಅವರಿಗೆ ಕೊನೆಯ ತಮ್ಮನ ಮೇಲಿದ್ದ ದಯೆ. ಅಣ್ಣನ ಹೆಂಡತಿಯರು ಕೆಲವು ವೇಳೆ ಬಹಳ ಕ್ರೂರವಾಗಿ ಇವನ ಹತ್ತಿರ ವರ್ತಿಸುತ್ತಿದ್ದರು. ಎಲ್ಲಾ ಕಷ್ಟದ ಕೆಲಸವನ್ನೂ ಅವನಿಗೇ ಕೊಡುತ್ತಿದ್ದರು. ಅವರು ಹೇಳುವುದನ್ನೆಲ್ಲಾ ಇವನಿಗೆ ಮಾಡಲು ಅಸಾಧ್ಯವಾದರೆ ಅವನನ್ನು ಬಹಳ

ನಿರ್ದಯದಿಂದ ಕಾಣುತ್ತಿದ್ದರು. ಆದರೆ ಇವನು ಕೋಪವನ್ನಾಗಲೀ, ಅಂಜಿಕೆಯನ್ನಾಗಲೀ ತೋರಿಸಿಕೊಳ್ಳುತ್ತಿರಲಿಲ್ಲ. ಒಂದು ಮಾತನ್ನು ಕೂಡಾ ಆಡುತ್ತಿರಲಿಲ್ಲ. ಇವನನ್ನು ವಿಪರೀತ ಹಿಂಸಿಸಿದರೆ ಮನೆಯಿಂದ ಹೊರಗೆ ಹೋಗಿ ಕೆಲವು ಗಂಟೆಗಳು ಒಂದು ಮರದ ಕೆಳಗೆ ಕುಳಿತು ಅವರ ಕೋಪವೆಲ್ಲ ಶಮನವಾದಮೇಲೆ ಮನೆಗೆ ಬರುತ್ತಿದ್ದನು.

ಒಂದು ದಿನ ಭರತನ ಅಣ್ಣಂದಿರು ಎಂದಿಗಿಂತ ಹೆಚ್ಚಾಗಿ ನಿರ್ದಯರಾಗಿ ಅವನನ್ನು ಕಾಡಿದಾಗ ಅವನು ಮನೆಯಿಂದ ಹೊರಗೆ ಹೋಗಿ ಒಂದು ಮರದ ನೆರಳ ಕೆಳಗೆ ಕುಳಿತುಕೊಂಡನು. ಆ ಸಮಯದಲ್ಲಿ ಆ ದೇಶದ ರಾಜ ಭೋಯಿಗಳು ಹೊತ್ತುಕೊಂಡು ಹೋಗುತ್ತಿದ್ದ ಪಲ್ಲಕ್ಕಿಯೊಳಗೆ ಹೋಗುತ್ತಿದ್ದನು. ಅವರಲ್ಲಿ ಒಬ್ಬ ಇದ್ದಕ್ಕಿದ್ದಂತೆಯೇ ಖಾಯಿಲೆ ಬಿದ್ದನು. ಅವನ ಬದಲು ಮತ್ತೊಬ್ಬ ನನ್ನು ಅವರ ಕಡೆಯವರು ಹುಡುಕಾಡುತ್ತಿದ್ದರು. ಮರದ ಕೆಳಗೆ ಇರುವ ಜಡಭರತನನ್ನು ಕಂಡರು. ಅವನು ದೃಢಕಾಯನಾದ ಯುವಕ ನಾಗಿದ್ದನು. ಖಾಯಿಲೆಯಾದವನ ಬದಲು ಪಲ್ಲಕ್ಕಿಯನ್ನು ಹೊರು ತ್ತೀಯಾ? ಎಂದು ಕೇಳಿದರು. ಭರತ ಸುಮ್ಮನೆ ಇದ್ದನು. ಅವನು ಬಲಶಾಲಿಯಾಗಿದ್ದುದನ್ನು ನೋಡಿ ರಾಜನ ಕಡೆಯವರು ಅವನಿಗೆ ಪಲ್ಲಕ್ಕಿಯನ್ನು ಹೊರಿಸಿದರು. ಒಂದು ಮಾತನ್ನೂ ಆಡದೆ ಭರತ ನಡೆದುಕೊಂಡು ಹೋದ. ಇದಾದ ಮೇಲೆ ಪಲ್ಲಕ್ಕಿಯನ್ನು ಜನ ಸರಿಯಾಗಿ ಹೊರುತ್ತಿಲ್ಲವೆಂದು ದೊರೆಗೆ ಗೊತ್ತಾಯಿತು. ರಾಜ ಹೊಸಬನಿಗೆ "ಮೂರ್ಖ, ಸ್ವಲ್ಪ ಸುಧಾರಿಸಿಕೊ ನಿನ್ನ ಹೆಗಲು ಸಾಕಾಗಿದ್ದರೆ" ಎಂದ. ಭರತ ಆಗ ಪಲ್ಲಕ್ಕಿಯ ಹಿಡಿಯನ್ನು ಬದಿಗಿರಿಸಿ ಜೀವನದಲ್ಲಿ ಪ್ರಥಮಬಾರಿ ಮಾತನಾಡಿದನು. "ಹೇ ರಾಜ, ನೀನು ಯಾರನ್ನು ಮೂರ್ಖನೆನ್ನುವೆ? ಯಾರಿಗೆ ನೀನು ಪಲ್ಲಕ್ಕಿಯನ್ನು ಇಳಿಸು ಎಂದು ಹೇಳುತ್ತಿರುವೆ? ಯಾರಿಗೆ ಸಾಕಾಗಿದೆ ಎನ್ನುವೆ? ನೀನು ಯಾರನ್ನು 'ನೀನು' ಎಂದು ಸಂಬೋಧಿಸುತ್ತಿರುವೆ? ಹೇ ರಾಜ, ನೀನು ಎಂದರೆ ಈ ಮಾಂಸದ ಮುದ್ದೆಯಾದರೆ ಇದು ನಿನ್ನ ದೇಹದಂತೆಯೇ ಆಗಿದೆ. ಇದು ಜಡ, ಇದಕ್ಕೆ ದೇಹಾಲಸ್ಯ ನೋವು ಎಂಬುದು ಇಲ್ಲ. ಇದು ಮನಸ್ಸಾದರೆ ನಿನ್ನ ಮನಸ್ಸಿನಂತೆಯೇ ಸರ್ವವ್ಯಾಪಿಯಾಗಿದೆ.

ಆದರೆ ನೀನು ಎನ್ನುವುದನ್ನು ಇದಕ್ಕೆ ಮೀರಿರುವುದಕ್ಕೆ ಅನ್ವಯಿಸಿದರೆ ಅದೇ ಆತ್ಮ. ಅದು ನನ್ನಲ್ಲಿದೆ, ಅದೇ ನಿನ್ನಲ್ಲಿದೆ. ಅದೊಂದೇ ವಿಶ್ವದಲ್ಲೆಲ್ಲಾ ಇರುವುದು. ರಾಜ, ಆತ್ಮಕ್ಕೆ ಎಂದಾದರೂ ಸಾಕಾಗುವುದೆಂದು ಭಾವಿಸಿದೆಯೊ ? ಅದಕ್ಕೆ ಎಂದಾದರೂ ಆಲಸ್ಯ ಆಗುವುದೆ ? ಅದಕ್ಕೆ ಏನಾದರೂ ನೋವಾಗುವುದೆ ? ಓ ರಾಜ, ನನಗೆ ಇಚ್ಛೆ ಇರಲಿಲ್ಲ, ಈ ದೇಹ ನೆಲದ ಮೇಲೆ ಹಾರಾಡುವ ಕ್ರಿಮಿಗಳನ್ನು ತುಳಿಯುವುದಕ್ಕೆ. ಅದನ್ನು ತಪ್ಪಿಸುವುದಕ್ಕಾಗಿ ಪ್ರಯತ್ನಿಸುತ್ತಿದ್ದಾಗ ಪಲ್ಲಕ್ಕಿ ಸ್ವಲ್ಪ ಅಡ್ಡಾದಿಡ್ಡಿಯಾಯಿತು. ಆದರೆ ಆತ್ಮನಿಗೆ ಸಾಕಾಗಿರಲಿಲ್ಲ. ಅದು ದುರ್ಬಲವಾಗಿರಲಿಲ್ಲ. ಅದು ಪಲ್ಲಕ್ಕಿಯ ಹಿಡಿಯನ್ನು ಎಂದೂ ಹೊರಲಿಲ್ಲ. ಏಕೆಂದರೆ ಆತ್ಮ ಸರ್ವವ್ಯಾಪಿ, ವಿಭು." ಹೀಗೆ ಜಡಭರತ ಆತ್ಮವಿದ್ಯೆ ಮತ್ತು ಶ್ರೇಷ್ಠ ಜ್ಞಾನದ ಮೇಲೆ ಅದ್ಭುತವಾಗಿ ಬೋಧನೆ ಮಾಡಿದನು. ಪಾಂಡಿತ್ಯ, ಬುದ್ಧಿ, ತತ್ತ್ವಜ್ಞಾನದಲ್ಲಿ ತನಗೆ ಸಮಾನರಿಲ್ಲ ಎಂದು ಮೆರೆಯುತ್ತಿದ್ದ ರಾಜ ಪಲ್ಲಕ್ಕಿಯಿಂದ ಇಳಿದು ಜಡಭರತನಿಗೆ ಹೀಗೆಂದು ನಮಿಸಿದನು. "ಹೇ ಮಹಾನುಭಾವ, ನನ್ನನ್ನು ಕ್ಷಮಿಸಬೇಕು. ಪಲ್ಲಕ್ಕಿಯನ್ನು ಹೊರು ಎಂದಾಗ ತಾವು ಮಹಾಜ್ಞಾನಿಗಳು ಎಂದು ನನಗೆ ಗೊತ್ತಿರಲಿಲ್ಲ" ಎಂದ.. ಭರತ ಅವನನ್ನು ಆಶೀರ್ವದಿಸಿ ಹೊರಟ. ಅವನು ತನ್ನ ಹಿಂದಿನ ಜೀವನದ ಗತಿಯನ್ನು ಮುಂದುವರಿಸಿದ. ಭರತ ದೇಹವನ್ನು ತ್ಯಜಿಸಿದಾಗ ಸಂಸಾರ ಬಂಧನದಿಂದ ಎಂದೆಂದಿಗೂ ಮುಕ್ತನಾದನು.

೫

# ಪ್ರಹಲ್ಲಾದ

ಹಿರಣ್ಯಕಶಿಪು ದೈತ್ಯರ ರಾಜನಾಗಿದ್ದ. ದೇವತೆಗಳ ಮಾತಾ ಪಿತೃಗಳೇ ದೈತ್ಯರಿಗೂ ಇದ್ದರೂ ಯಾವಾಗಲೂ ದೇವಾಸುರರು ಯುದ್ಧ ಮಾಡುತ್ತಿದ್ದರು. ಮಾನವರು ಕೊಡುವ ಆಹುತಿಗಳು ದೈತ್ಯರಿಗೆ ಸಿಕ್ಕುತ್ತಿರಲಿಲ್ಲ. ಪ್ರಪಂಚವನ್ನು ಆಳುವುದಾಗಲೀ ಅದರ ರಕ್ಷಣೆ ಯಾಗಲೀ, ಯಾವುದೂ ಇವರಿಗೆ ಸಂಬಂಧವಿರಲಿಲ್ಲ. ಕೆಲವು ವೇಳೆ ದೈತ್ಯರು ಬಲಶಾಲಿಗಳಾಗಿ ದೇವತೆಗಳನ್ನೆಲ್ಲಾ ಸ್ವರ್ಗದಿಂದ ಓಡಿಸಿ ಅದನ್ನು ಆಕ್ರಮಿಸಿ ಕೆಲವು ಕಾಲ ಆಳುತ್ತಿದ್ದರು. ಆಗ ದೇವತೆಗಳು ಸರ್ವಾಂತರ್ಯಾಮಿಯಾದ ವಿಷ್ಣುವನ್ನು ಪ್ರಾರ್ಥಿಸಿದರು. ಅವನು ದೇವತೆಗಳನ್ನು ಕಷ್ಟದಿಂದ ಪಾರುಮಾಡುತ್ತಿದ್ದನು. ದೈತ್ಯರನ್ನು ಓಡಿಸಿ ಪುನಃ ದೇವತೆಗಳು ಆಳ ತೊಡಗಿದರು. ದೈತ್ಯೇಶನಾದ ಹಿರಣ್ಯ ಕಶಿಪು ತನ್ನ ಸರದಿ ಬಂದಾಗ ತನ್ನ ಬಂಧುಗಳಾದ ದೇವತೆಗಳನ್ನು ಗೆದ್ದು ಸ್ವರ್ಗವನ್ನು ಆಕ್ರಮಿಸಿ ಮನುಷ್ಯ ಮತ್ತು ಪ್ರಾಣಿಗಳಿಂದ ತುಂಬಿದ ಈ ಪೃಥ್ವಿ, ದೇವತೆಗಳಿಂದ ತುಂಬಿದ ಸ್ವರ್ಗ, ಅಸುರರಿಂದ ತುಂಬಿದ ಪಾತಾಳಲೋಕವನ್ನು ಆಳತೊಡಗಿದ. ಹಿರಣ್ಯಕಶಿಪು ತಾನೇ ಮೂರು ಲೋಕಗಳಿಗೂ ಒಡೆಯನೆಂದೂ, ತಾನಿಲ್ಲದೆ ಬೇರೆ ದೇವರೇ ಇಲ್ಲವೆಂದೂ, ಎಲ್ಲಿಯೂ ಸರ್ವಾಂತರ್ಯಾಮಿಯಾದ ವಿಷ್ಣುವನ್ನು ಪೂಜಿಸ ಕೂಡದೆಂದೂ ಇಂದಿನಿಂದ ಪೂಜೆಯೆಲ್ಲಾ ತನಗೇ ಆಗಬೇಕೆಂದೂ ಕಟ್ಟಪ್ಪಣೆಮಾಡಿದನು.

ಹಿರಣ್ಯಕಶಿಪುವಿಗೆ ಪ್ರಹಲ್ಲಾದನೆಂಬ ಮಗನಿದ್ದ. ಪ್ರಹಲ್ಲಾದ ಬಾಲ್ಯಾರಭ್ಯದಿಂದಲೂ ಭಗವಂತನ ಭಕ್ತನಾಗಿದ್ದ. ಅವನು ಸಣ್ಣ ಮಗುವಾಗಿರುವಾಗಲೇ ಭಕ್ತನ ಚಿಹ್ನೆಗಳು ಕಾಣುತ್ತಿದ್ದುವು. ಪ್ರಪಂಚ ದಿಂದ ಓಡಿಸಬೇಕೆಂಬ ಅನಿಷ್ಟ ತನ್ನ ಮನೆಯಲ್ಲಿಯೇ ಎಲ್ಲಿ ಹುಟ್ಟಿ ಕೊಳ್ಳುವುದೋ ಎಂಬ ಅಂಜಿಕೆಯಿಂದ ವಿಧೇಯತೆಯನ್ನು ಬಲಾತ್ಕರಿ ಸುವುದರಲ್ಲಿ ಪ್ರಖ್ಯಾತರಾದ ಚಂಡ ಮತ್ತು ಅಮರಕ ಎಂಬ ಇಬ್ಬರು ಗುರುಗಳ ಅಧೀನಕ್ಕೆ ಒಪ್ಪಿಸಿದನು. ಪ್ರಹಲ್ಲಾದ ವಿಷ್ಣುವಿನ ಹೆಸರನ್ನು ಕೂಡ ಕೇಳದಂತೆ ನೋಡಿಕೊಳ್ಳಬೇಕೆಂದು ಕಟ್ಟಪ್ಪಣೆ ಇತ್ತನು. ಗುರುಗಳು ಹುಡುಗನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಆತನ ಓರಿಗೆಯ ಹುಡುಗರೊಂದಿಗೆ ಓದಲು ಹಾಕಿದರು. ಆದರೆ ಆ ಹುಡುಗ ಪ್ರಹಲ್ಲಾದ ಪುಸ್ತಕದಿಂದ ಓದನ್ನು ಕಲಿಯುವ ಬದಲು ಕಾಲವನ್ನೆಲ್ಲಾ ವಿಷ್ಣುವನ್ನು ಹೇಗೆ ಪೂಜಿಸಬೇಕೆಂದು ಇತರ ಹುಡು ಗರಿಗೆ ಬೋಧಿಸುವುದರಲ್ಲಿ ಕಳೆಯುತ್ತಿದ್ದನು. ಗುರುಗಳಿಗೆ ಇದು ಗೊತ್ತಾದಾಗ ಅವರು ಅಂಜಿದರು. ಪ್ರಚಂಡ ಹಿರಣ್ಯಕಶಿಪುವಿನ ಕೋಪಕ್ಕೆ ಪಾತ್ರರಾಗುವುದರಲ್ಲಿದ್ದರು. ಅವರು ಸಾಧ್ಯವಾದಷ್ಟು ಪ್ರಹಲ್ಲಾದನಿಗೆ ಹಾಗೆ ಮಾಡಬೇಡವೆಂದು ಎಷ್ಟೋ ಹೇಳಿದರು. ಆದರೆ ಪ್ರಹಲ್ಲಾದ ಹೇಗೆ ಉಸಿರಾಡುವುದನ್ನು ಬಿಡಲಾರನೋ ಹಾಗೆಯೇ ಭಗವಂತನನ್ನು ಪೂಜಿಸುವುದಾಗಲೀ, ಅವನನ್ನು ಇತರರಿಗೆ ಬೋಧಿಸುವುದನ್ನಾಗಲೀ ಬಿಡಲಿಲ್ಲ. ತಾವು ತಪ್ಪಿತಸ್ಥರಲ್ಲವೆಂಬುದನ್ನು ತೋರುವುದಕ್ಕಾಗಿ ಪ್ರಹಲ್ಲಾದ ತಾನು ಮಾತ್ರ ವಿಷ್ಣುವನ್ನು ಪೂಜಿಸು ವುದಲ್ಲ. ಇತರರಿಗೂ ಅದನ್ನು ಬೋಧಿಸಿ ಅವರನ್ನೆಲ್ಲಾ ಹಾಳುಮಾಡು ತ್ತಿರುವನು ಎಂಬ ಭಯಂಕರವಾದ ಸತ್ಯವನ್ನು ರಾಜನಿಗೆ ಹೇಳಿದರು.

ರಾಜ ಇದನ್ನು ಕೇಳಿದಾಗ ರೇಗಿಹೋಗಿ ಮಗನನ್ನು ತನ್ನ ಬಳಿಗೆ ಕರೆದನು. ಮಗುವಿಗೆ ಉಪಾಯದಿಂದ ನಯವಾದ ಮಾತಿನಲ್ಲಿ ಎಲ್ಲಾ ಪೂಜೆಯನ್ನು ಬಿಟ್ಟು, ರಾಜನಾದ ತಾನೊಬ್ಬನು ಮಾತ್ರ ಪೂಜೆಗೆ ಯೋಗ್ಯನಾದವನು ಎಂದನು. ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಪುನಃ ಪುನಃ ಮಗು ಸರ್ವವ್ಯಾಪಿಯಾದ ವಿಷ್ಣು ಒಬ್ಬನೇ ಪೂಜೆಗೆ ಯೋಗ್ಯನಾದ ದೇವರೆಂದೂ, ರಾಜನು

ಕೂಡ ವಿಷ್ಣುವಿನ ಇಚ್ಛಾನುಸಾರ ರಾಜನಾಗಿರುವನೆಂದು ಹೇಳಿದನು. ಆಗ ರಾಜನ ಕೋಪಕ್ಕೆ ಮಿತಿ ಇರಲಿಲ್ಲ. ತಕ್ಷಣ ಹುಡುಗನನ್ನು ಕೊಲ್ಲಿ ಎಂದು ಆಜ್ಞಾಪಿಸಿದನು. ದೈತ್ಯರು ಹುಡುಗನನ್ನು ನಾನಾ ಅಸ್ತ್ರಗಳಿಂದ ಹೊಡೆದರು. ಆದರೆ ಪ್ರಹಲ್ಲಾದನ ಮನಸ್ಸು ಭಗವಂತ ನಲ್ಲಿ ತಲ್ಲೀನವಾಗಿದ್ದುದರಿಂದ ಅವನಿಗೆ ಬಾಧೆಯೇ ಆಗಲಿಲ್ಲ.

ರಾಜನಾದ ತಂದೆ ಇದನ್ನು ನೋಡಿದಾಗ ಅಂಜಿದನು. ಆದರೆ ರಾಕ್ಷಸನ ಕೋಪ ಉಕ್ಕೇರಲು ಮಗುವನ್ನು ಕೊಲ್ಲಲು ಹಲವು ಚಿತ್ರ ವಿಚಿತ್ರ ಹಿಂಸೆಗಳನ್ನು ಆಲೋಚಿಸತೊಡಗಿದನು. ಒಂದು ಆನೆಯಿಂದ ಮಗುವನ್ನು ತುಳಿಸಿ ಎಂದನು. ಆ ಮದಕರಿ ಒಂದು ಕಬ್ಬಿಣದ ಕಲ್ಲನ್ನು ಹೇಗೆ ನಾಶಮಾಡಲಾರದೋ ಹಾಗೆ ಪ್ರಹಲ್ಲಾದನನ್ನು ಕೊಲ್ಲದೇ ಹೋಯಿತು. ಇದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಅನಂತರ ರಾಜ ಒಂದು ಕಡಿದಾದ ಸ್ಥಳದಿಂದ ಮಗುವನ್ನು ಕೆಳಕ್ಕೆ ತಳ್ಳಿ, ಎಂದು ಆಜ್ಞಾಪಿಸಿದನು. ಇದನ್ನೂ ಮಾಡಿದರು. ವಿಷ್ಣು ಪ್ರಹಲ್ಲಾದನ ಹೃದಯದಲ್ಲಿ ನೆಲೆಸಿದ್ದುದರಿಂದ ಹೂವಿನೆಸಳು ಹುಲ್ಲಿನ ಮೇಲೆ ಬೀಳುವಂತೆ ಧರೆಯಮೇಲೆ ನಿಧಾನವಾಗಿ ಬಿದ್ದನು. ವಿಷ, ಬೆಂಕಿ, ಅಪಮಾನ, ಬಾವಿಗೆ ನೂಕುವುದು, ಮಾಟ ಮಂತ್ರ ಮುಂತಾದುವ ನ್ನೆಲ್ಲಾ ಒಂದಾದಮೇಲೊಂದನ್ನು ಪ್ರಯತ್ನಿಸಿದರು. ಆದರೆ ಯಾವು ದರಿಂದಲೂ ಪ್ರಯೋಜನವಾಗಲಿಲ್ಲ.

ಕೊನೆಗೆ ರಾಜ ಪಾತಾಳದಿಂದ ಘಟಸರ್ಪವನ್ನು ತಂದು ಅದರಿಂದ ಪ್ರಹಲ್ಲಾದನನ್ನು ಕಟ್ಟುವಂತೆ ಆಜ್ಞಾಪಿಸಿದನು. ಅನಂತರ ಅವನನ್ನು ಸಮುದ್ರಕ್ಕೆ ತಳ್ಳಿ ಅವನ ಮೇಲೆ ಬೆಟ್ಟಗುಡ್ಡಗಳನ್ನು ಹೇರುವಂತೆ ಆಜ್ಞಾಪಿಸಿದನು. ಹೀಗೇ ಬಿಟ್ಟರೆ ತಕ್ಷಣ ಅಲ್ಲದೆ ಇದ್ದರೆ ನಿಧಾನವಾಗಿಯಾದರೂ ಮಗು ಸಾಯುವುದೆಂದು ಆಶಿಸಿದನು. ಇಂತಹ ಹಿಂಸೆಗೆ ಗುರಿಯಾದರೂ ಮಗು "ವಿಶ್ವೇಶನಾದ ವಿಷ್ಣುವೇ ನಿನಗೆ ನಮಸ್ಕಾರ, ಸುಂದರ ಕಮಲವದನನೆ ನಿನಗೆ ನಮಸ್ಕಾರ" ಎಂದು ಪ್ರಾರ್ಥಿಸತೊಡಗಿದನು. ವಿಷ್ಣುವಿನ ಚಿಂತನೆ ಮತ್ತು ಅವನ ಧ್ಯಾನದಲ್ಲಿ ಮಗ್ನನಾದಾಗ ವಿಷ್ಣು ತನ್ನ ಸಮೀಪದಲ್ಲಿರುವನು, ತನ್ನ ಅಂತರ್ಯದ

ಲ್ಲಿರುವನು, ತಾನೇ ವಿಷ್ಣು, ತಾನೇ ಸರ್ವಸ್ವ, ಮತ್ತು ಸರ್ವವ್ಯಾಪಿ ಎಂದು ಭಾವಿಸತೊಡಗಿದನು.

ಮೇಲಿನ ಅನುಭವವಾದೊಡನೆ ಸರ್ಪಬಂಧನ ಕಳಚಿತು. ಮೇಲಿದ್ದ ಬೆಟ್ಟಗಳು ಪುಡಿಯಾದುವು, ಸಮುದ್ರ ಉಕ್ಕಿ ಪ್ರಹಲ್ಲಾದನನ್ನು ಅಲೆಯಮೇಲೆ ತೇಲಿಸಿಕೊಂಡು ಸುರಕ್ಷಿತವಾಗಿ ಕರೆಗೆ ತಂದುಬಿಟ್ಟಿತು. ಪ್ರಹಲ್ಲಾದ ಅಲ್ಲಿ ನಿಂತಾಗ, ತಾನೊಬ್ಬ ದೈತ್ಯ, ತನಗೊಂದು ದೇಹವಿದೆ ಎಂಬುದನ್ನೇ ಮರೆತನು. ತಾನೇ ವಿಶ್ವ, ವಿಶ್ವಶಕ್ತಿಯೆಲ್ಲಾ ತನ್ನಿಂದ ಆವಿರ್ಭವಿಸುತ್ತಿದೆ, ಪ್ರಕೃತಿಯಲ್ಲಿ ಯಾವುದೂ ತನ್ನನ್ನು ನಾಶಮಾಡಲಾರದು, ತಾನೇ ಪ್ರಕೃತಿಗೆ ಒಡೆಯ ಎಂದು ಭಾವಿಸಿದನು. ಅವಿಚ್ಛಿನ್ನವಾದ ಆನಂದದಲ್ಲಿ ಕೆಲವು ಕಾಲ ಹೀಗೆ ಕಳೆದಮೇಲೆ ಕ್ರಮೇಣ ಪ್ರಹಲ್ಲಾದನಿಗೆ ದೇಹಜ್ಞಾನ ಬಂದು ತಾನು ಪ್ರಹಲ್ಲಾದ ಎಂದು ಅರಿತನು. ಅವನಿಗೆ ದೇಹಭಾವ ಬಂದೊಡನೆಯೆ ದೇವರು ಅಂತರ ಮತ್ತು ಬಾಹ್ಯದಲ್ಲಿರುವನು. ' ವಿಷ್ಣುಮಯಂ ಸರ್ವಂ ಇದಂ ' ಎಂದು ಭಾವಿಸಿದನು. ಹಿರಣ್ಯಕಶಿಪುಗೆ ತನ್ನ ದ್ವೇಷಿಯಾದ ವಿಷ್ಣುವಿನ ತದೇಕಭಕ್ತನಾದ ಪ್ರಹಲ್ಲಾದನನ್ನು ಕೊಲ್ಲಲು ಮಾಡಿದ ಮಾನವ ಪ್ರಯತ್ನವೆಲ್ಲಾ ವಿಫಲವಾದಮೇಲೆ ಭಯಗ್ರಸ್ತನಾದನು. ಮುಂದೇನು ಮಾಡಬೇಕೋ ಗೊತ್ತಾಗಲಿಲ್ಲ. ರಾಜ ಪುನಃ ಮಗುವನ್ನು ತನ್ನ ಬಳಿಗೆ ಕರೆಯಿಸಿ ಮೃದುವಾಗಿ ತನ್ನ ಬುದ್ಧಿವಾದವನ್ನು ಕೇಳುವಂತೆ ಪ್ರಯತ್ನಿಸಿದನು. ಆದರೆ ಪ್ರಹಲ್ಲಾದ ಅದೇ ಉತ್ತರವನ್ನು ಕೊಟ್ಟ. ಮಗುವಿಗೆ ವಯಸ್ಸಾದಂತೆ, ತಿಳುವಳಿಕೆ ಬಂದಮೇಲೆ ಬಾಲಭಾವನೆಗಳನ್ನೆಲ್ಲಾ ತೊರೆಯುವುದೆಂದು ಭಾವಿಸಿ ರಾಜನ ಕರ್ತವ್ಯವನ್ನು ಅವನಿಗೆ ಬೋಧಿಸುವಂತೆ ಚಂಡ ಮತ್ತು ಅಮರಕ ಎಂಬ ಗುರುಗಳಿಗೆ ಆಜ್ಞಾಪಿಸಿದನು. ಆದರೆ ಈ ಬೋಧನೆಗಳಾವುವೂ ಪ್ರಹಲ್ಲಾದನಿಗೆ ಹಿಡಿಸಲಿಲ್ಲ. ಅವನು ತನ್ನ ಸಹಪಾಠಿಗಳಿಗೆ ವಿಷ್ಣುಭಕ್ತಿಯನ್ನು ಬೋಧಿಸುವುದರಲ್ಲೇ ತನ್ನ ಕಾಲವನ್ನೆಲ್ಲಾ ಕಳೆಯುತ್ತಿದ್ದ.

ತಂದೆಗೆ ಇದು ಗೊತ್ತಾದಾಗ ಅವನು ಕೋಪದಿಂದ ಉನ್ಮತ್ತನಾಗಿ ಮಗನನ್ನು ಬಳಿಗೆ ಕರೆದು ಅವನನ್ನು ಕೊಂದುಬಿಡುತ್ತೇನೆ ಎಂದು ಹೆದರಿಸಿ ವಿಷ್ಣುವನ್ನು ಮನಸ್ಸಿಗೆ ಬಂದಂತೆ ನಿಂದಿಸಿದನು.

ಆದರೆ ಪ್ರಹಲ್ಲಾದ ವಿಷ್ಣು ಒಬ್ಬನೇ ಆದಿ, ಅಂತ್ಯರಹಿತನು, ವಿಭು ಸರ್ವಾಂತರ್ಯಾಮಿ ಅವನೊಬ್ಬನೇ ಪೂಜೆಗೆ ಯೋಗ್ಯನೆಂದು ಹೇಳಿದನು. ರಾಜ ಕೋಪದಿಂದ ಗರ್ಜಿಸಿ "ಎಲೈ ಪಾಪಿ, ವಿಷ್ಣು ಸರ್ವಾಂತರ್ಯಾಮಿ ಯಾದರೆ ಎದುರಿಗಿರುವ ಕಂಬದಲ್ಲಿ ಏತಕ್ಕೆ ಇರಬಾರದು ?" ಎಂದನು. ಪ್ರಹಲ್ಲಾದ, ಹೌದು ಅಲ್ಲಿ ನಿಜವಾಗಿಯೂ ಇರುವನು ಎಂದು ನಮ್ರನಾಗಿ ಹೇಳಿದನು. "ಹಾಗಾದರೆ ಅವನು ನಿನ್ನನ್ನು ರಕ್ಷಿಸಲಿ, ನಾನು ನಿನ್ನನ್ನು ಕೊಲ್ಲುತ್ತೇನೆ" ಎಂದು ಹಿರಿದ ಕತ್ತಿಯಿಂದ ಎದುರಿ ಗಿರುವ ಕಂಬವನ್ನು ಒಡೆದನು. ತಕ್ಷಣ ಒಂದು ದೊಡ್ಡ ಗರ್ಜನೆ ಕೇಳಿಸಿತು. ಆ ಕಂಬದಿಂದ ವಿಷ್ಣು ಉಗ್ರನರಸಿಂಹನಂತೆ ಬಂದುದನ್ನು ನೋಡಿದನು. ಅಂಜಿ ದೈತ್ಯರೆಲ್ಲಾ ಚಲ್ಲಾಪಿಲ್ಲಿಯಾಗಿ ಓಡಿಹೋದರು. ಆದರೆ ಹಿರಣ್ಯಕಶಿಪು ಅವನೊಡನೆ ದೀರ್ಘಕಾಲ ಕಷ್ಟಪಟ್ಟು ಹೋರಾಡಿ ಕೊನೆಗೆ ಸತ್ತುಹೋದನು.

ದೇವತೆಗಳು ಆಗ ಸ್ವರ್ಗದಿಂದ ಬಂದು ವಿಷ್ಣುವನ್ನು ಸ್ತುತಿಸ ತೊಡಗಿದರು. ಪ್ರಹಲ್ಲಾದನು ದೇವರಿಗೆ ನಮಿಸಿ ಭಗವಂತನನ್ನು ಭಕ್ತಿಯಿಂದ ಕೊಂಡಾಡತೊಡಗಿದನು. ವಿಷ್ಣು ಇವನನ್ನು "ಮಗು ಪ್ರಹಲ್ಲಾದ ನಿನಗೆ ಏನುಬೇಕೋ ಅದನ್ನು ಕೇಳು. ನೀನು ನನ್ನ ಮಗ, ಮೆಚ್ಚಿಗೆಗೆ ಪಾತ್ರನು, ನಿನಗೆ ಬೇಕಾದುದನ್ನು ಕೇಳು" ಎಂದನು. ಪ್ರಹಲ್ಲಾದ ಭಕ್ತಿಪರವಶನಾಗಿ "ಹರಿ, ನಾನು ನಿನ್ನ ದರ್ಶನ ಪಡೆದೆ. ನನಗೆ ಇನ್ನೇನು ಬೇಕು. ನನಗೆ ಪ್ರಪಂಚ ಅಥವಾ ಸ್ವರ್ಗದ ಆಸೆಯನ್ನು ತೋರಬೇಡ" ಎಂದು ಬೇಡಿಕೊಂಡ. "ಆದರೂ ಮಗು ಏನನ್ನಾದರೂ ಕೇಳು" ಎಂದ ವಿಷ್ಣು. ಆಗ ಪ್ರಹಲ್ಲಾದ "ಅವಿವೇಕಿಗಳು ಪ್ರಾಪಂಚಿಕ ವಸ್ತುಗಳನ್ನು ಎಷ್ಟು ಆಸಕ್ತಿಯಿಂದ ನೋಡುವರೋ, ಅದೇ ಆಸಕ್ತಿ ನಿನ್ನಮೇಲಿರಲಿ. ನಿನ್ನ ಮೇಲೆ ಅದೇ ಉತ್ಕಟ ಪ್ರೀತಿ ಇರಲಿ, ಆದರೆ ಅದು ಕೇವಲ ಪ್ರೇಮಕ್ಕೋಸುಗ ವಾಗಲಿ" ಎಂದು ಪ್ರಾರ್ಥಿಸಿದನು.

ಆಗ ವಿಷ್ಣು ಇಂತೆಂದನು : "ನನ್ನ ಪರಮಭಕ್ತ ಎಂದಿಗೂ ಏನನ್ನೂ ಆಶಿಸದೆ ಇದ್ದರೂ ಈ ಕಲ್ಪದ ಕೊನೆಯವರೆಗೆ ಪ್ರಪಂಚದ ಸುಖವನ್ನು ಅನುಭವಿಸಿ, ಮನಸ್ಸನ್ನೆಲ್ಲಾ ನನ್ನ ಮೇಲಿಟ್ಟು ಹಲವು

ಧರ್ಮಕಾರ್ಯಗಳನ್ನು ಮಾಡು. ಕಾಲಾನಂತರ ನೀನು ಕಾಲವಾದ ಮೇಲೆ ನನ್ನನ್ನು ಸೇರುವೆ". ಪ್ರಹಲ್ಲಾದನನ್ನು ಹೀಗೆ ಆಶೀರ್ವದಿಸಿ ವಿಷ್ಣು ಮಾಯವಾದನು. ಆಗ ದೇವತೆಗಳು ಬ್ರಹ್ಮನ ನಾಯಕತ್ವದಲ್ಲಿ ಪ್ರಹಲ್ಲಾದನನ್ನು ದೈತ್ಯರ ರಾಜನನ್ನಾಗಿ ಮಾಡಿ ತಮ್ಮ ಲೋಕಗಳಿಗೆ ತೆರಳಿದರು.

೬

# ಪ್ರಪಂಚದ ಮಹಾಗುರುಗಳು

ಹಿಂದುಗಳ ಸಿದ್ಧಾಂತದಂತೆ ಸೃಷ್ಟಿಯೊಂದು ಅಲೆಯಂತೆ ಸಂಚರಿಸುತ್ತಿದೆ. ಅದು ಮೇಲೆದ್ದು ಶಿಖರವನ್ನು ಮುಟ್ಟಿ ಕೆಳಗೆ ಬೀಳುವುದು. ಅಲ್ಲೇ ಕೆಲವು ಕಾಲ ಇರುವುದು. ಅನಂತರ ಪುನಃ ಮೇಲೇಳುವುದು, ಕೆಳಗೆ ಬೀಳುವುದು. ಒಟ್ಟಿನಲ್ಲಿ ಯಾವುದು ಸತ್ಯವೋ ಅದೇ ಅದರ ಅಂಶಗಳಿಗೆಲ್ಲ ಅನ್ವಯಿಸುವುದು. ಮಾನವನ ಪ್ರಗತಿ ಇರುವುದು ಹೀಗೆ, ಜನಗಳ ಇತಿಹಾಸ ಇರುವುದು ಹೀಗೆ. ಅವು ಏಳುವುವು, ಬೀಳುವುವು. ಎದ್ದ ಮೇಲೆ ಬೀಳುವುದು, ಪುನಃ ಬೀಳಿನಿಂದ ಹೆಚ್ಚು ರಭಸದಿಂದ ಏಳುವುದು. ಈ ಗತಿ ಚಿರಜಾಗ್ರತ ವಾಗಿರುವುದು. ಧಾರ್ಮಿಕ ಜಗತ್ತಿನಲ್ಲಿಯೂ ಇದೇ ಗತಿ ಇರುವುದು. ಪ್ರತಿಯೊಂದು ದೇಶದ ಆಧ್ಯಾತ್ಮಿಕ, ಇತಿಹಾಸದಲ್ಲಿಯೂ, ಒಂದು ಏಳು ಬೀಳು ಇದ್ದೇ ಇದೆ. ದೇಶ ಅವನತಿ ಕಡೆ ಧಾವಿಸುವುದು, ಎಲ್ಲಾ ಚೂರುಚೂರಾಗುವಂತೆ ತೋರುವುದು. ಪುನಃ ಅದು ಶಕ್ತಿಯನ್ನು ಸಂಗ್ರಹಿಸಿ ಮೇಲೇಳುವುದು. ಮತ್ತೊಂದು ದೊಡ್ಡ ಅಲೆ ಬರುವುದು. ಅದು ಉಬ್ಬರದ ಅಲೆ ಇರಬಹುದು. ಆ ಅಲೆಯ ತುತ್ತ ತುದಿಯಲ್ಲಿ ಭಗವಂತನ ಬೆಳಗುಗಾರನೊಬ್ಬ ಮಹಾಪುರುಷ ಯಾವಾಗಲೂ ಇರುವನು. ಅವನೇ ಸೃಷ್ಟಿಕರ್ತ, ಮತ್ತು ಅವನೇ ಪುನಃ ಸೃಷ್ಟಿಸಿದ ವಸ್ತು ಕೂಡ ಆಗುವನು. ಅಲೆ ಮೇಲೇಳುವಂತೆ ಪ್ರಚೋದಿಸುವವನು ಅವನೇ, ದೇಶ ಮೇಲೇಳುವಂತೆ ಪ್ರಚೋದಿಸು ವವನೂ ಅವನೇ, ಆದರೆ ಯಾವುದು ಅಲೆಯನ್ನು ಸೃಷ್ಟಿಸುವುದೋ ಅದೇ ಶಕ್ತಿ ಈ ಮಹಾವ್ಯಕ್ತಿಯನ್ನೂ ಸೃಷ್ಟಿಸುವುದು. ಇವೆರಡಕ್ಕೂ

ಕ್ರಿಯೆ ಮತ್ತು ಪ್ರತಿಕ್ರಿಯೆಗಳಾಗುತ್ತಿರುತ್ತವೆ. ಅವನು ತನ್ನ ಅದ್ಭುತ ಶಕ್ತಿಯನ್ನೆಲ್ಲಾ ಸಮಾಜದ ಮೇಲೆ ಬೀರುವನು, ಅನಂತರ ಸಮಾಜ ಅವನನ್ನು ಮಹಾವ್ಯಕ್ತಿಯನ್ನಾಗಿ ಮಾಡುವುದು. ಇವರೇ ವಿಶ್ವವಿಖ್ಯಾತ ಜ್ಞಾನಿಗಳು. ಇವರೇ ಪ್ರವಾದಿಗಳು, ದೇವದೂತರು, ಭಗವಂತನ ಅವತಾರಗಳು.

ಪ್ರಪಂಚದಲ್ಲಿ ಒಂದೇ ಧರ್ಮ ಇರುವುದಕ್ಕೆ ಮಾತ್ರ ಸಾಧ್ಯ, ಒಬ್ಬನೇ ಪ್ರವಾದಿ ಇರುವುದಕ್ಕೆ ಸಾಧ್ಯ, ಒಬ್ಬನೇ ಅವತಾರ ಇರುವುದಕ್ಕೆ ಮಾತ್ರ ಸಾಧ್ಯ ಎಂದು ಜನ ಆಲೋಚಿಸುವರು. ಆದರೆ ಈ ವಿಖ್ಯಾತ ದೇವದೂತರ ಜೀವನವನ್ನು ನೋಡಿದರೆ ಪ್ರತಿಯೊಬ್ಬರೂ ಯಾವುದೋ ಒಂದು ಕೆಲಸವನ್ನು ಮಾಡುವುದಕ್ಕೆ, ಒಂದನ್ನು ಮಾತ್ರಾ ಮಾಡುವುದಕ್ಕೆ ಬಂದಂತೆ ತೋರುವುದು. ಇವುಗಳ ಮೊತ್ತದಲ್ಲಿ ಮಾತ್ರ ಸಾಮರಸ್ಯವಿದೆಯೆ ಹೊರತು ಒಂದರಲ್ಲಿ ಇಲ್ಲ. ಜನಾಂಗದ ಜೀವನದಲ್ಲಿರುವಂತೆಯೇ ಯಾವುದೋ ಒಂದು ಜನಾಂಗ ಮಾತ್ರ ಸುಖ ಅನುಭವಿಸಲು ಬಂದಿಲ್ಲ. ಯಾರಿಗೂ ಹೀಗೆ ಸಾಧಿಸುವುದಕ್ಕೆ ಧೈರ್ಯವಿಲ್ಲ. ಜನಾಂಗದ ದೈವೀ ಸಾಮರಸ್ಯದಲ್ಲಿ ಪ್ರತಿಯೊಂದು ಜನಾಂಗಕ್ಕೂ ಒಂದೊಂದು ಪಾತ್ರವಿದೆ. ಪ್ರತಿಯೊಂದು ಜನಾಂಗಕ್ಕೂ ತಾನು ಮಾಡುವ ಒಂದು ಕರ್ತವ್ಯವಿದೆ, ಸಾಧಿಸುವ ಒಂದು ಉದ್ದೇಶವಿದೆ.

ಆದಕಾರಣ ಯಾವನೋ ಒಬ್ಬನೇ ದೇವದೂತ ಎಂದೆಂದಿಗೂ ಪ್ರಪಂಚವನ್ನು ಆಳಲಾರ. ಇದುವರೆಗೆ ಹೀಗೆ ಯಾರೂ ಜಯಪ್ರದವಾಗಿಲ್ಲ. ಮುಂದೆ ಹಾಗೆ ಆಗುವಂತೆಯೂ ಇಲ್ಲ. ಪ್ರತಿಯೊಬ್ಬ ಒಂದು ಅಂಶವನ್ನು ಮಾತ್ರಾ ತನ್ನ ಕಾಣಿಕೆಯಾಗಿ ಕೊಡಬಲ್ಲ. ಆ ಅಂಶದ ದೃಷ್ಟಿಯಿಂದ ಪ್ರತಿಯೊಬ್ಬ ದೇವದೂತನೂ ಕಾಲಕ್ರಮೇಣ ಜಗದ ಗತಿಗೆ ಕಾರಣವಾಗುತ್ತಾನೆ, ಅದರ ನಿಯಂತೃವಾಗುತ್ತಾನೆ.

ನಮ್ಮಲ್ಲಿ ಬಹುಪಾಲು ಹುಟ್ಟು ಸಗುಣೋಪಾಸಕರು. ನಾವೇನೋ ಸಿದ್ಧಾಂತಗಳನ್ನು ಕುರಿತು ಮಾತನಾಡುತ್ತೇವೆ. ತತ್ತ್ವವನ್ನು ಕುರಿತು ಮಾತನಾಡುತ್ತೇವೆ. ನಮ್ಮ ಪ್ರತಿಯೊಂದು ಆಲೋಚನೆ ಮತ್ತು ಕ್ರಿಯೆ ಕೂಡ ನಮಗೆ ಒಂದು ವ್ಯಕ್ತಿ ಮೂಲಕ ಆ ಸಿದ್ಧಾಂತ

ಬಂದಾಗ ಮಾತ್ರ ಅದು ಅರ್ಥವಾಗುವುದೆಂಬುದನ್ನು ತೋರುವುದು ಸ್ಥೂಲವಾದ ಒಂದು ವ್ಯಕ್ತಿಯ ಮೂಲಕ ಅದು ಬಂದಾಗ ಮಾತ್ರ ಅವರಲ್ಲಿರುವ ಭಾವನೆಯನ್ನು ನಾವು ಗ್ರಹಿಸಬಹುದು. ಉದಾಹರಣೆಯ ಮೂಲಕ ನಮಗೆ ಅದರ ಹಿಂದೆ ಇರುವ ನೀತಿ ನಮಗೆ ಅರ್ಥವಾಗುವುದು. ನಮ್ಮಲ್ಲಿ ಎಲ್ಲೋ ಕೆಲವರು ಮಾತ್ರ ಉದಾಹರಣೆ ಇಲ್ಲದೆ, ವ್ಯಕ್ತಿಗಳಿಲ್ಲದೆ, ಸಿದ್ಧಾಂತವನ್ನು ಅರ್ಥಮಾಡಿಕೊಳ್ಳುವಷ್ಟು ಮುಂದರಿದು ಹೋಗಿದ್ದಾರೆ. ಆದರೆ ನಾವು ಹಾಗಿಲ್ಲ. ಆದಕಾರಣವೇ ಮಾನವ ಕೋಟಿಯ ಬಹುಪಾಲು ಜನರು ಬುದ್ಧ, ಕ್ರಿಸ್ತರೆಂದು ಆರಾಧಿಸಲ್ಪಡುವ ಮಹಾವ್ಯಕ್ತಿಗಳಡಿಯಲ್ಲಿ, ಅವತಾರ ಅಥವಾ ದೇವದೂತರಡಿಯಲ್ಲಿ ಶರಣಾಗಿರುವರು. ಮಹಮ್ಮದೀಯರು ಮೊದಲಿನಿಂದಲೂ ಅಂತಹ ಆರಾಧನೆಗೆ ವಿರೋಧವಾಗಿದ್ದರು. ದೇವದೂತರು ಮತ್ತು ಸಂದೇಶಕರನ್ನು ಪೂಜಿಸುವುದಾಗಲೀ, ಅವರಿಗೆ ಗೌರವ ತೋರುವುದಾಗಲೀ, ಯಾವುದನ್ನೂ ಅವರು ಲಕ್ಷಿಸುತ್ತಿರಲಿಲ್ಲ. ಆದರೆ ಕಾರ್ಯತಃ ಬಂದಾಗ ಒಬ್ಬ ದೇವದೂತನ ಬದಲು ಸಾವಿರಾರುಜನ ಮಹಾತ್ಮರನ್ನು ಪೂಜಿಸಬೇಕಾಯಿತು. ನಾವು ಸ್ವಭಾವಕ್ಕೆ ವಿರೋಧವಾಗಿ ಹೋಗಲಾರೆವು. ನಾವು ವ್ಯಕ್ತಿಗಳನ್ನು ಪೂಜಿಸದೆ ವಿಧಿಯಿಲ್ಲ. ಅದು ಒಳ್ಳೆಯದೆ. "ದೇವರೆ ನಮಗೆ ತಂದೆಯನ್ನು ತೋರು" ಎಂದು ಜನ ನಿಮ್ಮ ದೇವದೂತನನ್ನು ಕೇಳಿದಾಗ ಅವನು ಕೊಟ್ಟ ಉತ್ತರವನ್ನು ನೆನೆಸಿಕೊಳ್ಳಿ. "ಯಾರು ನನ್ನನ್ನು ನೋಡುವನೋ ಅವನು ತಂದೆಯನ್ನೂ ನೋಡಿರುವನು" ಎಂದನು. ದೇವರು ಮನುಷ್ಯ ಎಂದಲ್ಲದೆ ಬೇರೆ ರೀತಿ ನಮ್ಮಲ್ಲಿ ಯಾರೂ ಊಹಿಸಿಕೊಳ್ಳಲು ಸಾಧ್ಯ? ನಾವು ಅವನನ್ನು ಮಾನವನಲ್ಲಿ ಮತ್ತು ಅವನ ಮೂಲಕ ಮಾತ್ರ ತಿಳಿದುಕೊಳ್ಳಬಲ್ಲೆವು. ಈ ಕೋಣೆಯಲ್ಲಿ ಬೆಳಕಿನ ಸ್ಪಂದನ ಎಲ್ಲ ಕಡೆಯಲ್ಲಿಯೂ ಇರುವುದು. ಆದರೆ ಏತಕ್ಕೆ ನಾವು ಎಲ್ಲಾ ಕಡೆಯಲ್ಲಿಯೂ ನೋಡಲಾರೆವು? ನೀವು ಆ ಬೆಳಕಿನಲ್ಲಿ ಮಾತ್ರಾ ನೋಡಬಲ್ಲಿರಿ. ಭಗವಂತ ಸರ್ವಾಂತರ್ಯಾಮಿ ಎಂಬುದೊಂದು ಸಿದ್ಧಾಂತ. ಆದರೆ ನಾವು ಈಗ ಇರುವ ರೀತಿಯಲ್ಲಿ ಮಾನವನಲ್ಲಿ ಮಾತ್ರಾ ಅವನನ್ನು ನೋಡಲು ಸಾಧ್ಯ. ಅವನಲ್ಲಿ ಮಾತ್ರಾ ಗ್ರಹಿಸಲು ಸಾಧ್ಯ.

ಈ ಮಹಾವ್ಯಕ್ತಿಗಳು ಬಂದಾಗ ಮಾನವ ದೇವನನ್ನು ನೋಡುತ್ತಾನೆ. ಅವನು ನಮ್ಮಂತೆ ಬರದೆ ಬೇರೆ ವಿಧದಲ್ಲಿ ಬರುವನು. ನಾವು ಭಿಕ್ಷುಕ ರಂತೆ ಬರುವೆವು. ಅವರು ಚಕ್ರವರ್ತಿಗಳಂತೆ ಬರುವರು. ನಾವು ಗತಿಕೆಟ್ಟ ಅನಾಥರಂತೆ ದಾರಿ ಗೊತ್ತಿಲ್ಲದೆ ಬರುವೆವು. ನಾವೇನು ಮಾಡಬೇಕು, ನಮ್ಮ ಜೀವನದ ಅರ್ಥವೇ ನಮಗೆ ತಿಳಿಯದು. ನಾವು ಅದನ್ನು ಗ್ರಹಿಸಲಾರೆವು. ಇಂದು ಒಂದುಮಾಡುತ್ತಿರುವೆವು, ನಾಳೆ ಇನ್ನೊಂದು ಮಾಡುವೆವು. ನಾವು ನೀರಿನಲ್ಲಿ ಅತ್ತ ಇತ್ತ ಚಲಿಸು ತ್ತಿರುವ ಹುಲ್ಲಿನ ಎಸಳಂತೆ, ಬಿರುಗಾಳಿಗೆ ಸಿಕ್ಕಿದ ಗರಿಯಂತೆ ಚಲಿಸು ತ್ತಿರುವೆವು.

ಮಾನವಇತಿಹಾಸವನ್ನು ಪರಿಗಣಿಸಿದರೆ, ಈ ದೇವದೂತರು ಬರುವುದು, ಮತ್ತು ತಾವು ಬರುವಾಗಲೆ ಅವರು ಏನು ಮಾಡಬೇಕು, ಹೇಗೆ ಮಾಡಬೇಕೆಂಬುದನ್ನು ನಿಶ್ಚಯಿಸಿಕೊಂಡು ಬಂದಿರುವುದನ್ನು ನೋಡುವೆವು. ಯೋಜನೆಯೆಲ್ಲ ಅವರ ಮುಂದೆ ಇರುವುದು. ಅದರಿಂದ ಅವರು ಒಂದು ಎಳೆಯೂ ಕದಲುವುದಿಲ್ಲ. ಅವರು ಒಂದು ಉದ್ದೇಶ ದಿಂದ ಬರುವುದರಿಂದ ಅವರೊಂದು ಸಂದೇಶವನ್ನು ತರುವರು, ಅವರು ತರ್ಕಿಸಬೇಕಿಲ್ಲ. ಈ ಮಹಾಪುರುಷರು ತಾವು ಬೋಧಿಸುವುದನ್ನು ಎಂದಾದರೂ ತರ್ಕಿಸಿದರು ಎಂಬುದನ್ನು ಎಂದಾದರೂ ನೀವು ಕೇಳಿರು ವಿರಾ ಅಥವಾ ನೋಡಿರುವಿರಾ? ಇಲ್ಲ ಅವರಲ್ಲಿ ಯಾರೊಬ್ಬರೂ ಹಾಗೆ ಮಾಡಲಿಲ್ಲ. ಅವರು ನೇರವಾಗಿ ಮಾತನಾಡುವರು. ಅವರು ಏಕೆ ಆಲೋಚಿಸಬೇಕು? ಅವರು ಸತ್ಯವನ್ನು ನೋಡುವರು. ಅವರು ಸತ್ಯ ವನ್ನು ನೋಡುವುದು ಮಾತ್ರವಲ್ಲ, ಅದನ್ನು ತೋರುತ್ತಾರೆ. ದೇವ ರಿರುವನೆ, ಎಂದು ನೀವು ನನ್ನನ್ನು ಕೇಳಿದರೆ, ಹೌದು ಎನ್ನುತ್ತೇನೆ ನಾನು. ತಕ್ಷಣ ನೀವು ನಿನ್ನ ನಿಲುವಿಗೆ ಆಧಾರವೇನು ಎಂದು ಪ್ರಶ್ನಿಸು ವಿರಿ. ನಿಮಗೆ ಅದನ್ನು ಯುಕ್ತಿಪೂರ್ವಕವಾಗಿ ದೃಢಪಡಿಸಬೇಕಾದರೆ ಪಾಪ ನಾನು ನನ್ನ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಬೇಕು. ನೀವು ಕ್ರೈಸ್ತನನ್ನು ದೇವರಿರುವನೆ ಎಂದು ಕೇಳಿದರೆ, ಹೌದು ಎನ್ನುತ್ತಿದ್ದ ಅವನು. ಅದಕ್ಕೆ ಏನಾದರೂ ಕಾರಣವಿದೆಯೆ? ಎಂದು ಕೇಳಿದ್ದರೆ "ನೋಡಿ ದೇವನನ್ನು" ಎಂದು ಅವನು ತೋರುತ್ತಿದ್ದ. ನೋಡಿ

ಅವರಿಗೆ ಇದೊಂದು ಪ್ರತ್ಯಕ್ಷ ಅನುಭವ, ಯುಕ್ತಿಯ ಕಸರತ್ತು ಅಲ್ಲ. ಅವರೆಂದಿಗೂ ಅನುಮಾನದಲ್ಲಿ ಅಲೆಯುವುದಿಲ್ಲ. ಪ್ರತ್ಯಕ್ಷ ಅನುಭವದ ದೃಢತೆ ಅವರಲ್ಲಿರುವುದು. ನಾನು ಎದುರಿಗಿರುವ ಮೇಜನ್ನು ನೋಡುತ್ತೇನೆ. ಅದಕ್ಕೆ ವಿರೋಧವಾಗಿ ಎಷ್ಟೇ ವಾದಿಸಿದರೂ ಈ ನಂಬಿಕೆಯನ್ನು ಅದು ಪರಿಹರಿಸಲಾರದು. ಇದು ಪ್ರತ್ಯಕ್ಷ ಅನುಭವ. ಅದರ ಆದರ್ಶದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಿರುವ ಆತ್ಮಶ್ರದ್ಧೆಯಲ್ಲಿ ಇರುವ ನಂಬಿಕೆ ಇಂತಹುದು. ಈ ಮಹಾಪುರುಷರಿಗೆ ಇತರರೆಲ್ಲರಿಗಿಂತ ಆತ್ಮಶ್ರದ್ಧೆ ಹೆಚ್ಚು. ಸಾಧಾರಣ ಜನ "ನೀನು ದೇವರಲ್ಲಿ ನಂಬುವೆಯಾ? ಪುನರ್ಜನ್ಮದಲ್ಲಿ ನಂಬುವೆಯಾ? ನೀನು ಈ ಸಿದ್ಧಾಂತವನ್ನು ಅಥವಾ ಆ ಮೂಢನ ನಂಬಿಕೆಯನ್ನು ನಂಬುವೆಯಾ?" ಎಂದು ಕೇಳುವರು. ಆದರೆ ಇಲ್ಲಿ ಮೂಲಕ್ಕೇ ಅಭಾವ, ಅದೇ ಆತ್ಮಶ್ರದ್ಧೆ. ಅಯ್ಯೋ ಯಾರಿಗೆ ಆತ್ಮವಿಶ್ವಾಸವಿಲ್ಲವೋ ಅವರು ಇತರರನ್ನು ಹೇಗೆ ನಂಬಬಲ್ಲರು? ನಾನಿರುವುದೇ ನನಗೆ ಅನುಮಾನ. ಈ ಕ್ಷಣ ನಾನು ಇರುವೆನು, ಯಾವುದೂ ನನ್ನನ್ನು ನಾಶಮಾಡಲಾರದು ಎಂದು ಭಾವಿಸುವೆನು. ಮರುಕ್ಷಣವೇ ಮೃತ್ಯುಭಯದಿಂದ ಕಂಪಿಸುವೆನು. ಈ ಕ್ಷಣ ನಾನು ಅಮೃತಾತ್ಮ ಎಂದು ಭಾವಿಸುವೆನು, ಮರುಕ್ಷಣ ಪೆಟ್ಟೊಂದು ಬಿದ್ದಾಗ ಅಸಹಾಯದಿಂದ ಒದ್ದಾಡುವೆನು. ಇದು ಏತಕ್ಕೆ? ನನ್ನಲ್ಲಿ ಆತ್ಮಶ್ರದ್ಧೆಯೇ ಇಲ್ಲ, ನನ್ನ ನೈತಿಕ ಜೀವನದ ತಳಹದಿ ಚೂರು ಚೂರಾಗಿದೆ.

ಆದರೆ ಮಹಾಪುರುಷರಲ್ಲಿ ಯಾವಾಗಲೂ ಈ ಚಿಹ್ನೆಯನ್ನು ನೋಡುವಿರಿ. ಅವರಲ್ಲಿ ಅಪಮ್ಯ ಆತ್ಮಶ್ರದ್ಧೆ ಇರುವುದು. ಇಂತಹ ಅದ್ಭುತ ಆತ್ಮಶ್ರದ್ಧೆ ಬಹಳ ಅಪರೂಪ. ನಮಗೆ ಇದು ಅರ್ಥವಾಗುವುದಿಲ್ಲ. ಆದಕಾರಣವೇ ಈ ಮಹಾವ್ಯಕ್ತಿಗಳು ತಮ್ಮ ವಿಷಯವಾಗಿ ಏನು ಹೇಳುತ್ತಾರೆಯೋ ಅದನ್ನು ಹೇಗೋ ವಿವರಿಸಲು ಯತ್ನಿಸುತ್ತೇವೆ. ಅವರು ತಮ್ಮ ಸಾಕ್ಷಾತ್ಕಾರದ ವಿಷಯದಲ್ಲಿ ಏನು ಹೇಳುವರೋ ಅದನ್ನು ವಿವರಿಸುವುದಕ್ಕೆ ಇಪ್ಪತ್ತು ಸಾವಿರ ಸಿದ್ಧಾಂತಗಳನ್ನು ತರುವೆವು. ನಾವು ನಮ್ಮನ್ನು ಆ ದೃಷ್ಟಿಯಿಂದ ನೋಡುತ್ತಿಲ್ಲ. ಆದಕಾರಣವೇ ನಾವು ಅವರನ್ನು ಅರ್ಥಮಾಡಿಕೊಳ್ಳಲಾರೆವು.

ಈ ಮಹಾವ್ಯಕ್ತಿಗಳು ಮಾತನಾಡಿದರೆ ಪ್ರಪಂಚ ಕೇಳಲೇ ಬೇಕಾಗುವುದು. ಅವರು ಮಾತನಾಡಿದರೆ ಪ್ರತಿಯೊಂದು ಮಾತೂ ಪ್ರತ್ಯಕ್ಷ ಅನುಭವದಿಂದ ಬರುವುದು. ಅದೊಂದು ಪಿರಂಗಿಯ ಗುಂಡಿ ನಂತೆ ಬೀಳುವುದು. ಮಾತಿನ ಹಿಂದೆ ಶಕ್ತಿ ಇಲ್ಲದೆ ಇದ್ದರೆ ಬರೀ ಮಾತಿನಲ್ಲಿ ಏನಿದೆ? ನೀನು ಯಾವ ಭಾಷೆಯಲ್ಲಿ ಮಾತನಾಡುವೆಯೋ, ಹೇಗೆ ವಿಷಯಗಳನ್ನು ಅಣಿಮಾಡಿಕೊಂಡಿರುವೆಯೋ, ಅದರಿಂದೇನು ಪ್ರಯೋಜನ? ನೀನು ವ್ಯಾಕರಣ ಶುದ್ಧವಾಗಿ ಮಾತನಾಡುವೆಯೋ, ಸುಂದರಪದಗಳನ್ನು ಜೋಡಿಸಿರುವೆಯೋ ಇವನ್ನು ಕಟ್ಟಿಕೊಂಡು ಪ್ರಯೋಜನವೇನು? ಇತರರಿಗೆ ಕೊಡುವುದಕ್ಕೆ ನಿನ್ನಲ್ಲಿ ಏನಾದರೂ ಇದೆಯೆ, ಇಲ್ಲವೆ, ಅದೇ ಪ್ರಶ್ನೆ. ಇದೊಂದು ಕೊಡುವ, ತೆಗೆದುಕೊಳ್ಳುವ ಪ್ರಸಂಗ, ಸುಮ್ಮನೆ ಕೇಳುವುದಲ್ಲ. ಕೊಡುವುದಕ್ಕೆ ಏನಾದರೂ ನಿನ್ನಲ್ಲಿ ಇದೆಯೇ? ಅದೇ ಮೊದಲನೆ ಪ್ರಶ್ನೆ. ಇದ್ದರೆ ಕೊಡು. ಮಾತು ಭಾವನೆಯನ್ನು ನೀಡುವುದು ಅಷ್ಟೆ. ಹಲವು ವಿಧದಲ್ಲಿ ನಾವು ಇದನ್ನು ಮಾಡುತ್ತೇವೆ. ಕೆಲವು ವೇಳೆ ನಾವು ಮಾತನ್ನೇ ಆಡುವುದಿಲ್ಲ. ಒಂದು ಸಂಸ್ಕೃತದ ಹಳೆಯ ಶ್ಲೋಕದಲ್ಲಿ ಹೀಗಿದೆ. "ಮರದ ಕೆಳಗೆ ಗುರು ಕುಳಿತಿರುವುದನ್ನು ನೋಡಿದೆ. ಗುರು ಹದಿನಾರು ವರುಷದ ಯುವಕ, ಶಿಷ್ಯ ಎಂಬತ್ತು ವರುಷದ ವೃದ್ಧ. ಗುರು ಮೌನವಾಗಿ ವ್ಯಾಖ್ಯಾನಮಾಡುತ್ತಿದ್ದನು. ಶಿಷ್ಯನ ಸಂಶಯಗಳೆಲ್ಲ ದೂರವಾದುವು."

ಕೆಲವು ವೇಳೆ ಅವರು ಮಾತನ್ನೆ ಆಡುವುದಿಲ್ಲ. ಆದರೂ ಸತ್ಯ ವನ್ನು ಒಬ್ಬರು ಇನ್ನೊಬ್ಬರಿಗೆ ವ್ಯಕ್ತಗೊಳಿಸುವರು. ಅವರು ಕೊಡು ವುದಕ್ಕೆ ಬರುವರು. ಅವರು ಆಜ್ಞಾಪಿಸುವರು. ಅವರು ದೇವದೂತರು, ನೀವು ಅವರ ಆಜ್ಞೆಯನ್ನು ಪಾಲಿಸಬೇಕಾಗಿದೆ. ಜೀಸಸ್ ಯಾವ ಅಧಿಕಾರವಾಣಿಯಿಂದ ಮಾತನಾಡುತ್ತಾನೆ ಎಂಬುದನ್ನು ನೀವು ನಿಮ್ಮ ಶಾಸ್ತ್ರದಲ್ಲಿಯೇ ನೋಡುವುದಿಲ್ಲವೆ? "ಹೋಗಿ ಪ್ರಪಂಚಕ್ಕೆಲ್ಲ ಸಾರಿ. ನಾನು ನಿಮಗೆ ಆಜ್ಞಾಪಿಸಿರುವಂತೆ ನಡೆಯಬೇಕೆಂದು ಅವರಿಗೆಲ್ಲ ಹೇಳಿ." ತನ್ನ ಸಂದೇಶದಲ್ಲಿದ್ದ ಆತ್ಮಶ್ರದ್ಧೆ ಅವನ ಬೋಧನೆಯಲ್ಲೆಲ್ಲಾ ಅನುರಣಿತವಾಗುತ್ತಿದೆ. ಪ್ರಪಂಚ ಯಾರನ್ನು ದೇವದೂತರೆಂದು

ಆರಾಧಿಸುವುದೋ ಅಂತಹ ಆಧ್ಯಾತ್ಮ ವ್ಯಕ್ತಿಗಳಲ್ಲೆಲ್ಲ ನೀವು ಇದನ್ನು ನೋಡುವಿರಿ.

ಇಂತಹ ಮಹಾಗುರುಗಳೇ ಜೀವಂತದೇವರು ಪ್ರಪಂಚದಲ್ಲಿ. ಇವರನ್ನು ಅಲ್ಲದೆ ಇನ್ನಾರನ್ನು ನಾವು ಪೂಜಿಸಬೇಕು. ನನ್ನ ಮನಸ್ಸಿನಲ್ಲಿ ಭಗವಂತನ ಭಾವನೆಯನ್ನು ಕಲ್ಪಿಸಿಕೊಳ್ಳಲು ಯತ್ನಿಸುವೆನು. ನಾನು ಕಲ್ಪಿಸಿಕೊಳ್ಳುವುದೆಷ್ಟು ಅಲ್ಪ, ಎಷ್ಟು ಕೃತ್ರಿಮ ಎಂದು ಕಾಣುವುದು. ಕಣ್ಣು ಬಿಟ್ಟು ಪ್ರಪಂಚದಲ್ಲಿ ಬಾಳಿದ ಇಂತಹ ಮಹಾ ವ್ಯಕ್ತಿಗಳ ಜೀವನವನ್ನು ನೋಡುವೆನು. ನಾನು ಕಲ್ಪಿಸಿಕೊಳ್ಳುವ ಭಗವಂತನ ಭಾವನೆಗಳೆಲ್ಲಕ್ಕಿಂತ ಇವು ಮೇಲು. ನನ್ನಿಂದ ಏನಾದರೂ ಕದ್ದರೆ ಅವನನ್ನು ಜೈಲಿಗೆ ಕಳುಹಿಸುವಂತ ನನ್ನಂಥವನು ಎಂತಹ ದಯೆಯ ಭಾವನೆಯನ್ನು ಕಲ್ಪಿಸಿಕೊಳ್ಳಬಲ್ಲೆ? ನನ್ನ ಶ್ರೇಷ್ಠ ಕ್ಷಮಾ ಭಾವನೆಯಾದರೂ ಏನು? ಸ್ವಾರ್ಥತೆ ಇಲ್ಲದೆ ಬೇರಿಲ್ಲ. ನಿಮ್ಮಲ್ಲಿ ಯಾರು ನಿಮ್ಮ ದೇಹವನ್ನು ಬಿಟ್ಟು ನೆಗೆದು ಹೋಗಬಲ್ಲಿರಿ? ಮನಸ್ಸನ್ನು ಬಿಟ್ಟು ನೆಗೆದು ಹೋಗಬಲ್ಲಿರಿ? ನಿಮ್ಮಲ್ಲಿ ಒಬ್ಬರಿಗೂ ಇದು ಸಾಧ್ಯವಿಲ್ಲ. ನೀವು ಹೇಗೆ ಬಾಳುತ್ತಿರುವಿರೋ ಅದಲ್ಲದೆ ಮತ್ತಾವ ಪರಮಪ್ರೇಮದ ಭಾವನೆಯನ್ನು ಕಲ್ಪಿಸಿಕೊಳ್ಳಬಲ್ಲಿರಿ? ನಾವು ಯಾವುದನ್ನು ಅನುಭವಿಸಿಲ್ಲವೋ ಅದರ ಭಾವನೆಯನ್ನು ಕಲ್ಪಿಸಿಕೊಳ್ಳಲಾರೆವು. ಆದಕಾರಣ ಭಗವಂತನನ್ನು ಕಲ್ಪಿಸಿಕೊಳ್ಳುವ ಪ್ರಯತ್ನವೆಲ್ಲ ನಿಷ್ಪ್ರಯೋಜನವೇ ಸರಿ. ಈ ಮಹಾವ್ಯಕ್ತಿಗಳಲ್ಲಿ ಕಣ್ಣಿಗೆ ಕಾಣುವ ವಸ್ತುಗಳಿವೆ, ಬರೀ ಕಲ್ಪನೆಯಲ್ಲ, ನನ್ನ ಭಾವನೆಗೂ ನಿಲುಕದ ಪ್ರೀತಿ, ದಯೆ, ಪವಿತ್ರತೆ ಮುಂತಾದುವು ಈ ಮಹಾವ್ಯಕ್ತಿಗಳಲ್ಲಿ ಇವೆ. ಈ ಪವಿತ್ರಾತ್ಮರ ಪಾದಗಳಿಗೆ ನಮಿಸಿ ಇವರನ್ನು ದೇವರೆಂದು ಪೂಜಿಸುವುದರಲ್ಲಿ ಆಶ್ಚರ್ಯವೇನಿದೆ? ಇತರರು ತಾನೆ ಮತ್ತೆ ಬೇರೆ ಏನು ಮಾಡಬಲ್ಲರು. ಒಬ್ಬ ಬೇಕಾದಷ್ಟು ಮಾತನಾಡಬಹುದು. ಆದರೆ ಕಾರ್ಯತಃ ಏನುಮಾಡಬಲ್ಲ ಎಂಬುದನ್ನು ನೋಡಲಾಶಿಸುವೆನು. ಮಾತು ಅನುಷ್ಠಾನವಲ್ಲ. ದೇವರು, ಅವ್ಯಕ್ತ ಮುಂತಾದುವನ್ನೆಲ್ಲಾ ಕುರಿತು ಮಾತನಾಡುವುದೇನೋ ಒಳ್ಳೆಯದು. ಆದರೆ ಈ ಮಾನವ ದೇವರೆ ಎಲ್ಲಾ ದೇಶದ, ಎಲ್ಲಾ ಜನಾಂಗದ ನಿಜವಾದ ದೇವರು ಎಲ್ಲಿಯವರೆಗೆ

ಮನುಷ್ಯ ಮನುಷ್ಯನಾಗಿರುವನೋ ಅಲ್ಲಿಯವರಿಗೆ ಈ ದೇವಾಂಶ ಸಂಭೂತರನ್ನು ಹಿಂದೆ ಪೂಜಿಸುತ್ತಿದ್ದರು, ಮುಂದೆಯೂ ಪೂಜಿಸುವನು. ನಿಜವಾಗಿ ಒಂದು ಸತ್ಯವಿದೆ ಎನ್ನುವುದರ ಶ್ರದ್ಧೆ ಅಲ್ಲಿರುವುದು, ಭರವಸೆ ಅಲ್ಲಿರುವುದು. ಸುಮ್ಮನೆ ಅಸ್ಪಷ್ಟವಾದ ಸಿದ್ಧಾಂತದಿಂದ ಏನು ಪ್ರಯೋಜನ?

ನಾನು ನಿಮಗೆ ಹೇಳಬೇಕೆಂಬುದರ ಉದ್ದೇಶ ಇದು; ಇಂತಹ ಮಹಾಪುರುಷರನ್ನೆಲ್ಲಾ ಪೂಜಿಸುವುದಕ್ಕೆ ನನಗೆ ಸಾಧ್ಯವಾಯಿತು. ಮುಂದೆ ಬರುವವರನ್ನು ಪೂಜಿಸುವುದಕ್ಕೆ ನಾನು ಸಿದ್ಧನಾಗಿರುವೆನು. ಮಗ ಯಾವ ಬಟ್ಟೆ ಹಾಕಿಕೊಂಡು ಎದುರಿಗೆ ಬಂದರೂ ತಾಯಿಗೆ ಗೊತ್ತಾಗುವುದು. ಇದು ಯಾರಿಗೆ ಸಾಧ್ಯವಿಲ್ಲವೋ ಆಕೆ ನಿಜವಾಗಿ ಅವನ ತಾಯಿಯಲ್ಲ ಎನ್ನಬೇಕಾಗುವುದು. ಯಾರೋ ಒಬ್ಬ ದೇವ ಮಾನವನಲ್ಲಿ ನೀವು ಸತ್ಯ, ಪವಿತ್ರತೆ, ದೈವತ್ವವನ್ನು ತಿಳಿದುಕೊಳ್ಳಲು ಸಾಧ್ಯ ಇತರರಲ್ಲಿ ಇಲ್ಲ ಎಂದರೆ, ನಾನು ನಿರ್ಣಯಿಸುವುದೇನೆಂದರೆ ನೀವು ಯಾರಲ್ಲಿಯೂ ದೈವತ್ವವನ್ನು ನೋಡಲಾರಿರಿ. ನೀವು ಕೇವಲ ಪದವನ್ನು ನಂಬಿರುವಿರಿ. ಹೇಗೆ ಯಾವುದಾದರೊಂದು ರಾಜಕೀಯ ಪಕ್ಷಕ್ಕೆ ಸೇರಿರುವಿರೋ ಹಾಗೆಯೇ ಯಾವುದೋ ಒಂದು ಧರ್ಮಪಕ್ಷಕ್ಕೆ ಸೇರಿರುವಿರಿ. ಆದರೆ ಇದು ಧರ್ಮವಲ್ಲ. ಕೆಲವು ಮೂರ್ಖರಿರುವರು, ಅವರು ಹತ್ತಿರದಲ್ಲಿ ಚೆನ್ನಾದ ಸಿಹಿ ನೀರಿದ್ದರೂ ಉಪ್ಪು ನೀರನ್ನು ಉಪಯೋಗಿಸುವರು. ಏಕೆಂದರೆ ಆ ಉಪ್ಪು ನೀರಿನ ಬಾವಿಯನ್ನು ತನ್ನ ಅಪ್ಪ ತೋಡಿಸಿದ್ದ ಎನ್ನುವರು. ನನ್ನ ಅಲ್ಪ ಅನುಭವದಲ್ಲಿ ನಾನು ಈ ಜ್ಞಾನವನ್ನು ಶೇಖರಿಸಿರುವೆನು. ಯಾವ ಭೀಕರ ಕೃತ್ಯಕ್ಕೆ ನಾವು ಧರ್ಮವನ್ನು ದೂರುತ್ತೇವೋ ಅದಕ್ಕೆ ಧರ್ಮ ಕಾರಣವೇ ಅಲ್ಲ. ಯಾವ ಧರ್ಮವೂ ಜನರನ್ನು ಹಿಂಸಿಸಲಿಲ್ಲ. ಯಾವ ಧರ್ಮವೂ ಧರ್ಮ ವಾದಿಗಳನ್ನು ಸುಡಲಿಲ್ಲ. ಇಂತಹ ಕೆಲಸವನ್ನು ಯಾವ ಧರ್ಮವೂ ಎಂದಿಗೂ ಮಾಡಲಿಲ್ಲ. ಇಂತಹ ಭೀಕರ ಕೃತ್ಯಗಳನ್ನು ಮಾಡುವಂತೆ ಜನರನ್ನು ಯಾವುದು ಉದ್ರೇಕಿಸಿದ್ದು? ರಾಜಕೀಯವಲ್ಲದೆ ಧರ್ಮವಲ್ಲ. ಇಂತಹ ರಾಜಕೀಯವನ್ನು ಧರ್ಮವೆಂದು ಕರೆದರೆ ಅದಕ್ಕೆ ಯಾರು ಹೊಣೆ.

ಪ್ರತಿಯೊಬ್ಬರೂ ನಮ್ಮ ದೇವದೂತನೊಬ್ಬನೇ ನಿಜವಾದ ದೇವದೂತನೆಂದರೆ ಅವನು ಸರಿಯಲ್ಲ. ಅವನಿಗೆ ಧರ್ಮದ ತಿಳಿವಳಿಕೆಯೇ ಇಲ್ಲ. ಧರ್ಮ ಮಾತಲ್ಲ, ಸಿದ್ಧಾಂತವಲ್ಲ, ಅಥವಾ ಒಪ್ಪಿಗೆಯೂ ಅಲ್ಲ. ನಮ್ಮ ಹೃದಯಾಂತರಾಳದಲ್ಲಿ ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು, ಭಗವಂತನನ್ನು ಸ್ಪರ್ಶಮಾಡುವುದು. ಭಗವಂತನನ್ನು ನನ್ನಲ್ಲಿ ಅನುಭವಿಸುವುದು, ವಿಶ್ವಾತ್ಮ ಮತ್ತು ಅವನ ಆವಿರ್ಭಾವಗಳಂತೆ ನಾನು ಅವನ ಆವಿರ್ಭಾವದಲ್ಲಿ ಒಂದಾದ ಆತ್ಮ ಎಂಬುದನ್ನು ಅನುಭವಿಸುವುದೇ ಧರ್ಮ. ನೀವು ನಿಜವಾಗಿಯೂ ತಂದೆಯ ಮನೆಗೆ ಪ್ರವೇಶಿಸಿದ್ದರೆ, ನೀವು ಅವನ ಮಕ್ಕಳನ್ನೇ ನೋಡಿಯೂ ಹೇಗೆ ನಿಮಗೆ ಅವರ ಪರಿಚಯವಾಗದೆ ಇರುವುದು? ನೀನು ಅವರನ್ನು ತಿಳಿಯಲಾರದೆ ಇದ್ದರೆ ನೀನು ತಂದೆಯ ಮನೆಗೇ ಹೋಗಿಲ್ಲ ಎಂದಾಯಿತು. ತಾಯಿಗೆ ಮಗು ಯಾವ ವೇಷದಲ್ಲಿದ್ದರೂ ಗೊತ್ತಾಗುವುದು. ಅವನು ಎಷ್ಟೇ ಮರೆಮಾಚಿಕೊಂಡಿದ್ದರೂ ಕಂಡು ಹಿಡಿಯಬಲ್ಲಳು. ಪ್ರತಿಯೊಂದು ದೇಶದಲ್ಲಿ ಮತ್ತು ಪ್ರತಿಯೊಂದು ಕಾಲದಲ್ಲಿರುವ ಮಹಾವ್ಯಕ್ತಿಗಳನ್ನು ಒಪ್ಪಿಕೊಳ್ಳಿ. ನಿಜವಾಗಿ ಅವರಲ್ಲಿ ವ್ಯತ್ಯಾಸವಿಲ್ಲವೆಂಬುದನ್ನು ತಿಳಿಯಿರಿ. ಎಲ್ಲಿ ನಿಜವಾಗಿ ಧರ್ಮವಿದೆಯೋ, ಆ ಜೀವಿಗೆ ಭಗವಂತನ ಸ್ಪರ್ಶವಾಗಿದೆಯೋ, ಜೀವಿ ಭಗವಂತನೊಂದಿಗೆ ಸಂಬಂಧವನ್ನು ಕಲ್ಪಿಸಿಕೊಂಡಿದೆಯೋ ಅಲ್ಲೆಲ್ಲಾ ಹೃದಯ ವಿಶಾಲವಾಗುವುದು. ಎಲ್ಲರ ಹೃದಯಾಂತರಾಳದಲ್ಲಿ ಬೆಳಗುತ್ತಿರುವ ದಿವ್ಯಜ್ಯೋತಿಯನ್ನು ನೋಡಲು ಸಾಧ್ಯವಾಗುವುದು. ಈ ದೃಷ್ಟಿಯಲ್ಲಿ ಮಹಮದೀಯರು ಇನ್ನೂ ಹಿಂದುಳಿದಿರುವರು. ಸ್ವಮತಾಭಿಲಾಷೆ ಹೆಚ್ಚು ಅವರಲ್ಲಿ. ಅವರ ಪಲ್ಲವಿಯೆ "ದೇವನೊಬ್ಬನೆ ಅಲ್ಲ. ಅವನ ದೂತನೇ ಮಹಮ್ಮದ" ಎಂಬುದು. ಇದರಾಚೆ ಇರುವುದೆಲ್ಲ ಕೆಟ್ಟದ್ದು ಮಾತ್ರವಲ್ಲ ತಕ್ಷಣ ಅವನ್ನು ನಾಶಮಾಡಬೇಕೆಂದು ಭಾವಿಸುವನು. ಸ್ತ್ರೀಪುರುಷರು ಯಾರಾದರೂ ಆಗಲಿ, ಯಾರು ತಮ್ಮಂತೆ ನಂಬುವುದಿಲ್ಲವೋ ಅವರನ್ನೆಲ್ಲಾ ಈ ಕ್ಷಣವೇ ಕೊಲ್ಲಬೇಕು. ಈ ಧರ್ಮಕ್ಕೆ ಸೇರದೆ ಇರುವುದನ್ನೆಲ್ಲಾ ಧ್ವಂಸ ಮಾಡಬೇಕು. ಇದಲ್ಲದೆ ಬೇರೆ ಬೋಧಿಸುವ ಗ್ರಂಥಗಳನ್ನೆಲ್ಲಾ ದಹಿಸಬೇಕು. ಪೆಸಿಫಿಕ್ ಸಾಗರದಿಂದ ಅಟ್ಲಾಂಟಿಕ್

ಸಾಗರದವರೆಗೆ ಐನೂರು ವರ್ಷಗಳ ಕಾಲ ರಕ್ತಕಾಲುವೆ ಹರಿಸಿದರು ಇವರು. ಇದೇ ಇಸ್ಲಾಂಮತ. ಆದರೂ ಈ ಮಹಮ್ಮದೀಯರಲ್ಲಿಯೂ ಎಲ್ಲಿಯಾದರೂ ಒಬ್ಬ ತತ್ತ್ವಜ್ಞಾನಿ ಇದ್ದರೆ ಅವನು ನಿಜವಾಗಿ ಈ ಭೀಕರ ಕೃತ್ಯವನ್ನು ವಿರೋಧಿಸುತ್ತಿದ್ದನು. ಅಲ್ಲಿ ಭಗವಂತ ಅವನನ್ನು ಸ್ಪರ್ಶಿಸಿದ್ದನು. ಸತ್ಯಾಂಶವನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದನು ಎಂಬುದನ್ನು ತೋರುವುದು. ಅವನು ಧರ್ಮದೊಂದಿಗೆ ಗೇಲಿ ಮಾಡುತ್ತಿರಲಿಲ್ಲ. ಅವನು ಮಾತಾಡುತ್ತಿದ್ದುದು ಯಾವುದೂ ತನ್ನ ವಂಶದವರ ಧರ್ಮವಲ್ಲ. ಸ್ವಂತ ಅನುಭವದ ಸತ್ಯವನ್ನು ಹೇಳುತ್ತಿದ್ದನು.

ವಿಕಾಸವಾದದ ಸಿದ್ಧಾಂತದಲ್ಲಿ ನಮ್ಮ ಬಹಳ ಹಿಂದಿನ ಪಿತೃಗಳನ್ನು ಹೋಲುವ ಅಟಾವಿಸಂ ಎಂಬ ಸಿದ್ಧಾಂತ ಬೇರೆ ಇರುವುದು. ಧರ್ಮದಲ್ಲಿ ಬಹಳ ಹಿಂದಿನ ಭಾವನೆಗಳಿಗೆ ಹೋಗುವ ಮತ್ತೊಂದು ಸ್ವಭಾವ ನಮ್ಮಲ್ಲಿದೆ. ತಪ್ಪಾದರೂ ಚಿಂತೆಯಿಲ್ಲ, ಯಾವುದಾದರೂ ಹೊಸ ಭಾವನೆಗಳನ್ನು ಆಲೋಚಿಸೋಣ. ಹಾಗೆ ಮಾಡುವುದು ಮೇಲು. ನೀವೇಕೆ ಲಕ್ಷ್ಯವನ್ನು ಮುಟ್ಟಲು ಯತ್ನಿಸ ಬಾರದು? ಸೋಲಿನಿಂದ ನಾವು ಹೆಚ್ಚು ಬುದ್ಧಿವಂತರಾಗುವೆವು. ಕಾಲ ಅನಂತವಾಗಿದೆ. ಗೋಡೆಯನ್ನು ನೋಡು. ಗೋಡೆ ಎಂದಾದರೂ ಸುಳ್ಳು ಹೇಳೀತೆ? ಅದು ಯಾವಾಗಲೂ ಒಂದು ಗೋಡೆಯೇ ಆಗದೆ. ಮನುಷ್ಯ ಸುಳ್ಳನ್ನು ಹೇಳುತ್ತಾನೆ. ಆದರೆ ಅವನು ಒಬ್ಬ ದೇವನೂ ಆಗಬಲ್ಲ. ಏನನ್ನಾದರೂ ಮಾಡುವುದು ಮೇಲು. ಅದು ತಪ್ಪಾದರೂ ಚಿಂತೆಯಿಲ್ಲ. ಇದು ಏನೂ ಮಾಡದೆ ಇರುವುದಕ್ಕಿಂತ ಮೇಲು. ಹಸು ಎಂದಿಗೂ ಸುಳ್ಳು ಹೇಳುವುದಿಲ್ಲ. ಆದರೆ ಅದು ಯಾವಾಗಲೂ ಹಸುವಾಗಿಯೇ ಉಳಿಯುವುದು. ಏನಾದರೂ ಮಾಡಿ. ಏನಾದರೂ ಯೋಚಿಸಿ. ಅದು ತಪ್ಪೋ, ಸರಿಯೋ ಚಿಂತೆಯಿಲ್ಲ. ಹೇಗೋ ಏನಾದರೂ ಆಲೋಚಿಸಿ. ನಮ್ಮ ಪೂರ್ವಿಕರು ಹೀಗೆ ಆಲೋಚಿಸಲಿಲ್ಲ ಎಂದು ಸುಮ್ಮನೆ ಕುಳಿತುಕೊಂಡು ಅನುಭವಿಸುವ ಸ್ವಭಾವವನ್ನೆಲ್ಲ, ಆಲೋಚಿಸುವ ಸ್ವಭಾವವನ್ನೆಲ್ಲ ಕಳೆದುಕೊಂಡಂತೆ. ಇದಕ್ಕಿಂತ ನಾವು ಮೃತ್ಯುವಶರಾಗುವುದು ಮೇಲು! ಸಜೀವ ಭಾವನೆಗಳಿಲ್ಲದೆ ಇದ್ದರೆ, ಧಾರ್ಮಿಕ ವಿಷಯದಲ್ಲಿ ನಮ್ಮ ನಿಶ್ಚಿತ ಅಭಿಪ್ರಾಯ

ವಿಲ್ಲದೆ ಇದ್ದರೆ, ನಾವು ಬಾಳಿ ಪ್ರಯೋಜನವೇನು? ನಾಸ್ತಿಕರಿಗಾದರೂ ಒಂದು ಭರವಸೆ ಇದೆ. ಏಕೆಂದರೆ ಇತರರೊಂದಿಗೆ ಅವರು ಒಪ್ಪದೆ ಇದ್ದರೂ ತಾವೇ ಸ್ವತಃ ಆಲೋಚಿಸುವರು. ತಾವೇ ಸ್ವತಃ ಏನನ್ನೂ ಆಲೋಚನೆ ಮಾಡದವರು ಅವರಿನ್ನೂ ಧಾರ್ಮಿಕ ಪ್ರಪಂಚದಲ್ಲಿ ಕಣ್ಣನ್ನೇ ತೆರದಿಲ್ಲ. ಅವರು ಹೇಗೋ ಇದ್ದ ಕಡೆ ಇದ್ದುಕೊಂಡು ಬದುಕಿರುವರು. ಅವರು ಆಲೋಚಿಸುವುದಿಲ್ಲ. ಅವರು ಧರ್ಮವನ್ನು ಲಕ್ಷಿಸುವುದಿಲ್ಲ. ಆದರೆ ಸಂಬದವನು. ನಾಸ್ತಿಕ ಅವನಿಗೆ ಬೇಕಾಗಿದೆ. ಅವನು ಅದಕ್ಕೆ ಪ್ರಯತ್ನಿಸುತ್ತಿರುವನು. ಆದಕಾರಣ ಏನನ್ನಾದರೂ ಆಲೋಚಿಸಿ, ದೇವರೆಡೆಗೆ ಹೋರಾಡು. ನೀನು ಸೋತರೂ ಚಿಂತೆಯಿಲ್ಲ. ಯಾವುದೋ ಒಂದು ವಿಚಿತ್ರ ಸಿದ್ಧಾಂತ ನಿನಗೆ ಸಿಕ್ಕಿದರೂ ಚಿಂತೆಯಿಲ್ಲ. ನಿನ್ನನ್ನು ಒಬ್ಬ ವಿಚಿತ್ರ ಮನುಷ್ಯ ಎಂದು ಕರೆಯುತ್ತಾರೆ ಎಂದು ಅಂಜಿದರೆ ಅದನ್ನು ನಿನ್ನಲ್ಲಿಯೇ ಇಟ್ಟುಕೋ. ನೀನು ಅದನ್ನು ಇತರರಿಗೆ ಹೋಗಿ ಬೋಧಿಸಬೇಕಾಗಿಲ್ಲ. ಆದರೆ ಏನನ್ನಾದರೂ ಸಾಧಿಸು. ದೇವರೆಡೆಗೆ ಹೋರಾಡು. ಬೆಳಕು ಬಂದೇ ತೀರಬೇಕು. ಪ್ರತಿದಿನ ನನಗೆ ಯಾರಾದರೂ ಊಟ ಮಾಡಿಸಿದರೆ ಕೊನೆಗೆ ನನ್ನ ಕೈ ಸ್ವಾಧೀನವೇ ತಪ್ಪಿಹೋಗುವುದು. ಕುರಿಯ ಮಂದೆಯಂತೆಯೇ ಒಬ್ಬರು ಮತ್ತೊಬ್ಬರನ್ನು ಅನುಸರಿಸುವುದರಿಂದಲೇ ಮಾನವ ಧರ್ಮಜೀವನಕ್ಕೆ ಸತ್ತಂತೆ ಆಗುವನು. ಜಡನಾಗಿ ಉಳಿದರೆ ಅದೇ ಮೃತ್ಯು. ಕಾರ್ಯೋನ್ಮುಖನಾಗು. ಎಲ್ಲಿ ಚಟುವಟಿಕೆ ಇದೆಯೋ ಅಲ್ಲಿ ಭಿನ್ನಾಭಿಪ್ರಾಯಗಳಿದ್ದೇ ಇರುವುವು. ಭಿನ್ನಾಭಿಪ್ರಾಯದಿಂದಲೇ ಜೀವನದಲ್ಲಿ ರಸಸೃಷ್ಟಿ, ಇದೇ ಸೌಂದರ್ಯ, ಇದೇ ಎಲ್ಲದರ ಕಲೆ. ವೈವಿಧ್ಯತೆ ಇರುವುದರಿಂದಲೇ ಎಲ್ಲಾ ಸುಂದರವಾಗಿರುವುದು. ವೈವಿಧ್ಯತೆಯು ಜೀವನದ ಮೂಲ, ಜೀವನದ ಚಿಹ್ನೆ. ನಾವೇಕೆ ಇದಕ್ಕೆ ಅಂಜಬೇಕು?

ಮಹಾಪುರುಷರನ್ನು ಅರ್ಥಮಾಡಿಕೊಳ್ಳುವ ಸ್ಥಿತಿಗೆ ನಾವೀಗ ಬರುತ್ತಿರುವೆವು. ಧರ್ಮದಲ್ಲಿ ಸುಮ್ಮನೆ ಹೇಳಿದುದನ್ನು ಒಪ್ಪಿಕೊಳ್ಳುವ ಸ್ಥಿತಿಯನ್ನು ಬಿಟ್ಟರೆ, ಇದನ್ನು ಐತಿಹ್ಯದ ದೃಷ್ಟಿಯಿಂದ ನೋಡಿದರೆ, ಅದೇ ನಿಜವಾಗಿ ಎಲ್ಲಿ ಯಾರಾದರೂ ಆಲೋಚಿಸುತ್ತಿದ್ದರೆ, ನಿಜವಾದ

ಭಗವತ್‌ಪ್ರೀತಿ ಇದ್ದರೆ, ಜೀವ ದೇವರೆಡೆಗೆ ಹೋಗಿ ಅವನಿಂದ ಕೆಲವು ತಾತ್ಕಾಲಿಕ ಅನುಭವವನ್ನು ಪಡೆದು ಭಗವಂತನನ್ನು ನಿಜವಾಗಿ ಒಂದು ಕ್ಷಣವಾಗಲೀ ಅಥವಾ ಯಾವಾಗಲೊಮ್ಮೆಯಾಗಲೀ ಅವನನ್ನು ಮನಗಂಡಿದ್ದರೆ, ಆಗ ತಕ್ಷಣ " ಸಂಶಯ ಎಂದೆಂದಿಗೂ ನಾಶವಾಗುವುದು. ನಮ್ಮ ಹೃದಯದ ವಕ್ರತೆ ಎಲ್ಲಾ ನೇರವಾಗುವುದು. ನಮ್ಮ ಬಂಧನಗಳೆಲ್ಲಾ ಕಳಚಿಹೋಗುವುದು, ನಮ್ಮ ಕರ್ಮಫಲವೆಲ್ಲಾ ದಗ್ಧವಾಗುವುದು." ಏಕೆಂದರೆ ಅವನು ಯಾರು ಅಂತರತಮನೋ, ದೂರತಮನೋ, ಅವನನ್ನು ಕಂಡಿರುವನು. ಇದೇ ಧರ್ಮ, ಧರ್ಮದ ಸರ್ವಸ್ವವೇ ಇದು. ಉಳಿದುವೆಲ್ಲ ಸಿದ್ಧಾಂತ, ನಂಬಿಕೆ, ಪ್ರತ್ಯಕ್ಷಾನುಭವಕ್ಕೆ ಒಯ್ಯುವ ಹಲವು ಮಾರ್ಗಗಳು ಅಷ್ಟೆ. ನಾವೀಗ ಹೋರಾಡುತ್ತಿರುವುದು ಬರೀ ಕುಕ್ಕೆಗಾಗಿ, ಅದರಲ್ಲಿರುವ ಹಣ್ಣೆಲ್ಲಾ ಚರಂಡಿಯ ಪಾಲಾಗಿದೆ.

ಇಬ್ಬರು ದೇವರ ವಿಷಯದಲ್ಲಿ ಜಗಳ ಕಾಯುತ್ತಿದ್ದರೆ ಅವರನ್ನು " ನೀನು ದೇವರನ್ನು ಕಂಡಿರುವೆಯಾ? ಆಧ್ಯಾತ್ಮಿಕ ಅನುಭವ ನಿನಗೆ ಆಗಿದೆಯೆ " ಎಂದು ಪ್ರಶ್ನೆ ಹಾಕಿ. ಒಬ್ಬ ಕ್ರೈಸ್ತನೊಬ್ಬನೇ ದೇವದೂತನೆನ್ನುವರು. ಆಗಲಿ ಅವನು ಕ್ರೈಸ್ತನನ್ನು ನೋಡಿರುವನೆ? " ಇಲ್ಲ ಸ್ವಾಮಿ ". " ನೀನು ಕ್ರೈಸ್ತನನ್ನು ನೋಡಿರುವೆಯಾ? " " ಇಲ್ಲ ಸ್ವಾಮಿ ". " ಹಾಗಾದರೆ ನೀವೆಲ್ಲ ಜಗಳ ಕಾಯುವುದೇತಕ್ಕೆ? ಹಣ್ಣೆಲ್ಲ ಚರಂಡಿಗೆ ಬಿದ್ದುಹೋಗಿವೆ. ನೀವು ಕುಕ್ಕೆಯ ವಿಷಯದಲ್ಲಿ ಹೋರಾಡುತ್ತಿರುವಿರಿ." ವಿವೇಚನೆಯುಳ್ಳ ಸ್ತ್ರೀಪುರುಷರು ಯಾರಾದರಾಗಲಿ ಹೀಗೆ ಜಗಳಕಾಯುವುದಕ್ಕೆ ನಾಚಿಕೆಪಡಬೇಕು.

ಈ ದೇವದೂತರು ಪ್ರವಾದಿಗಳು ಎಲ್ಲರೂ ಮಹಾವ್ಯಕ್ತಿಗಳು ಸತ್ಯ. ಏಕೆಂದರೆ ಪ್ರತಿಯೊಬ್ಬರೂ ಒಂದು ಉದಾತ್ತ ಭಾವನೆಯನ್ನು ಬೋಧಿಸಲು ಬಂದರು. ಉದಾಹರಣೆಗೆ ಭರತಖಂಡದ ದೇವದೂತರನ್ನು ತೆಗೆದುಕೊಳ್ಳಿ. ಅವರು ಧರ್ಮಸಂಸ್ಥಾಪಕರಲ್ಲೆಲ್ಲಾ ಪ್ರಾಚೀನದವರು. ಮೊದಲು ನಾವು ಕೃಷ್ಣನನ್ನು ತೆಗೆದುಕೊಳ್ಳೋಣ. ನೀವು ಗೀತೆಯನ್ನು ಓದಿರುವಿರಿ. ನೀವು ಪುಸ್ತಕವನ್ನೆಲ್ಲ ಓದಿದರೆ ಅಲ್ಲಿರುವ ಒಂದು ಭಾವನೆಯೆ ಅನಾಸಕ್ತಿ. ಅನಾಸಕ್ತನಾಗಿರು. ನಮ್ಮ ಹೃದಯ

ಪ್ರೇಮ ಒಂದು ವ್ಯಕ್ತಿಗೆ ಮಾತ್ರ ಮೀಸಲು. ಯಾರಿಗೆ ಅದು? ಯಾರು ಬದಲಾಯಿಸುವುದಿಲ್ಲವೋ ಅವನು. ಅವನಾರು? ಅವನೇ ದೇವರು. ಬದಲಾಯಿಸುತ್ತಿರುವ ಯಾರಿಗೂ ನಿಮ್ಮ ಹೃದಯವನ್ನು ತೆರುವ ತಪ್ಪು ಮಾಡಬೇಡಿ. ಏಕೆಂದರೆ ಅದರಿಂದ ದುಃಖಪ್ರಾಪ್ತಿ. ನೀವು ಅದನ್ನು ಒಂದು ವ್ಯಕ್ತಿಗೆ ಕೊಡಬಹುದು. ಆದರೆ ಆ ವ್ಯಕ್ತಿಯು ಕಾಲವಾದರೆ ದುಃಖವೇ ಪ್ರತಿಫಲ. ನೀವು ಅದನ್ನು ಒಬ್ಬ ಸ್ನೇಹಿತನಿಗೆ ಕೊಡಬಹುದು. ಆದರೆ ನಾಳೆ ಅವನು ನಿಮ್ಮ ವೈರಿಯಾಗಬಹುದು. ಅದನ್ನೇ ನಿಮ್ಮ ಪತಿಗೆ ಕೊಟ್ಟರೆ ಒಂದು ದಿನ ಅವನು ನಿಮ್ಮೊಂದಿಗೆ ಜಗಳ ಕಾಯಬಹುದು. ನೀವು ಅದನ್ನು ನಿಮ್ಮ ಸತಿಗೆ ಕೊಡಬಹುದು. ಆದರೆ ಅವಳು ನಾಳೆಯಲ್ಲ, ನಾಡಿದ್ದೇ ಕಾಲವಾಗಬಹುದು. ಪ್ರಪಂಚ ಸಾಗುತ್ತಿರುವುದೇ ಹೀಗೆ, ಆದಕಾರಣವೇ ಕೃಷ್ಣ ಗೀತೆಯಲ್ಲಿ ಹೇಳುವುದು ದೇವರೊಬ್ಬನೇ ಬದಲಾವಣೆಯಾಗದಿರುವನು ಎಂದು. ಅವನ ಪ್ರೇಮ ಎಂದಿಗೂ ನಿಷ್ಪ್ರಯೋಜನವಾಗುವುದಿಲ್ಲ. ನಾವೆಲ್ಲಿರಲಿ, ಏನನ್ನು ಮಾಡುತ್ತಿರಲಿ, ಅವನೆಂದಿಗೂ ದಯಾಮಯನಾದ, ಪ್ರೇಮಮಯನಾದ ಮೂರ್ತಿಯೆ. ನಾವೇನುಮಾಡಿದರೂ ಅವನೆಂದಿಗೂ ಬದಲಾಯಿಸುವುದಿಲ್ಲ. ಅವನೆಂದಿಗೂ ಕೋಪಗೊಳ್ಳುವುದಿಲ್ಲ. ದೇವರು ಹೇಗೆ ನಮ್ಮ ಮೇಲೆ ಕೋಪಗೊಳ್ಳಬಲ್ಲನು? ನಿಮ್ಮ ಮಗು ಎಷ್ಟೋ ತುಂಟತನ ಮಾಡುವುದು. ಆದರೆ ನಿಮಗೆ ಅದರ ಮೇಲೆ ಕೋಪವೆ? ನಾವು ಏನಾಗಬೇಕೋ ಅದು ದೇವರಿಗೆ ಗೊತ್ತಿಲ್ಲವೆ? ನಾವೆಲ್ಲ ಇಂದೋ ನಾಳೆಯೋ ಪರಿಪೂರ್ಣರಾಗುವೆವು ಎಂಬುದು ಅವನಿಗೆ ಗೊತ್ತಿದೆ. ಅವನಿಗೆ ತಾಳ್ಮೆ ಇದೆ. ಅನಂತ ತಾಳ್ಮೆ ಇದೆ. ನಾವು ಅವನನ್ನೇ ಪ್ರೀತಿಸಬೇಕು. ಇರುವವರೆಲ್ಲಾ ಅವನಲ್ಲಿ ಮತ್ತು ಅವನ ದೆಸೆಯಿಂದ ಮಾತ್ರಾ ಬದುಕಿರಲು ಸಾಧ್ಯ. ಇದೇ ಮುಖ್ಯ ಸಂದೇಶ. ನೀವು ಸತಿಯನ್ನು ಪ್ರೀತಿಸಬೇಕು. ಆದರೆ ಸತಿಗಾಗಿ ಅಲ್ಲ. "ಪ್ರಿಯೆ, ಪತಿಗಾಗಿ ಎಂದೂ ಯಾರೂ ಪತಿಯನ್ನು ಪ್ರೀತಿಸಲಿಲ್ಲ. ಆದರೆ ದೇವರು ಅವನಲ್ಲಿರುವುದರಿಂದ ಪ್ರೀತಿಸುವರು." ಸತಿಪತಿಯರ ಪ್ರೀತಿಯಲ್ಲಿಯೂ, ಸತಿ ಪತಿಯನ್ನು ಪ್ರೀತಿಸುವೆ, ಎಂದು ಭಾವಿಸುವಾಗಲೂ ಅಲ್ಲಿರುವ ನಿಜವಾದ ಆಕರ್ಷಣೆ ದೇವರು ಎಂದು ವೇದಾಂತತತ್ತ್ವ ಸಾರುವುದು. ಅವ

ನೊಬ್ಬನೆ ಏಕಮಾತ್ರ ಆಕರ್ಷಕ, ಬೇರೊಬ್ಬರಿಲ್ಲ. ಆದರೆ ಅನೇಕವೇಳೆ ಸತಿಗೆ ಹೀಗೆಂದು ಗೊತ್ತಿಲ್ಲ. ಅಜ್ಞಾನದಿಂದ ಅವಳು ಸರಿಯಾದು ದನ್ನೇ ಮಾಡುತ್ತಿರುವಳು, ಅದೇ ಭಗವಂತನನ್ನು ಪ್ರೀತಿಸು ವುದು. ಅಜ್ಞಾನದಿಂದ ನಾವು ಅದನ್ನು ಮಾಡಿದಾಗ ದುಃಖಪ್ರಾಪ್ತಿ ಅಷ್ಟೆ. ಅದನ್ನು ತಿಳಿದು ಮಾಡಿದರೆ ಅದೇ ಮುಕ್ತಿ. ನಮ್ಮ ಶಾಸ್ತ್ರ ಹೇಳುವುದು ಇದನ್ನು. ಎಲ್ಲಿಯಾದರೂ ಪ್ರೇಮವಿದ್ದರೆ, ಎಲ್ಲಿಯಾದರೂ ಒಂದು ಆನಂದಕಣವಿದ್ದರೆ, ಅದು ಆ ಭಗವಂತನ ಆವಿರ್ಭಾವದ ಕಿರಣವೆಂದು ಅರಿಯಿರಿ. ಏಕೆಂದರೆ, ಅವನೇ ಸಂತೋಷ, ಆನಂದ, ಪ್ರೇಮಸ್ವರೂಪನು. ಅವನಿಲ್ಲದೆ ಇದ್ದರೆ ಯಾವ ಪ್ರೇಮವೂ ಇಲ್ಲ.

ಕೃಷ್ಣ ಎಲ್ಲ ಕಡೆಯಲ್ಲಿ ಬೋಧಿಸುವ ರೀತಿಯೇ ಇದು. ಅವನು ಈ ವರ್ಚಸ್ಸನ್ನೇ ಇಡೀ ಜನಾಂಗದ ಮೇಲೆ ಬೀರಿರುವನು. ಹಿಂದು ಏನನ್ನಾದರೂ ಮಾಡಿದರೆ, ಅವನು ಒಂದು ತೊಟ್ಟು ನೀರು ಕುಡಿದರೂ ಇದರಲ್ಲಿ ಪುಣ್ಯವಿದ್ದರೆ ಅದು ದೇವರಿಗೆ ಹೋಗಲಿ ಎನ್ನುವನು. ಬೌದ್ಧರು ತಾವು ಯಾವುದಾದರೂ ಧರ್ಮ ಕೆಲಸವನ್ನು ಮಾಡಿದರೆ ಆ ಧರ್ಮಕಾರ್ಯದ ಪುಣ್ಯ ಪ್ರಪಂಚಕ್ಕೆ ಹೋಗಲಿ, ನಾನು ಮಾಡು ವುದರಲ್ಲಿ ಏನಾದರೂ ಪುಣ್ಯ ಬರುವ ಹಾಗಿದ್ದರೆ ಅದು ಪ್ರಪಂಚಕ್ಕೆ ಹೋಗಲಿ, ಪ್ರಪಂಚದ ಪಾಪ ನನಗೆ ಬರಲಿ ಎನ್ನುವರು. ಹಿಂದೂ ತನಗೆ ದೇವರಲ್ಲಿ ಹೆಚ್ಚು ನಂಬಿಕೆ ಇದೆ ಎಂದು ಹೇಳುವನು. ದೇವರು ಸರ್ವಶಕ್ತ, ಸರ್ವಾಂತರ್ಯಾಮಿ, ಸರ್ವವ್ಯಾಪಿ ಎನ್ನುವನು. ನಾನು ನನ್ನ ಪುಣ್ಯವನ್ನೆಲ್ಲಾ ಅವನಿಗೆ ಧಾರೆ ಎರೆದರೆ ಅದೇ ಮಹಾಯಜ್ಞ. ಅದು ಇಡೀ ಜಗತ್ತಿಗೆ ಅರ್ಪಣವಾಗುವುದು ಎನ್ನುವನು ಹಿಂದು.

ಇದೊಂದು ಅವನ ಸಂದೇಶದ ಒಂದು ಭಾಗ. ಕೃಷ್ಣನ ಮತ್ತೊಂದು ಸಂದೇಶ ಯಾವುದು? ಯಾರು ಪ್ರಪಂಚದ ಮಧ್ಯೆ ಇದ್ದು ಕೆಲಸಮಾಡುತ್ತಾರೆಯೋ, ಅದರ ಫಲವನ್ನೆಲ್ಲ ಭಗವಂತನಿಗೆ ಅರ್ಪಿಸುತ್ತಾರೆಯೋ, ಅವರನ್ನು ಪ್ರಪಂಚದ ಪಾಪ ಮುಟ್ಟಲಾರದು. ಕಮಲ ಹೇಗೆ ನೀರಿನಲ್ಲಿ ಹುಟ್ಟಿದರೂ ಅದರಿಂದ ಮೇಲೆದ್ದು ವಿಕಾಸ ವಾಗುವುದೋ ಹಾಗೆಯೇ ಕರ್ಮ ಫಲವನ್ನೆಲ್ಲ ಭಗವಂತನಿಗೆ ಅರ್ಪಿಸಿ ಕೆಲಸಮಾಡುವವನು ಕೂಡ.

ಕೃಷ್ಣ ಪ್ರಚಂಡ ಕರ್ಮ ಯೋಗಿಯಂತೆ ಮತ್ತೊಂದು ಸಂದೇಶವನ್ನು ಸಾರುವನು. ಕರ್ಮ, ಕರ್ಮ, ಹಗಲು ರಾತ್ರಿ ಕರ್ಮಮಾಡಿ ಎನ್ನುವುದು ಗೀತ. ಹಾಗಾದರೆ ಶಾಂತಿ ಎಲ್ಲಿ? ನಾನು ಬದುಕಿರುವ ಪರ್ಯಂತ ಗಾಡಿಗೆ ಕಟ್ಟಿದ ಕುದುರೆಯಂತೆ ದುಡಿದು ದುಡಿದರೆ ನಾನಿಲ್ಲಿರುವುದು ಏತಕ್ಕೆ? ಕೃಷ್ಣ ಹೇಳುತ್ತಾನೆ, "ಹೌದು, ನಿನಗೆ ಶಾಂತಿ ಸಿಕ್ಕುವುದು, ಕರ್ಮ ವಿಮುಖವಾಗುವುದಲ್ಲ ಶಾಂತಿಗೆ ಮಾರ್ಗ. ಸಾಧ್ಯವಾದರೆ ನಿಮ್ಮ ಕರ್ತವ್ಯಗಳನ್ನೆಲ್ಲ ಆಚೆಗೊಗೆದು ಗಿರಿಯ ಮೇಲೇರಿ. ಅಲ್ಲಿಯೂ ಮನಸ್ಸು ಯಾವಾಗಲೂ ಕೆಲಸ ಮಾಡುತ್ತಲೇ ಇರುವುದು, ಸುತ್ತುತ್ತಿರುವುದು, ಅಲೆಯುತ್ತಿರುವುದು. ಯಾರೋ ಸನ್ಯಾಸಿಯೊಬ್ಬರನ್ನು ಕೇಳಿದರು, "ಸ್ವಾಮಿ, ನಿಮಗೆ ಒಂದು ಸರಿಯಾದ ಸ್ಥಳ ದೊರಕಿತೆ? ನೀವು ಎಷ್ಟು ವರುಷಗಳಿಂದಲೂ ಹಿಮಾಲಯದಲ್ಲಿ ಅಲೆಯುತ್ತಿರುವಿರಿ?" ಎಂದು. ನಲವತ್ತು ವರುಷಗಳಿಂದ ಎಂದ ಸನ್ಯಾಸಿ. "ಆರಿಸಿಕೊಳ್ಳುವುದಕ್ಕೆ, ತಂಗುವುದಕ್ಕೆ ಎಷ್ಟೋ ಸುಂದರವಾದ ಸ್ಥಳಗಳಿವೆ" ಎಂದನು. ಹಾಗಾದರೆ ನೀವು ಏತಕ್ಕೆ ಹಾಗೆ ಮಾಡಲಿಲ್ಲ? ಎಂಬುದಕ್ಕೆ; "ಏಕೆಂದರೆ ಈ ನಲವತ್ತು ವರುಷಗಳು ಮನಸ್ಸು ನನಗೆ ಅಸ್ಪದ ಕೊಡಲಿಲ್ಲ" ಎಂದ. ಶಾಂತಿಯನ್ನು ಹುಡುಕುವ ಎಂದು ನಾವೆಲ್ಲ ಹೇಳುತ್ತೇವೆ. ಆದರೆ ಹಾಗೆ ಮಾಡಲು ನಮ್ಮ ಮನಸ್ಸು ಅವಕಾಶ ಕೊಡುವುದಿಲ್ಲ.

ಒಂದು ಟಾರ್ಟರ್ ಮೃಗ ಹಿಡಿದವನ ಕಥೆ ನಿಮಗೆ ಗೊತ್ತೆ? ಸಿಪಾಯಿಯೊಬ್ಬ ಊರ ಹೊರಗೆ ಹೋಗಿದ್ದ. ಸಿಪಾಯಿಗಳು ಇಳಿದುಕೊಳ್ಳುವ ಸ್ಥಳದ ಸಮೀಪಕ್ಕೆ ಬಂದಾಗ ಅವನು "ನಾನೊಂದು ಟಾರ್ಟರ್ ಮೃಗ ಹಿಡಿದಿರುವೆನು" ಎಂದು ಅರಚಿಕೊಂಡ. ಅದನ್ನು ತೆಗೆದುಕೊಂಡು ಬಾ ಎಂದು ಯಾರೋ ಹೇಳಿದರು. ಅದು ಬರುವುದಿಲ್ಲ ಸ್ವಾಮಿ ಎಂದ. ಹಾಗಾದರೆ ನೀನೇ ಬಾಯೆಂದರು. ಅದು ನನ್ನನ್ನು ಹೋಗಲು ಬಿಡುವುದಿಲ್ಲ ಎಂದ. ಹೀಗೆ ನಮ್ಮ ಮನಸ್ಸಿನಲ್ಲಿ ನಾವೊಂದು ಟಾರ್ಟರ್ ಹಿಡಿದಿರುವೆವು. ನಾವೆಲ್ಲ ಸುಮ್ಮನಿರಿ, ಶಾಂತರಾಗಿ ಎಂದು ಏನೇನೋ ಹೇಳುವೆವು. ಪ್ರತಿಯೊಂದು ಮನವೂ ಬೇಕಾದರೆ ಹಾಗೆ ಹೇಳಬಲ್ಲದು, ಮತ್ತು ಹೀಗೆ ಮಾಡಬಲ್ಲೆ ಎಂದು

ಭಾವಿಸುವುದು. ಆದರೆ ಅದು ಬಹಳ ಕಷ್ಟ. ನಾನು ಅದನ್ನು ಪ್ರಯತ್ನಿಸಿರುವೆನು. ನನ್ನ ಕರ್ತವ್ಯವನ್ನೆಲ್ಲ ನಾನು ಆಚೆಗೆಸೆದು ಗಿರಿಯ ಮೇಲಕ್ಕೆ ಓಡಿಹೋದೆ. ನಾನು ಗುಹೆಯಲ್ಲಿ ದಟ್ಟ ಕಾನನದಲ್ಲಿದ್ದೆ. ಆದರೂ ನಾನೊಂದು ಟಾರ್ಟರ್ ಹಿಡಿದೆ. ಏಕೆಂದರೆ ಸದಾಕಾಲದಲ್ಲಿ ನನ್ನದೇ ಪ್ರಪಂಚ ಯಾವಾಗಲೂ ನನ್ನಲ್ಲಿತ್ತು. ನನ್ನ ಮನಸ್ಸಿನಲ್ಲಿರುವುದೇ ಟಾರ್ಟರ್. ಸುಮ್ಮನೆ ಹೊರಗಿನವರನ್ನು ದೂರಿ ಪ್ರಯೋಜನವಿಲ್ಲ. ನಮ್ಮಲ್ಲಿ ಟಾರ್ಟರ್ ಇರುವಾಗ ಈ ಸನ್ನಿವೇಶ ಒಳ್ಳೆಯದು, ಈ ಸನ್ನಿವೇಶ ಕೆಟ್ಟದ್ದು ಎಂದು ಹೇಳುವೆವು. ನಾವು ಅದನ್ನು ಸುಮ್ಮನಿರಿಸಿದರೆ ಶಾಂತರಾಗುವೆವು.

ಆದಕಾರಣವೇ ಕೃಷ್ಣ, ಕರ್ತವ್ಯವಿಮುಖರಾಗಬೇಡಿ, ಅದನ್ನು ವೀರರಂತೆ ಸ್ವೀಕರಿಸಿ, ಅದರ ಫಲಾಪೇಕ್ಷೆಯ ಕಡೆ ಮನಸ್ಸಿಲ್ಲದಿರಲಿ ಎನ್ನುವನು. ಆಳಿಗೆ ಪ್ರಶ್ನೆ ಹಾಕುವ ಅಧಿಕಾರವಿಲ್ಲ. ಯೋಧನಿಗೆ ಆಲೋಚಿಸುವ ಹಕ್ಕಿಲ್ಲ. ಮುಂದೆ ಹೋಗಿ, ನೀವು ಮಾಡಬೇಕಾದ ಕೆಲಸದ ಸ್ವಭಾವವನ್ನು ಕುರಿತು ಹೆಚ್ಚು ಚಿಂತಿಸದಿರಿ. ನೀವು ನಿಸ್ವಾರ್ಥರೆ, ಎಂದು ನಿಮ್ಮ ಮನಸ್ಸನ್ನು ಕೇಳಿ. ನೀವು ನಿಸ್ವಾರ್ಥರಾಗಿದ್ದರೆ, ಏನನ್ನೂ ಚಿಂತಿಸಬೇಕಾಗಿಲ್ಲ, ಯಾರೂ ನಿಮ್ಮನ್ನು ಹಿಡಿಯುವಂತಿಲ್ಲ. ಕಾರ್ಯೋನ್ಮುಖರಾಗಿರಿ. ಹತ್ತಿರ ಇರುವ ಕರ್ತವ್ಯವನ್ನು ಮಾಡಿ. ನೀವು ಇದನ್ನು ಮಾಡಿದರೆ ಕ್ರಮೇಣ "ಯಾರು ಪ್ರಚಂಡ ಕರ್ಮದ ಮಧ್ಯದಲ್ಲಿ ಅನಂತ ಶಾಂತಿಯನ್ನು ಪಡೆಯುವರೋ ಯಾರು ಅನಂತ ಶಾಂತಿಯ ಮಧ್ಯದಲ್ಲಿ ಪ್ರಚಂಡಕರ್ಮವನ್ನು ಕಾಣುವರೋ ಅವರೇ ಯೋಗಿ, ಮಹಾತ್ಮ, ಪೂರ್ಣಾತ್ಮ" ಎಂಬ ಸತ್ಯ ಅರಿವಾಗುವುದು.

ಈ ಬೋಧನೆಯ ಪರಿಣಾಮ ಏನಾಯಿತೆಂದರೆ, ಕರ್ಮಗಳೆಲ್ಲಾ ಪವಿತ್ರಕರ್ಮಗಳಾಗುವುವು. ಯಾವ ಕರ್ತವ್ಯವನ್ನೂ ಬರೀ ಕೆಲಸ ಎಂದು ಕರೆಯುವುದಕ್ಕೆ ನಮಗೆ ಅಧಿಕಾರವಿಲ್ಲ. ಪ್ರತಿಯೊಬ್ಬನ ಕರ್ಮವೂ ಸಿಂಹಾಸನದ ಮೇಲೆ ಕುಳಿತು ಮಾಡುವ ಚಕ್ರವರ್ತಿಯ ಕರ್ಮದಷ್ಟೇ ಶ್ರೇಷ್ಠ.

ಬುದ್ಧನ ಸಂದೇಶವನ್ನು ಕೇಳಿ. ಅದ್ಭುತವಾದ ಸಂದೇಶ ಅದು. ನಮ್ಮ ಹೃದಯದಲ್ಲಿ ಅದಕ್ಕೊಂದು ಎಡೆ ಇದೆ. ಸ್ವಾರ್ಥತೆ ಮತ್ತು

ಸ್ವಾರ್ಥತೆಗೆ ಕಾರಣವಾಗುವುದನ್ನೆಲ್ಲಾ ನಿರ್ಮೂಲ ಮಾಡಿ. ಹೆಂಡತಿ, ಮಕ್ಕಳು ಮತ್ತು ಯಾವ ಸಂಸಾರವೂ ಇಲ್ಲದಿರಲಿ. ಪ್ರಾಪಂಚಿಕರಾಗಬೇಡಿ. ಸಂಪೂರ್ಣ ನಿಸ್ವಾರ್ಥರಾಗಿ. ಪ್ರಾಪಂಚಿಕ ತಾನು ನಿಸ್ವಾರ್ಥನಾಗಿರುವೆನು ಎಂದು ಭಾವಿಸುವನು. ಆದರೆ ಅವನು ತನ್ನ ಹೆಂಡತಿಯ ಮುಖವನ್ನು ನೋಡಿದರೆ ಅವನನ್ನು ಸ್ವಾರ್ಥನನ್ನಾಗಿ ಮಾಡುವುದು. ತಾಯಿ ತಾನು ಸಂಪೂರ್ಣ ನಿಸ್ವಾರ್ಥಳಾಗಿರುವೆನು ಎಂದು ಭಾವಿಸುವಳು. ಆದರೆ ತನ್ನ ಮಗುವಿನ ಮೊಗವನ್ನು ನೋಡಿದೊಡನೆ ಸ್ವಾರ್ಥತೆ ಬರುವುದು. ಇದರಂತೆಯೇ ಪ್ರಪಂಚದಲ್ಲಿ ಎಲ್ಲವೂ ಕೂಡ. ಸ್ವಾರ್ಥತೆಯ ಆಲೋಚನೆ ಎದ್ದೊಡನೆಯೆ, ಯಾವುದಾದರೂ ಸ್ವಾರ್ಥವನ್ನು ನಾವು ಮಾಡಲೆತ್ನಿಸಿದೊಡನೆಯೆ, ನಿಜವಾದ ಮನುಷ್ಯ, ಪೂರ್ಣ ಮನುಷ್ಯ ಹೋದಂತೆ. ಅವನಿನ್ನುಮೇಲೆ ಮೊದಲು ನೀನು, ನಂತರ ನಾನು ಎಂದು ಹೇಳುವುದಿಲ್ಲ. ಅವನೊಂದು ಮೃಗ, ಅವನೊಬ್ಬ ಗುಲಾಮ. ತನ್ನ ಸಹೋದರನನ್ನೇ ಮರೆಯುವನು. ಅವನು ಇನ್ನುಮೇಲೆ ಮೊದಲು ನೀನು ನಂತರ ನಾನು ಎಂದು ಹೇಳುವುದಿಲ್ಲ. "ಮೊದಲು ನಾನು, ಅನಂತರ ಉಳಿದವರೆಲ್ಲ ತಮ್ಮತಮ್ಮನ್ನು ತಾವೇ ನೋಡಿಕೊಳ್ಳಲಿ" ಎನ್ನುವನು.

ಕೃಷ್ಣನ ಸಂದೇಶಕ್ಕೂ ನಮ್ಮಲ್ಲಿ ಒಂದು ಸ್ಥಳವಿದೆ ಎಂಬುವನ್ನು ನೋಡಿ ಆಯಿತು. ಆ ಸಂದೇಶವಿಲ್ಲದೆ ಇದ್ದರೆ ನಾವು ಚಲಿಸುವಂತೆಯೇ ಇಲ್ಲ. ನಾವು ಕೃಷ್ಣನ ಸಂದೇಶಕ್ಕೆ ಮನಗೊಡದೆ ಇದ್ದರೆ ಪ್ರಶ್ನೋಪೂರ್ವಕ ಶಾಂತಿ ಸಂತೋಷದಿಂದ ನಮ್ಮ ಪಾಲಿಗೆ ಬಂದ ಕರ್ತವ್ಯವನ್ನು ನಿರ್ವಹಿಸಲಾರೆವು. "ನಿಮ್ಮ ಕೆಲಸದಲ್ಲಿ ಸ್ವಲ್ಪ ದೋಷವಿದ್ದರೂ ಚಿಂತೆಯಿಲ್ಲ. ದೋಷವಿಲ್ಲದೆ ಯಾವ ಕೆಲಸವೂ ಇಲ್ಲ. ದೇವರ ಪಾಲಿಗೆ ಬಿಡು. ಅದರ ಫಲದಲ್ಲಿ ಆಸಕ್ತನಾಗಬೇಡ."

ಮತ್ತೊಂದು ಸಂದೇಶಕ್ಕೂ ನಮ್ಮ ಹೃದಯದಲ್ಲಿ ಎಡೆ ಇದೆ. ಕಾಲ ಓಡುತ್ತಿದೆ. ಪ್ರಪಂಚ ಅನಿತ್ಯ. ಎಲ್ಲಾ ದುಃಖಮಯ. ನಿಮ್ಮ ಚೆನ್ನಾದ ಊಟ, ಉಪಚಾರ, ಬಟ್ಟೆಬರೆ, ಮನೆಯಲ್ಲಿ ಆಸಕ್ತರಾಗಿ ನಿದ್ರಿಸುತ್ತಿರುವ ಸ್ತ್ರೀಪುರುಷರೆ ಕೋಟ್ಯಂತರ ಜನ ಕೂಳಿಗಿಲ್ಲದೆ ಸಾಯುವುದನ್ನು ನೀವು ಗಮನಿಸುವಿರಾ? ಇದೆಲ್ಲಾ ದುಃಖ ದುಃಖ ದುಃಖ

ಎಂಬ ಮಹಾಸತ್ಯವನ್ನು ಕುರಿತು ಯೋಚಿಸಿನೋಡಿ! ಪ್ರಪಂಚಕ್ಕೆ ಮಗು ಪ್ರವೇಶಿಸುವಾಗ ಏನು ಮಾಡುವುದು ಗಮನಿಸಿ. ಅದು ಅಳು ವುದು- ಮಗು ಅಳುವುದು. ಇದು ಸತ್ಯ. ಇದೊಂದು ಅಳುವ ಸ್ಥಳ- ನಾವು ಆ ದೇವದೂತನ ಮಾತನ್ನು ಕೇಳಿದರೆ ಸ್ವಾರ್ಥರಾಗಕೂಡದು.

ನಜರತ್ತಿನ ಪ್ರವಾದಿಯು ಮತ್ತೊಂದು ಕರೆಯನ್ನು ಕೇಳಿ. "ಅಣಿಯಾಗಿ. ಸ್ವರ್ಗಸಮೀಪದಲ್ಲೇ ಇದೆ" ಎನ್ನುವನು. ಕೃಷ್ಣನ ಸಂದೇಶವನ್ನು ಕುರಿತು ಮನನ ಮಾಡಿರುವೆವು. ನಾವು ಆಸಕ್ತಿ ಇಲ್ಲದೆ ಕೆಲಸಮಾಡಲು ಯತ್ನಿಸುತ್ತಿರುವೆವು. ಆದರೆ ಕೆಲವುವೇಳೆ ನಾವು ಅದನ್ನು ಮರೆಯುವೆವು. ಆಗ ತಕ್ಷಣ ಬುದ್ಧನ ಸಂದೇಶ ಬರು ವುದು. "ಜೋಪಾನವಾಗಿರಿ, ಪ್ರಪಂಚದಲ್ಲಿ ಎಲ್ಲಾ ಅನಿತ್ಯ. ಪ್ರಪಂಚ ದುಃಖದಿಂದ ತುಂಬಿದೆ." ನಾನು ಅದನ್ನು ಕೇಳುತ್ತೇನೆ. ಯಾವುದನ್ನು ಒಪ್ಪಿಕೊಳ್ಳಬೇಕೋ ನನಗೆ ಗೊತ್ತಿಲ್ಲ. ಅನಂತರ ಪುನಃ ವಜ್ರಾಘಾತ ದಂತೆ ಮತ್ತೊಂದು ಸಂದೇಶ ಬರುವುದು. "ಅಣಿಯಾಗಿ, ಸ್ವರ್ಗಸಮೀ ಪವಲ್ಲಿಯೇ ಇರುವುದು" ಒಂದು ಕ್ಷಣವೂ ವ್ಯರ್ಥಮಾಡಬೇಡಿ. ನಾಳೆಗೆ ಎಂದು ಏನನ್ನೂ ಬಿಡಬೇಡಿ. ಈ ಕ್ಷಣವೇ ನೀವು ಮೃತ್ಯುವಶರಾಗ ಬಹುದು. ಅದಕ್ಕೆ ಅಣಿಯಾಗಿ. ಆ ಸಂದೇಶಕ್ಕೂ ಅವಕಾಶವಿದೆ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಆ ದೇವದೂತನನ್ನು ನಮಿಸು ತ್ತೇವೆ. ಆ ಭಗವಂತನನ್ನು ನಮಿಸುತ್ತೇವೆ.

ಸಮತ್ವದ ಸಂದೇಶವನ್ನು ಸಾರಿದ ಮಹಮ್ಮದನಿಗೆ ನಾವು ಅನಂತರ ಬರುತ್ತೇವೆ. ಈ ಧರ್ಮದಿಂದ ಪ್ರಯೋಜನವೇನು ಎಂದು ನೀವು ಕೇಳಬಹುದು. ಅವರಲ್ಲಿ ಏನೂ ಪ್ರಯೋಜನವಿಲ್ಲದೆ ಇದ್ದರೆ ಅದು ಇಷ್ಟುದಿನ ಹೇಗೆ ಇರುತ್ತಿತ್ತು. ಒಳ್ಳೆಯದು ಮಾತ್ರ ಇರುವುದು. ಅದೊಂದೇ ಕೊನೆಯವರೆಗೂ ಇರುವುದು. ಒಳ್ಳೆಯದು ಮಾತ್ರ ಬಲಾಢ್ಯವಾದುದು. ಆದಕಾರಣವೇ ಅದು ಕೊನೆಯವರೆಗೂ ಇರು ವುದು. ಈ ಜೀವನದಲ್ಲಿ ತಾನೆ ದುರಾಚಾರಿ ಎಷ್ಟುದಿನ ಬಾಳಬಲ್ಲ. ಸದಾಚಾರಶೀಲನ ಆಯುಸ್ಸು ಅದಕ್ಕಿಂತ ಹೆಚ್ಚಲ್ಲವೆ? ನಿಜವಾಗಿಯೂ ಪವಿತ್ರತೆಯೇ ಶಕ್ತಿ. ಚಾರಿತ್ರಶುದ್ಧಿಯೇ ಶಕ್ತಿ. ಮಹಮ್ಮದನ ಬೋಧ ನೆಯಲ್ಲಿ ಒಳ್ಳೆಯದಿಲ್ಲವೇ ಇದ್ದರೆ ಅದು ಹೇಗೆ ಇದುವರೆಗೂ ಉಳಿಯು

ತ್ತಿತ್ತು? ಅದರಲ್ಲಿ ಎಷ್ಟೋ ಒಳ್ಳೆಯದಿದೆ. ಮಹಮ್ಮದ ಸಮತ್ವದ ಸಂದೇಶಕ, ಮಾನವನ ಸಹೋದರತ್ವದ. ಇಡೀ ಮಹಮ್ಮದೀಯರ ಸಹೋದರತ್ವದ ಸಂದೇಶಕ.

ಪ್ರತಿಯೊಬ್ಬ ದೇವದೂತನೂ, ಪ್ರವಾದಿಯೂ, ಜಗತ್ತಿಗೆ ಒಂದು ನಿರ್ದಿಷ್ಟ ಸಂದೇಶವನ್ನು ತಂದಿದ್ದರು. ಅನಂತರ ಅವನ ಜೀವನವನ್ನು ನೋಡಿ. ಅವೆಲ್ಲ ಇದರ ಬೆಳಕಿನಲ್ಲಿ ಎಷ್ಟು ಜಾಜ್ವಲ್ಯಮಾನವಾಗಿ ಹೊಳೆಯುವುದು, ಎಷ್ಟು ವಿವರಗಳು ವ್ಯಕ್ತವಾಗುವುವು?

ಬುದ್ಧಿಯಿಲ್ಲದ ಮೂರ್ಖರು ಇಪ್ಪತ್ತು ಸಾವಿರ ಸಿದ್ಧಾಂತಗಳನ್ನು ಪ್ರಚಾರಕ್ಕೆ ತರುವರು. ತಮ್ಮ ದೃಷ್ಟಿಗೆ ತೋರಿದಂತೆ ಅದನ್ನು ವಿವರಿಸಿ ಅದನ್ನೆಲ್ಲ ಅವರ ದೂತರು ಹೇಳಿದರೆಂದು ಸಾರುವರು. ಅವರು ಪ್ರವಾದಿಗಳ ಸಂದೇಶವನ್ನು ತೆಗೆದುಕೊಂಡು ತಮ್ಮ ತಪ್ಪು ಅಭಿಪ್ರಾಯಗಳನ್ನು ಕೊಡುವರು. ಪ್ರತಿಯೊಬ್ಬ ದೇವದೂತನಿಗೂ ಅವನ ಜೀವನವೇ ಅದಕ್ಕೆ ಬರೆದ ಭಾಷ್ಯ. ಅವರ ಜೀವನವನ್ನು ನೋಡಿ. ಅವರೇನೇನು ಮಾಡಿದರೂ ಅದು ಅವರ ಶಾಸ್ತ್ರದಲ್ಲಿದೆ. ಗೀತೆಯನ್ನು ಓದಿ. ಗೀತಾಚಾರ್ಯನ ಜೀವನದಲ್ಲಿ ಇದೆಲ್ಲ ಉದಹರಿತವಾಗಿರುವುದು ನಿಮಗೆ ತೋರುವುದು.

ಮಹಮ್ಮದ ತನ್ನ ಜೀವನದಲ್ಲಿ ಮಹಮ್ಮದೀಯರಲ್ಲಿ ಸಂಪೂರ್ಣ ಸಮತ್ವವಿರಬೇಕು, ಸಹೋದರಭಾವ ಇರಬೇಕು ಎಂಬುದನ್ನು ತೋರಿದ. ಅಲ್ಲಿ ಜನಾಂಗ ಜಾತಿ ಬಣ್ಣ ಲಿಂಗ ಇವುಗಳ ವ್ಯತ್ಯಾಸವೇ ಇಲ್ಲ. ಟರ್ಕಿಯ ಸುಲ್ತಾನ ಆಫ್ರಿಕಾ ಸಂತೆಯಲ್ಲಿ ಒಬ್ಬನನ್ನು ಗುಲಾಮನನ್ನಾಗಿ ಕೊಂಡು ಅವನಿಗೆ ಸರಪಳಿಯನ್ನು ಬಿಗಿದು ಟರ್ಕಿಗೆ ತರಬಹುದು. ಆದರೆ ಅವನು ಮಹಮ್ಮದೀಯನಾದರೆ ಅವನಲ್ಲಿ ಸಾಕಷ್ಟು ವಿದ್ಯಾ ಬುದ್ಧಿಗಳಿದ್ದರೆ ಸುಲ್ತಾನನ ಮಗಳನ್ನೇ ಬೇಕಾದರೆ ಮದುವೆಯಾಗಬಹುದು. ಈ ದೇಶದಲ್ಲಿ (ಅಮೆರಿಕಾ) ನೀಗ್ರೋ ಮತ್ತು ರೆಡ್ ಇಂಡಿಯಾದವರನ್ನು ಹೇಗೆ ನೋಡುತ್ತಿರುವರು ಎಂಬುದರೊಂದಿಗೆ ಹೋಲಿಸಿನೋಡಿ. ಹಿಂದೂಗಳು ಏನು ಮಾಡುತ್ತಾರೆ? ನಿಮ್ಮ ಪಾದ್ರಿಗಳಾವರೂ, ಆಚಾರಶೀಲನ ಆಹಾರವನ್ನು ಮುಟ್ಟಿದರೆ ಅದನ್ನು ಆಚೆಗೆ ಎಸೆಯುತ್ತಾನೆ. ನಮ್ಮಲ್ಲಿ ಎಷ್ಟೋ ದೊಡ್ಡ ತತ್ತ್ವವಿದ್ದರೂ ಅನು

ಸ್ಥಾನದಲ್ಲಿ ನಮ್ಮ ದುರ್ಬಲತೆಯನ್ನು ನೋಡಿ. ಆದರೆ ಮುಹಮ್ಮದನಲ್ಲಿ ನೋಡಿ. ಮತ್ತಾವ ಜನಾಂಗದಲ್ಲಿಯೂ ಕಾಣದ ಯಾವ ಜನಾಂಗಕ್ಕೆ ಸೇರಿರಲಿ, ಬಣ್ಣಕ್ಕೆ ಸೇರಿರಲಿ ಅವರಲ್ಲೆಲ್ಲಾ ಇರುವ ಸಮತ್ವವನ್ನು ನೋಡಿ.

ಅವರಿಗಿಂತ ಮೇಲಾದ ಇತರ ದೇವದೂತರು ಬರುವರೆ? ನಿಜವಾಗಿ ಅವರು ಈ ಪ್ರಪಂಚಕ್ಕೆ ಬರುವರು. ಆದರೆ ಇದನ್ನೇ ಎದುರು ನೋಡಬೇಡಿ. ನಿಮ್ಮಲ್ಲಿ ಪ್ರತಿಯೊಬ್ಬರೂ ಹಳೆಯುವನ್ನೆಲ್ಲಾ ಸೇರಿಸಿ ಮಾಡಿದ ಒಂದು ಹೊಸ ವ್ಯಕ್ತಿಗಳಾಗಿ ಎಂದು ಆಶಿಸುವೆನು. ಹಳೆಯ ಸಂದೇಶಗಳನ್ನೆಲ್ಲಾ ತೆಗೆದುಕೊಳ್ಳಿ. ಅದಕ್ಕೆ ನಿಮ್ಮ ಅನುಭವವನ್ನೆಲ್ಲಾ ಸೇರಿಸಿ, ಇತರರಿಗೆ ನೀವೊಬ್ಬ ಪ್ರವಾದಿಯಾಗಿ. ಪ್ರತಿಯೊಬ್ಬ ಗುರುಗಳೂ ಮಹಾವ್ಯಕ್ತಿಗಳಾಗಿದ್ದರು. ಪ್ರತಿಯೊಬ್ಬರೂ ನಮಗೆ ಸ್ವಲ್ಪ ಬಿಟ್ಟು ಹೋಗಿರುವರು. ಅವರು ನಮ್ಮ ದೇವರಾಗಿರುವರು. ನಾವು ಅವರಿಗೆ ನಮಿಸುವೆವು. ನಾವು ಅವರ ಸೇವಕರು. ಆದರೆ ಜೊತೆಗೆ ನಮ್ಮನ್ನೂ ನಾವು ಗೌರವಿಸಿಕೊಳ್ಳುವೆವು. ಏಕೆಂದರೆ ಅವರು ದೇವದೂತರಾದರೆ, ದೇವರ ಮಕ್ಕಳಾದರೆ ನಾವು ಕೂಡ ಹಾಗೆಯೇ ಇರುವೆವು, ಅವರು ಪೂರ್ಣತೆಯನ್ನು ಪಡೆದರು. ನಾವು ಕೂಡ ನಮ್ಮ ಪೂರ್ಣತೆಯನ್ನು ಈಗ ಮುಟ್ಟುವೆವು. "ಸ್ವರ್ಗ ಸಮೀಪದಲ್ಲೇ ಇದೆ" ಎಂಬ ಕ್ರಿಸ್ತನ ವಚನವನ್ನು ಗಮನಿಸಿ ಈ ಕ್ಷಣ ನಮ್ಮಲ್ಲಿ ಪ್ರತಿಯೊಬ್ಬರೂ ಶಪಥಮಾಡುವ: "ನಾನೊಬ್ಬ ದೇವದೂತನಾಗುತ್ತೇನೆ, ಜ್ಯೋತಿಯ ಸಂದೇಶಕನಾಗುತ್ತೇನೆ. ನಾನು ದೇವರ ಮಗನಾಗುತ್ತೇನೆ. ಇಲ್ಲ ನಾನೇ ದೇವರ ಮಗನಾಗುತ್ತೇನೆ."

೭

# ಭಗವಾನ್ ಬುದ್ಧ

ಪ್ರತಿಯೊಂದು ಧರ್ಮದಲ್ಲಿಯೂ ಒಂದೊಂದು ಬಗೆಯ ನೀತಿಯನ್ನು ಹೆಚ್ಚು ರೂಢಿಸಿರುವರು. ಅನಾಸಕ್ತಿಯಿಂದ ಕೆಲಸ ಮಾಡುವುದನ್ನು ಬೌದ್ಧ ಧರ್ಮದಲ್ಲಿ ಹೆಚ್ಚು ರೂಢಿಸಿರುವರು. ಬೌದ್ಧರು ಮತ್ತು ಬ್ರಾಹ್ಮಣರು ಒಂದೇ ಎಂದು ಭಾವಿಸಬೇಡಿ. ನೀವು ಈ ದೇಶದಲ್ಲಿ (ಅಮೆರಿಕಾ) ಹಾಗೆ ಮಾಡುವ ಸಂಭವ ಇದೆ. ಬೌದ್ಧ ಧರ್ಮ ನಮ್ಮಲ್ಲಿ - ಒಂದು ಶಾಖೆ ಅಷ್ಟೆ. ಇದು ಗೌತಮನೆಂಬ ಮಹಾತ್ಮನಿಂದ ಸ್ಥಾಪಿತವಾಯಿತು. ಆಗಿನ ಕಾಲದಲ್ಲಿ ಮಾಡುತ್ತಿದ್ದ ವೃಥಾ ಚರ್ಚೆ, ಆಚಾರಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲ ಬಗೆಯ ಜಾತಿಮತಗಳ ಪಂಗಡವನ್ನು ನೋಡಿ ರೋಸಿ ಬೌದ್ಧ ಧರ್ಮವನ್ನು ಸ್ಥಾಪಿಸಿದನು. ಕೆಲವರು ತಾವೊಂದು ಜಾತಿಗೆ ಜನ್ಮ ತಾಳಿರುವೆವು, ಆದಕಾರಣ ನಾವು ಹಾಗೆ ಇರದೆ ಇತರರಿಗಿಂತ ಮೇಲು ಎಂದು ಭಾವಿಸುವರು. ಅವನು ಪೌರೋಹಿತ್ಯವನ್ನು ಕಟುವಾಗಿ ವಿರೋಧಿಸುತ್ತಿದ್ದ. ಯಾವ ಆಸೆಯೂ ಇಲ್ಲದ ಒಂದು ಧರ್ಮವನ್ನು ಅವನು ಬೋಧಿಸಿದನು. ಈಶ್ವರನಿಗೆ ಸಂಬಂಧಪಟ್ಟ ಸಿದ್ಧಾಂತಗಳ ವಿಷಯದಲ್ಲಿ ಅವನು ಅಜ್ಞಾತವಾದಿಯಾಗಿದ್ದ. ದೇವರಿರುವನೆ ಎಂದು ಅನೇಕ ವೇಳೆ ಅವನಿಗೆ ಪ್ರಶ್ನೆ ಹಾಕಿದರು. ಅವನು ನನಗೆ ಗೊತ್ತಿಲ್ಲ ಎಂದನು. ನೀತಿಯ ವಿಷಯವನ್ನು ಕೇಳಿದಾಗ ಒಳ್ಳೆಯವರಾಗಿ, ಒಳ್ಳೆಯದನ್ನು ಮಾಡಿ ಎನ್ನುತ್ತಿದ್ದನು. ಐದುಜನ ಬ್ರಾಹ್ಮಣರು ಅವನ ಹತ್ತಿರ ಬಂದು ತಮ್ಮ ವ್ಯಾಜ್ಯವನ್ನು ಪರಿಹರಿಸಬೇಕೆಂದು ಹೇಳಿದರು. ಒಬ್ಬ "ಸ್ವಾಮಿ,

ನಮ್ಮ ಶಾಸ್ತ್ರ ದೇವರು ಹೀಗಿರುವನು, ಅವನೆಡೆಗೆ ಹೋಗುವುದಕ್ಕೆ ಇದೇ ದಾರಿ ಎಂದು ಹೇಳುವುದು" ಎಂದನು. ಮತ್ತೊಬ್ಬ "ಅದು ತಪ್ಪು ನನ್ನ ಶಾಸ್ತ್ರ ಬೇರೆ ಬಗೆಯಾಗಿ ಹೇಳುವುದು, ದೇವರೆಡೆಗೆ ಬರುವುದಕ್ಕೆ ಅದೇ ದಾರಿ" ಎಂದನು. ಹೀಗೆ ಎಲ್ಲರೂ ವಾದಿಸಿದರು. ಇವರು ಹೇಳುವುದನ್ನೆಲ್ಲಾ ಶಾಂತವಾಗಿ ಕೇಳಿ ಆ ಮೇಲೆ ಬುದ್ಧ ಇವರನ್ನು "ನಿಮ್ಮ ಯಾವುದಾದರೂ ಗ್ರಂಥ, ದೇವರಿಗೆ ಕೋಪ ಬರುವುದು, ಅವನು ಇತರರನ್ನು ನೋಯಿಸುವನು, ಅವನು ಅಶುದ್ಧ ಎಂದು ಹೇಳುವುದೆ?" ಎಂದು ಪ್ರಶ್ನಿಸಿದ. "ಇಲ್ಲ ಸ್ವಾಮಿ, ಅವನು ಪರಿಶುದ್ಧ ಅವನು ಒಳ್ಳೆಯವನು, ಎಂದು ಎಲ್ಲಾ ಶಾಸ್ತ್ರಗಳೂ ಸಾರುವುವು" ಎಂದರು. "ಹಾಗಾದರೆ ನನ್ನ ಸ್ನೇಹಿತರೆ, ಮೊದಲು ನೀವೆಲ್ಲ ಒಳ್ಳೆಯವರಾಗಿ, ಪವಿತ್ರರಾಗಿ, ಏತಕ್ಕೆ ನೀವು ಮೊದಲು ಪವಿತ್ರರಾಗ ಬಾರದು. ಆಗ ದೇವರನ್ನು ನೀವು ಅರಿಯಬಹುದು" ಎಂದನು.

ಅವನು ಹೇಳುವ ತತ್ತ್ವವನ್ನೆಲ್ಲಾ ನಾನು ಒಪ್ಪಿಕೊಳ್ಳುವುದೇನೂ ಇಲ್ಲ. ನಾನು ಎಷ್ಟೋ ಕಡೆ ಅವನು ಹೇಳುವುದನ್ನು ಒಪ್ಪಿಕೊಳ್ಳುವುದಿಲ್ಲ ಎಂದರೆ ಈ ಮನುಷ್ಯನ ಮಹಾತ್ಮೆಯನ್ನು ಮೆಚ್ಚ ಕೂಡದೆ? ಯಾವ ಆಸೆಯೂ ಇಲ್ಲದವನು ಅವನೊಬ್ಬನೆ. ಇನ್ನೂ ಮಹಾ ಮಹಾತ್ಮರಿದ್ದರು. ಅವರೆಲ್ಲ ತಾವು ಅವತಾರವೆಂದು ಸಾರಿದರು. ತಮ್ಮನ್ನು ನಂಬಿದವರಿಗೆ ಮೋಕ್ಷ ದೊರಕುವುದೆಂದು ಸಾರಿದರು. ಆದರೆ ಬುದ್ಧ ಮೃತ್ಯುಶಯ್ಯೆಯಲ್ಲಿಯೂ ಏನನ್ನು ಹೇಳಿದ? "ಯಾರೂ ನಿಮಗೆ ಸಹಾಯಮಾಡಲಾರರು. ನಿಮಗೆ ನೀವೇ ಸಹಾಯ ಮಾಡಿಕೊಳ್ಳಬೇಕು. ನಿಮ್ಮ ಮುಕ್ತಿಯನ್ನು ನೀವೇ ಹುಡುಕಿಕೊಳ್ಳಬೇಕು" ಎಂದು ಹೇಳಿದ. ಬುದ್ಧ ತನ್ನನ್ನು ಕುರಿತು ಹೀಗೆ ಹೇಳುವನು. "ಬುದ್ಧ ಎಂಬುದು ಆಕಾಶದಂತೆ ವಿಶಾಲವಾದ ಅನಂತಜ್ಞಾನದ ಸ್ಥಿತಿ. ಗೌತಮನಾದ ನಾನು ಅದನ್ನು ಪಡೆದಿರುವೆನು. ನೀವೂ ಅದಕ್ಕೆ ಪ್ರಯತ್ನಪಟ್ಟರೆ ಅದನ್ನು ಪಡೆಯುತ್ತೀರಿ. ಅವನಲ್ಲಿ ಯಾವ ಆಸೆಯೂ ಇಲ್ಲದೆ ಇದ್ದುದರಿಂದ ಅವನು ಸ್ವರ್ಗಕ್ಕೆ ಹೋಗಲು ಇಚ್ಛಿಸಲಿಲ್ಲ. ಅವನಿಗೆ ಹಣ ಬೇಕಾಗಿರಲಿಲ್ಲ. ಅವನು ರಾಜ್ಯ ಮುಂತಾದುವನ್ನೆಲ್ಲಾ ತ್ಯಜಿಸಿದನು. ಸಾಗರದಷ್ಟು ವಿಶಾಲವಾದ ಹೃದಯದಿಂದ

ಪ್ರಾಣಿ ಮತ್ತು ಮನುಷ್ಯರ ಹಿತವನ್ನು ಬೋಧಿಸುತ್ತ ದಾರಿಯಲ್ಲಿ ಭಿಕ್ಷೆ ಬೇಡುತ್ತಾ ಹೋದನು. ಒಂದು ಪ್ರಾಣಿಬಲಿಯನ್ನು ತಪ್ಪಿಸುವುದಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಡಲು ಸಿದ್ಧನಾಗಿದ್ದವನು ಇವನೊಬ್ಬನೆ. ಅವನು ಒಮ್ಮೆ ದೊರೆಗೆ "ಪ್ರಾಣಿಬಲಿಯಿಂದ ಸ್ವರ್ಗಕ್ಕೆ ಹೋಗುವ ಹಾಗಿದ್ದರೆ, ನರಬಲಿಯಿಂದ ಇನ್ನೂ ಹೆಚ್ಚು ಪ್ರಯೋಜನವಾಗುವುದು. ನನ್ನನ್ನು ಬಲಿಕೊಡು" ಎಂದನು. ದೊರೆಗೆ ಆಶ್ಚರ್ಯವಾಯಿತು. ಆದರೂ ಈ ಮನುಷ್ಯನಲ್ಲಿ ಎಳ್ಳಷ್ಟೂ ಆಸೆ ಇರಲಿಲ್ಲ. ಕರ್ಮಯೋಗಿಯ ಪರಾಕಾಷ್ಠತೆಗೆ ಇವನು ಚಿಹ್ನೆಯಾಗಿರುವನು. ಅವನು ಏರಿದ ಎತ್ತರವನ್ನೇ ನಾವೂ ಕೂಡ ಕರ್ಮದ ಸಹಾಯದಿಂದ ಆಧ್ಯಾತ್ಮದ ಗಿರಿ ಶಿಖರವನ್ನು ಏರಬಹುದೆಂಬುದನ್ನು ತೋರುವುದು.

ಅನೇಕರಿಗೆ ಒಬ್ಬ ಸಾಕಾರದೇವರನ್ನು ನಂಬಿದರೆ ಪಯಣ ಸುಲಭವಾಗುವುದು. ದೇವರಲ್ಲಿ ನಂಬದಿದ್ದರೂ ಯಾವ ಸಿದ್ಧಾಂತವಿಲ್ಲದೆ ಇದ್ದರೂ, ಯಾವ ಸಂಗಡಕ್ಕೆ ಸೇರದೆ ಇದ್ದರೂ, ಯಾವ ದೇವಸ್ಥಾನ ಅಥವಾ ಮಠಕ್ಕೆ ಹೋಗದೆ ಇದ್ದರೂ, ನಾಸ್ತಿಕನಾಗಿದ್ದರೂ, ಅವನು ಕೂಡ ಪರಮಪದವನ್ನು ಮುಟ್ಟಬಹುದೆಂಬುದನ್ನು ಬುದ್ಧನ ಜೀವನ ತೋರುವುದು. ಅವನ ಮೇಲೆ ತೀರ್ಪು ಕೊಡುವುದಕ್ಕೆ ನಮಗೆ ಅಧಿಕಾರವಿಲ್ಲ. ಆ ಬುದ್ಧನ ಅಸೀಮ ಅನುಕಂಪನದ ಲವಲೇಶವಾದರೂ ನನ್ನಲ್ಲಿ ಇದ್ದಿದ್ದರೆ ಎಂದು ಊಹಿಸುವೆನು. ಬುದ್ಧ ದೇವರಲ್ಲಿ ನಂಬಿದ್ದನೋ ಇಲ್ಲವೋ ಚಿಂತೆಇಲ್ಲ. ನನಗೆ ಇದು ಬೇಕಾಗಿಲ್ಲ. ಇತರರು ಭಕ್ತಿ, ಯೋಗ, ಜ್ಞಾನದ ಮೂಲಕ ಯಾವ ಪರಮಪದ ಮುಟ್ಟುವರೋ ಅದನ್ನೇ ಇವನೂ ಸೇರಿದನು. ಪರಿಪೂರ್ಣತೆ ಊಹೆ ಅಥವಾ ನಂಬಿಕೆಯಿಂದ ಬರುವುದಿಲ್ಲ. ಮಾತಿನಿಂದ ಏನೂ ಪ್ರಯೋಜನವಿಲ್ಲ. ಅರಗಿಳಿಗಳು ಇವನ್ನು ಮಾಡಬಲ್ಲವು. ಅನಾಸಕ್ತಿಯಿಂದ ಕರ್ಮಮಾಡುವುದರಿಂದ ಪರಿಪೂರ್ಣತೆ ಸಿದ್ಧಿಸುವುದು.

೮

# ಜಗತ್ತಿಗೆ ಬುದ್ಧನ ಸಂದೇಶ

ಚಾರಿತ್ರಿಕದೃಷ್ಟಿಯಿಂದ ಬೌದ್ಧಧರ್ಮ ಅತಿ ಮುಖ್ಯವಾದ ಧರ್ಮ. ಚಾರಿತ್ರಿಕದೃಷ್ಟಿಯಿಂದ, ತಾತ್ತ್ವಿಕದೃಷ್ಟಿಯಿಂದಲ್ಲ. ಪ್ರಪಂಚ ದಲ್ಲೆಲ್ಲಾ ಆದ ಅದ್ಭುತವಾದ ಧಾರ್ಮಿಕ ಜಾಗ್ರತಿ ಇದು. ಮಾನವ ಸಮಾಜವನ್ನೆಲ್ಲಾ ಆವರಿಸಿದ ಅದ್ಭುತ ಆಧ್ಯಾತ್ಮಿಕ ತರಂಗ ಇದು. ಒಂದಲ್ಲ ಒಂದು ರೀತಿಯಲ್ಲಿ ಇದರ ಪ್ರಭಾವಕ್ಕೆ ಒಳಗಾಗದ ನಾಗರಿ ಕತೆಯೆ ಇಲ್ಲ.

ಬುದ್ಧನ ಅನುಯಾಯಿಗಳು ಬಹಳ ಉತ್ಸಾಹಶಾಲಿಗಳು ಮತ್ತು ತಮ್ಮ ಧರ್ಮದ ಸಂಖ್ಯಾಬಲವನ್ನು ವಿಸ್ತರಿಸುವುದಕ್ಕೆ ಕುತೂ ಹಲಿಗಳೂ ಆಗಿದ್ದರು. ಕೇವಲ ತಮ್ಮ ಧರ್ಮ ಇದ್ದ ದೇಶದಲ್ಲೆ ತೃಪ್ತರಾಗದವರಲ್ಲಿ ಇವರು ಮೊತ್ತಮೊದಲಿಗರು. ಅವರು ಬಹಳ ದೂರದೇಶಗಳಿಗೆ ಹೋದರು. ಚತುರ್ದಿಕ್ಕುಗಳಲ್ಲಿಯೂ ಹರಡಿದರು. ಅಗಮ್ಯವಾದ ಟಿಬೆಟ್ಟಿಗೆ ಹೋದರು. ಪರ್ಷಿಯಾ, ಏಷ್ಯಾಮೈನರ್, ರಷ್ಯ ಮತ್ತು ಪಾಶ್ಚಾತ್ಯ ದೇಶದಲ್ಲಿ ಪೋಲೆಂಡ್ ಮುಂತಾದ ಕಡೆಗಳಿಗೆ ಹರಡಿದರು. ಚೈನಾ, ಜಪಾನ್, ಕೊರಿಯ, ಬರ್ಮಾ, ಸಯಾಂ, ಈಸ್ಟ್ ಇಂಡೀಸ್ ಮತ್ತು ಅದರಾಚೆಗೆ ಹೋದರು. ಅಲೆಕ್ಸಾಂಡರ್ ತನ್ನ ಸೇನೆಯಿಂದ ಸಾಧಿಸಿದ ಜಯದ ಮೂಲಕ ಮೆಡಿಟರೇನಿಯನ್ ಮತ್ತು ಭರತಖಂಡಕ್ಕೆ ಸಂಬಂಧವನ್ನು ಕಲ್ಪಿಸಲು ಭರತಖಂಡದ ಸಂಸ್ಕೃತಿ ಏಷ್ಯಾ, ಯೂರೋಪುಗಳಿಗೆ ಹರಡಲು ಒಂದು ಅವಕಾಶ ದೊರಕಿತು. ಬೌದ್ಧ ಭಿಕ್ಷುಗಳು ಬೇರೆ ಬೇರೆ ದೇಶದಲ್ಲಿ ಬೋಧಿಸುತ್ತ

ಹೋದರು. ಅವರ ಬೋಧನೆಗೆ ಮೂಢನಂಬಿಕೆ ಮತ್ತು ಪೌರೋಹಿತ್ಯ, ಸೂರ್ಯನೆದುರಿಗಿರುವ ಹಿಮದಂತೆ ಮಾಯವಾಯಿತು. ಈ ಚಳುವಳಿಯನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಆಗಿನ ಭರತಖಂಡದ ಸ್ಥಿತಿಯನ್ನು ಅರಿತುಕೊಳ್ಳಬೇಕು. ನಾವು ಕ್ರೈಸ್ತಧರ್ಮವನ್ನು ತಿಳಿದುಕೊಳ್ಳಬೇಕಾದರೆ ಆಗಿನ ಕಾಲದಲ್ಲಿ ಯೆಹೂದ್ಯರ ಸಮಾಜ ಹೇಗಿತ್ತು ಎಂಬುದನ್ನು ತಿಳಿದುಕೊಳ್ಳಬೇಕಾಗಿರುವಂತೆ ಕ್ರಿಸ್ತ ಹುಟ್ಟುವುದಕ್ಕೆ ಆರುನೂರು ವರುಷಗಳು ಮುಂಚೆ ಹಿಂದೂ ಸಮಾಜ ಆಗ ಹೇಗಿತ್ತು ಎಂಬುದನ್ನು ತಿಳಿದುಕೊಳ್ಳಬೇಕು. ಹಿಂದೂ ಸಂಸ್ಕೃತಿ ಆಗ ಉಚ್ಛ್ರಾಯದ ಶಿಖರವನ್ನು ಮುಟ್ಟಿತ್ತು.

ಭಾರತೀಯ ನಾಗರೀಕತೆಯನ್ನು ನೀವು ತೆಗೆದುಕೊಂಡರೆ ಅದು ಮೃತ್ಯುಮುಖವಾಗಿ ಪುನಃ ಎಷ್ಟೋ ವೇಳೆ ಚೇತರಿಸಿಕೊಂಡಿರುವುದನ್ನು ನೋಡುವೆವು. ಅದೇ ಅದರ ವೈಶಿಷ್ಟ್ಯ. ಅನೇಕ ಜನಾಂಗಗಳು ಒಮ್ಮೆ ಉಚ್ಛ್ರಾಯದ ಶಿಖರವನ್ನು ಏರಿ ಅನಂತರ ಅವನತಿಗೆ ಇಳಿದು ನಾಶವಾಗಿ ಹೋಗುವುವು. ಎರಡು ಬಗೆಯ ಜನಗಳಿರುವರು. ಒಂದೇ ಸಮನಾಗಿ ಬೆಳೆಯುತ್ತಿರುವವರು ಕೆಲವರು. ಬೆಳವಣಿಗೆ ಒಂದು ಹಂತಕ್ಕೆ ಬಂದು ನಿಂತುಹೋಗುವವರು ಕೆಲವರು. ಇಂಡಿಯಾ, ಚೈನಾ ಮುಂತಾದ ಶಾಂತಪ್ರಿಯ ದೇಶಗಳು ಕೆಳಗೆ ಬೀಳುವುವು. ಆದರೆ ಪುನಃ ಏಳುವುವು. ಆದರೆ ಮತ್ತೆ ಕೆಲವರು ಒಮ್ಮೆ ಕೆಳಗೆ ಬಿತ್ತೆಂದರೆ ಪುನಃ ಮೇಲೇಳುವಂತೆ ಇಲ್ಲ. ಅವು ನಾಶವಾಗುವುವು. ಪ್ರಪಂಚದಲ್ಲಿ ಶಾಂತಿ ಸಂದೇಶವನ್ನು ಹರಡುವವರೇ ಧನ್ಯರು. ಅವರೇ ಎಂದೆಂದಿಗೂ ಇಲ್ಲಿರುವರು.

ಬುದ್ಧ ಹುಟ್ಟಿದಾಗ ಭರತಖಂಡದಲ್ಲಿ ಒಬ್ಬ ದೊಡ್ಡ ಆಧ್ಯಾತ್ಮಿಕ ನಾಯಕನ, ಮಹಾತ್ಮನ ಅವಕಾಶವಿತ್ತು. ಆದರೆ ಕೆಲವು ಪ್ರಭಾವಶಾಲಿಗಳಾದ ಪುರೋಹಿತರಿದ್ದರು. ಯೆಹೂದ್ಯರ ಚರಿತ್ರೆಯನ್ನು ನೆನೆಸಿಕೊಂಡರೆ ನಿಮಗೆ ಅದು ಚೆನ್ನಾಗಿ ಅರ್ಥವಾಗುವುದು. ಅವರಲ್ಲಿ ಎರಡು ಬಗೆಯ ಧಾರ್ಮಿಕ ಮುಂದಾಳುಗಳು ಇದ್ದರು. ಪುರೋಹಿತರು ಮತ್ತು ಮಹಾತ್ಮರು. ಪುರೋಹಿತರು ಜನರನ್ನು ಅಜ್ಞಾನದಲ್ಲಿಟ್ಟು, ಮೌಢ್ಯತೆಯನ್ನು ಹರಡುತ್ತಿದ್ದರು. ಪುರೋಹಿತರು

ಹೇಳುತ್ತಿದ್ದ ಪುಜಾ ಪದ್ಧತಿ ಜನರನ್ನು ತಮ್ಮ ಹತೋಟಿಯಲ್ಲಿ ಇಟ್ಟು ಕೊಳ್ಳುವುದಕ್ಕೆ ಒಂದು ಮಾರ್ಗವಾಗಿತ್ತು. ಹಳೆಯ ಟೆಸ್ಟಮೆಂಟಿನಲ್ಲೆಲ್ಲಾ ಮಹಾತ್ಮರು ಪುರೋಹಿತರ ಮೌಢ್ಯತೆಯನ್ನು ಧಿಃಕ್ಕರಿಸುತ್ತಿದ್ದರು. ಈ ಹೋರಾಟದ ಪ್ರತಿಫಲವಾಗಿ ಪುರೋಹಿತರು ಸೋತು ಮಹಾತ್ಮರು ಗೆದ್ದರು.

ಪುರೋಹಿತರು ಒಬ್ಬ ದೇವರಿರುವನೆಂದು ನಂಬುವರು. ಆದರೆ ಈ ದೇವರನ್ನು ಇವರ ಮೂಲಕ ಮಾತ್ರ ನೋಡಬಹುದು ಎನ್ನುತ್ತಾರೆ. ಜನ ಪುರೋಹಿತನ ಅಪ್ಪಣೆ ಪಡೆದರೆ ಮಾತ್ರ ಭಗವಂತನ ಸನ್ನಿಧಿಗೆ ಹೋಗಬಲ್ಲರು. ನೀವು ಅವರಿಗೆ ಹಣ ಕೊಡಬೇಕು, ಪೂಜೆ ಸಲ್ಲಿಸಬೇಕು. ಎಲ್ಲವನ್ನೂ ಅವರಿಗೆ ಸಮರ್ಪಿಸಬೇಕು. ಇತಿಹಾಸದಲ್ಲೆಲ್ಲಾ ಪೌರೋಹಿತ್ಯ ಸ್ವಭಾವ ಪದೇ ಪದೇ ಮೇಲೆದ್ದಿರುವುದು. ಅಧಿಕಾರದ ಮೇಲೆ ಅಧಿಕ ಆಸೆ ಅವರಿಗೆ. ವ್ಯಾಘ್ರದಂತಹ ರಕ್ತದಾಹ ಮಾನವನ ಒಂದು ಸ್ವಭಾವದಂತೆ ಕಾಣುವುದು. ಪುರೋಹಿತರು ನಿಮ್ಮನ್ನು ಆಳುವರು. ನೂರಾರು ಆಚಾರಗಳನ್ನು ಬಲಾತ್ಕಾರವಾಗಿ ಬಿಗಿಯುವರು. ಅತಿ ಸರಳವಾದ ಸತ್ಯವನ್ನು, ತಿಳಿಯದ ಒಂದು ಜಾಲವಾಗಿ ಮಾಡುವರು. ತಮ್ಮ ಶ್ರೇಷ್ಠತೆಗಳನ್ನು ತೋರಿಸಿಕೊಳ್ಳುವುದಕ್ಕೆ ಕಥೆಗಳನ್ನು ಹೇಳುವರು. ನೀವು ಇಹದಲ್ಲಿ ಚೆನ್ನಾಗಿರಬೇಕಾದರೆ, ಪರದಲ್ಲಿ ಸ್ವರ್ಗಕ್ಕೆ ಹೋಗಬೇಕಾದರೆ, ಅದರ ಮೂಲಕ ಸಾಗಬೇಕು. ಹಲವು ಬಗೆಯ ಕರ್ಮಗಳನ್ನು ಮಾಡಬೇಕು. ಇವೆಲ್ಲ ನಮ್ಮ ಜೀವನವನ್ನು ಒಂದು ಗೋಜಿಗೆ ತಂದಿದೆ. ನಮ್ಮ ತಿಳಿವಳಿಕೆಯನ್ನು ಕೆಡಿಸಿದೆ. ಇದರಿಂದ ಏನಾಗಿದೆ ಎಂದರೆ, ನಿಮಗೆ ಸರಳವಾಗಿ ಹೇಳಿದರೆ ನೀವು ಅತೃಪ್ತರಾಗಿ ಮನೆಗೆ ಹೋಗುವಿರಿ. ನಿಮ್ಮ ತಿಳುವಳಿಕೆಯೆಲ್ಲಾ ಕದಡಿಹೋಗಿದೆ. ಕಡಿಮೆ ತಿಳಿದಷ್ಟು ಮೇಲೆಂದು ಭಾವಿಸುತ್ತೀರಿ. ಮಹಾತ್ಮರು, ಪುರೋಹಿತರ ತಂತ್ರ ಯಂತ್ರ ಮೂಢನಂಬಿಕೆಗಳಿಗೆ ವಿರೋಧವಾಗಿ ಎಚ್ಚರಿಸುತ್ತಿರುವರು. ಆದರೆ ಬಹುಪಾಲು ಜನ ಈ ಎಚ್ಚರಿಕೆಗೆ ಗಮನಕೊಡುತ್ತಿಲ್ಲ. ಅವರಿಗೆ ವಿದ್ಯಾಭ್ಯಾಸ ಇನ್ನೂ ಬರಬೇಕಾಗಿದೆ.

ಜನರಿಗೆ ವಿದ್ಯಾಭ್ಯಾಸ ಬೇಕು. ಈ ದಿನಗಳಲ್ಲಿ 'ಡೆಮಾಕ್ರಸೀ' ಜನರೆಲ್ಲ ಒಂದೇಸಮ ಎಂದು ಮಾತನಾಡುವರು. ಒಬ್ಬ ಎಲ್ಲರಂತೆ

ತಾನೂ ಎಂದು ಹೇಗೆ ತಿಳಿಯಬಲ್ಲ. ಅವನಿಗೆ ತಿಳುವಳಿಕೆ ಚೆನ್ನಾಗಿರಬೇಕು. ಮೂಢನಂಬಿಕೆಗಳಿಂದ ಪಾರಾದ ಸ್ಪಷ್ಟವಾದ ಮನಸ್ಸಿರಬೇಕು. ಅವನ ಮನಸ್ಸಿನಲ್ಲಿ ಕವಿದುಕೊಂಡಿರುವ ಮೂಢನಂಬಿಕೆಯ ಪದರಗಳನ್ನೆಲ್ಲಾ ತೂರಿ ಹೋಗಿ ತನ್ನ ಅಂತರಾಳದಲ್ಲಿರುವ ಸತ್ಯವನ್ನು ಅರಿಯಬೇಕಾಗಿದೆ. ಆಗ ಎಲ್ಲಾ ಪೂರ್ಣತೆ ಶಕ್ತಿ ತನ್ನಲ್ಲಿಯೇ ಇರುವುದು, ಯಾರೋ ಹೊರಗಿನವರು ಇವನ್ನು ತನಗೆ ಕೊಟ್ಟಿದ್ದಲ್ಲವೆಂಬುದನ್ನು ಅರಿಯುವನು. ಅವನಿಗೆ ಇದು ಗೊತ್ತಾದರೆ ತಕ್ಷಣ ಅವನು ಸ್ವತಂತ್ರನಾಗುವನು, ಆಗ ಅವನು ಸಮಾನತೆಯನ್ನು ಪಡೆಯುವನು. ಆಗ ಅವನಿಗೆ ಎಲ್ಲರೂ ತನ್ನಂತೆಯೇ ಸಮಾನರು ಪರಿಪೂರ್ಣರು ಎಂಬುದು ಗೊತ್ತಾಗುವುದು. ಇತರ ಸಹೋದರರ ಮೇಲೆ ಕಾಯಕವಾಗಲೀ, ಮಾನಸಿಕವಾಗಲೀ, ನೈತಿಕವಾಗಿ ಆಗಲಿ ಯಾವ ಬಲಾತ್ಕಾರವನ್ನೂ ಮಾಡಕೂಡದು ಎಂಬುದನ್ನು ಅರಿಯುವನು. ತನಗಿಂತ ಕೀಳಾದವರು ಎಂದಾದರೂ ಯಾರಾದರೂ, ಇದ್ದರು ಎಂಬ ಭಾವನೆಯನ್ನು ಅವನು ತೊರೆಯುವನು. ಆಗ ಅವನು ಸಮಾನತೆಯ ವಿಷಯವನ್ನು ಮಾತನಾಡಬಹುದು. ಅದಕ್ಕೆ ಮುಂಚೆ ಅಲ್ಲ.

ನಾನು ನಿಮಗೆ ಹೇಳುತ್ತಿದ್ದಂತೆ ಮಹಾತ್ಮರಿಗೂ ಪುರೋಹಿತರಿಗೂ ಯಾವಾಗಲೂ ಭಿನ್ನಾಭಿಪ್ರಾಯಗಳಿದ್ದವು. ಪುರೋಹಿತರು ಅಧಿಕಾರ ಮತ್ತು ಜ್ಞಾನವನ್ನೆಲ್ಲಾ ತಾವೇ ಇಟ್ಟುಕೊಳ್ಳಲು ಪ್ರಯತ್ನಿಸಿದರು. ಕೊನೆಗೆ ಅವರೇ ಅವನ್ನು ಕಳೆದುಕೊಂಡರು. ಇತರರಿಗೆ ತೊಡಿಸಿದ ಸರಪಳಿ ತಮಗೇ ಪ್ರಾಪ್ತವಾಯಿತು. ಯಜಮಾನ ಬೇಗ ಭೃತ್ಯನಾಗುವನು. ಈ ಹೋರಾಟದ ಕೊನೆಯಲ್ಲಿ ನಜರತ್ತಿನ ಜೀಸಸ್ಸನು ಜಯಶೀಲನಾಗಿ ನಿಂತನು. ಈ ದಿಗ್ವಿಜಯವೇ ಕ್ರಿಸ್ತಧರ್ಮದ ಇತಿಹಾಸ. ಕೊನೆಗೆ ಕ್ರಿಸ್ತ ಮೂಢನಂಬಿಕೆಗಳನ್ನೆಲ್ಲಾ ಮೂಲೋತ್ಪಾಟನೆಮಾಡಿ ವಿಜಯಿಯಾದ. ಈ ಮಹಾತ್ಮ ಪೌರೋಹಿತ್ಯವೆಂಬ ದೌರ್ಜನ್ಯದ ಘಟಸರ್ಪವನ್ನು ನಾಶಮಾಡಿ, ಸತ್ಯಮಾಣಿಕ್ಯವನ್ನು ಅದರ ದಾಡೆಯಿಂದ ರಕ್ಷಿಸಿ ಜಗತ್ತಿಗೆ ನೀಡಿದನು. ಯಾರಿಗೆ ಅದು ಬೇಕಾಗಿರುವುದೋ ಅವರು ಇದನ್ನು ಸ್ವೇಚ್ಛೆಯಿಂದ

ಇಟ್ಟುಕೊಳ್ಳಬಹುದು. ಯಾವ ಪುರೋಹಿತನನ್ನೂ ಅದಕ್ಕಾಗಿ ಶರಣಾಗಬೇಕಾಗಿರಲಿಲ್ಲ.

ಯೆಹೂದ್ಯರು ಎಂದಿಗೂ ತಾತ್ತ್ವಿಕ ಜನಾಂಗವಾಗಿರಲಿಲ್ಲ. ಅವರಿಗೆ ಭಾರತೀಯನ ಬುದ್ಧಿ ಸೂಕ್ಷ್ಮತೆಯಾಗಲಿ, ಮನೋಶಕ್ತಿಯಾಗಲೀ ಇರಲಿಲ್ಲ. ಭರತಖಂಡದ ಪುರೋಹಿತರಾದ ಬ್ರಾಹ್ಮಣರಿಗೆ ಅದ್ಭುತಪಾಂಡಿತ್ಯವಿತ್ತು, ಮನೋಶಕ್ತಿಯಿತ್ತು. ಅವರೇ ಭರತಖಂಡದಲ್ಲಿ ಆಧ್ಯಾತ್ಮಿಕ ಪ್ರಗತಿಯನ್ನು ಪ್ರಾರಂಭಿಸಿದರು. ಅವರು ಅದ್ಭುತವಾದ ವಿಷಯಗಳನ್ನು ಸಾಧಿಸಿದರು. ಆದರೆ ಕ್ರಮೇಣ ಮೊದಲು ಬ್ರಾಹ್ಮಣರನ್ನು ಪ್ರಚೋದಿಸಿದ, ವಿಕಾಸದ ಉದಾರ ಭಾವನೆ ಮಾಯವಾಯಿತು. ಅವರೇ ಅಧಿಕಾರ ಮತ್ತು ಹಕ್ಕುಗಳನ್ನು ದೋಚಲೆತ್ನಿಸಿದರು. ಬ್ರಾಹ್ಮಣ ಮತ್ತೊಬ್ಬನನ್ನು ಕೊಂದರೆ ಅವನಿಗೆ ಶಿಕ್ಷೆಯಿಲ್ಲ. ಬ್ರಾಹ್ಮಣ ಹುಟ್ಟು ಭೂಸುರ! ಅತಿ ದುರಾಚಾರಿಯಾದ ಬ್ರಾಹ್ಮಣನನ್ನು ಕೂಡ ಪೂಜಿಸಬೇಕು!

ಪುರೋಹಿತರಿದ್ದಾಗ ಸನ್ಯಾಸಿಗಳೆಂಬ ಋಷಿಮಹಾತ್ಮರೂ ಇದ್ದರು. ಹಿಂದೂಗಳು ಯಾವ ವರ್ಣಕ್ಕೆ ಸೇರಿರಲಿ ಅವರು ಆಧ್ಯಾತ್ಮಿಕ ಸಂಪನ್ನರಾಗಬೇಕಾದರೆ ಕರ್ಮವನ್ನು ತ್ಯಜಿಸಿ ಮೃತ್ಯುವನ್ನು ಎದುರುಗೊಳ್ಳಲು ಸಿದ್ಧರಾಗಬೇಕು. ಅವರಿಗೆ ಪ್ರಪಂಚದ ಮೇಲೆ ಇನ್ನು ಆಸಕ್ತಿ ಇಲ್ಲ. ಅವರು ಪ್ರಪಂಚವನ್ನು ತ್ಯಜಿಸಿ ಸನ್ಯಾಸಿಗಳಾಗಬೇಕು. ಪುರೋಹಿತರು ಜಾರಿಗೆ ತಂದಿರುವ ಸಾವಿರಾರು ಆಚಾರಕ್ಕೂ ಸನ್ಯಾಸಿಗಳಿಗೂ ಏನೂ ಸಂಬಂಧವಿಲ್ಲ. ಹತ್ತಿಪ್ಪತ್ತು ಅಕ್ಷರಗಳನ್ನು ಹೇಗೋ ಉಚ್ಚರಿಸುವರು, ಇವರಲ್ಲೆಲ್ಲಾ ಅರ್ಥವಿಲ್ಲ.

ಭರತಖಂಡದ ಋಷಿವರ್ಯರು ಪುರೋಹಿತರ ಆಚಾರಗಳನ್ನು ಅಲ್ಲಗಳೆದು ಸತ್ಯವನ್ನು ಬೋಧಿಸಿದರು. ಅವರು ಪುರೋಹಿತರ ದರ್ಪವನ್ನು ಅಡಗಿಸಲು ಯತ್ನಿಸಿ ಅದರಲ್ಲಿ ಸ್ವಲ್ಪ ಜಯಶೀಲರಾದರು. ಆದರೆ ಎರಡು ತಲೆಮಾರಿನ ಮೇಲೆ ಅವರ ಅನುಯಾಯಿಗಳೇ ಮೂಢಾಚಾರಕ್ಕೆ ವಶರಾಗಿ, ಪುರೋಹಿತರಿಗೆ ಶರಣಾಗಿ, ಅವರೇ ಪುರೋಹಿತರಾದರು. "ನಮ್ಮ ಮೂಲಕ ಮಾತ್ರ ನೀವು ಸತ್ಯವನ್ನು ಪಡೆಯಿರಿ" ಎಂದರು. ಪುನಃ ಸತ್ಯ ಘನೀಭೂತವಾಯಿತು. ಆಗ ಪುನಃ ಮಹಾ

ತ್ಮರು ಅವತಾರವೆತ್ತಿ ಸುತ್ತ ಕವಿದ ಮೂಢನಂಬಿಕೆಯನ್ನು ಒಡೆದು ಸತ್ಯದ ಸ್ವತಂತ್ರ ಚಲನೆಗೆ ಅವಕಾಶಮಾಡಿದರು. ಹೀಗೆ ಆಗುತ್ತಿದೆ. ಯಾವಾಗಲೂ ನಮ್ಮ ಮಹಾತ್ಮರಂತಹ ಒಬ್ಬ ವ್ಯಕ್ತಿ ಬೇಕಾಗಿದೆ. ಇಲ್ಲದೆ ಇದ್ದರೆ ಮಾನವಕೋಟಿ ನಿರ್ನಾಮವಾಗುವುದು.

ಪುರೋಹಿತರ ಇಷ್ಟೊಂದು ಕಂದಾಚಾರಗಳೆಲ್ಲ ಏತಕ್ಕೆ ಇರ ಬೇಕೆಂದು ನೀವು ಆಶ್ಚರ್ಯಪಡಬಹುದು. ನೀವೇಕೆ ನೇರವಾಗಿ ಸತ್ಯ ದೆಡೆಗೆ ಬರಬಾರದು? ಭಗವಂತನ ಸತ್ಯವನ್ನು ಕಂಡರೆ ನಿಮಗೆ ನಾಚಿಕೆಯೆ? ಅದಕ್ಕಾಗಿ ನೀವು ಅದನ್ನು ಕಂದಾಚಾರ ಮೂಢನಂಬಿಕೆ ಯಲ್ಲಿ ಬಚ್ಚಿಡಲು ಯತ್ನಿಸುವಿರಾ? ಅವನ ಸತ್ಯವನ್ನು ಪ್ರಪಂಚ ದೆದುರು ಒಪ್ಪಿಕೊಳ್ಳದಷ್ಟು ನಾಚಿಕೆಯೆ ನಿಮಗೆ ದೇವರ ಹತ್ತಿರ? ನೀವು ಅಂತಹವನನ್ನು ಧರ್ಮದ ಮತ್ತು ಆಧ್ಯಾತ್ಮಿಕ ಜೀವಿ ಎಂದು ಕರೆಯುವಿರಾ? ಜನ ಸಾಧಾರಣ ಅದಕ್ಕೆ ಅಣಿಯಾಗಿಲ್ಲ. ಸತ್ಯದ ಶಕ್ತಿಯನ್ನು ಇನ್ನೂ ಕಡಿಮೆಮಾಡಬೇಕು. ಅದಕ್ಕೆ ಮತ್ತಷ್ಟು ನೀರನ್ನು ಮಿಶ್ರಮಾಡಿ.

ಸೆರ್ಮನ್ ಆನ್ ದಿ ಮೌಂಟ್ ಮತ್ತು ಗೀತೆಯನ್ನು ತೆಗೆದು ಕೊಳ್ಳಿ. ಅದಷ್ಟು ಸರಳವಾಗಿದೆ. ದಾರಿಹೋಕನಿಗೂ ಅದು ಅರ್ಥವಾ ಗುವುದು. ಎಷ್ಟು ಅದ್ಭುತವಾಗಿದೆ. ಅಲ್ಲಿ ಸತ್ಯ ಸರಳವಾಗಿ, ಸುಲಭ ವಾಗಿ ವ್ಯಕ್ತವಾಗಿದೆ. ಆದರೆ ಇಷ್ಟು ನೇರವಾಗಿ, ಸುಲಭವಾಗಿ ಸತ್ಯ ಸಿಕ್ಕುವುದೆಂಬುದನ್ನು ಪುರೋಹಿತರು ಒಪ್ಪಿಕೊಳ್ಳುವುದಿಲ್ಲ. ಎರಡು ಸಾವಿರ ಸ್ವರ್ಗ, ನರಕಗಳನ್ನು ಅವರು ಹೇಳುವರು. ಜನ ಇವರು ಹೇಳಿದಂತೆ ಕೇಳಿದರೆ ಅವರು ಸ್ವರ್ಗಕ್ಕೆ ಹೋಗುವರು. ಇಲ್ಲದೆ ಇದ್ದರೆ ಅವರು ನರಕಕ್ಕೆ ಹೋಗುವರು.

ಆದರೆ ಜನ ಸತ್ಯವನ್ನು ತಿಳಿಯುವರು. ಎಲ್ಲರಿಗೂ ಪೂರ್ಣ ಸತ್ಯವನ್ನು ಕೊಟ್ಟರೆ ಇದರಿಂದ ಅಪಾಯ ಎಂದು ಕೆಲವರಿಗೆ ಅಂಜಿಕೆ. ಅವರಿಗೆ ಅಪ್ಪಟ ಸತ್ಯವನ್ನು ಕೊಡಕೂಡದೆಂದು ಅವರ ಮತ. ಸತ್ಯ ವನ್ನು ಮರೆಮಾಡಿದುದರಿಂದ ಪ್ರಪಂಚ ಏನೂ ಮೇಲಾಗಿಲ್ಲ. ಈಗ ಇರುವುದಕ್ಕಿಂತ ಇನ್ನಷ್ಟು ಹದಗೆಡುವುದು. ಸತ್ಯವನ್ನು ಪ್ರಕಾಶಕ್ಕೆ

ತನ್ನಿ. ಅದು ಸತ್ಯವಾದರೆ ಅದರಿಂದ ಮೇಲಾಗುವುದು. ಜನ ಒಪ್ಪದೆ ಬೇರೆ ಮಾರ್ಗವನ್ನು ಸೂಚಿಸಿದರೆ ಅವರು ಮೂಢರಿಗೆ ಶರಣಾಗು ತ್ತಿದ್ದರು ಅಷ್ಟೆ.

ಬುದ್ಧನ ಕಾಲದಲ್ಲಿ ಇಂತಹ ಜನ ಭರತಖಂಡದಲ್ಲಿ ತುಂಬಿದ್ದರು. ಜನ ಸಾಧಾರಣರಿಗೆ ಯಾವ ಜ್ಞಾನಕ್ಕೂ ಹಕ್ಕಿಲ್ಲ. ವೇದದ ಒಂದು ಪದ ಅವನ ಕಿವಿಗೆ ಬಿದ್ದರೆ ಘೋರ ದಂಡನೆ ಅವನಿಗೆ ಕಾದಿತ್ತು. ಪುರಾತನ ಹಿಂದುಗಳು ಕಂಡುಹಿಡಿದ ಆಧ್ಯಾತ್ಮಿಕ ಸತ್ಯಗಳನ್ನೊಳಗೊಂಡ ವೇದವನ್ನು ರಹಸ್ಯವಾಗಿಟ್ಟರು ಪುರೋಹಿತರು.

ಕೊನೆಗೆ ಒಬ್ಬನಿಗೆ ಇದನ್ನು ಸಹಿಸಲು ಆಗಲಿಲ್ಲ. ಅವನಿಗೆ ಬುದ್ಧಿ ಇತ್ತು, ಶಕ್ತಿಯಿತ್ತು, ನೀಲಿಯಾಗದಷ್ಟು ಅಸೀಮವಾಗಿತ್ತು ಅವನ ಹೃದಯ. ಜನ ಪುರೋಹಿತರನ್ನು ಅನುಸರಿಸುತ್ತಿದ್ದುದ್ದನ್ನು ಕಂಡನು. ಪುರೋಹಿತರು ಅಧಿಕಾರದ ಮದದಲ್ಲಿ ಮುಳುಗಿ ಹೋಗಿದ್ದರು. ಇದನ್ನು ಹೇಗಾದರೂ ನಿವಾರಿಸಬೇಕೆಂದು ಯತ್ನಿಸಿದನು. ಯಾರ ಮೇಲೂ ಅವನಿಗೆ ಅಧಿಕಾರ ಬೇಕಿರಲಿಲ್ಲ. ಜನರ ಮಾನಸಿಕ ಮತ್ತು ಧಾರ್ಮಿಕ ಬಂಧನಗಳನ್ನು ಕಳಚಲು ಯತ್ನಿಸಿದನು. ಅವನ ಹೃದಯವಿಶಾಲವಾಗಿತ್ತು. ನಮ್ಮಲ್ಲಿ ಸುತ್ತಲಿರುವ ಹಲವರಿಗೆ ಹೃದಯ ಇರಬಹುದು. ನಾವೂ ಇತರರಿಗೆ ಸಹಾಯಮಾಡಲು ಯತ್ನಿಸಬಹುದು. ಆದರೆ ಬುದ್ಧಿಯಿಲ್ಲ. ಇತರರಿಗೆ ಹೇಗೆ ಸಹಾಯ ನೀಡಬಹುದೋ ಅಂತಹ ಮಾರ್ಗ ಗೊತ್ತಿಲ್ಲ. ಆದರೆ ಈತ ಜೀವಿಗಳ ಬಂಧನವನ್ನು ಹೇಗೆ ಖಂಡಿಸಬಹುದು. ಎಂಬ ಮಾರ್ಗವನ್ನು ಕಂಡುಹಿಡಿದ. ಮನುಷ್ಯ ಏತಕ್ಕೆ ವ್ಯಥೆಪಡುವನು ಎಂಬುದನ್ನು ಕಂಡುಹಿಡಿದ. ಅದರಿಂದ ಪಾರಾಗುವುದಕ್ಕೆ ಮಾರ್ಗವನ್ನು ಕಂಡುಹಿಡಿದ. ಅವನು ಮಹಾಜ್ಞಾನಿ, ಅನುಭಾವಿ, ಎಲ್ಲವನ್ನೂ ಅನುಷ್ಠಾನಕ್ಕೆ ತಂದನು. ಭೇದಭಾವವಿಲ್ಲದೆ ಎಲ್ಲರಿಗೂ ಬೋಧಿಸಿ ನಿರ್ವಾಣಸುಖವನ್ನು ಹೇಗೆ ಪಡೆಯಬೇಕೆಂಬುದನ್ನು ತೋರಿದನು. ಅವನೇ ಬುದ್ಧ.

ಸರ್ ಎಡ್ವಿನ್ ಆರ್ನಾಲ್ಡ್ ಎಂಬುವನು ಬರೆದ ಏಷ್ಯಾದ ಜ್ಯೋತಿ ಎಂಬ ಪುಸ್ತಕದಿಂದ ಬುದ್ಧ ರಾಜಕುಮಾರನಾಗ ಹುಟ್ಟಿದ್ದು,

ಪ್ರಪಂಚದ ದುಃಖ ಅವನಿಗೆ ತಟ್ಟಿದ್ದು, ಅವನು ಭೋಗ ಅಂಕದ ಮೇಲೆ ಬೆಳೆದರೂ ಕೇವಲ ತನ್ನ ಸುಖ ಮತ್ತು ರಕ್ಷಣೆಯಿಂದ ಅವನಿಗೆ ಆನಂದವಾಗಲಿಲ್ಲವೆಂಬುದು ನಿಮಗೆ ಗೊತ್ತಿದೆ. ಅವನು ಹೆಂಡತಿ ಮತ್ತು ಆಗತಾನೆ ಹುಟ್ಟಿದ ಮಗನನ್ನು ತ್ಯಜಿಸಿ, ತ್ಯಾಗಿಯಾಗಿ ಹೋಗಿದ್ದು ನಿಮಗೆ ಗೊತ್ತಿದೆ. ಒಬ್ಬ ಗುರುಗಳಿಂದ ಮತ್ತೊಬ್ಬ ಗುರುಗಳ ಬಳಿಗೆ ಹೋಗಿ ಸತ್ಯವನ್ನು ಅರಸುತ್ತ ಅಲೆದಾಡತೊಡಗಿದನು. ಕೊನೆಗೆ ಅವನು ನಿರ್ವಾಣವನ್ನು ಪಡೆದನು. ಅವನು ದೀರ್ಘಕಾಲ ಮಾಡಿದ ಸಂದೇಶ, ಅವನ ಶಿಷ್ಯರು ಮತ್ತು ಸಂಸ್ಥೆ ನಿಮಗೆಲ್ಲ ಗೊತ್ತಿದೆ.

ಪುರೋಹಿತರಿಗೂ, ಮಹಾತ್ಮರಿಗೂ ನಡೆಯುತ್ತಿದ್ದ ತಿಕ್ಕಾಟದಿಂದ ಬುದ್ಧ ಜಯಶೀಲನಾಗಿದ್ದನು. ಆದರೆ ಇಂಡಿಯಾದೇಶದ ಪುರೋಹಿತರ ವಿಷಯವಾಗಿ ನಾವು ಇದೊಂದನ್ನು ಹೇಳಬಹುದು. ಅವರಲ್ಲಿ ಎಂದಿಗೂ ಧರ್ಮದಲ್ಲಿ ಅಸಹನೀಯ ಭಾವನೆ ಇರಲಿಲ್ಲ. ಅವರೆಂದಿಗೂ ಧರ್ಮಕ್ಕಾಗಿ ಜನರನ್ನು ಹಿಂಸಿಸಲಿಲ್ಲ. ಯಾರಾದರೂ ಧರ್ಮಕ್ಕೆ ವಿರೋಧವಾಗಿ ಬೋಧಿಸಬಹುದಾಗಿತ್ತು. ಅವರದು ಅಂತಹ ಧರ್ಮ. ಯಾರನ್ನೂ ಅವರ ಧರ್ಮಕ್ಕಾಗಿ ಹಿಂಸಿಸಿದವರಲ್ಲ. ಆದರೆ ವಿಶೇಷವಾಗಿ ಎಲ್ಲಾ ಪುರೋಹಿತರಲ್ಲಿರುವ ದುರ್ಬಲತೆಯೊಂದು ಅವರಲ್ಲಿತ್ತು. ಅವರೂ ಅಧಿಕಾರವನ್ನು ಬಯಸಿದರು. ಅವರು ಹಲವು ಆಚಾರಗಳನ್ನು ನಿಯಮಗಳನ್ನು ಜಾರಿಗೆ ತಂದರು. ಧರ್ಮವನ್ನು ಅನಾವಶ್ಯಕವಾಗಿ ಜಟಿಲಸಮಸ್ಯೆಯಾಗಿ ಮಾಡಿ ಆಯಾ ಧರ್ಮದ ಅನುಯಾಯಿಗಳ ಶಕ್ತಿಯನ್ನು ತಗ್ಗಿಸಿದರು.

ಬುದ್ಧ ಈ ಅನಾವಶ್ಯಕವಾದ ಕಳೆಯನ್ನೆಲ್ಲಾ ಕಿತ್ತ. ಅವನು ಅದ್ಭುತವಾದ ಸತ್ಯಗಳನ್ನು ಬೋಧಿಸಿದ. ಯಾವ ಭೇದಭಾವವೂ ಇಲ್ಲದೆ ವೇದಗಳ ತತ್ತ್ವಸಾರವನ್ನೇ ಎಲ್ಲರಿಗೂ ಬೋಧಿಸಿದ. ಅವನು ಇಡೀ ಪ್ರಪಂಚಕ್ಕೆ ಅದನ್ನು ಬೋಧಿಸಿದನು. ಮಾನವನ ಸಮಾನತೆಯೂ ಅವನು ಬೋಧಿಸಿದ ಘನ ಸಂದೇಶದಲ್ಲಿ ಒಂದಾಗಿತ್ತು. ಮನುಷ್ಯರೆಲ್ಲ ಸಮಾನರು. ಯಾರಿಗೂ ವಿಶೇಷ ಗೌರವವಿಲ್ಲ. ಸಮಾನತೆಯ ಸಂದೇಶವನ್ನು ಸಾರಿದ ಮಹಾಗುರು ಬುದ್ಧ. ಪ್ರತಿಯೊಬ್ಬ

ಸ್ತ್ರೀಪುರುಷರಿಗೂ ಆಧ್ಯಾತ್ಮಿಕಜೀವನದಲ್ಲಿ ಮುಂದುವರಿಯಲು ಒಂದೇ ಅಧಿಕಾರವಿದೆ. ಇದೇ ಅವನ ಸಂದೇಶ. ಬ್ರಾಹ್ಮಣರಿಗೂ, ಇತರ ವರ್ಣದವರಿಗೂ ಇದ್ದ ವ್ಯತ್ಯಾಸವನ್ನು ತೊಡೆದು ಹಾಕಿದನು. ಅತಿ ನೀಚರೂ ಕೂಡ ಅತಿ ಶ್ರೇಷ್ಠಸ್ಥಿತಿಗೆ ಅರ್ಹರಾದರು. ಎಲ್ಲರಿಗೂ ನಿರ್ವಾಣದ ಬಾಗಿಲನ್ನು ತೆರೆದನು. ಭರತಖಂಡದಲ್ಲಿ ಕೂಡ ಅವನ ಸಂದೇಶ ಬಹಳ ಧೈರ್ಯವಾದದ್ದು. ಎಷ್ಟೇ ವೇದಾಂತ ಬೋಧಿಸಿದರೂ ಭಾರತೀಯನೆದೆಗೆ ತಟ್ಟುವುದು ಕಷ್ಟ. ಭಾರತೀಯರು ಬುದ್ಧನ ಸಂದೇಶವನ್ನು ಒಪ್ಪಿಕೊಳ್ಳಲು ಕಷ್ಟವಾಯಿತು. ನಿಮಗೆ ಮತ್ತಷ್ಟು ಕಷ್ಟವಾಗಬಹುದು.

ಅವನ ಸಿದ್ಧಾಂತ ಇದು. ನಮ್ಮ ಜೀವನದಲ್ಲಿ ಏಕೆ ದುಃಖವಿದೆ? ಏಕೆಂದರೆ ನಾವು ಸ್ವಾರ್ಥಿಗಳು ನಮಗಾಗಿ ನಾವು ವಸ್ತುಗಳನ್ನು ಆಶಿಸುತ್ತೇವೆ. ಅದಕ್ಕೇ ದುಃಖವಿರುವುದು. ಇದರಿಂದ ಪಾರಾಗುವುದಕ್ಕೆ ಉಪಾಯವೇನು? ಅಹಂಕಾರವನ್ನು ತ್ಯಜಿಸುವುದು. ನಾನೆಂಬುದಿಲ್ಲ. ನಮ್ಮೆದುರಿಗೆ ತೋರಿಕೆಯ ಪ್ರಪಂಚಮಾತ್ರ ಇರುವುದು. ಜನನ, ಮರಣಗಳ ಹಿಂದೆ ಆತ್ಮವೆಂಬುದು ಯಾವುದೂ ಇಲ್ಲ. ಒಂದು ಆಲೋಚನಾಪ್ರವಾಹವಿದೆ. ಒಂದಾದಮೇಲೊಂದು ಬರುತ್ತಿರುವುದು. ಅದರಂತೆಯೇ ಮನಸ್ಸು ಮತ್ತು ಚಿತ್ತ ಕೂಡ. ಆದಕಾರಣ ಆತ್ಮವೆಂಬುದೊಂದು ಭ್ರಾಂತಿ. ನಮ್ಮ ಸ್ವಾರ್ಥತೆಗೆಲ್ಲ ಮೂಲ ಈ ತೋರಿಕೆಯ ಅಹಂಕಾರಕ್ಕೆ ಅಂಟಿಕೊಂಡಿರುವುದು. ನಾನೆಂಬುದಿಲ್ಲ ಎಂಬುದು ನಮಗೆ ಗೊತ್ತಾದರೆ, ಆಗ ನಾವು ಸುಖಿಗಳಾಗುವೆವು. ಇತರರಿಗೂ ಸುಖವನ್ನು ನೀಡಬಲ್ಲೆವು.

ಬುದ್ಧ ಸಾರಿದ್ದು ಇದನ್ನು. ಅವನು ಕೇವಲ ಮಾತಾಳಿಯಲ್ಲ. ಪ್ರಪಂಚಕ್ಕಾಗಿ ತನ್ನ ಪ್ರಾಣವನ್ನು ಅರ್ಪಿಸಲು ಸಿದ್ಧನಾಗಿದ್ದ. "ಪ್ರಾಣಿ ಬಲಿಯಿಂದ ಮೇಲಾದರೆ, ನರಬಲಿಯಿಂದ ಮತ್ತೂ ಮೇಲಾಗುವುದು" ಎಂದು ತನ್ನ ಪ್ರಾಣವನ್ನೇ ಆಹುತಿಕೊಡಲು ಸಿದ್ಧನಾಗಿದ್ದನು. "ಪ್ರಾಣಿಬಲಿಯೆಂಬುದೊಂದು ಮೂಢನಂಬಿಕೆ. ಜೀವ, ಆತ್ಮ ಎಂಬುವು ಮತ್ತೊಂದು ದೊಡ್ಡ ಮೂಢನಂಬಿಕೆ. ದೇವರೆಂಬುವುದು ಪುರೋಹಿತರು ನಿರ್ಮಿಸಿದ ಮತ್ತೊಂದು ಮೂಢನಂಬಿಕೆ. ಈ ಬ್ರಾಹ್ಮ

ಶಾರು ಹೇಳುವಂತೆ ಒಬ್ಬ ಇದ್ದರೆ ಪ್ರಪಂಚದಲ್ಲಿ ಏತಕ್ಕೆ ಇಷ್ಟೊಂದು ದುಃಖವಿದೆ? ನನ್ನಂತೆ ಕಾರ್ಯಕಾರಣಬಂಧನಕ್ಕೆ ಅತನೂ ಒಬ್ಬ ಗುಲಾಮ. ಅವನು ಕಾರ್ಯಕಾರಣಸಂಬಂಧಕ್ಕೆ ಬಂಧಿಯಾಗದೆ ಇದ್ದರೆ ಅವನೇತಕ್ಕೆ ಸೃಷ್ಟಿಸಬೇಕು? ಇಂತಹ ದೇವರು ಎಂದಿಗೂ ತೃಪ್ತಿಕರ ವಾಗಿಲ್ಲ. ತಮ್ಮ ಇಚ್ಛೆ ಬಂದಂತೆ ಯಾರೋ ಸ್ವರ್ಗದಲ್ಲಿ ಕುಳಿತು ಆಳುತ್ತಿರುವರು. ನಾವೆಲ್ಲ ಇಲ್ಲಿ ದುಃಖದಲ್ಲಿ ಸಿಕ್ಕಿ ಸಾಯಬೇಕು. ಅವನಿಗೆ ನಮ್ಮ ಕಡೆ ನೋಡುವುದಕ್ಕೆ ಒಂದು ಕ್ಷಣವೂ ಬಿಡುವಿಲ್ಲ. ನಮ್ಮ ಇಡೀ ಜೀವನ ಕಷ್ಟಮಯ. ಆದರೆ ಇಲ್ಲಿಗೇ ಕೊನೆಗಾಣುವಂತೆ ಇಲ್ಲ. ಸತ್ತಮೇಲೆ ಇನ್ನೂ ಕೆಲವು ಶಿಕ್ಷೆಗಳನ್ನು ಅನುಭವಿಸುವುದಕ್ಕೆ ಬೇರೆ ಹೋಗಬೇಕಂತೆ. ಆದರೂ ಇಂತಹ ಸೃಷ್ಟಿಕರ್ತನನ್ನು ಮೆಚ್ಚಿ ಸಲು ಯಜ್ಞ ಯಾಗಗಳನ್ನು ಮಾಡಿಪೂ ಮಾಡಿದ್ದೆ!"

"ಈ ಆಚಾರಗಳೆಲ್ಲ ಭ್ರಾಂತಿ. ಪ್ರಪಂಚದಲ್ಲಿ ಒಂದೇ ಆದರ್ಶವಿದೆ. ಭ್ರಾಂತಿಯನ್ನೆಲ್ಲಾ ನಿರ್ಮೂಲಮಾಡಿ. ಸತ್ಯ ಕೊನೆಗೆ ಉಳಿಯುವುದು. ಮೋಡಗಳು ಚದುರಿದೊಡನೆ ಸೂರ್ಯ ಪ್ರಕಾಶಿಸು ತ್ತಾನೆ. ಈ ಅಹಂಕಾರವನ್ನು ಕೊಲ್ಲುವುದು ಹೇಗೆ? ಸಂಪೂರ್ಣ ನಿಸ್ವಾರ್ಥರಾಗಿ. ಒಂದು ಇರುವೆಗೂ ನಿಮ್ಮ ಪ್ರಾಣವನ್ನು ಅರ್ಪಿಸಲು ಸಿದ್ಧರಾಗಿ. ಯಾವ ಮೂಢನಂಬಿಕೆಗೂ ಕೆಲಸಮಾಡಬೇಡಿ. ಯಾವ ದೇವರನ್ನು ಮೆಚ್ಚಿಸುವುದಕ್ಕೂ ಕೆಲಸಮಾಡಬೇಡಿ. ಯಾವ ಪ್ರತಿ ಫಲಕ್ಕೂ ಕೆಲಸಮಾಡಬೇಡಿ. ನಿಮ್ಮ ಅಹಂಕಾರವನ್ನು ಅಳಿಸಿ ನಿರ್ವಾಣ ಪಡೆಯಲು ಮಾತ್ರ ಕೆಲಸಮಾಡಿ. ಪ್ರಾರ್ಥನೆ ಪೂಜೆ ಇವೆಲ್ಲ ಕೆಲಸಕ್ಕೆ ಬಾರದವು. ನೀವೆಲ್ಲ 'ದೇವರಿಗೆ ಧನ್ಯವಾದ' ಎನ್ನುವಿರಿ. ಆದರೆ ಅವನಿರುವುದೆಲ್ಲಿ? ನಿಮಗೆ ಅವನು ಗೊತ್ತಿಲ್ಲ. ಆದರೂ ನೀವು ಅವನ ವಿಷಯದಲ್ಲಿ ಹುಚ್ಚರಾಗಿ ಹೋಗುತ್ತಿರುವಿರಿ.

ಹಿಂದೂಗಳು ದೇವರನ್ನು ಏನಾದರೂ ಮತ್ತೇನುಬೇಕಾದರೂ ತ್ಯಜಿಸ ಬಲ್ಲರು. ದೇವರನ್ನು ಅಲ್ಲಗಳೆಯುವುದು ಭಕ್ತಿಯ ಕಾಲುಮುರಿದಂತೆ. ಭಕ್ತಿ ಮತ್ತು ದೇವರು ಇವೆರಡನ್ನೂ ಹಿಂದೂಗಳು ಎಂದಿಗೂ ತ್ಯಜಿಸ ಲಾರರು. ಆದರೆ ಬುದ್ಧನ ಬೋಧನೆಯಲ್ಲಿ ದೇವರಿಲ್ಲ, ಆತ್ಮವಿಲ್ಲ, ಬರೀ ಕರ್ಮ, ಕರ್ಮ ಏತಕ್ಕೆ? ಆತ್ಮನಿಗಾಗಿ ಅಲ್ಲ. ಆತ್ಮ ಒಂದು

ಭ್ರಾಂತಿ. ಈ ಭ್ರಾಂತಿ ಹೋದರೆ ನಮ್ಮ ನಿಜಸ್ಥಿತಿ ಅರಿವಾಗುವುದು- ಪ್ರಪಂಚದಲ್ಲಿ ಇಷ್ಟು ಮೀರಿದ್ದೇ. ಕೇವಲ ಕರ್ಮಕ್ಕಾಗಿ. ಕರ್ಮ ಮಾಡುವವರು ಬಹಳ ವಿರಳ.

ಆದರೂ ಬೌದ್ಧ ಧರ್ಮ ಬಹಳ ತೀವ್ರವಾಗಿ ಹೆಚ್ಚಿತು. ಇದು ಅದರಲ್ಲಿದ್ದ ಅದ್ಭುತ ಪ್ರೇಮದ ದೆಸೆಯಿಂದ. ಮಾನವ ಇತಿಹಾಸದಲ್ಲಿ ಪ್ರಥಮಬಾರಿ ಉದಾರ ಮಾನವ ಹೃದಯ ಉಕ್ಕಿ ಹರಿದು ಕೇವಲ ಮಾನವನ ಸೇವೆಯಲ್ಲಿ ಮಾತ್ರವಲ್ಲ, ಎಲ್ಲ ಪ್ರಾಣಿಗಳ ಸೇವೆಯಲ್ಲಿ ತಲ್ಲೀನವಾಯಿತು. ಎಲ್ಲರೂ ದುಃಖದಿಂದ ಪಾರಾಗಬೇಕೆಂಬುದಲ್ಲದೆ ಮತ್ತಾವುದನ್ನೂ ಅದು ಲೆಕ್ಕಿಸಲಿಲ್ಲ.

ಮನುಷ್ಯ ದೇವರ ಪ್ರೇಮದಲ್ಲಿ ತನ್ನ ಸಹೋದರ ಮಾನವನನ್ನೇ ಮರೆತಿದ್ದ. ದೇವರ ಹೆಸರಿನಲ್ಲಿ ತನ್ನ ಪ್ರಾಣವನ್ನೇ ತೆರಲು ಸಿದ್ಧನಾಗಿದ್ದ ಮನುಷ್ಯ, ಹಿಂತಿರುಗಿ ದೇವರ ಹೆಸರಿನಲ್ಲಿ ತನ್ನ ಸಹೋದರ ಮಾನವನನ್ನೂ ಕೊಲ್ಲಲು ಸಿದ್ಧನಾಗಿದ್ದ. ಪ್ರಪಂಚ ಹೀಗಿತ್ತು. ದೇವರ ಮಹಾತ್ಮೆಗೆ ತಮ್ಮ ಮಗನನ್ನು ಬಲಿ ಕೊಡಲು ಸಿದ್ಧರಾಗಿದ್ದರು. ದೇವರಿಗಾಗಿ ಅನ್ಯ ರಾಷ್ಟ್ರಗಳನ್ನು ಸೂರೆ ಮಾಡುತ್ತಿದ್ದರು ದೇವರಿಗಾಗಿ ಸಾವಿರಾರು ಜನರನ್ನು ಬಲಿಕೊಡಲು ಸಿದ್ಧರಾಗಿದ್ದರು. ದೇವರಿಗಾಗಿ ರಕ್ತದ ಕಾಲುವೆ ಹರಿಸಲು ಸಿದ್ಧರಾಗಿದ್ದರು. ಮಾನವನೆಂಬ ಇನ್ನೊಬ್ಬ ದೇವರ ಕಡೆ ತಿರುಗಿದ್ದು ಇದೇ ಪ್ರಥಮ ಬಾರಿ. ಪ್ರೀತಿಸಬೇಕಾಗಿರುವುದು ಮಾನವನನ್ನು. ಪ್ರಥಮಬಾರಿ ಜೀವಿಗಳನ್ನೆಲ್ಲಾ ಪ್ರೇಮದಿಂದ ಅಪ್ಪುವ ಪ್ರಥಮ ಪ್ರವಾಹ ಇದು. ಸ್ವಲ್ಪವೂ ಬೆರಕೆಯಾಗದ, ಮಿಶ್ರವಾಗದ ಧರ್ಮ ಭರತಖಂಡದಿಂದ ಪ್ರಾರಂಭವಾಗಿ ಕ್ರಮೇಣ ಚತುರ್ದಿಕ್ಕುಗಳನ್ನೂ ವ್ಯಾಪಿಸಿತು.

ಈ ಮಹಾಗುರು, ಸತ್ಯ ಸತ್ಯದಂತೆ ತೋರುವಂತೆ ಮಾಡಲು ಯತ್ನಿಸಿದ. ದುರ್ಬಲತೆ ಇಲ್ಲ. ರಾಜಿಯಿಲ್ಲ, ಪುರೋಹಿತವರ್ಗ ಅಧಿಕಾರಿಗಳು, ರಾಜರು ಹೇಳಿದಂತೆ ಕೇಳುವುದಿರಲಿಲ್ಲ. ಎಷ್ಟೇ ಪ್ರಿಯವಾಗಿದ್ದರೂ ಮೂಢನಂಬಿಕೆಗೆ ಶರಣಾಗುತ್ತಿರಲಿಲ್ಲ. ಪುರೋಹಿತನ ಕಾಲದಿಂದ ಬಂದಿವೆ ಎಂದು ಯಾವ ಆಚಾರವನ್ನಾಗಲೀ, ಶಾಸ್ತ್ರವ

ನ್ನಾಗಲೀ, ಗೌರವಿಸುತ್ತಿರಲಿಲ್ಲ. ಅವನು ಶಾಸ್ತ್ರವನ್ನೆಲ್ಲಾ ಧಿಃಕ್ಕರಿಸಿದ. ಎಲ್ಲಾ ಧಾರ್ಮಿಕ ಆಚಾರಗಳನ್ನೂ ತಿರಸ್ಕರಿಸಿದ. ಭರತಖಂಡದಲ್ಲಿ ಹಿಂದಿನಿಂದ ಧರ್ಮವನ್ನು ಬೋಧಿಸುತ್ತಿದ್ದ ಸಂಸ್ಕೃತ ಭಾಷೆಯನ್ನು ಕೂಡ ತಿರಸ್ಕರಿಸಿದ. ಇದರೊಂದಿಗೆ ಸಂಬಂಧಪಡೆದ ಮೂಢನಂಬಿಕೆಯನ್ನು ಇವನ ಅನುಯಾಯಿಗಳು ಪಡೆಯದಿರಲಿ ಎಂದು.

ನಾವು ವಿವರಿಸುತ್ತಿದ್ದ ಸತ್ಯವನ್ನು ಬೇರೊಂದು ದೃಷ್ಟಿಯಿಂದ ನೋಡಬಹುದು. ಅದೇ ಹಿಂದೂ ದೃಷ್ಟಿ. ಬುದ್ಧನ ನಿಸ್ವಾರ್ಥತೆಯ ಮಹಾಸಿದ್ಧಾಂತವನ್ನು ನಮ್ಮ ದೃಷ್ಟಿಯಿಂದ ನೋಡಿದರೆ ಚೆನ್ನಾಗಿ ತಿಳಿದುಕೊಳ್ಳಬಹುದು ಎನ್ನುವೆವು. ಉಪನಿಷತ್ತಿನಲ್ಲಿ ಆಗಲೇ ಆತ್ಮ ಮತ್ತು ಬ್ರಹ್ಮದ ಮಹಾ ಸಿದ್ಧಾಂತಗಳಿವೆ. ಆತ್ಮನೇ ಬ್ರಹ್ಮ. ಇರುವುದೊಂದೇ ಆತ್ಮ, ಇದೇ ಸತ್ಯ. ಮಾಯದಿಂದ ನಾವು ಅನ್ಯಥಾ ಭಾವಿಸುವೆವು. ಇರುವುದೊಂದೇ ಆತ್ಮ, ಹಲವಿಲ್ಲ. ಅದೇ ಆತ್ಮ ಹಲವದರಲ್ಲಿ ವ್ಯಕ್ತವಾಗುತ್ತಿದೆ. ಮಾನವ ಮಾನವನ ಸಹೋದರ. ಏಕೆಂದರೆ ಮಾನವರೆಲ್ಲ ಮಾನವನ ಸಹೋದರ ಮಾತ್ರವಲ್ಲ, ನಾನೇ ಅವನು ಎನ್ನುವುದು ವೇದ. ಯಾರನ್ನು ವ್ಯಥೆಗೆ ಈಡುಮಾಡಿದರೂ ನನಗೇ ವ್ಯಥೆಯನ್ನು ಉಂಟುಮಾಡಿಕೊಂಡಂತೆ. ನಾನೇ ಪೂರ್ಣ. ನಾನು ಅಂತಹವನು, ಇಂತಹವನು ಎಂದು ಭಾವಿಸುವುದೆಲ್ಲ ಒಂದು ಭ್ರಮೆ.

ನೀವು ನಿಮ್ಮ ನೈಜಸ್ಥಿತಿಯನ್ನು ಸಮೀಪಿಸಿದಂತೆಲ್ಲ ಈ ಭ್ರಾಂತಿ ಹೆಚ್ಚು ಮಾಯವಾಗುವುದು. ಭೇದಗಳು, ವ್ಯತ್ಯಾಸಗಳು ಹೆಚ್ಚು ಹೆಚ್ಚು ಕಡಿಮೆಯಾದಷ್ಟು ಎಲ್ಲರೂ ಒಂದೇ ಪರಂಜ್ಯೋತಿಯ ಆವಿರ್ಭಾವ ಎಂಬುದು ವ್ಯಕ್ತವಾಗುವುದು. ದೇವರಿರುವನು. ಆದರೆ ಅವನೆಲ್ಲೋ ಮುಗಿಲಿನಾಚೆ ಇರುವವನಲ್ಲ. ಅವನು ಪರಂಜ್ಯೋತಿ. ಅವನಿರುವುದೆಲ್ಲಿ? ನಿನ್ನ ಆತ್ಮನಿಗಿಂತ ಸಮೀಪದಲ್ಲಿರುವನು. ಅವನೇ ಆತ್ಮ. ದೇವರು ನಿನ್ನಿಂದ ಬೇರೆ ಹೋಗಿರುವನು ಎಂದು ಹೇಗೆ ಅರಿಯಬಲ್ಲೆ? ನಿನ್ನಿಂದ ದೇವರು ಬೇರೆ ಎಂದು ಭಾವಿಸಿದರೆ ನೀನವನನ್ನು ಅರಿತಿಲ್ಲ. ಅವನೇ ನೀನು. ಇದೇ ಭಾರತದ ಮಹಾತ್ಮರ ಸಂದೇಶ.

ನೀನು ಇಂತಹ ಒಂದು ವ್ಯಕ್ತಿ ಎಂದು ಭಾವಿಸುವುದು, ಪ್ರಪಂಚವೆಲ್ಲ ನಿನ್ನಿಂದ ಬೇರೆ ಎಂದು ಯೋಚಿಸುವುದು ಸ್ವಾರ್ಥತೆ.

ನೀನು ನನ್ನಿಂದ ಬೇರೆ ಎಂದು ಭಾವಿಸುವೆ. ನೀನು ನನ್ನ ಯೋಚನೆಯನ್ನೇ ಮಾಡುವುದಿಲ್ಲ. ನೀನು ಮನೆಗೆ ಹೋಗಿ ಊಟಮಾಡುವೆ. ನಾನು ಸತ್ತರೂ ನೀನು ಊಟಮಾಡುವೆ, ಕುಡಿವೆ, ಸಂತೋಷದಿಂದಿರುವೆ. ಪ್ರಪಂಚದಲ್ಲಿ ಇತರರೆಲ್ಲ ದುಃಖಪಡುತ್ತಿರುವಾಗ ನೀನು ನಿಜವಾಗಿಯೂ ಸುಖವಾಗಿರಲಾರೆ. ನಾವೆಲ್ಲ ಒಂದು. ನಾವು ಬೇರೆಂಬ ಭ್ರಾಂತಿಯೆ ದುಃಖಕ್ಕೆಲ್ಲ ಮೂಲ. ಆತ್ಮನಲ್ಲದಿರುವುದು ಯಾವುದೂ ಇಲ್ಲ; ಮತ್ತಾವುದೂ ಇಲ್ಲ.

ಮಾನವನಲ್ಲದೆ ದೇವರೇ ಬೇರೆ ಇಲ್ಲವೆಂಬುದೇ ಬುದ್ಧನ ಮತ. ದೇವರಿರುವನು ಎಂಬ ಊಹೆಯ ದೃಷ್ಟಿಯನ್ನು ಅವನು ತಿರಸ್ಕರಿಸಿದನು. ಇದು ಜನರನ್ನು ದುರ್ಬಲರನ್ನಾಗಿ ಮಾಡುವುದು, ಮೂಢರನ್ನಾಗಿ ಮಾಡುವುದು ಎಂದನು. ಎಲ್ಲವನ್ನೂ ಕೊಡು ಎಂದು ದೇವರನ್ನು ಪ್ರಾರ್ಥಿಸಿದರೆ ಕೆಲಸಮಾಡುವವರು ಯಾರು? ಯಾರು ಕಷ್ಟಪಟ್ಟು ಕೆಲಸಮಾಡುವರೋ ಅವರಿಗೆ ದೇವರು ಸಹಾಯಮಾಡುವನು. ಯಾರು ತಮಗೆ ತಾವೇ ಸಹಾಯಮಾಡಿಕೊಳ್ಳುವರೋ ಅವರಿಗೆ ದೇವ ಸಹಾಯಮಾಡುವನು. ಇದಕ್ಕೆ ವಿರೋಧವಾದ ದೇವರ ಭಾವನೆ, ನಮ್ಮನ್ನು ದುರ್ಬಲರನ್ನಾಗಿ ಮಾಡುವುದು, ಹೇಡಿಗಳನ್ನಾಗಿ ಮಾಡುವುದು; ಆಶ್ರಿತರನ್ನಾಗಿ ಮಾಡುವುದು. ಸ್ವತಂತ್ರವಾಗಿರುವುದೆಲ್ಲ ಆನಂದ, ಪರಾಕ್ರಮವೇ ದುಃಖ. ಮನುಷ್ಯನಲ್ಲೇ ಅನಂತ ಶಕ್ತಿ ಇದೆ. ಅವನು ಅದನ್ನು ಅರಿಯಬಹುದು. ತಾನೇ ಅನಂತಾತ್ಮ ಎಂಬುದನ್ನೇ ಅನುಭವಿಸಬಹುದು. ಆದರೆ ನೀವು ಅದನ್ನು ನಂಬುವುದಿಲ್ಲ. ನೀವು ದೇವರನ್ನು ಪ್ರಾರ್ಥಿಸುತ್ತೀರಿ. ನಿಮ್ಮ ಸ್ವಪ್ರಯತ್ನವನ್ನು ನಂಬುತ್ತೀರಿ.

ಬುದ್ಧ ಇದಕ್ಕೆ ವಿರೋಧವಾದುದನ್ನು ಬೋಧಿಸಿದನು. ಜನರನ್ನು ಆಳುವುದಕ್ಕೆ ಬಿಡಬೇಡಿ. ಬೇಡುವುದು ಮುಂತಾದುವನ್ನೆಲ್ಲಾ ಮಾಡದಿರಲಿ. ದೇವರು ಒಂದು ಅಂಗಡಿ ಇಟ್ಟುಕೊಂಡಿಲ್ಲ. ಪ್ರತಿಸಲ ಉಸಿರಾಡುವಾಗಲೂ ನೀನು ದೇವರನ್ನು ಪ್ರಾರ್ಥಿಸುತ್ತಿರುವೆ. ನಾನು ಮಾತನಾಡುತ್ತಿರುವೆನು, ಅದೂ ಒಂದು ಪ್ರಾರ್ಥನೆಯೆ. ನೀವು ಕೇಳುತ್ತಿರುವಿರಿ. ಅದೂ ಒಂದು ಪ್ರಾರ್ಥನೆಯೆ. ಅನಂತವಾಗಿರುವ ಪವಿತ್ರಶಕ್ತಿಯೊಂದಿಗೆ ಭಾಗವಹಿಸುವ ಯಾವುದೊಂದು ಕಾಯಕ

ಅಥವಾ ಮಾನಸಿಕ ಕ್ರಿಯೆಯು ಇದೆಯೆ? ಇವೆಲ್ಲ ಒಂದು ನಿರಂತರ ಪ್ರಾರ್ಥನೆ. ಎಲ್ಲೋ ಕೆಲವು ಪದಗಳನ್ನು ಮಾತ್ರ ಪ್ರಾರ್ಥನೆ ಎಂದರೆ ಅದನ್ನು ಕೇವಲ ಕೋರಿಕೆಯನ್ನಾಗಿ ಮಾಡುವರು. ಇಂತಹ ಪ್ರಾರ್ಥನೆಯಿಂದ ಅಷ್ಟು ಉಪಯೋಗವಿಲ್ಲ. ಇದರಿಂದ ನಿಜವಾದ ಪ್ರತಿಫಲ ದೊರಕುವುದು ಅಪರೂಪ.

ಪ್ರಾರ್ಥನೆ ಎಂಬುದೊಂದು ಮಂತ್ರವೆ? ಅದನ್ನು ಉಚ್ಚರಿಸುತ್ತಿದ್ದರೆ ಕೆಲಸ ಮಾಡದೆ ಇದ್ದರೂ ಅದ್ಭುತವಾದ ಪರಿಣಾಮ ಉಂಟಾಗಬೇಕಾದರೆ? ಇಲ್ಲಿ ಎಲ್ಲರೂ ಕಷ್ಟಪಟ್ಟು ಕೆಲಸ ಮಾಡಬೇಕು. ಎಲ್ಲಾ ಅನಂತ ಶಕ್ತಿಯ ಆಳಕ್ಕೆ ಹೋಗಬೇಕು. ಒಬ್ಬ ಕಷ್ಟಪಟ್ಟು ಕೆಲಸ ಮಾಡುತ್ತಾನೆ. ಮತ್ತೊಬ್ಬ ಯಾವುದೋ ಕೆಲವು ಮಂತ್ರಗಳನ್ನು ಉಚ್ಚರಿಸಿ ಪ್ರಯೋಜನ ಪಡೆಯುತ್ತಾನೆ ಎಂದಲ್ಲ. ಈ ಸೃಷ್ಟಿಯೇ ಒಂದು ಅನವರತ ಪ್ರಾರ್ಥನೆ. ನೀವು ಈ ದೃಷ್ಟಿಯಿಂದ ಪ್ರಾರ್ಥನೆಯನ್ನು ನೋಡಿದರೆ ನಾನೂ ಅದನ್ನು ಒಪ್ಪುವೆನು. ಮಾತಿಲ್ಲ ಬೇಕಾಗಿರುವುದು, ಮೌನ ಪ್ರಾರ್ಥನೆ ಮೇಲು.

ಬಹುಪಾಲು ಜನರಿಗೆ ಈ ಸಿದ್ಧಾಂತ ಅರ್ಥವಾಗುವುದಿಲ್ಲ. ಭರತಖಂಡದಲ್ಲಿ ಆತ್ಮನ ವಿಚಾರದಲ್ಲಿ ಏನಾದರೂ ರಾಜಿಮಾಡಿಕೊಳ್ಳುವುದು ಎಂದರೆ ಮಹಾಪುರುಷರ ಬೋಧನೆಯನ್ನು ಮರೆತು ಪುರೋಹಿತರಿಗೆ ನಮ್ಮ ಅಧಿಕಾರವನ್ನೆಲ್ಲಾ ಕೊಡುವುದು, ಎಂದು ಅರ್ಥ. ಬುದ್ಧನಿಗೆ ಇದು ಗೊತ್ತಿತ್ತು. ಆದಕಾರಣವೇ ಬುದ್ಧ ಪುರೋಹಿತರ ತತ್ತ್ವ ಮತ್ತು ಆಚಾರವನ್ನೆಲ್ಲಾ ಬದಿಗಿರಿಸಿ ಮನುಷ್ಯನನ್ನು ತನ್ನ ಸ್ವಂತ ಕಾಲಮೇಲೆ ನಿಲ್ಲುವಂತೆ ಮಾಡಿದನು. ಜನರ ರೂಢಿಗೆ ವಿರೋಧವಾಗಿ ಅವನು ಹೋಗಬೇಕಾಗಿತ್ತು. ಅವನು ಒಂದು ದೊಡ್ಡ ಕ್ರಾಂತಿಯನ್ನು ತರಬೇಕಾಗಿತ್ತು. ಇದರ ಪರಿಣಾಮವಾಗಿ ಯಾಗ ಯಜ್ಞಗಳನ್ನೊಳಗೊಂಡ ಧರ್ಮ ಭರತಖಂಡದಿಂದ ಮರೆಯಾಯಿತು. ಪುನಃ ಅದು ಚೇತರಿಸಿಕೊಳ್ಳಲಿಲ್ಲ.

ತೋರಿಕೆಗೆ ಬೌದ್ಧ ಧರ್ಮ ಇಂಡಿಯಾದಿಂದ ಮಾಯವಾಗಿದೆ. ಆದರೆ ನಿಜವಾಗಿ ಇಲ್ಲ. ಬುದ್ಧನ ಬೋಧನೆಯಲ್ಲಿ ಒಂದು ಅಪಾಯಕರವಾದ ವಿಷಯವಿತ್ತು. ಅದೊಂದು ಸುಧಾರಕ ಧರ್ಮ. ದೊಡ್ಡ

ಒಂದು ಆಧ್ಯಾತ್ಮಿಕ ಬದಲಾವಣೆಯನ್ನು ತರುವುದಕ್ಕಾಗಿ ಎಷ್ಟೋ ನಿಷೇಧಾತ್ಮಕವಾದ ಬೋಧನೆಗಳನ್ನು ಕೊಡಬೇಕಾಯಿತು. ಒಂದು ಧರ್ಮ ಕೇವಲ ನಿಷೇಧದ ಭಾಗವನ್ನೇ ಒತ್ತಿ ಹೇಳುತ್ತಿದ್ದರೆ ಅದು ಕೊನೆಗೆ ನಾಶವಾಗುವ ಅಪಾಯವಿದೆ. ಒಂದು ಸುಧಾರಕ ಸಂಗಡ ಕೇವಲ ಸುಧಾರಣೆಯಲ್ಲಿಯೇ ನಿರತವಾಗಿದ್ದರೆ ಅದು ಜೀವಂತವಾಗಿರಲಾರದು. ಜೀವನ ಪೋಷಕವಾದ ನಿಜವಾದ ಸ್ಫೂರ್ತಿ ಅಂದರೆ ಅದರ ಸಿದ್ಧಾಂತಗಳು ಮಾತ್ರ ಎಂದೆಂದಿಗೂ ಬಾಳಬಲ್ಲವು. ಒಂದು ಸುಧಾರಣೆಯನ್ನು ತಂದಾದ ಮೇಲೆ ಅಸ್ತಿಭಾರವನ್ನು (Positive side) ಒತ್ತಿಹೇಳಬೇಕು. ಕಟ್ಟಡ ಪೂರೈಸಿದ ಮೇಲೆ ಕಾಲಾವಧಿಯನ್ನೆಲ್ಲಾ ತೆಗೆದುಹಾಕಬೇಕು.

ಕಾಲ ಕಳೆದಂತೆ ಭರತಖಂಡದಲ್ಲಿ ಬುದ್ಧನ ಅನುಯಾಯಿಗಳು ಬುದ್ಧನ ಬೋಧನೆಯ ನಿಷೇಧದ ಭಾಗವನ್ನು ಮಾತ್ರ ಒತ್ತಿಹೇಳತೊಡಗಿದರು. ಇದೇ ಬೌದ್ಧ ಧರ್ಮದ ಅವನತಿಗೆ ಕಾರಣವಾಯಿತು. ಸ್ಪಷ್ಟ ಭಾವನೆಗಳು ಅಭಾವದ ಭಾವನೆಗಳ ಆಧಿಕ್ಯದಿಂದ ಕುಗ್ಗಿಹೋದುವು. ಬೌದ್ಧ ಧರ್ಮದ ಹೆಸರಿನಲ್ಲಿ ಜಾರಿಯಲ್ಲಿದ್ದ ವಿನಾಶಾತ್ಮಕ ಭಾವನೆಗಳನ್ನು ಭರತಖಂಡ ತಿರಸ್ಕರಿಸಿತು. ಇದೇ ಆರ್ಯ ಜನಾಂಗದ ಭಾವನೆಯ ತೀರ್ಪು.

ದೇವರಿಲ್ಲ, ಆತ್ಮನಿಲ್ಲ ಎಂಬ ಅಭಾವಸೂಚಕ ಬೌದ್ಧ ಭಾವನೆಗಳು ಮಾಯವಾದುವು. ಇರುವವನು ದೇವರೊಬ್ಬನೇ ಎಂದು ನಾನು ಹೇಳುತ್ತೇನೆ. ಇದು ಸ್ಪಷ್ಟೋಕ್ತಿ. ಅವನೊಬ್ಬನೇ ಏಕಮಾತ್ರ ಸತ್ಯ. ಬುದ್ಧ ಆತ್ಮನಿಲ್ಲ ಎಂದರೆ ನಾನು "ಮಾನವ ನೀನು ವಿಶ್ವದಲ್ಲಿ ಅಭೇದ, ನೀನೇ ವಿಶ್ವವೆಲ್ಲ" ಎನ್ನುವೆನು ಎಷ್ಟು ಸ್ಪಷ್ಟವಾಗಿದೆ! ಸುಧಾರಕಾಂಶ ನಾಶವಾಯಿತು, ಉಪಯೋಗಾಂಶ ಎಂದೆಂದಿಗೂ ಇರುವುದು. ಬುದ್ಧ ಪ್ರಾಣಿಗಳಿಗೆ ದಯೆತೋರಿ ಎಂದು ಬೋಧಿಸಿದ. ಅಂದಿನಿಂದ ಎಲ್ಲರಿಗೂ, ಪ್ರಾಣಿಗಳಿಗೂ ದಯೆಯನ್ನು ತೋರದ ಯಾವ ಧರ್ಮವೂ ಭರತಖಂಡದಲ್ಲಿ ಇಲ್ಲ. ಎಲ್ಲ ಸಿದ್ಧಾಂತಗಳಿಗಿಂತ ಮಿಗಿಲಾಗಿ ಬೌದ್ಧ ಧರ್ಮ ನಮಗೆ ಕೊಟ್ಟಿರುವುದು ಈ ದಯೆ, ಅನುಕಂಪ, ದಾನ, ಎಂಬುವು.

ಬುದ್ಧನ ಜೀವನವೇ ಒಂದು ದೊಡ್ಡ ಆಕರ್ಷಣೆಯಾಗಿದೆ. ನನಗೆ ಬುದ್ಧನ ಜೀವನದ ಮೇಲೆ ಪ್ರೀತಿ. ಆದರೆ ಅವನ ಸಿದ್ಧಾಂತದ ಮೇಲೆ ಇಲ್ಲ. ನಾನು ಆ ಪವಿತ್ರಾತ್ಮನ ಶೀಲವನ್ನು ಎಲ್ಲರಿಗಿಂತ ಹೆಚ್ಚಾಗಿ ಗೌರವಿಸುತ್ತೇನೆ. ಅವನಲ್ಲಿದ್ದ ಧೈರ್ಯ ನಿರ್ಭಯತೆ, ಅದ್ಭುತ ಪ್ರೇಮ! ಮಾನವ ಹಿತಕ್ಕಾಗಿ ಅವನು ಜನ್ಮವೆತ್ತಿದನು. ಇತರರು ತಮಗಾಗಿ ದೇವರನ್ನು ಹುಡುಕಿರಬಹುದು, ಸತ್ಯವನ್ನು ಹುಡುಕಿರಬಹುದು. ಆದರೆ ಈತ ಕೇವಲ ತನಗಾಗಿ ಮಾತ್ರ ಸತ್ಯವನ್ನು ಹುಡುಕಲೆತ್ನಿಸಿದವನಲ್ಲ. ಜನರು ದುಃಖದಲ್ಲಿದ್ದುದರಿಂದ ಅವನು ಸತ್ಯವನ್ನು ಅರಸಿದನು. ಅವರಿಗೆ ಹೇಗೆ ಸಹಾಯ ಮಾಡಬೇಕು ಎಂಬುದೊಂದೆ ಅವನ ಜೀವನದ ಏಕಮಾತ್ರ ಧ್ಯೇಯವಾಗಿತ್ತು. ಬದುಕಿರುವ ಪರ್ಯಂತರ ಒಮ್ಮೆಯಾದರೂ ತನಗಾಗಿ ಯೋಚಿಸಿದವನಲ್ಲ ಅವನು. ಈ ಮಹಿಮನ ಮಹಾತ್ಮೆಯನ್ನು ನಮ್ಮಂತಹ ಅಜ್ಞರು, ಸ್ವಾರ್ಥರು, ಸಂಕುಚಿತ ದೃಷ್ಟಿಯವರು ಹೇಗೆ ಅರ್ಥಮಾಡಿಕೊಳ್ಳಬಲ್ಲರು?

ಅವನ ಅದ್ಭುತಧೀಶಕ್ತಿಯನ್ನು ನೋಡಿ, ಸ್ವಲ್ಪವೂ ಉದ್ವೇಗಕ್ಕೆ ಅವಕಾಶವಿಲ್ಲ; ಈ ಮಹಾ ಮೇಧಾವಿ ಸ್ವಲ್ಪವೂ ಮೌಢ್ಯತೆಗೆ ಶರಣಾದವನಲ್ಲ. ಯಾವುದೋ ಪುರಾತನ ಗ್ರಂಥ ಸಾರುವುದೆಂದು ನಂಬಬೇಡಿ. ನಿಮ್ಮ ಮುತ್ತಾತಂದಿರ ಕಾಲದಿಂದ ಅದು ಬಂದಿದೆ ಎಂದು ನೀವು ನಂಬಬೇಡಿ. ನಿಮ್ಮ ಸ್ನೇಹಿತರು ಹೇಳುತ್ತಾರೆ ಎಂದು ನಂಬಬೇಡಿ. ನೀವೇ ಯೋಚಿಸಿ, ನೀವೇ ಸತ್ಯವನ್ನು ಹುಡುಕಿ. ನೀವೇ ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿ. ಅನಂತರ ಅದು ಎಲ್ಲರಿಗೂ ಶ್ರೇಯಸ್ಕರವಾದರೆ ಇತರರಿಗೆ ನೀಡಿ ಎಂದನು. ಮೂಢರು, ದುರ್ಬಲರು, ಅಂಜುಕುಳಿಗಳು ಸತ್ಯವನ್ನು ಪಡೆಯಲಾರರು. ಒಬ್ಬನು ಸ್ವತಂತ್ರ ಮತಿಯುವನಾಗಿರಬೇಕು. ಆಕಾಶದಷ್ಟು ವಿಶಾಲವಾಗಿರಬೇಕು. ಸ್ಫಟಿಕದಂತೆ ಸ್ಪಷ್ಟವಾದ ಮನಸ್ಸಿರಬೇಕು. ಆಗ ಮಾತ್ರ ಸತ್ಯ ಅಲ್ಲಿ ಹೊಳೆಯಬಲ್ಲದು. ನಮ್ಮಲ್ಲಿ ಬೇಕಾದಷ್ಟು ಮೂಢನಂಬಿಕೆಗಳಿವೆ. ನೀವು ಬಹಳ ವಿದ್ಯಾವಂತರು ಎಂದು ಜಂಭಕೊಚ್ಚಿಕೊಳ್ಳುವ ನಿಮ್ಮ ದೇಶದಲ್ಲಿ ಕೂಡ ಎಷ್ಟು ಸಂಕುಚಿತ ಭಾವನೆ ಮತ್ತು ಮೂಢನಂಬಿಕೆ

ಗಳು ಇವೆ. ನಿಮ್ಮ ಸಮಾನ ನಾಗರೀಕರಿಲ್ಲವೆಂದು ಹೆಮ್ಮೆ ಕೊಚ್ಚಿಕೊಳ್ಳುವ ನಿಮ್ಮ ದೇಶದಲ್ಲಿ, ನಾನು ಹಿಂದು ಎಂದರೆ ನನಗೆ ಕುಳಿತುಕೊಳ್ಳುವುದಕ್ಕೆ ಒಂದು ಕುರ್ಚಿಯನ್ನೂ ಕೊಡಲಿಲ್ಲ. ಇದನ್ನು ಯೋಚಿಸಿ ನೋಡಿ!

ಕ್ರಿಸ್ತ ಹುಟ್ಟುವುದಕ್ಕೆ ಆರುನೂರು ವರ್ಷಗಳು ಮುಂಚೆ, ಬುದ್ಧನ ಕಾಲದಲ್ಲಿ ಭಾರತೀಯರು ಹೆಚ್ಚು ವಿದ್ಯಾಸಂಪನ್ನರಾಗಿದ್ದಿರಬಹುದು. ಬಹಳ ಸ್ವತಂತ್ರರಾಗಿದ್ದಿರಬಹುದು. ಅನೇಕ ಜನ ಅವನ ಅನುಯಾಯಿಗಳಾದರು. ರಾಜರು ತಮ್ಮ ಸಿಂಹಾಸನವನ್ನು ತ್ಯಜಿಸಿದರು, ರಾಣಿಯರು ತಮ್ಮ ಸಿಂಹಾಸನವನ್ನು ತ್ಯಜಿಸಿದರು. ಹಿಂದಿನಿಂದಲೂ ಪುರೋಹಿತರು ಏನನ್ನು ಯೋಚಿಸಿದ್ದರೋ ಅದಕ್ಕಿಂತ ಬೇರೆಯಾಗಿರುವ, ಕ್ರಾಂತಿಕಾರಕವಾಗಿರುವ ಸಂದೇಶವನ್ನು ಅವರು ಮೆಚ್ಚುವುದಕ್ಕೆ ಮತ್ತು ಅದನ್ನು ಅನುಸರಿಸುವುದಕ್ಕೆ ಅವರಿಗೆ ಸಾಧ್ಯವಾಗಿತ್ತು. ಅವರ ಮನಸ್ಸು ಅಸಾಧಾರಣವಾಗಿ ಸ್ವತಂತ್ರವಾಗಿತ್ತು. ಅಸಾಧಾರಣವಾಗಿ ವಿಶಾಲವಾಗಿತ್ತು.

ಅವನ ಮರಣವನ್ನು ಕುರಿತು ಯೋಚಿಸಿ. ಅವನು ಬದುಕಿರುವಾಗ ಮಹಾತ್ಮನಾಗಿದ್ದರೆ, ಸಾಯುವಾಗಲೂ ಹಾಗೆಯೇ ಇದ್ದನು. ನಿಮ್ಮ ರೆಡ್ ಇಂಡಿಯನ್ ಜನರಂತೆ ಇದ್ದ ಪಂಗಡಕ್ಕೆ ಸೇರಿದ ಒಬ್ಬ ಕೊಟ್ಟ ಆಹಾರವನ್ನು ಸ್ವೀಕರಿಸಿದ. ಹಿಂದೂಗಳು ಅಂತಹವರನ್ನು ಮುಟ್ಟುವುದು ಕೂಡ ಇಲ್ಲ. ಏಕೆಂದರೆ ಅವರು ಸಿಕ್ಕಿದುದನ್ನೆಲ್ಲಾ ತಿನ್ನುವರು. ಅವನು ತನ್ನ ಶಿಷ್ಯರಿಗೆ "ನೀವು ಈ ಆಹಾರವನ್ನು ತೆಗೆದುಕೊಳ್ಳಬೇಡಿ. ಆದರೆ ನಾನು ಅದನ್ನು ತೆಗೆದುಕೊಳ್ಳದೆ ವಿಧಿಯಿಲ್ಲ. ಆತ ನನಗೆ ಒಂದು ದೊಡ್ಡ ಉಪಕಾರವನ್ನು ಮಾಡಿರುವನು. ನನ್ನನ್ನು ದೇಹಬಂಧನದಿಂದ ಪಾರುಮಾಡಿರುವನು ಎಂದು ಆತನಿಗೆ ಹೇಳಿ" ಎಂದನು. ವೃದ್ಧನೊಬ್ಬ ಅವನ ಹತ್ತಿರ ಬಂದು ಕುಳಿತ. ಅವನು ಗುರುವನ್ನು ನೋಡುವುದಕ್ಕೆ ಹಲವು ಮೈಲಿಗಳು ನಡೆದುಕೊಂಡು ಬಂದಿದ್ದ. ಬುದ್ಧ ಅವನಿಗೆ ಬೋಧಿಸಿದ. ತನ್ನ ಶಿಷ್ಯನೊಬ್ಬ ಅಳುತ್ತಿರುವುದನ್ನು ನೋಡಿ ಅವನಿಗೆ ಬುದ್ಧಿ ಹೇಳಿದನು. "ಇದೇನು. ನಾನು ಇಷ್ಟೊಂದು ಬೋಧಿಸಿದುದರ ಪರಿಣಾಮವೇ

ಇದು? ಎಂದಿಗೂ ಈ ಅನಿತ್ಯ ಬಂಧನವಿಲ್ಲದಿರಲಿ, ನನ್ನನ್ನೇ ಎಂದೂ ಆಶ್ರಯಿಸಬೇಡಿ. ಇಂದಿದ್ದು ನಾಳೆ ಹೋಗುವ ವ್ಯಕ್ತಿಯನ್ನು ಹೊಗಳ ಬೇಡಿ. ಬುದ್ಧ ಒಂದು ವ್ಯಕ್ತಿಯಲ್ಲ, ಅದೊಂದು ಸಾಕ್ಷಾತ್ಕಾರದ ಸ್ಥಿತಿ. ನಿಮ್ಮ ಮುಕ್ತಿಯನ್ನು ನೀವೇ ಸಾಧಿಸಿ. ''

ಸಾಯುವಾಗಲೂ ತಾನು ಪ್ರತ್ಯೇಕ ಎಂದು ಒಪ್ಪಿಕೊಳ್ಳಲಿಲ್ಲ. ನಾನು ಅದಕ್ಕಾಗಿ ಅವನನ್ನು ಆರಾಧಿಸುವುದು. ನೀವು ಕ್ರಿಸ್ತ ಬುದ್ಧರೆಂದು ಕರೆಯುವುದೆಲ್ಲ ಸಾಕ್ಷಾತ್ಕಾರದ ಸ್ಥಿತಿಯ ಒಂದು ಅವಸ್ಥೆ. ಪ್ರಪಂಚದ ಗುರುಗಳೆಲ್ಲರಿಗಿಂತ ಹೆಚ್ಚಾಗಿ ನಮ್ಮ ಸ್ವಂತ ಕಾಲಮೇಲೆ ನಿಲ್ಲುವಂತೆ ಬೋಧಿಸಿದನು. ನಮ್ಮ ತೋರಿಕೆಯ ವ್ಯಕ್ತಿತ್ವದ ಬಂಧನ ದಿಂದ ಪಾರುಮಾಡಿದವನು ಮಾತ್ರವಲ್ಲ. ದೇವದೇವರೆಂಬ ಅಗೋಚರ ವ್ಯಕ್ತಿಗಳ ಆಶ್ರಯದಿಂದ ನಮ್ಮನ್ನು ಸ್ವತಂತ್ರರನ್ನಾಗಿ ಮಾಡಿದನು. ನಿರ್ವಾಣವೆಂಬ ಆ ಅವಸ್ಥೆಯನ್ನು ಪಡೆಯಲು ಎಲ್ಲರಿಗೂ ಆಹ್ವಾನ ವಿತ್ತನು. ಎಲ್ಲರೂ ಒಂದು ದಿನ ಅದನ್ನು ಪಡೆಯಲೇಬೇಕು. ಅದೇ ಮಾನವನ ಪರಮಗುರಿ.

೯

# ಬಾಲ ಗೋಪಾಲ

“ಅಮ್ಮ ಕಾಡಿನ ಮೂಲಕ ನಾನು ಒಬ್ಬನೇ ಶಾಲೆಗೆ ಹೋಗುವುದಕ್ಕೆ ತುಂಬಾ ಅಂಜಿಕೆಯಾಗುವುದು. ಇತರರಿಗೆ ಶಾಲೆಗೆ ಬರುವಾಗ ಆಡಲೂ ಅಲ್ಲಿಂದ ಮನೆಗೆ ಹೋಗುವಾಗ ಜೊತೆಯಲ್ಲಿ ಹೋಗುವುದಕ್ಕೆ ಆಳುಗಳು ಇರುವರು. ಅಮ್ಮಾ ಶಾಲೆಯಿಂದ ಮನೆಗೆ ಕರೆದುಕೊಂಡು ಬರುವುದಕ್ಕೆ ನನಗೆ ಯಾರಾದರೂ ಏತಕ್ಕೆ ಇರಬಾರದು?” ಹಾಗೆಂದು ಒಂದು ದಿನ ಛಳಿಗಾಲದಲ್ಲಿ ಶಾಲೆಗೆ ಹೋಗಲು ಅಣಿಯಾಗುತ್ತಿದ್ದ ಗೋಪಾಲ ಎಂಬ ಬ್ರಾಹ್ಮಣ ಹುಡುಗನೊಬ್ಬ ತಾಯಿಗೆ ಹೇಳಿದ. ಅವರಿಗೆ ಬೆಳಗ್ಗೆ ಮತ್ತು ಮಧ್ಯಾಹ್ನದ ಹೊತ್ತು ಶಾಲೆ ಇತ್ತು. ಮಧ್ಯ ಸಂಜೆಹೊತ್ತು ಶಾಲೆ ಬಿಡುವ ವೇಳೆಗೆ ಸಂಜೆಯಾಗುತ್ತಿತ್ತು. ಅವನು ಒಂದು ಕಾಡಿನ ಮೂಲಕ ಮನೆಗೆ ಬರಬೇಕಾಗಿತ್ತು.

ಗೋಪಾಲನ ತಾಯಿ ವಿಧವೆ. ಇವನ ತಂದೆ ಬದುಕಿರುವಾಗ ಹಣ ಸಂಪಾದನೆ ಕಡೆಗೆ ಅಷ್ಟು ಗಮನ ಕೊಟ್ಟವನಂತೆ ಕಾಣುವುದಿಲ್ಲ. ಇರುವತನಕ ಓದುವುದು ಇತರರಿಗೆ ಕಲಿಸುವುದು, ತಾನು ಪೂಜೆ ಮಾಡುವುದು ಇತರರಿಗೆ ಕಲಿಸುವುದು ಇದರಲ್ಲೇ ನಿರತನಾಗಿದ್ದ. ಗೋಪಾಲ ಸಣ್ಣ ಮಗುವಾಗಿದ್ದಾಗಲೆ ತಂದೆ ತೀರಿಕೊಂಡ. ತಾಯಿ ಅಂದಿನಿಂದ ಪ್ರಪಂಚಕ್ಕೆ ಸ್ವಲ್ಪವೂ ಗಮನ ಕೊಡುತ್ತಿರಲಿಲ್ಲ. ಅವರು ಮುಂಚೆ ಕೊಡುತ್ತಿದ್ದುದೂ ಬಹಳ ಅಲ್ಪ. ಈಗ ಅದೂ ಇಲ್ಲದಂತೆ ಆಯಿತು. ಅಂದಿನಿಂದ ಸಂಪೂರ್ಣ ಭಗವಂತನನ್ನು ಜ್ಞಾಪಿಸುತ್ತ

ಪ್ರಾರ್ಥನೆ ಜಪತಪದಲ್ಲಿ ಕಾಲಕಳೆಯುತ್ತ ಮೃತ್ಯುಬರುವದನ್ನೇ ನಿರೀಕ್ಷಿಸುತ್ತಿದ್ದಳು. ಮರಣಾನಂತರವಾದರೂ ತನ್ನ ಸುಖ ದುಃಖಗಳ ಪಾಲುಗಾರನಾದ ಅನಂತ ಜನ್ಮಗಳಿಂದ ಪಾಪಪುಣ್ಯದಲ್ಲಿ ಭಾಗಿಯಾದ ಪತಿಯ ದರ್ಶನ ಸಿಕ್ಕುವುದೆಂದು ಆಶಿಸುತ್ತಿದ್ದಳು. ಅವಳೊಂದು ಸಣ್ಣ ಗುಡಿಸಲಲ್ಲಿದ್ದಳು. ತನ್ನ ಗಂಡನಿಗೆ ಯಾರೋ ಗುರುದಕ್ಷಿಣೆಯಂತೆ ಕೊಟ್ಟದ್ದ ಸಣ್ಣ ಒಂದು ಜಮೀನಿನಿಂದ ವರುಷಕ್ಕೆ ಬೇಕಾಗುವ ಭತ್ತ ಸಿಕ್ಕುತ್ತಿತ್ತು. ಗುಡಿಸಿಲಿನ ಸುತ್ತಲಿರುವ ಬೊಂಬು, ತಂಗಿನಮರ, ಕೆಲವು ಮಾವಿನ ಮರ, ಮತ್ತು ಈಚಲಮರ ಮತ್ತು ನೆರೆಹೊರೆಯವರ ಸಹಾಯದಿಂದ ವರುಷಕ್ಕೆ ಬೇಕಾಗುವ ತರಕಾರಿ ಖರ್ಚು ಸಿಕ್ಕುತ್ತಿತ್ತು. ಉಳಿದ ಖರ್ಚಿಗಾಗಿ ದಿನವೆಲ್ಲ ಒಂದು ಚರಕದಲ್ಲಿ ನೂಲನ್ನು ತೆಗೆಯುತ್ತಿದ್ದಳು.

ಅವಳು ಬೆಳಗ್ಗೆ ಹೊತ್ತಿಗೆ ಮುಂಚೆಯೇ, ಅರುಣ ಕಿರಣ ಹತ್ತಿರಿರುವ ತೋಪಿನಮೇಲೆ ಬೀಳುವುದಕ್ಕೆ ಮುಂಚೆಯೇ, ಹಕ್ಕಿಗಳು ಮರದ ಮೇಲೆ ಧ್ವನಿಮಾಡುವುದಕ್ಕೆ ಮುಂಚೆಯೇ ಏಳುವಳು. ನೆಲದ ಮೇಲೆ ಒಂದು ಚಾಪೆ ಅದರ ಮೇಲೆ ಒಂದು ಕಂಬಳಿ ಹಾಸಿ ಅದರ ಮೇಲೆ ಕುಳಿತುಕೊಂಡು ಪವಿತ್ರನಾರಿಯರ ಹೆಸರನ್ನು ಹೇಳುವಳು. ಹಿಂದಿನ ಋಷಿಗಳನ್ನು ಸ್ಮರಿಸಿ, ಮಾನವರಕ್ಷಕನಾದ ನಾರಾಯಣ ಕರುಣಾಮಯನಾದ ಶಿವ, ಜಗನ್ಮಾತೆಯರಾದ ತಾರ ಇವರನ್ನು ಪ್ರಾರ್ಥಿಸುವಳು. ಎಲ್ಲಕ್ಕಿಂತ ಹೆಚ್ಚಾಗಿ ತಾನು ಹೃತ್ಪೂರ್ವಕ ಪ್ರೀತಿಸುತ್ತಿದ್ದ ಗೋಪಾಲ ಬಾಲನಂತೆ ಇರುವ ಶ್ರೀ ಕೃಷ್ಣನನ್ನು ಮಾನವ ಕೋಟಿಯನ್ನು ರಕ್ಷಿಸೆಂದು, ಅವರಿಗೆ ಸದ್ಬುದ್ಧಿಯನ್ನು ಕರುಣಿಸೆಂದು ಪ್ರಾರ್ಥಿಸುವಳು. ದಿನ ಕಳೆದಂತೆ ತನ್ನ ಪತಿಯಬಳಿಗೆ ಹೋಗುವುದಕ್ಕೆ ಒಂದು ದಿನ ಹತ್ತಿರ ಬಂದು ಇದರೊಡನೆ ತನ್ನ ಆರಾಧನೆಯ ಪೂರ್ತಿಯಾದ ಕೃಷ್ಣನ ಸಮೀಪಕ್ಕೆ ಹೋಗುವ ದಿನ ಹತ್ತಿರ ಬಂತು ಎಂದು ಆಲೋಚಿಸುತ್ತಿದ್ದಳು.

ಬೆಳಕು ಹರಿಯುವ ಹೊತ್ತಿಗೆ ಹತ್ತಿರ ಹರಿಯುತ್ತಿದ್ದ ಹೊಳೆಯಲ್ಲಿ ಸ್ನಾನಮಾಡುವಾಗ ಕೃಷ್ಣನ ದಯೆಯಿಂದ ತನ್ನ ದೇಹ ನೀರಿನಿಂದ ಹೇಗೆ ಶುದ್ಧವಾಗುವುದೊ ಹಾಗೆಯೇ ಮನಸ್ಸು ಪರಿಶುದ್ಧವಾಗ

ಲೆಂದು ಪ್ರಾರ್ಥಿಸುವಳು. ಅನಂತರ ಮಡಿಮಾಡಿದ ಶುಭ್ರವಾದ ಬಿಳಿಯ ಹತ್ತಿಯ ಸೀರೆಯನ್ನುಟ್ಟು ದೇವರ ಪೂಜೆಗೆ ಹೂವು ತುಳಸಿ ಕೀಳುವಳು. ಅನಂತರ ಗಂಧದ ಮಣೆಯ ಮೇಲೆ ನೀರು ಹಾಕಿ ಚಂದನವನ್ನು ತೆಗೆಯುವಳು. ಪೂಜೆಗೆಲ್ಲ ಅಣಿಯಾದ ಮೇಲೆ ಇಹನ್ನೆಲ್ಲ ತೆಗೆದುಕೊಂಡು ತನ್ನ ಗುಡಿಸಿಲಿನಲ್ಲಿ ಇಟ್ಟಿದ್ದ ಪ್ರತ್ಯೇಕವಾದ ಪೂಜೆಯ ಮನೆಗೆ ಹೋಗುವಳು. ಈ ಕೋಣೆಯಲ್ಲಿ ಅವಳು ಪೂಜಿಸುವ ಗೋಪಾಲನಿದ್ದ. ಅಲ್ಲಿ ಒಂದು ಮರದ ಪೀಠದ ಮೇಲೆ ಒಂದು ಮಕಮಲ್ಲಿನ ಮೆತ್ತೆಯ ಮೇಲೆ ಹೂವಿನಿಂದ ಆವೃತವಾದ ಸ್ಥಳದಲ್ಲಿ ಕಂಚಿನಿಂದ ಮಾಡಿದ ಒಂದು ಸಣ್ಣ ಬಾಲಗೋಪಾಲನಿದ್ದ. ಅವನ ಮೇಲೆ ಧೂಳು ಬೀಳದಂತೆ ಒಂದು ರೇಶ್ಮೆಯ ತೆರೆ ಮಂದಾಸನದ ಮೇಲೆ ಇತ್ತು. ದೇವರನ್ನು ಮಗುವೆಂದು ಭಾವಿಸಿದಾಗ ಮಾತ್ರ ಆ ತಾಯಿಗೆ ತೃಪ್ತಿ. ಅನೇಕವೇಳೆ ತನ್ನ ಗಂಡ ಬದುಕಿದ್ದಾಗ ವೇದದಲ್ಲಿ ಬರುವ ಭಗವಂತ ನಿರಾಕಾರ, ಅನಂತ ನಿರ್ಗುಣ, ಎಂಬುದನ್ನು ಕೇಳಿದ್ದಳು. ಇದನ್ನೆಲ್ಲ ಮನಸ್ಸಿಟ್ಟು ಕೇಳುವಳು. ಆದರೆ ಕೊನೆಗೆ ಯಾವಾಗಲೂ ಒಂದೇ ತೀರ್ಮಾನಕ್ಕೆ ಬರುತ್ತಿದ್ದಳು. ವೇದದಲ್ಲಿ ಹೇಳಿರುವುದು ಸರಿಯಿರಬಹುದು. ಆದರೆ ಅದು ಬಹಳ ದೂರ ನಮ್ಮ ಮನಸ್ಸಿಗೆ ನಿಲುಕದುದು. ತಾನಾದರೊ ದುರ್ಬಲಳಾದ ಅಜ್ಞಳು. ಅದೂ ಅಲ್ಲದೇ ದೇವರು ಹೀಗೂ ಹೇಳಿರುವನಲ್ಲ "ನೀನು ಯಾವ ಆಕಾರದಲ್ಲಿ ನನ್ನನ್ನು ಧ್ಯಾನಿಸಿದರೆ ನಾನು ಆ ಆಕಾರದಲ್ಲಿ ನಿನಗೆ ಕಾಣಿಸಿಕೊಳ್ಳುತ್ತೇನೆ. ಮಾನವರೆಲ್ಲ ನಾನು ವಿಧಿಸಿರುವ ದಾರಿಯಲ್ಲೆ ನಡೆಯುತ್ತಿರುವರು" ಅವಳಿಗೆ ಇಷ್ಟು ಸಾಕಾಗಿತ್ತು. ಮತ್ತೇನೂ ಹೆಚ್ಚಾಗಿ ಬೇಕಾಗಿರಲಿಲ್ಲ. ಬಾಲಕೃಷ್ಣನ ಮೇಲೆ ಭಕ್ತಿ, ಶ್ರದ್ಧೆ, ಪ್ರೇಮದಿಂದ ತುಂಬಿ ತುಳುಕುತ್ತಿತ್ತು ಅವಳ ಹೃದಯ. ಕಣ್ಣೆದುರಿಗೆ ಇದ್ದ ಕಂಚಿನ ವಿಗ್ರಹವಾದ ಬಾಲಗೋಪಾಲನನ್ನು ಅವಳಹೃದಯ ಬಾಚಿ ತಬ್ಬಿದ್ದು : "ನೀನೊಬ್ಬ ನಿಜವಾದ ಮನುಷ್ಯನನ್ನು ಪ್ರೀತಿಸುವಂತೆ ಪ್ರಿಯ ಮತ್ತು ಶುದ್ಧ ಹೃದಯದಿಂದ ನನ್ನನ್ನು ಸೇವಿಸು. ನಾನು ಆ ಸೇವೆಯನ್ನೆಲ್ಲ ಸ್ವೀಕರಿಸುವೆನು" ಎಂಬುವದನ್ನು ಕೇಳಿದ್ದಳು. ಅವಳು ತನ್ನ ಸ್ವಾಮಿಯನ್ನು ಪ್ರೀತಿಗೆ ಪಾತ್ರನಾದ ಗುರುವನ್ನು ಸೇವಿಸುವಂತೆ

ಸೇವಿಸುತ್ತಿದ್ದಳು. ಅನಂತರ ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಕಣ್ಣಿನ ಮಾಣಿಕ್ಯದಂತೆ ಇದ್ದ ಒಬ್ಬನೇ ಮಗನಾದ ಗೋಪಾಲನನ್ನು ಪ್ರೀತಿಸುತ್ತಿದ್ದಂತೆ ಬಾಲಕೃಷ್ಣನನ್ನು ಪ್ರೀತಿಸುತ್ತಿದ್ದಳು.

ಆ ವಿಗ್ರಹಕ್ಕೆ ಸ್ನಾನ ಮಾಡಿಸಿ ಅಲಂಕಾರ ಮಾಡುವಳು. ಗಂಧದಕಡ್ಡಿಯನ್ನು ಹಚ್ಚುವಳು. ಆದರೆ ನೈವೇದ್ಯಕ್ಕೆ? ಪಾಪ ಅವಳು ಅಷ್ಟು ಬಡವಳು. ತನ್ನ ಗಂಡ ಬದುಕಿದ್ದಾಗ ಹೇಳುತ್ತಿದ್ದ "ಪತ್ರ ಪುಷ್ಪ ಫಲ ಜಲ ಏನನ್ನಾದರೂ ಅಗಲಿ ಭಕ್ತಿಯಿಂದ ಕೊಟ್ಟುದನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ" ಎಂಬುದನ್ನು ನೆನಸಿಕೊಳ್ಳುವಳು. ಕಣ್ಣಿನಿಂದ ಆಗ ಅಶ್ರುವಾರಿ ಹರಿಯುವುದು. ತನ್ನ ಹತ್ತಿರ ಏನು ಇರುವುದೊ ಅದನ್ನು ಕೃಷ್ಣನಿಗೆ ಅರ್ಪಿಸುವಾಗ ಹೀಗೆ ಹೇಳುವಳು: "ಯಾರಿಗಾಗಿ ಹೂವಿನ ಪ್ರಪಂಚವೇ ಅರಳುತ್ತಿರುವುದೊ ಹೇ ದೇವ, ಅಂತಹ ನಿನಗೆ ನಾನು ನೀಡುವ ಕೆಲವು ಸಾಮಾನ್ಯ ಪುಷ್ಪಗಳು ಇವು. ದಯವಿಟ್ಟು ಅದನ್ನು ಸ್ವೀಕರಿಸು. ಹೇ ದೇವ, ನೀನು ವಿಶ್ವಕ್ಕೂ ಉಣಿಸನ್ನು ಕೊಡುತ್ತಿರುವೆ, ಆದರೂ ನನ್ನ ಕೆಲವು ಅಲ್ಪ ಫಲಗಳನ್ನು ಸ್ವೀಕರಿಸು; ನಾನು ದೀನಳು, ಅಜ್ಞಳು, ಗೋಪಾಲ, ನನ್ನ ಮಗು, ದೇವ, ನಾನು ನಿನ್ನನ್ನು ಹೇಗೆ ಕರೆಯಬೇಕೊ ಗೊತ್ತಿಲ್ಲ, ಹೇಗೆ ಪೂಜಿಸಬೇಕೊ ಗೊತ್ತಿಲ್ಲ. ನನ್ನ ಪೂಜೆ ಪರಿಶುದ್ಧವಾಗಿರಲಿ, ನಿನ್ನಮೇಲಿರುವ ಪ್ರೀತಿ ನಿಸ್ವಾರ್ಥವಾಗಿರಲಿ, ಪೂಜೆಯಿಂದ ಏನಾದರೂ ಪುಣ್ಯ ಬಂದರೆ ಅದೆಲ್ಲ ನಿನ್ನದು. ನನಗೆ ಪ್ರೇಮವನ್ನು ಮಾತ್ರ ದಯಪಾಲಿಸು, ಮತ್ತೇನನ್ನೂ ಯೋಚಿಸದ, ಪ್ರೇಮವಲ್ಲದೆ ಮತ್ತೇನನ್ನೂ ಬೇಡದ ಪ್ರೇಮವನ್ನು ಮಾತ್ರ ದಯಪಾಲಿಸು." ಕೆಲವುವೇಳೆ ಸಾಧು ಸನ್ಯಾಸಿಗಳು ಕೆಳಗೆ ಅರ್ಥಬರುವ ಗೀತೆಯನ್ನು ಹಾಡುತ್ತ ಭಿಕ್ಷೆಗೆ ಬರುತ್ತಿದ್ದರು:

ತಿಳುವಳಿಕೆಗೆ ನಾ ಸಿಲುಕೇ ಮನುಜಾ
ಒಲುಮೆಗೆ ಸೆರೆಯಾಗುವೆನು ||ಪ||

ತಪಸಿಗಳೆನ್ನನು ಜ್ಞಾನದಿ ಮುಟ್ಟಲು
ಯುಗಯುಗಗಳು ಬಲು ಬಳಲುವರು

ಯೋಗಿಗಳಿನ್ನನು ಜನುಮ ಜನುಮದಲಿ
ಹೊಂದಲು ಸಾಧನೆ ಮಾಡುವರು ೧

ಕಡಲಿನ ಬಿತ್ತರಸಾಲದು ಪವಡಿಸೆ
ಭಕ್ತಿಯ ಕಂಬನಿ ಮನೆ ಎನಗೆ
ಹಿಮಗಿರಿ ಎತ್ತರ ಸಾಲದು ನಾನಿರೆ
ಭಕ್ತನ ಹೃದಯವು ಸಾಕೆನಗೆ ೨

ಬೃಂದಾವನದಾ ಗೋಪಿಯರರಿತರೆ
ವೇದಗಳಾಡುವ ಸತ್ಯವನು
ಹಾಲನು ಮಾರುವ ಹೆಣ್ಣುಗಳೊಲ್ಮೆಗೆ
ಮೀರರೆ ಯೋಗಿಯ ಸಾಧನೆಯ ? ೩

ಅನಂತರ ಆ ಗೋಪಾಲನ ದಯೆಯಿಂದ ಅವಳಿಗೊಂದು ಅವನಂತೆ ಇರುವ ಮಗುವಾಯಿತು. ಅದೇ ಹೆಸರನ್ನು ಮಗುವಿಗೆ ಕೊಟ್ಟಳು. ಮುಂಚೆ ಅವಳ ಮನಸ್ಸು ಪ್ರಪಂಚದಲ್ಲಿ ಯಾವ ಆಸಕ್ತಿಯೂ ಇಲ್ಲದೆ ಯಂತ್ರದಂತೆ ಚಲಿಸುತ್ತಿತ್ತು. ಯಾವಾಗಲೂ ಭಗವಂತನಿಗೆ ಸೇರಿದ ವಿಷಯಗಳಲ್ಲೇ ತೇಲುತ್ತ ಪ್ರಪಂಚವನ್ನು ಯಾವ ಕ್ಷಣವಾದರೂ ಬಿಟ್ಟುಹೋಗಲು ಕಾತುರಪಡುತ್ತಿದ್ದಳು. ಈಗ ಆ ಮಗುವಿನ ದೆಸೆಯಿಂದ ಪ್ರಪಂಚದ ಮೇಲೆ ನೆಲೆಸುವುದಕ್ಕೆ ಸಾಧ್ಯವಾಯಿತು. ಮಗುವೊಂದು ಪ್ರಪಂಚದಲ್ಲಿ ಆಸರೆ ಆಯಿತು. ಅವಳು ಮಾಡುವ ಕೆಲಸ, ಆಲೋಚನೆ, ಪಡುವ ಸುಖ ಸಂತೋಷವೆಲ್ಲ ಮಗುವಿಗೆ ಸಂಬಂಧಪಟ್ಟಿತ್ತು.

ಕೆಲವು ವರುಷಗಳ ಕಾಲ ಮಗು ದಿನದಿನಕ್ಕೆ ಬೆಳೆಯುತ್ತಿರುವದನ್ನು ನೋಡಿ ಆ ತಾಯಿ ನಲಿದಳು. ಮಗುವಿಗೆ ಸ್ಕೂಲಿಗೆ ಹೋಗುವ ವಯಸ್ಸಾಯಿತು. ತಿಂಗಳಗಟ್ಲೆ ಕೆಲಸಮಾಡಿದಳು. ಆ ಮಗುವನ್ನು ಶಾಲೆಗೆ ಕಳುಹಿಸುವುದಕ್ಕೆ ಬೇಕಾಗುವ ಬಟ್ಟೆಬರೆ ಬರಹ ಸಾಮಗ್ರಿ ಮುಂತಾದುವನ್ನು ಒದಗಿಸುವುದಕ್ಕಾಗಿ.

ಆ ಮಗುವಿಗೆ ಬೇಕಾದದ್ದು ಎಲ್ಲೊ ಸ್ವಲ್ಪ. ಇಂಡಿಯಾದೇಶದಲ್ಲಿ ಒಂದು ಮಣ್ಣಿನ ಹಣತೆಗೆ ಒಂದು ಸ್ವಲ್ಪ ಎಣ್ಣೆ ಹಾಕಿ ಸಣ್ಣ

ಒಂದು ಬತ್ತಿಯನ್ನು ಇಟ್ಟು ಉರಿಸಿ ರಾತ್ರಿಯಲ್ಲೂ ಓದುವರು. ಮಲಗುವುದಕ್ಕೆ ಒಂದು ಚಾಪೆ ಮಾತ್ರ. ವಿದ್ಯಾರ್ಥಿಗಳ ಅಗತ್ಯ ಇದಕ್ಕಿಂತ ಜಾಸ್ತಿ ಇಲ್ಲ. ಇಷ್ಟರಲ್ಲೆ ತೃಪ್ತರಾಗಿ ಅವರು ತಮ್ಮ ಅಧ್ಯಯನವನ್ನು ಮುಂದುವರಿಸುವರು. ಅವರಿಗೆ ಬೇಕಾಗಿದ್ದುದು ಸ್ವಲ್ಪ. ಆದರೆ ಈ ಅಲ್ಪಸ್ವಲ್ಪವನ್ನು ಒದಗಿಸುವುದಕ್ಕೆ ಆ ಬಡತಾಯಿ ಹಲವು ದಿನ ಕಷ್ಟಪಟ್ಟು ಕೆಲಸಮಾಡಬೇಕಾಯಿತು.

ಮಗನಿಗೆ ಉಡಲು ಒಂದು ಹೊಸ ಪಂಚೆ ಹೊದೆಯಲು ಒಂದು ಶಲ್ಯ ಬೇಕಾಗಿತ್ತು. ಶಾಲೆಗೆ ಹೋಗುವಾಗ ಪಾಲಿಗರಿ ಪುಸ್ತಕ ಮತ್ತು ಅದರ ಮೇಲೆ ಬರೆಯುವ ಲೇಖನಿಯನ್ನು ಸುತ್ತಿಕೊಂಡು ಹೋಗುವುದಕ್ಕೆ ಸಣ್ಣದೊಂದು ಚಾಪೆ ಬೇಕಾಗಿತ್ತು. ಇದನ್ನು ಶಾಲೆಯಲ್ಲಿ ಕುಳಿತುಕೊಳ್ಳುವುದಕ್ಕೆ ವಿದ್ಯಾರ್ಥಿಗಳು ಉಪಯೋಗಿಸುತ್ತಿದ್ದರು. ಒಂದು ಮಸಿ ಕುಡಿಕೆ ಬೇರೆ ಬೇಕಾಗಿತ್ತು. ಇವನ್ನೆಲ್ಲ ಮಗುವಿಗೆ ಅಣಿಮಾಡಿಕೊಡಲು ತಾಯಿ ಹಲವು ದಿನ ಕಷ್ಟಪಟ್ಟು ಚರಕದಲ್ಲಿ ನೂಲು ತೆಗೆಯಲು ಪ್ರಾರಂಭಿಸಿದಳು ಒಂದು ಶುಭದಿನ 'ಅ' 'ಇ' ಎಂಬ ಮೊದಲು ಬರೆದ ಅಕ್ಷರಗಳನ್ನು ನೋಡಿದಾಗ ಎಂತಹ ಆನಂದವಾಯಿತು ಅವಳಿಗೆ. ಹೆತ್ತ ತಾಯಿಯ ಎದೆ ಮಾತ್ರ, ದೀನ ತಾಯಿಯ ಪ್ರೀತಿಮಾತ್ರ ಇದನ್ನು ಊಹಿಸಿಕೊಳ್ಳಬಲ್ಲದು!

ಏಕೊ ಇಂದು ಆ ತಾಯಿಯ ಮುಖ ಸಪ್ಪೆ ಆಗಿದೆ. ಗೋಪಾಲನಿಗೆ ಕಾಡಿನಲ್ಲಿ ಒಬ್ಬನೇ ಹೋಗುವುದಕ್ಕೆ ಅಂಜಿಕೆಯಾಗಿದೆ. ತಾಯಿಗೆ ಇದುವರಿಗೆ ತನ್ನ ವೈಧವ್ಯದ ವ್ಯಥೆ ಗೊತ್ತಿರಲಿಲ್ಲ. ತನಗೆ ಯಾರೂ ದಿಕ್ಕಿಲ್ಲ, ತಾನಿಷ್ಟು ದರಿದ್ರಳೆಂಬುದು ಈಗ ಅವಳಿಗೆ ಅರಿವಾಯಿತು. ಸ್ವಲ್ಪ ಹೊತ್ತು ಅವಳಿಗೆ ಎಲ್ಲ ಶೂನ್ಯವಾಗಿತ್ತು. ಆದರೆ ಭಗವಂತ ಮಾಡಿದ ಒಂದು ಭರವಸೆ ಆಗ ಅವಳ ಜ್ಞಾಪಕಕ್ಕೆ ಬಂತು: "ಯಾರು ನನ್ನನ್ನೇ ಅನನ್ಯ ಚಿಂತೆಯಿಂದ ಧ್ಯಾನಿಸುವರೊ ಅವರ ಯೋಗಕ್ಷೇಮವನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ." ಆ ತಾಯಿ ದೃಢವಾಗಿ ಈ ಮಾತನ್ನು ನಂಬಿದ್ದಳು.

ಆಗ ತಾಯಿ ತನ್ನ ಕಣ್ಣೀರನ್ನು ಒರಸಿಕೊಂಡು ಮಗುವಿಗೆ ನೀನು ಅಂಜಬೇಕಾಗಿಲ್ಲ ಎಂದಳು. ಆ ಕಾಡಿನಲ್ಲಿ ಅವಳ ಮತ್ತೊಬ್ಬ

ಗೋಪಾಲನೆಂಬ ಮಗ ದನಗಳನ್ನು ಕಾಯುತ್ತಿದ್ದ-ಅಲ್ಲಿ ಹೋಗುವಾಗ ಊರಿನ ಗೋಪಾಲನಿಗೆ ಅಂಜಿಕೆಯಾದರೆ ಆ ಗೋಪಾಲನನ್ನು ಕರೆದರೆ ಸಾಕು ಎಂದಳು.

ಈ ಊರಿನ ಗೋಪಾಲ ಅಂತಹ ತಾಯಿಯ ಮಗು. ತಾಯಿ ಹೇಳಿದ್ದನ್ನು ನಂಬಿದನು. ಆದಿನ ಸ್ಕೂಲಿನಿಂದ ಕಾಡಿನ ಮೂಲಕ ಬರುವಾಗ ಅಂಜಿಕೆಯಾಗಿ ಕಾಡಿನ ಗೋಪಾಲನನ್ನು "ಅಣ್ಣಾ ಗೋಪಾಲ, ನೀನು ಇಲ್ಲಿರುವೆಯಾ? ಅಮ್ಮ, ನೀನು ಇಲ್ಲಿಯೇ ಇರುವಿ ನಾನು ಒಮ್ಮೆ ಕರೆದರೆ ಸಾಕು ಎಂದಳು. ನನಗೆ ಒಬ್ಬನೇ ಬರಲು ಅಂಜಿಕೆಯಾಗಿದೆ" ಎಂದು ಕರೆದನು. ಮರದ ಸಾಲಿನಿಂದ "ತಮ್ಮ ನೀನು ಅಂಜಬೇಡ. ನಾನು ಇಲ್ಲಿಯೇ ಇರುವೆ. ನಿರ್ಭಯವಾಗಿ ಮನೆಗೆ ಹೋಗು" ಎಂಬ ಧ್ವನಿ ಕೇಳಿತು. ಪ್ರತಿದಿನ ಮಗು ಕರೆಯುತ್ತಿತ್ತು. ಆ ಧ್ವನಿ ಎಂದಿನಂತೆಯೇ ಉತ್ತರಕೊಡುತ್ತಿತ್ತು. ತಾಯಿ ಆಶ್ಚರ್ಯ ಮತ್ತು ಪ್ರೀತಿಯಿಂದ ಇದನ್ನು ಕೇಳಿದಳು. ಅವಳು ತನ್ನ ಮಗುವಿಗೆ ಮಾರನೆ ದಿನ ಆ ಕಾಡು ಗೋಪಾಲನನ್ನ ಮಗುವಿಗೆ ಕಾಣಿಸಿಕೊಳ್ಳುವಂತೆ ಕೇಳು ಎಂದಳು.

ಮಾರನೆ ದಿನ ಗೋಪಾಲ ಕಾಡಿನಲ್ಲಿ ಹೋಗುತ್ತಿದ್ದಾಗ ತನ್ನ ಅಣ್ಣನನ್ನು ಕರೆದನು, ಎಂದಿನಂತೆ ಧ್ವನಿ ಬಂತು. ಆದರೆ ಊರಿನ ಗೋಪಾಲ ಕಾಡಿನ ಗೋಪಾಲನಿಗೆ ತನ್ನ ಮುಂದೆ ಬರಬೇಕೆಂದು ಕೇಳಿಕೊಂಡನು. ಧ್ವನಿ "ತಮ್ಮ. ಇಂದು ನನಗೆ ತುಂಬಾ ಕೆಲಸ ಇದೆ, ಬರುವುದಕ್ಕೆ ಆಗುವುದಿಲ್ಲ" ಎಂದು ಹೇಳಿತು. ಆದರೆ ಮಗು ಬಲವಂತಮಾಡಿತು. ಮರದ ಹಿಂಬದಿಯಿಂದ ಕಾಡಿನ ಗೋಪಾಲ ಬಂದ. ದನಗಾಹಿಯಂತೆ ವೇಷ ಹಾಕಿಕೊಂಡಿದ್ದ, ತಲೆಗೆ ಒಂದು ಕಿರೀಟವಿತ್ತು, ಅದರ ಮೇಲೆ ಒಂದು ನವಿಲುಗರಿ, ಕೈಯ್ಯಲ್ಲಿ ಒಂದು ಕೊಳಲು ಇತ್ತು.

ಅವರಿಬ್ಬರಿಗೂ ತುಂಬಾ ಸಂತೋಷವಾಯಿತು. ಹಲವು ಗಂಟೆಗಳ ಕಾಲ ಕಾಡಿನಲ್ಲಿ ಆಟವಾಡಿದರು. ಮರ ಹತ್ತುವುದು, ಹೂವು ಹಣ್ಣು ಕೇಳುವುದು ಇದರಲ್ಲಿ ನಿರತರಾಗಿದ್ದರು. ಸ್ಕೂಲಿಗೆ ಹೊತ್ತಾಗುವವರೆಗೆ

ತಟದಲ್ಲೇ ಮುಳುಗಿದ್ದರು. ಆಗ ಊರಿನ ಗೋಪಾಲ ಸ್ಕೂಲಿಗೆ ಹೋಗಬೇಕಲ್ಲ ಎಂದು ಮನಸ್ಸಿಲ್ಲದಮನಸ್ಸಿನಿಂದ ಹೋದ. ಅಲ್ಲಿ ಪಾಠವನ್ನೆಲ್ಲ ಮರೆತೇಬಿಟ್ಟ. ಎಷ್ಟು ಹೊತ್ತಿಗೆ ಕಾಡಿಗೆ ಹಿಂತಿರುಗಿ ಹೋದೇನು, ಅಣ್ಣನೊಂದಿಗೆ ಆಡೇನು ಎಂಬುದೇ ಅವನ ಯೋಚನೆ.

ಹೀಗೆ ಹಲವು ತಿಂಗಳು ಕಳೆದವು. ಆ ಬಡತಾಯಿ ದಿನದಿನದಲ್ಲಿ ಇದನ್ನು ಕೇಳುತ್ತಿದ್ದಳು. ಭಗವಂತನು ತನ್ನ ಮೇಲೆ ತೋರಿದ ದಯೆಯಿಂದ ತಾನು ವಿಧವೆ ಬಡವಳು ಎಂಬುದನ್ನು ಮರೆತು ದುಃಖವೇ ಒಂದು ವರವಾಯಿತೆಂದು ಧನ್ಯವಾದವನ್ನು ಅರ್ಪಿಸಿದಳು.

ಗುರುವಿನ ಮನೆಯಲ್ಲಿ ಪಿತೃಗಳಿಗಾಗಿ ಏನೋ ಕಾರ್ಯ ನಡೆಯಬೇಕಾದ ಒಂದು ದಿನ ಬಂತು. ಹಳ್ಳಿಯ ಉಪಾಧ್ಯಾಯರು ಹಲವು ಹುಡುಗರನ್ನು ನೋಡಿಕೊಳ್ಳುತ್ತಿದ್ದರು. ತಿಂಗತಿಂಗಳಿಗೆ ಇಷ್ಟೇ ಫೀಜು ಕೊಡಬೇಕೆಂಬ ನಿಯಮವಿರಲಿಲ್ಲ. ಇಂತಹ ಸಮಯಬಂದಾಗ ಶಿಷ್ಯರು ಕೊಡುವ ಕಾಣಿಕೆಯೆ ಅವರ ಜೀವನೋಪಾಯವಾಗಿತ್ತು.

ಪ್ರತಿಯೊಬ್ಬ ಶಿಷ್ಯರೂ ಹಣವನ್ನೊ ಸಾಮಾನನ್ನೊ ತಂದರು. ವಿಧವೆಯ ಮಗನಾದ ತಬ್ಬಲಿ ಗೋಪಾಲ ಏನು ತಂದಾನು! ಇತರ ಹುಡುಗರು ತಾವು ಗುರುಗಳಿಗೆ ತರುವ ಕಾಣಿಕೆಯನ್ನು ಕುರಿತು ಮಾತನಾಡುವಾಗ ಗೋಪಾಲನನ್ನು ನೋಡಿ ಅಣಕಿಸಿ ನಕ್ಕರು.

ಆ ರಾತ್ರಿ ಗೋಪಾಲ ತುಂಬಾ ದುಃಖಿತನಾದ. ಗುರುಗಳಿಗೆ ಏನನ್ನಾದರೂ ಕೊಡು ಎಂದು ತಾಯಿಯನ್ನು ಕೇಳಿದನು. ಪಾಪ ಆ ತಾಯಿಯ ಹತ್ತಿರ ಏನೂ ಇರಲಿಲ್ಲ. ಆದರೆ ತಾಯಿ ಇದುವರೆಗೆ ತಾನು ಏನನ್ನು ಮಾಡುತ್ತಿದ್ದಳೊ ಅದನ್ನೇ ಮಾಡಲು ನಿರ್ಧರಿಸಿದಳು. ಅದೇ ದನಗಾಹಿ ಗೋಪಾಲನನ್ನು ನೆಚ್ಚುವುದು. ಮಾರನೆ ದಿನ ಕಾಡಿನಲ್ಲಿರುವ ತನ್ನ ಅಣ್ಣನನ್ನು ಗುರುವಿಗೆ ಕೊಡುವುದಕ್ಕೆ ಏನಾದರೂ ನೀಡು ಎಂದು ಬೇಡು ಎಂದಳು.

ಮಾರನೆ ದಿನ ಎಂದಿನಂತೆ ಕಾಡಿನ ಗೋಪಾಲನನ್ನು ಕಂಡು ಸ್ವಲ್ಪಹೊತ್ತು ಒಟ್ಟಿಗೆ ಆಡಿದ ಮೇಲೆ ಊರಿನ ಗೋಪಾಲ ತನ್ನ

ದುಃಖವನ್ನು ಅಣ್ಣನಿಗೆ ಹೇಳಿಕೊಂಡು ಗುರುಕಾಣಿಕೆ ಕೊಡುವುದ ಕ್ಕಾಗಿ ಏನನ್ನಾದರೂ ನೀಡು ಎಂದು ಬೇಡಿಕೊಂಡನು.

"ತಮ್ಮ ಗೋಪಾಲ, ನೀನು ಕಂಡಂತೆ ನಾನೊಬ್ಬ ದನ ಕಾಯುವವನು. ನನ್ನ ಹತ್ತಿರ ದುಡ್ಡು ಏನೂ ಇಲ್ಲ, ನೋಡು ಈ ಹಾಲಿನ ಕುಡಿಕೆಯನ್ನು ತೆಗೆದುಕೊ, ಬಡ ದನಕಾಯುವವನು ನೀಡು ವುದು ಇದು. ಇದನ್ನು ನಿಮ್ಮ ಗುರುಗಳಿಗೆ ಕೊಡು" ಎಂದು ಸಣ್ಣ ಹಾಲಿರುವ ಕುಡಿಕೆಯೊಂದನ್ನು ಕೊಟ್ಟನು.

ಗೋಪಾಲನಿಗೆ ಈಗ ತುಂಬಾ ಸಂತೋಷವಾಯಿತು. ಗುರು ಗಳಿಗೆ ಕೊಡುವುದಕ್ಕೆ ಏನಾದರೂ ಸಿಕ್ಕಿತಲ್ಲ ಅಂತ. ಅದರಲ್ಲೂ ಕಾಡಿ ನಲ್ಲಿ ತನ್ನ ಅಣ್ಣ ಕೊಟ್ಟದ್ದು ಎಂದು ಪರಮಾನಂದ. ಗುರುಗಳ ಮನೆಗೆ ಓಡಿದ. ಅಲ್ಲಿ ಹಲವು ವಸ್ತುಗಳನ್ನು ಗುರುಗಳಿಗೆ ಕೊಡುತ್ತಿದ್ದ ಶಿಷ್ಯರ ತಂಡದ ಹಿಂದೆ ನಿಂತ. ಹಲವು ವಿಧ ಕಾಣಿಕೆಗಳನ್ನು ಗುರು ಗಳಿಗೆ ತಂದಿದ್ದರು. ಗೋಪಾಲನ ಕಾಣಿಕೆಯ ಕಡೆ ನೋಡುವುದಕ್ಕೆ ಕೂಡ ಯಾರಿಗೂ ಮನಸ್ಸಿರಲಿಲ್ಲ.

ಈ ಅನಾದರದಿಂದ ಗೋಪಾಲನಿಗೆ ತುಂಬಾ ದುಃಖವಾಯಿತು. ಅವನ ಕಣ್ಣಿನಲ್ಲಿ ನೀರು ತುಂಬಿತು. ಆ ಸಮಯದಲ್ಲಿ ಅದೃಷ್ಟವಶಾತ್ ಗುರುಗಳ ದೃಷ್ಟಿ ಗೋಪಾಲನ ಮೇಲೆ ಬಿತ್ತು. ಆ ಕುಡಕೆಯನ್ನು ಗುರುಗಳು ತೆಗೆದುಕೊಂಡು ದೊಡ್ಡ ಒಂದು ಪಾತ್ರೆಗೆ ಹಾಲನ್ನು ಸುರಿದರು. ಆದರೆ ಆ ಪುಟ್ಟ ಕುಡಿಕೆಯಲ್ಲಿ ಪುನಃ ಹಾಲು ಬಂತು. ಅದನ್ನು ಖಾಲಿ ಮಾಡಿದ ಮೇಲೆ ಪುನಃ ಅದರಲ್ಲಿ ಹಾಲು ! ಆ ಸಣ್ಣ ಕುಡಿಕೆಯಿಂದ ಹಾಕುವುದೇ ತಡ ಆಗಲೆ ಅದು ಭರ್ತಿಯಾಗುತ್ತಿತ್ತು.

ಎಲ್ಲರಿಗೂ ಇದನ್ನು ನೋಡಿ ಆಶ್ಚರ್ಯವಾಯಿತು. ಆಗ ಗುರುಗಳು ಗೋಪಾಲನನ್ನು ಎತ್ತಿಕೊಂಡು ಈ ಕುಡಿಕೆಯನ್ನು ಯಾರು ಕೊಟ್ಟರು ಎಂದು ಕೇಳಿದರು. ಗೋಪಾಲ ಕಾಡಿನಲ್ಲಿರುವ ತನ್ನ ಅಣ್ಣನ ವಿಷಯವನ್ನೆಲ್ಲ ಹೇಳಿದನು. ಅವನು ಹೇಗೆ ತನ್ನ ಮಾತಿಗೆ ಉತ್ತರ ಕೊಟ್ಟ, ತನ್ನ ಹತ್ತಿರ ಆಡಿದ, ಕೊನೆಗೆ ತನಗೆ ಆ ಹಾಲಿನ ಕುಡಿಕೆ ಯನ್ನು ಕೊಟ್ಟ ಎಂಬ ವಿಷಯವನ್ನೆಲ್ಲ ಹೇಳಿದ.

ಗುರುಗಳು ಗೋಪಾಲನಿಗೆ ತನ್ನನ್ನು ಕಾಡಿಗೆ ಕರೆದುಕೊಂಡು ಹೋಗಿ ಕಾಡಿನ ಗೋಪಾಲನನ್ನು ತೋರಿಸು ಎಂದು ಕೇಳಿಕೊಂಡರು. ಗೋಪಾಲನಿಗೆ ತನ್ನ ಗುರುಗಳನ್ನು ಕರೆದುಕೊಂಡು ಹೋಗಲು ಬಹಳ ಸಂತೋಷವಾಯಿತು.

ಗೋಪಾಲ ಕಾಡಿನಲ್ಲಿ ಅಣ್ಣನನ್ನು ಕರೆದ. ಆದರೆ ಅಂದು ಯಾವ ಉತ್ತರವೂ ಇಲ್ಲ. ಪುನಃ ಪುನಃ ಕೂಗಿದ ಆದರೂ ಉತ್ತರವಿಲ್ಲ. ಆಗ ಗೋಪಾಲ ಅಣ್ಣನಿಗೆ ಮಾತನಾಡುವಂತೆ ಕೇಳಿಕೊಂಡನು. ಇಲ್ಲದೆ ಇದ್ದರೆ ಗುರುಗಳು ತಾನು ಸುಳ್ಳು ಹೇಳುತ್ತಿರುವೆ ಎಂದು ತಿಳಿಯುವರು ಎಂದನು. ಆಗ ಧ್ವನಿಯೊಂದು ಬಹಳ ದೂರದಿಂದ ಬರುವಂತೆ ಕಂಡಿತು :

" ಗೋಪಾಲ, ನಿನ್ನ ತಾಯಿ ಮತ್ತು ನಿನ್ನ ಪ್ರೀತಿ ಭಕ್ತಿಗಳಿಂದ ನಾನು ನಿನ್ನೆಡೆಗೆ ಬರಬೇಕಾಯಿತು. ಆದರೆ ನಿನ್ನ ಗುರುಗಳಿಗೆ ಅವರು ನನ್ನ ದರ್ಶನಕ್ಕೆ ಇನ್ನೂ ಬಹಳ ಕಾಲ ಕಾಯಬೇಕಾಗಿದೆ ಎಂದು ಹೇಳು ."

೧೦

# ಹಿಂದೂ ಧರ್ಮದ ತೂರ್ಯವಾಣಿ

## (ಮದ್ರಾಸಿನ ಬಿನ್ನವತ್ತಳೆಗೆ ಉತ್ತರ)

ನಮ್ಮ ಧರ್ಮಕ್ಕಾಗಿ ನಾನು ಮಾಡಿದ ಅಲ್ಪ ಸೇವೆ ನಿಮ್ಮ ಮೆಚ್ಚುಗೆಯನ್ನು ಪಡೆಯಿತೆಂದು ಕೇಳಿ ನನಗೆ ಪರಮಾನಂದವಾಗಿದೆ. ದೂರದೇಶದಲ್ಲಿ, ಅದರಲ್ಲೂ ಪರದೇಶದಲ್ಲಿ, ನನ್ನನ್ನು ಮತ್ತು ನನ್ನ ಕೆಲಸವನ್ನು ಮೆಚ್ಚುತ್ತೀರಿ ಎಂದು ಅಲ್ಲ. ಹೊರಗಿನಿಂದ ಸೇನಾ ಸಮೂಹ ಭಾರತದ ಮೇಲೆ ಅವ್ಯಾಹತವಾಗಿ ಬಂದು ಬಿದ್ದಿದ್ದರೂ, ಹಲವಾರು ಶತಮಾನದ ನಿಮ್ಮ ನಿರ್ಲಕ್ಷ್ಯ ಮತ್ತು ನಮ್ಮನ್ನು ಜಯಿಸಿ ದವರ ಅನಾದರಣೆಯಿಂದ ಆರ್ಯಾವರ್ತದ ಕೀರ್ತಿಕಳಶ ಕಂಡಂತೆ ಮ್ಲಾನವಾದರೂ, ಕೀರ್ತಿಸೌಧದ ಹಲವು ಭೀಮಸ್ತಂಭಗಳು ಸುಂದರ ವಾದ ಕಮಾನುಗಳು, ಅದ್ಭುತವಾದ ಮೂಲೆಗಳು, ಇವೆಲ್ಲ ಹಲವಾರು ಶತಮಾನಗಳ ಹೊರಗಿನಿಂದ ಬಂದ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗಿದ್ದರೂ, ಕೇಂದ್ರ ಭದ್ರವಾಗಿದೆ, ಕಮಾನಿನ ಮಧ್ಯಕಲ್ಲು ಅಚ್ಚಳಿಯದೆ ಇದೆ ಎಂಬುದನ್ನು ಇದು ತೋರುವುದು. ಆಧ್ಯಾತ್ಮಿಕ ತಳಹದಿಯ ಮೇಲೆ ಕಟ್ಟಿದ ಭಗವಂತನ ಅದ್ಭುತ ಮಹಾತ್ಮ್ಯೆ, ವಿಶ್ವಕಾರುಣ್ಯ ಎಂಬ ಅದ್ಭುತ ಸ್ಮಾರಕ ಮಂದಿರದ ಮಹಾಸೌಧವು ಎಂದಿನಂತೆ ಇಂದಿಗೂ ಅಚ್ಚಳಿಯದೆ ನಿಂತಿದೆ ಎನ್ನುವುದನ್ನು ತೋರು ವುದು. ಭರತಖಂಡಕ್ಕೆ ಮತ್ತು ಇಡೀ ವಿಶ್ವಕ್ಕೆ ಸಂದೇಶವನ್ನು ಒಯ್ದ ಅಪೂರ್ವ ಭಾಗ್ಯ ನನ್ನದಾಗಿತ್ತು. ನನ್ನಂತಹ ಭಾರತಮಾತೆಯ ಕನಿಷ್ಠತಮ ದಾಸನನ್ನು ನೀವು ಮುಕ್ತಕಂಠದಿಂದ ಹೊಗಳಿರುವಿರಿ. ನಿಮ್ಮಲ್ಲಿ ಆಜನ್ಮಸಿದ್ಧವಾದ ಆಧ್ಯಾತ್ಮಿಕ ಸ್ವಭಾವ ಅವನ ಮತ್ತು

ಅವನ ಸಂದೇಶದಲ್ಲಿ ಮುಂದೆ ಬರಲಿರುವ ಆಧ್ಯಾತ್ಮಿಕ ಮಹಾ ಪ್ರವಾಹದ ಸೂಚನೆಗಳನ್ನು ಕಂಡುಹಿಡಿಯಿತು. ಆ ಪ್ರವಾಹ ಅತಿ ಶೀಘ್ರದಲ್ಲಿಯೇ ಭರತಖಂಡದ ಮೇಲೆ ಯಾರೂ ತಡೆಯಲಾಗದ ಮಹಾ ವೇಗದಿಂದ ಉರುಳಿ, ಆ ಮೇರುಪ್ರವಾಹ ದುರ್ಬಲವಾಗಿರುವುದನ್ನೆಲ್ಲ, ಅಪ್ರಯೋಜಕವಾಗಿರುವುದನ್ನೆಲ್ಲ, ಕೊಚ್ಚಿಕೊಂಡುಹೋಗಿ, ಹಿಂದೂಜನಾಂಗವನ್ನು ಭಗವದಿಚ್ಛೆಯಂತೆ ಎಂತಹ ಪವಿತ್ರ ಪೀಠದಲ್ಲಿ ಕುಳ್ಳಿರಿಸಬೇಕೋ ಅಲ್ಲಿ ಪ್ರತಿಷ್ಠಿಸಿ, ಹಿಂದಿಗಿಂತಲೂ ಅತಿಶಯವಾದ ಕೀರ್ತಿಗೌರವಗಳಿಂದ ಆರಾಧಿಸಲ್ಪಡಲಿ. ವಿಶ್ವಜನಾಂಗದಲ್ಲಿ ಆಧ್ಯಾತ್ಮಿಕ ವ್ಯಕ್ತಿಯ ವಿಕಸನವೇ ಇದರ ಗುರಿ. ಹಲವು ಶತಮಾನಗಳ ಪರ್ನಾಸ ಯಾತನೆಯಿಂದ ಇದನ್ನು ಸಾಧಿಸಿದೆ.

ಭರತಖಂಡದ ಉತ್ತರದಲ್ಲಿರುವವರು ಅವರಲ್ಲಿಯೂ ದಕ್ಷಿಣದಲ್ಲಿ ವಾಸಿಸುವ ನಿಮಗೆ ಅತಿ ಕೃತಜ್ಞರು. ಭರತಖಂಡದಲ್ಲಿ ಜಾಗ್ರತವಾಗಿ ಕೆಲಸಮಾಡುತ್ತಿರುವ ಮಹಾಭಾವನೆಗಳಿಗೆಲ್ಲ ಉಗಮಸ್ಥಾನವಾಗಿದೆ ದಕ್ಷಿಣ. ಮಹಾ ಭಾಷ್ಯಕಾರರು, ಯುಗಪುರುಷರಂತಿದ್ದ ಶಂಕರ ರಾಮಾನುಜ ಮಧ್ವಾಚಾರ್ಯರು ದಕ್ಷಿಣ ದೇಶದಲ್ಲಿ ಜನ್ಮತಾಳಿದರು. ಪ್ರಖ್ಯಾತ ಶಂಕರಾಚಾರ್ಯರಿಗೆ ಪ್ರಪಂಚದ ಅದ್ವೈತಿಗಳೆಲ್ಲ ಈಗಲೂ ಗೌರವ ತೋರುವರು. ಮಹಾಪುರುಷ ರಾಮಾನುಜರ ಪುಣ್ಯಸ್ಪರ್ಶ ಅತಿ ದೀನಪತಿತನನ್ನೂ ಆಳ್ವಾರ ಸ್ಥಾನಕ್ಕೆ ಏರಿಸಿತು. ಪ್ರಖ್ಯಾತ ಮಧ್ವಾಚಾರ್ಯರ ನಾಯಕತ್ವವನ್ನು ಇಡೀ ಭರತಖಂಡದಲ್ಲೆಲ್ಲಾ ಪ್ರಭಾವವನ್ನು ಬೀರಿದ ಏಕಮಾತ್ರ ಔತ್ತರೇಯ ವ್ಯಕ್ತಿಯಾದ ಶ್ರೀಕೃಷ್ಣ ಚೈತನ್ಯರು ಕೂಡ ಒಪ್ಪಿಕೊಳ್ಳುವರು. ಈಗ ಪ್ರಖ್ಯಾತ ಕಾಶೀ ಕ್ಷೇತ್ರದಲ್ಲಿ ವಿಖ್ಯಾತನಾಮರು ದಾಕ್ಷಿಣಾತ್ಯರು. ನಿಮ್ಮ ತ್ಯಾಗವೇ ಅತಿ ದೂರದ ಹಿಮಾಚಲಶಿಖರಚುಂಬಿತ ಪುಣ್ಯಕ್ಷೇತ್ರಗಳಲ್ಲಿ ಇಂದೂ ಆಳುತ್ತಿರುವುದು. ಯಾರ ಧಮನಿಯಲ್ಲಿ ಮಹಾಮಹಿಮರ ರಕ್ತ ಹರಿಯುತ್ತಿದೆಯೋ, ಯಾರ ಶಿರ, ಪ್ರಖ್ಯಾತ ಆಚಾರ್ಯರ ಆಶೀರ್ವಾದವನ್ನು ಹೊತ್ತಿದೆಯೋ, ಅವರೇ ಭಗವಾನ್ ಶ್ರೀ ರಾಮಕೃಷ್ಣರ ಸಂದೇಶವನ್ನು ಅರ್ಥಮಾಡಿಕೊಂಡು, ಅದನ್ನು ಅನುಸರಿಸುವುದರಲ್ಲಿ ಮೊದಲಿಗರೆಂದರೆ ಆಶ್ಚರ್ಯವೇನು ?

ವೇದವಿದ್ಯೆಗೆ ದಕ್ಷಿಣವೇ ಆಶ್ರಯವಾಗಿದೆ. ಅನೇಕ ವೇಳೆ ಅಜ್ಞಾನ ಔದ್ಧತತನದಿಂದ ವಿರೋಧವಾಗಿ ಘೋಷಿಸಿದರೂ, ಹಿಂದೂ ಧರ್ಮದ ಭಿನ್ನಭಿನ್ನ ಶಾಖೆಗೆ ಶೃತಿಯೇ ಈಗಲೂ ಆಧಾರ ಎಂದರೆ ನಿಮಗೆ ಅರ್ಥವಾಗುವುದು.

ಮಾನವ ಕುಲಗಳ ವಿವರಣೆಕಾರನಿಗೆ ಮತ್ತು ಭಾಷಾಶಾಸ್ತ್ರಜ್ಞ ನಿಗೆ ವೇದದಲ್ಲಿ ಬರುವ ಸಂಹಿತೆ ಮತ್ತು ಬ್ರಾಹ್ಮಣಭಾಗ ಎಷ್ಟೇ ಮುಖ್ಯವಾಗಿ ಕಂಡರೂ, ವೇದಗಳಲ್ಲಿ ಬರುವ ಅಗ್ನಿ ಅಗ್ನಿಮೀಳೆ........ ಇಷ್ಟೇತ್ವೋರ್ಜೇತ್ವಾ ........... ಶನ್ನೋದೇವೀರಭಿಷ್ಟಯೆ ........... ಮುಂತಾದ ಮಂತ್ರಗಳನ್ನು ಹೇಳಿ ಯಜ್ಞಗಳಿಗೆ ಆಹುತಿ ಇತ್ತು ಬರುವ ಪ್ರತಿಫಲ ಎಷ್ಟೇ ಪ್ರಿಯವಾಗಿದ್ದರೂ, ಇವೆಲ್ಲ ಭೋಗಕ್ಕೆ, ಸಂಬಂಧಪಟ್ಟದ್ದು. ಇವುಗಳಿಂದ ಮೋಕ್ಷಪ್ರಾಪ್ತಿ ಎಂದು ಯಾರೂ ತಿಳಿದಿರಲಿಲ್ಲ. ಆದಕಾರಣ ಮೋಕ್ಷಮಾರ್ಗಕ್ಕೆ ದಾರಿಯಾದ ಆಧ್ಯಾತ್ಮ ವಿದ್ಯೆಯನ್ನು ಕೊಡುವ ಜ್ಞಾನಕಾಂಡ, ಆರಣ್ಯಕ ಮತ್ತು ಶ್ರೇಷ್ಠ ಶ್ರುತಿಗಳೇ ಭರತಖಂಡವನ್ನು ಹಿಂದೆ ಆಳಿದ್ದು ಮತ್ತು ಮುಂದೆಯೂ ಆಳುವುದು.

ಪೂರ್ವಾಗ್ರಹ ಮತ್ತು ಪೂರ್ವಕಲ್ಪಿತ ಅಭಿಪ್ರಾಯಗಳಿಂದ ಸನಾತನ ಧರ್ಮದ ಭಿನ್ನತೆಗಳಲ್ಲಿ ಮತ್ತು ಸಂದುಗೊಂದುಗಳಲ್ಲಿ ದಾರಿ ತಪ್ಪಿ, 'ಅಣೋರಣೀಯಾನ್ ಮಹತೋಮಹೀಯಾನ್' ಎಂಬ ಭಗವದ್ ಭಾವನೆಗೆ ಸರಿಸಮನಾದ ವಿಶ್ವಭಾವನೆಯನ್ನು ಅರ್ಥಮಾಡಿ ಕೊಳ್ಳದೆ, ಅಂಧಕಾರದಲ್ಲಿ ತೊಳಲುತ್ತ, ಕೇವಲ ಜಡವಾದವಲ್ಲದೆ ಮತ್ತೇನನ್ನೂ ಅರಿಯದ ದೇಶಗಳಿಂದ ಆಧ್ಯಾತ್ಮಿಕ ಭಾವನೆಗಳನ್ನು ಎರವಲಾಗಿ ತಂದು ಆಧುನಿಕ ಭಾರತೀಯನು ತನ್ನ ಪುರಾತನರ ಧರ್ಮವನ್ನು ಅರ್ಥಮಾಡಿಕೊಳ್ಳಲಾರದೆ ಆ ಪ್ರಯತ್ನವನ್ನೇ ತ್ಯಜಿಸಿ ಆಶಾಶೂನ್ಯನಾದ ಸಂಶಯವಾದಿಯಂತೆ ದಿಕ್ಕಿಲ್ಲದೆ ಅಲೆಯುತ್ತಿರುವನು. ಇಲ್ಲದೆ ಇದ್ದರೆ ಸುಮ್ಮನೆ ಇರಲಾರದೆ ಸ್ವಭಾವತಃ ಹಿಂದಿನಿಂದ ಬಂದ ಧಾರ್ಮಿಕ ಪ್ರಕೃತಿಗೆ ಅನುಸಾರವಾಗಿ ಪಾಶ್ಚಾತ್ಯ ನಾಸ್ತಿಕ ಭಾವನೆಗಳ ಬೋಧನೆಗೆ ಸ್ವಲ್ಪ ಪೌರಾತ್ಯ ಒಗ್ಗರಣೆ ಹಾಕಿ ಸೇವಿಸುವನು. ಅಂಧನನ್ನು ಅನುಸರಿಸುತ್ತಿರುವ ಅಂಧನಂತೆ ಮೂಢರು ಹೋಗು

ತ್ತಿರುವರು ಎಂಬ ಶ್ರುತಿವಾಕ್ಯದ ಸತ್ಯವನ್ನು ಉದಹರಿಸುತ್ತಿರುವರು ಇವರು.

ಸದ್ಗುರುವಿನ ಸಚೇತನ ಸ್ಪರ್ಶದಿಂದ ಯಾರ ಆಧ್ಯಾತ್ಮಿಕ ಜೀವನ ಜಾಗೃತಿಗೊಂಡಿರುವುದೋ ಅವರು ಮಾತ್ರ ಇವರಿಂದ ಪಾರಾಗ ಬಲ್ಲರು.

ಭಗವಾನ್ ಶಂಕರಾಚಾರ್ಯರು ಮುಂದಿನ ಶ್ಲೋಕದಲ್ಲಿ ಸರಿಯಾಗಿಯೇ ಹೇಳಿರುವರು :

**ದುರ್ಲಭಂ ತ್ರಯಮೇವೈತತ್ ದೇವಾನುಗ್ರಹ ಹೇತುಕಂ ।**
**ಮನುಷ್ಯತ್ವಂ ಮುಮುಕ್ಷುತ್ವ ಮಹಾಪುರುಷ ಸಂಶ್ರಯಃ ॥**

ಈ ಮೂರನ್ನು ಪಡೆಯುವುದು ದುರ್ಲಭ. ಇದು ಭಗವಂತನ ದಯೆಯ ಮೇಲೆ ನಿಂತಿದೆ. ಮನುಷ್ಯತ್ವ. ಮುಮುಕ್ಷುತ್ವ. ಮಹಾ ಪುರುಷನ ಆಶ್ರಯ.

ಪರಮಾಣು, ದ್ವ್ಯಾನು, ತ್ರಿಶಿರೇಣು ಮುಂತಾದುವನ್ನು ಕಂಡು ಹಿಡಿದ ಅದ್ಭುತವಾದ ವೈಶೇಷಿಕದ ವಿಭಜನೆಯಲ್ಲಾಗಲೀ, ಅಥವಾ ಅದಕ್ಕಿಂತಲೂ ಸೂಕ್ಷ್ಮವಾದ ಜಾತಿ ದ್ರವ್ಯ ಗುಣ ಸಮನ್ವಯ ಮುಂತಾದುವನ್ನು ವಿವರಿಸುವಾಗ ಆಗಲಿ, ಆಧುನಿಕ ವಿಕಾಸವಾದದ ಪಿತಾಮಹರಂತಿರುವ ಸಾಂಖ್ಯರ ಭಾವನಾ ಪರಂಪರೆಗಳಿಗೆ ಅವಕಾಶವಿತ್ತ ನೈಯಾಯಿಕರ ಹಲವು ಅವಚ್ಛೇದಗಳಾಗಲಿ, ಈ ಅನ್ವೇಷಣಗಳ ಪ್ರತಿಫಲದ ರೂಪ ವೇದವ್ಯಾಸಸೂತ್ರದಲ್ಲಿ ಪರ್ಯವಸಾನವಾಯಿತು. ಹಲವು ಸಂಯೋಜನೆ ಮತ್ತು ವಿಭಜನೆಗೆ ಸಾಮಾನ್ಯ ಹಿನ್ನೆಲೆಯೆ ಶ್ರುತಿಯಾಗಿರುವುದು. ಜೈನ ಮತ್ತು ಬೌದ್ಧರ ತತ್ತ್ವ ಗ್ರಂಥಗಳಲ್ಲಿ ಕೂಡ ಶ್ರುತಿಯ ಸಹಾಯವನ್ನು ಎಂದಿಗೂ ತಿರಸ್ಕರಿಸಿಲ್ಲ. ಕೆಲವು ಬೌದ್ಧ ಶಾಖೆಗಳಲ್ಲಿ, ಮತ್ತು ಹಲವು ಜೈನರ ಗ್ರಂಥಗಳಲ್ಲಿ ಶ್ರುತಿಪ್ರಮಾಣವನ್ನು ಪೂರ್ಣವಾಗಿ ಒಪ್ಪಿಕೊಂಡಿರುವರು. ಹಿಂಸಕ ಶ್ರುತಿಯೆಂದು ಯಾವುದನ್ನು ಕರೆಯುವರೋ ಅದನ್ನು ಮಾತ್ರ ಒಪ್ಪಿಕೊಂಡಿಲ್ಲ. ಇವೆಲ್ಲ ಬ್ರಾಹ್ಮಣರು ನಂತರ ಸೇರಿಸಿದ್ದು ಎಂಬುದು ಅವರ ಅಭಿ

ಪ್ರಾಯ. ಆಧುನಿಕ ಕಾಲದಲ್ಲಿ ಕೂಡ ಪ್ರಖ್ಯಾತ ದಯಾನಂದ ಸರಸ್ವತಿಗಳು ಹೀಗೆಯೇ ಅಭಿಪ್ರಾಯಪಡುವರು.

ಹಿಂದಿನ ಮತ್ತು ಈಗಿನ ಭಾವನಾಪರಂಪರೆಗಳೆಲ್ಲ ಯಾವ ಒಂದು ಕೇಂದ್ರದಲ್ಲಿ ಸಂಧಿಸುತ್ತದೆ ಎಂದು ಕೇಳಿದರೆ, ಹಿಂದೂ ಧರ್ಮ ವಿಭಿನ್ನ ಶಾಖೆಯ ಮೂಲ ತಳಹದಿಯನ್ನು ನೋಡಬೇಕಾದರೆ ಅದೇ ವ್ಯಾಸ ಸೂತ್ರವೆಂದು ನಿರ್ವಿವಾದವಾಗಿ ಹೇಳಬೇಕಾಗುವುದು.

ಅದ್ವೈತಕೇಸರಿ ಅಸ್ತಿ ಭಾತಿ ಪ್ರಿಯ ಎಂದು ಘರ್ಜಿಸುತ್ತ ವಿಸ್ಮಯಜನಕ ಹಿಮಾಲಯದ ಗಿರಿಕಂದರಗಳಲ್ಲಿ ದಿವಿಜ ನದಿಯ ಗಂಭೀರ ಮರ್ಮರ ನಿನಾದದೊಂದಿಗೆ ಆ ಘರ್ಜನೆ ಮಿಲನವಾಗಿರುವುದನ್ನು ಕೇಳುತ್ತಿರಲಿ, ಅಥವಾ ಬೃಂದಾವನದ ಸುಂದರ ನಿಕುಂಜಗಳಲ್ಲಿ "ಪ್ರಿಯ" "ಪಿತಂ" ಎಂಬ ಮೃದುಮಧುರ ನಿನಾದವನ್ನು ಕೇಳಲಿ, ಅಥವಾ ಕಾಶಿಯ ಮಠಗಳಲ್ಲಿರುವ ಸನ್ಯಾಸಿಗಳ ಮೌನ ಧ್ಯಾನದಲ್ಲಿ ಬೆರೆಯಲಿ, ಅಥವಾ ನದಿಯಾ ಮಹಾತ್ಮನ (ಚೈತನ್ಯ) ಅನುಯಾಯಿಗಳ ಭಕ್ತ್ಯೋನ್ಮಾದದ ನೃತ್ಯದಲ್ಲಿ ಬೆರೆಯಲಿ, ಬಡೆಗಲೆ ತೆಂಕಲೆ ಮುಂತಾದ ಶಾಖೆಗಳುಳ್ಳ ವಿಶಿಷ್ಟಾದ್ವೈತ ಆಚಾರ್ಯ ಪದತಲದಲ್ಲಿ ಕುಳಿತಿರಲಿ, ಅಥವಾ ಮಧ್ವ ಸಂಪ್ರದಾಯದ ಗುರುಗಳ ಬೋಧನೆಯನ್ನು ಗೌರವಪೂರ್ವಕವಾಗಿ ಕೇಳಲಿ, "ವಾ, ಗುರುಕೇ ಫತೇ" ಎಂಬ ಕ್ಷಾತ್ರವಾಣಿಯನ್ನು ಲೌಕಿಕರಾದ ಸಿಕ್ಖರಿಂದ ಕೇಳಲಿ ಅಥವಾ ಉದಾಸಿ ಮತ್ತು ನಿರ್ಮಲ ಪಂಗಡದವರು ಗ್ರಂಥಸಾಹೇಬರ ಮೇಲೆ ಕೊಡುವ ಉಪನ್ಯಾಸವನ್ನು ಕೇಳಲಿ, ಕಬೀರನ ಸನ್ಯಾಸಿ ಶಿಷ್ಯರಿಗೆ "ಸತ್ ಸಾಹೇಬ" ಎಂದು ಪ್ರಣಾಮ ಮಾಡಿ ಅವರ ಸಾಹಿ (ಭಜನೆ) ಯನ್ನು ಭಕ್ತಿಪೂರ್ವಕವಾಗಿ ಕೇಳಲಿ, ರಾಜಪುಟಾನರ ಪ್ರಖ್ಯಾತ ಸುಧಾರಕ ದಾದುವಿನ ವಿಚಾರವನ್ನು ಕುರಿತು ಆಲೋಚಿಸಲಿ, ಅಥವಾ ಅವನ ಶಿಷ್ಯನಾದ ರಾಜ ಸುಂದರದಾಸನಿಂದ ಹಿಡಿದು ವಿಚಾರಸಾಗರದ ನಿಶ್ಚಲದಾಸನವರೆಗೆ ಯಾರನ್ನಾದರೂ ಕೇಳಲಿ (ಈ ಗ್ರಂಥ ಕಳೆದ ಮೂರು ಶತಮಾನದಲ್ಲಿ ಬರೆದ ಎಲ್ಲಾ ಗ್ರಂಥಗಳಿಗಿಂತಲೂ ಭರತ ಖಂಡದಲ್ಲಿ ಪ್ರಭಾವವನ್ನು ಬೀರಿದೆ. ಉತ್ತರ ಇಂಡಿಯಾದೇಶದಲ್ಲಿ ಯಾವ ಭಂಗಿ ಮೆಹತರ್‌ನನ್ನು ಅವನ ಲಾಲ್‌ಗುರುವಿನ ವಿಷಯವಾಗಿ

ಕೇಳಿದರೂ ಅವನು ಅದರ ವಿಷಯವಾಗಿ ಹೇಳಬಲ್ಲನು.) ಈ ಬೇರೆ ಬೇರೆ ಗುರುಗಳ ಪಂಥಗಳಲ್ಲಿ ಹಿಂದು ತತ್ತ್ವವಿದೆ, ಅದಕ್ಕೆ ಶ್ರುತಿಯೇ ಪ್ರಮಾಣ, ಗೀತೆಯೇ ಅದಕ್ಕೆ ಭಗವಂತನ ಭಾಷ್ಯ, ವ್ಯಾಸ ಸೂತ್ರವೇ ಅದರ ಸಂಪೂರ್ಣ ದರ್ಶನ. ಪರಮಹಂಸ ಪರಿವ್ರಾಜಕಾಚಾರ್ಯನಿಂದ ಹಿಡಿದು ದೀನನಾದ ನಿಕೃಷ್ಟ ಲಾಲ್‌ಗುರುವಿನ ಶಿಷ್ಯನಾದ ಮೆಹತರ್ ವರೆಗೆ ಇವೆಲ್ಲ ಅದರ ಬೇರೆ ಬೇರೆ ಆವಿರ್ಭಾವಗಳು.

ಈ ಮೂರು ಪ್ರಸ್ಥಾನತ್ರಯಗಳೆ (ಗೀತ, ಉಪನಿಷತ್, ಬ್ರಹ್ಮ ಸೂತ್ರ) ದ್ವೈತ, ವಿಶಿಷ್ಟಾದ್ವೈತ ಅದ್ವೈತಗಳೆಂಬ ಭಿನ್ನ ತತ್ತ್ವಗಳಿಂದ ಕೂಡಿದ ಹಿಂದೂಧರ್ಮಕ್ಕೆ ಇರುವ ಪ್ರಮಾಣ. ಹಿಂದಿನ ವೇದದ ಸಂಹಿತೆ ಭಾಗವಾದ ನರಸಾಸಿಯ ಆಧುನಿಕಪ್ರತಿನಿಧಿಗಳಂತೆ ಇರುವುದೇ ಈಗಿನ ಪುರಾಣಗಳು; ಪುರಾತನಕಾಲದ ಬ್ರಾಹ್ಮಣಗಳ ಪ್ರತಿನಿಧಿಯಂತೆ ಇರುವ ತಂತ್ರಶಾಸ್ತ್ರವೇ ಅದಕ್ಕೆ ಆಚಾರವನ್ನು ಒದಗಿಸುವುದು. ಎಲ್ಲರಿಗೂ ಪ್ರಸ್ಥಾನತ್ರಯ ಪ್ರಮಾಣವಾಗುವುದು. ಆದರೆ ಪುರಾಣ ಮತ್ತು ತಂತ್ರಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ಇದೆ.

ನಾವು ಹೇಳಿದಂತೆ ತಂತ್ರಗಳೇ ಸ್ವಲ್ಪ ಬದಲಾವಣೆ ಹೊಂದಿ ಬಂದ ವೈದಿಕ ಆಚಾರ. ಅವುಗಳ ವಿಷಯದಲ್ಲಿ ಹಾಸ್ಯಾಸ್ಪದವಾದ ನಿರ್ಣಯಗಳಿಗೆ ಬರುವುದಕ್ಕೆ ಮುಂಚೆ ತಂತ್ರಶಾಸ್ತ್ರವನ್ನೆ ಬ್ರಾಹ್ಮಣದ ಆಧ್ವರ್ಯ ಭಾಗದೊಂದಿಗೆ ಓದಿ ಎನ್ನುತ್ತೇನೆ. ತಂತ್ರದಲ್ಲಿ ಬಳಕೆಯಲ್ಲಿರುವ ಮುಕ್ಕಾಲುಪಾಲು ಮಂತ್ರಗಳು ಬ್ರಾಹ್ಮಣದಲ್ಲಿ ಹೇಗೆ ಇವೆಯೋ ಹಾಗೆಯೇ ತೆಗೆದುಕೊಂಡಿರತಕ್ಕವು. ಶ್ರೌತ ಸ್ಮಾರ್ತ ಆಚಾರಗಳನ್ನು ಬಿಟ್ಟರೆ ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಬಳಕೆಯಲ್ಲಿರುವ ಆಚಾರವೆಲ್ಲ ತಂತ್ರಶಾಸ್ತ್ರದಿಂದ ಬಂದುವು. ಅದೇ ಶಾಕ್ತ ಶೈವ ವೈಷ್ಣವ ಮತ್ತು ಇತರ ಪೂಜೆಗಳಲ್ಲೆಲ್ಲ ಪ್ರಧಾನವಾಗಿರುವುದು.

ಎಲ್ಲಾ ಹಿಂದೂಗಳಿಗೂ ಅವರ ಧರ್ಮದ ಮೂಲ ಚನ್ನಾಗಿ ಗೊತ್ತಿದೆ, ಎಂದು ನಾನೇನೂ ಭಾವಿಸುವುದಿಲ್ಲ. ದಕ್ಷಿಣ ಬಂಗಾಳಿಗಳಲ್ಲಿ ಹಲವರಿಗೆ ಈ ಪಂಗಡಗಳ ಹೆಸರು ಮತ್ತು ಪ್ರಖ್ಯಾತ ವಿಭಿನ್ನ

ತತ್ತ್ವಗಳು ಗೊತ್ತಿಲ್ಲ. ಆದರೂ ಅವರಿಗೆ ಗೊತ್ತಿರಲಿ ಇಲ್ಲದೆ ಇರಲಿ ಎಲ್ಲರೂ ಮೇಲಿನ ನಿಯಮವನ್ನು ಅನುಸರಿಸುತ್ತಿರುವರು.

ಆದರೆ ಎಲ್ಲಿ ಹಿಂದೀಭಾಷೆಯನ್ನು ಮಾತನಾಡುತ್ತಿರುವರೋ ಅಲ್ಲಿ ಅತಿ ಕೀಳುವರ್ಗದವರಿಗೆ ಕೂಡ ಬಂಗಾಳದಲ್ಲಿರುವ ಮೇಲಿನ ವರ್ಗದವರಿಗಿಂತ ಹೆಚ್ಚು ವೇದಾಂತ ವಿಷಯಗಳು ಗೊತ್ತಿವೆ. ಇದಕ್ಕೆ ಕಾರಣವೇನು ?

ಮಿಥಿಲೆಯಿಂದ ನವದ್ವೀಪಕ್ಕೆ ಸಾಗಿ, ಶಿರೋಮಣಿ ಗದಾಧರ ಜಗದೀಶ ಮುಂತಾದ ವಿಖ್ಯಾತ ವಿದ್ವಜ್ಜನರ ಆಶ್ರಯದಲ್ಲಿ ಬೆಳೆದು, ಕೆಲವು ವಿಷಯಗಳಲ್ಲಿ ಪ್ರಪಂಚದಲ್ಲೆಲ್ಲೂ ಇಲ್ಲದ ಅತಿ ಸೂಕ್ಷ್ಮ ತರ್ಕ ಶಾಸ್ತ್ರದ ನಿಯಮಗಳು ಅತಿ ಸೂಕ್ಷ್ಮವಾದ ಶಾಸ್ತ್ರೀಯ ಪ್ರೌಢಭಾಷೆಯಲ್ಲಿ ವ್ಯಕ್ತವಾಗಿ ಭರತಖಂಡದಲ್ಲೆಲ್ಲಾ ಪ್ರಖ್ಯಾತವಾಗಿ ಹಲವರ ಅಧ್ಯಯನಕ್ಕೆ ವಸ್ತುವಾಗಿ ನಿಂತಿದೆ ವಂಗದೇಶದ ನವ್ಯನ್ಯಾಯ. ಆದರೆ ಅಯ್ಯೋ, ವೇದಾಧ್ಯಯನಕ್ಕೆ ಹೆಚ್ಚು ಗಮನ ಕೊಡಲಿಲ್ಲ. ಈಚೆಗೆ ಹಲವು ವರುಷಗಳ ವರೆಗೆ ಪತಂಜಲಿಯ ಮಹಾಭಾಷ್ಯವನ್ನು ಕಲಿಸುವವರು ಕೂಡ ಸಿಕ್ಕುವುದು ಬಹಳ ಅಪರೂಪವಾಗಿತ್ತು. ಒಮ್ಮೆಮಾತ್ರ ಒಬ್ಬ ಮಹಾ ಪ್ರತಿಭಾವಂತ ಅಂತ್ಯವಿಲ್ಲದ ಅವಚ್ಛಿನ್ನ ಅವಿಚ್ಛೇದಕಗಳ ಗೊಂದಲದಿಂದ ಮೇಲೆದ್ದನು. ಅವನೇ ಭಗವಾನ್ ಶ್ರೀಕೃಷ್ಣಚೈತನ್ಯ. ಒಮ್ಮೆಯಾದರೂ ಬಂಗಾಳದ ಧಾರ್ಮಿಕ ಸುಷುಪ್ತಿ ಜಾಗ್ರತವಾಗಿ, ಭರತಖಂಡದ ಇತರ ಕಡೆಯವರೊಂದಿಗೆ ಬೆರೆಯತೊಡಗಿತು.

ಶ್ರೀ ಚೈತನ್ಯರು ಭಾರತಿಯಿಂದ ಸನ್ಯಾಸಪಡೆದು ಅವರೂ ಭಾರತಿ ಆದರೂ ಅವರ ಧಾರ್ಮಿಕ ಜಾಗೃತಿಯುಂಟಾದುದು ಮಾಧವೇಂದ್ರ ಪುರಿಗಳಿಂದ ಎಂಬುದೊಂದು ಆಶ್ಚರ್ಯಕರವಾದ ಸಂಗತಿಯಾಗಿದೆ.

ವಂಗದೇಶದ ಆಧ್ಯಾತ್ಮಿಕ ಪ್ರಚೋದಕರಲ್ಲಿ ಪುರಿ ಸಂಪ್ರದಾಯದವರಿಗೆ ವಿಶೇಷ ಪಾತ್ರವಿದ್ದಂತೆ ತೋರುವುದು. ಭಗವಾನ್ ಶ್ರೀರಾಮಕೃಷ್ಣರು ತೋತಾಪುರಿಯಿಂದ ಸನ್ಯಾಸ ಸ್ವೀಕರಿಸಿದರು.

ಶ್ರೀ ಚೈತನ್ಯರು ವ್ಯಾಸಸೂತ್ರದ ಮೇಲೆ ಬರೆದ ಭಾಷ್ಯ ಕಳೆದು ಹೋಗಿದೆ ಅಥವಾ ಇನ್ನೂ ಸಿಕ್ಕಿಲ್ಲ. ಅವರ ಶಿಷ್ಯರು ದಕ್ಷಿಣದ ಮಾಧ್ವ

ರನ್ನು ಸೇರಿದರು. ಕ್ರಮೇಣ ರೂಪ, ಸನಾತನ, ಜೀವಗೋಸ್ವಾಮಿ ಮುಂತಾದ ಮಹಾಪ್ರಭೃತಿಗಳ ಹೊಣೆ ಬಾಬಾಜಿಗಳ ಹೆಗಲಮೇಲೆ ಬಿದ್ದು ಚೈತನ್ಯರಿಂದ ಉಂಟಾದ ಮಹಾಕ್ರಾಂತಿ ನಂದಿಹೋಗುವುದ ರಲ್ಲಿತ್ತು. ಇತ್ತೀಚೆಗೆ ಅದರ ಜಾಗೃತಿಯ ಚಿಹ್ನೆಗಳು ಕಾಣುತ್ತಿವೆ. ಅದು ಹಿಂದಿನ ಉಚ್ಛ್ರಾಯಸ್ಥಿತಿಗೆ ಏರುವುದೆಂದು ಭಾವಿಸುತ್ತೇನೆ.

ಚೈತನ್ಯರ ಪ್ರಭಾವ ಭರತಖಂಡದ ಮೇಲೆಲ್ಲಾ ಬಿದ್ದಿದೆ. ಭಕ್ತಿಮಾರ್ಗ ಗೊತ್ತಿರುವ ಕಡೆಯಲ್ಲೆಲ್ಲ ಇವರನ್ನು ಕೊಂಡಾಡುವರು, ಇವರ ವಿಷಯ ಓದುವರು, ಇವರನ್ನು ಆರಾಧಿಸುವರು. ವಲ್ಲಭಾ ಚಾರ್ಯರ ಪಂಥವೆಲ್ಲ ಚೈತನ್ಯಮತದ ಒಂದು ಶಾಖೆ ಎಂದು ನಂಬಲು ನನಗೆ ಸಾಕಷ್ಟು ಕಾರಣಗಳಿವೆ. ಆದರೆ ವಂಗದೇಶದಲ್ಲಿ ಚೈತನ್ಯರ ಶಿಷ್ಯರು ಎಂದು ಕರೆಯಿಸಿಕೊಳ್ಳುವವರಿಗೆ ಚೈತನ್ಯರ ಪ್ರಭಾವ ಹೇಗೆ ಕೆಲಸಮಾಡುತ್ತಿದೆ ಎಂಬುದು ಗೊತ್ತಿಲ್ಲ. ಇದು ಅವರಿಗೆ ಹೇಗೆ ಗೊತ್ತಾಗಬಲ್ಲುದು? ಅವರ ಶಿಷ್ಯರು ಬಡಾಬಾಬುಗಳಾಗಿರುವರು, ಅವರಾದರೋ ಪಾದಚಾರಿಯಾಗಿ ಆಚಂಡಾಲನವರೆಗೆ ಭಿಕ್ಷೆಮಾಡುತ್ತಾ ಭಗವತ್ಪ್ರೇಮವನ್ನು ಮನೆಯಿಂದ ಮನೆಗೆ ಒಯ್ಯುತ್ತಿದ್ದರು.

ಬಂಗಾಳ ದೇಶದಲ್ಲಿ ರೂಢಿಯಲ್ಲಿರುವ ಸಂಪ್ರದಾಯ ಕುಲಗುರು ಎಂಬ ವಿಚಿತ್ರಪದ್ಧತಿಯೇ ವಂಗದೇಶವನ್ನು ಭರತಖಂಡದ ಇತರ ಕಡೆಯ ಧರ್ಮಜೀವನದಿಂದ ಬೇರೆಯಾಗುವಂತೆ ಮಾಡಿತು.

ಸನ್ಯಾಸ ಜೀವನದ ಮಹಾಸಂಘದಿಂದ ವಂಗದೇಶ ಚೇತನ ಗೊಳ್ಳದಿರುವುದೇ ಈ ಕುಂದಿಗೆ ಒಂದು ದೊಡ್ಡ ಕಾರಣವಾಗಿದೆ. ಈಗಲೂ ಕೂಡ ಸನ್ಯಾಸಿಗಳೇ ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿ ಗಳಿಗೆ ಪ್ರತಿನಿಧಿಗಳು, ಅವರೇ ಇದರ ಗಣಿ. ವಂಗದೇಶದಲ್ಲಿ ಉಚ್ಚ ಕುಲದವರು ತ್ಯಾಗವನ್ನು ಎಂದಿಗೂ ಮೆಚ್ಚಲಿಲ್ಲ. ಅವರ ಸ್ವಭಾವ ಭೋಗದ ಕಡೆಗೆ. ಅವರಿಗೆ ಆಧ್ಯಾತ್ಮಿಕ ಜೀವನದ ಅಂತರಾಳ ಹೇಗೆ ಗೊತ್ತಾಗಬೇಕು? "ತ್ಯಾಗೇ ನೈಕೇ ಅಮೃತತ್ವಂ ಮಾನಶುಃ" ತ್ಯಾಗದಿಂದ ಮಾತ್ರ ಅಮೃತತ್ವವನ್ನು ಗಳಿಸಬಹುದು. ಅದು ಮತ್ತೆ ಹೇಗೆ ಆದೀತು?

ಆದರೆ ಹಿಂದೀ ಮಾತನಾಡುವ ಪ್ರದೇಶವಾದರೋ ಪ್ರತಿಭಾವಂತರಾದ ಪ್ರಭಾವಪೂರಿತ ತ್ಯಾಗೀಗುರುಗಳ ಪರಂಪರೆ. ವೇದಾಂತ ಸಿದ್ಧಾಂತವನ್ನು ಪ್ರತಿಯೊಬ್ಬರಿಗೂ ಒದಗಿಸಿರುವುದು. ಪಂಜಾಬಿನ ರಣಜಿತ್ ಸಿಂಗನ ಆಳ್ವಿಕೆಯ ಕಾಲದಲ್ಲಿ ತ್ಯಾಗಕ್ಕೆ ಸಿಕ್ಕಿದ ಮನ್ನಣೆಯಿಂದ ವೇದಾಂತದ ಪರಮಸಿದ್ಧಾಂತ ಅತಿ ದೀನನಿಗೂ ಪಾಮರನಿಗೂ ದೊರಕುವಂತೆ ಆಗಿದೆ. ಅತಿ ಹೆಮ್ಮೆಯಿಂದ ಪಂಜಾಬಿನ ರೈತರ ಹುಡುಗಿ ಕೂಡ ತನ್ನ ಚರಕದ ಗಾಲಿಕೂಡ 'ಸೋಹಂ' ಎಂದು ಹಾಡುತ್ತಿದೆ ಎನ್ನುವಳು. ಹೃಷೀಕೇಶದ ಕಾಡಿನಲ್ಲಿ ಮಹತರ್ ತ್ಯಾಗಿಗಳು ಗೈರಿಕ ವಸನಧಾರಿಗಳಾಗಿ ವೇದಾಂತ ಅಧ್ಯಯನ ಮಾಡುತ್ತಿರುವುದನ್ನು ನೋಡಿರುವೆನು. ಹಲವು ಪ್ರತಿಷ್ಠಾವಂತ ಕುಲೀನ ವಂಶಸ್ಥರು ಅವರ ಪದತಳದಲ್ಲಿ ಕುಳಿತು ಕಲಿತುಕೊಳ್ಳಲು ಸಿದ್ಧರಾಗಿರುವರು. ಇದು ಏತಕ್ಕೆ ಹೀಗೆ ಇರಬಾರದು? "ಅಂತ್ಯಾದಪಿ ಪರಂಧರ್ಮಃ" ಅಂತ್ಯಜಸಿಂದಲೂ ಪರಮಧರ್ಮವನ್ನು ಕಲಿತುಕೊಳ್ಳಬಹುದು.

ವಾಯುವ್ಯ ಮತ್ತು ಪಂಜಾಬು ಪ್ರಾಂತಗಳಲ್ಲಿ ಬಂಗಾಳ ಬೊಂಬಾಯಿ ಮದರಾಸಿಗಿಂತ ಹೆಚ್ಚಾಗಿ ಧಾರ್ಮಿಕ ವಿದ್ಯೆ ಹರಡಿದೆ. ಪರಿವ್ರಾಜಕರಾದ ದಶನಾಮಿ, ವೈರಾಗಿ ಮತ್ತು ಪಂಥಿಯ ಪಂಗಡಕ್ಕೆ ಸೇರಿದ ಸನ್ಯಾಸಿಗಳು ಧರ್ಮವನ್ನು ಪ್ರತಿಯೊಂದು ಮನೆಗೂ ತಂದಿರುವರು. ಅದಕ್ಕೆ ಖರ್ಚುಮಾಡುವುದು ಒಂದು ಚೂರು ರೊಟ್ಟಿ ಮಾತ್ರ. ಅವರಲ್ಲಿ ಹಲವರು ಎಷ್ಟು ನಿಸ್ಸಂಗರಾಗಿರುವರು ಎಂತಹ ಮಹಾತ್ಮರಿರುವರು. ಅವರಲ್ಲಿ 'ಕಚು' ಪಂಥಿಗೆ ಸೇರಿದ (ಸ್ವತಂತ್ರರಾದ) ಸನ್ಯಾಸಿಗಳೊಬ್ಬರು ಇರುವರು. ಅವರು ರಜಪುತಾನದಲ್ಲೆಲ್ಲ ನೂರಾರು ಶಾಲೆಗಳು ಮತ್ತು ಧರ್ಮಶಾಲೆಗಳನ್ನು ತೆರೆದಿರುವರು. ಆತ ಅರಣ್ಯದಲ್ಲಿ ವೈದ್ಯಶಾಲೆಯನ್ನು ಇಟ್ಟಿರುವನು. ಹಿಮಾಲಯದ ಕಣಿವೆಯಲ್ಲಿ ಹರಿಯುವ ನದಿಗೆ ಕಬ್ಬಿಣದ ಸೇತುವೆ ಕಟ್ಟಿಸಿರುವನು. ಆದರೆ ಆತ ಕೈಯ್ಯಿಂದ ಒಂದು ಕಾಸನ್ನೂ ಮುಟ್ಟುವುದಿಲ್ಲ. ಆವನಿಗೆ ಒಂದು ಕಂಬಳಿಯಲ್ಲದೆ ಮತ್ತಾವ ಆಸ್ತಿಯೂ ಇಲ್ಲ. ಜನ ಅವನನ್ನು ಕಂಬಳಿ ಬಾಬ ಎಂದು ಕರೆಯುವರು. ಆತ ಮನೆಯಿಂದ ಮನೆಗೆ ಭಿಕ್ಷೆ

ಬೇಡುವನು ತನ್ನ ಊಟಕ್ಕೆ. ಆತ ಒಂದು ಮನೆಯಲ್ಲಿ ಪೂರ್ತಿ ಊಟಮಾಡುವುದನ್ನೆ ನೋಡಿಲ್ಲ. ಏಕೆಂದರೆ ಆ ಮನೆಯವರಿಗೆ ಎಲ್ಲಿ ತೊಂದರೆಯಾಗುವುದೊ ಎಂದು. ಹೀಗೆ ಇರುವವರಲ್ಲಿ ಆತ ಒಬ್ಬ. ಎಲ್ಲಿಯವರೆಗೆ ಭರತಖಂಡದಲ್ಲಿ ಇಂತಹ ದೇವತೆಗಳು ಇರುವರೊ, ಸನಾತನ ಧರ್ಮವನ್ನು ಇಂತಹ ದೈವೀಶಕ್ತಿಗಳು ಸಂರಕ್ಷಿಸುತ್ತಿರುವುವೋ, ಅಲ್ಲಿಯವರೆಗೆ ಈ ಪ್ರಾಚೀನ ಧರ್ಮ ನಾಶವಾಗುವುದೆಂದು ತಿಳಿದಿರಾ ?

ಈ ದೇಶದಲ್ಲಿ (ಅಮೆರಿಕಾ) ಪಾದ್ರಿಗಳಿಗೆ ಕೆಲವು ವೇಳೆ ಮುವತ್ತುಸಾವಿರ, ನಲವತ್ತುಸಾವಿರ, ಐವತ್ತುಸಾವಿರ, ಇಲ್ಲ ಕೆಲವು ವೇಳೆ ತೊಂಬತ್ತುಸಾವಿರ ರೂಪಾಯಿಗಳು ತಿಂಗಳಿಗೆ ಸಂಬಳ ಬರುವುದು. ಅದೂ ಕೂಡ ಒಂದು ವರ್ಷದಲ್ಲಿ ಆರು ತಿಂಗಳು ಮಾತ್ರ ಭಾನುವಾರಗಳಲ್ಲಿ ಎರಡು ಗಂಟೆ ಪಾಠ ಹೇಳುವುದಕ್ಕೆ. ಅವರು ತಮ್ಮ ಧರ್ಮರಕ್ಷಣೆಗಾಗಿ ಕೋಟ್ಯಂತರ ದ್ರವ್ಯಗಳನ್ನು ಖರ್ಚುಮಾಡುವುದನ್ನು ನೋಡಿ. ಕಂಬಳಿಸ್ವಾಮಿಗಳಂತಹ ದೇವಾಂಶ ಪುರುಷರನ್ನು, ಸಂಪೂರ್ಣ ನಿಸ್ವಾರ್ಥಿಗಳನ್ನು, ಕೆಲಸಕ್ಕೆಬಾರದ ಉಂಡಾಂಡಿಭಟ್ಟ ರೆಂದು ವಂಗದೇಶದ ಯುವಕರಿಗೆ ಕೆಲವರು ಬೋಧಿಸುತ್ತಿರುವರು. "ಯಾರು ನನ್ನ ಭಕ್ತರ ಭಕ್ತರೋ ಅವರೇ ಭಕ್ತಶ್ರೇಷ್ಠರು"

ಏನೂ ಅರಿಯದ ಒಬ್ಬ ಬೈರಾಗಿಯ ಉದಾಹರಣೆಯನ್ನಾದರೂ ತೆಗೆದುಕೊಳ್ಳಿ. ಅವನು ಕೂಡ ಹಳ್ಳಿಗೆ ಹೋದರೆ ತನಗೆ ತಿಳಿದ ವಿಷಯವನ್ನು ಅವರಿಗೆ ಹೇಳುವನು. ಇದೊಂದು ಒಳ್ಳೆಯ ಕೆಲಸ ವಲ್ಲವೆ ? ಇದೆಲ್ಲ ಒಂದು ಚೂರು ರೊಟ್ಟಿಗೆ, ಗೇಣುದ್ದ ಬಟ್ಟೆಗೆ. ನೀವು ಅವರನ್ನು ನಿರ್ದಯದಿಂದ ದೂರುವುದಕ್ಕೆ ಮುಂಚೆ, ನನ್ನ ಸಹೋದರರೆ, ಯಾರ ದುಡಿತದಿಂದ ನೀವು ವಿದ್ಯಾವಂತರಾದಿರೋ ಯಾರ ಶ್ರಮದಿಂದ ನಿಮ್ಮ ಅಂತಸ್ತು ಉಳಿದಿರುವುದೋ, ಅಂತಹ ಬೈರಾಗಿಗಳು ಉಂಡಾಡಿಭಟ್ಟರೆಂದು ಹೇಳಿಕೊಡುವ ಉಪಾಧ್ಯಾಯರಿಗೆ ನೀವು ಹಣಕೊಡುವುದಕ್ಕೆ ಸಹಾಯ ಮಾಡುವಿರೋ ? ಅಂತಹ ನಿಸ್ಸ ದೇಶದ ದೀನರಿಗೆ ನೀವು ಮಾಡಿರುವುದೇನು ಎಂಬುವನ್ನು ಕುರಿತು ಯೋಚಿಸಿನೋಡಿ.

ಬಂಗಾಳ ದೇಶದಲ್ಲಿ ನಿಮ್ಮ ಕೆಲವು ದೇಶೀಯರು ಹಿಂದೂ ಧರ್ಮದ ಹೊಸ ಶಾಖೆಯೆಂದು ಕೆಲವನ್ನು ಕರೆದು ಟೀಕಿಸುತ್ತಿರುವರು. ಅವರು ಬೇಕಾದರೆ ಟೀಕಿಸಬಹುದು. ಏಕೆಂದರೆ ಹಿಂದೂ ಧರ್ಮ ಈಗ ತಾನೆ ಬಂಗಾಳಕ್ಕೆ ಪ್ರವೇಶಿಸುತ್ತಿದೆ. ಇದುವರೆಗೆ ಬಂಗಾಳದಲ್ಲಿ ಊಟ, ಉಪಚಾರ, ಮದುವೆಗೆ ಸಂಬಂಧಪಟ್ಟ ದೇಶಾಚಾರಗಳೇ ಧರ್ಮವಾಗಿತ್ತು.

ಈ ಸಣ್ಣ ಲೇಖನದಲ್ಲಿ ಶ್ರೀ ರಾಮಕೃಷ್ಣರ ಶಿಷ್ಯರು ಹಿಂದೂ ಧರ್ಮದ ವಿಷಯದಲ್ಲಿ ದೇಶದಲ್ಲಿ ಬೋಧಿಸುತ್ತಿರುವುದು ಸತ್ ಶಾಸ್ತ್ರದ ಪ್ರಕಾರವಾಗಿ ಇದೆಯೆ ಇಲ್ಲವೆ ಎಂಬುದನ್ನು ಚರ್ಚಿಸುವುದಕ್ಕೆ ಅವಕಾಶವಿಲ್ಲ. ಆದರೆ ನಮ್ಮನ್ನು ಟೀಕಿಸುವವರಿಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ಅದರಿಂದ ಅವರು ನಮ್ಮ ದೃಷ್ಟಿಯನ್ನು ಚೆನ್ನಾಗಿ ಅರಿಯಬಹುದು.

ಮೊದಲನೆಯದಾಗಿ ಕಾಶಿದಾಸ ಅಥವಾ ಕೃತ್ತಿವಾಸರ ಬರವಣಿಗೆ ಅಮೃತ ಸಮಾನವೆಂದೂ, ಅದನ್ನು ಕೇಳುವವರು ಪುಣ್ಯವಂತರೆಂದೂ ಪರಿಗಣಿಸಲ್ಪಟ್ಟಿದ್ದರೂ ಅದರಿಂದ ಹಿಂದೂ ಧರ್ಮದ ನೈಜ ಸ್ಥಿತಿಯನ್ನು ನಿರ್ಧರಿಸಲಾರೆವು. ಅದಕ್ಕಾಗಿ ನಾವು ವೇದ, ದರ್ಶನಗಳು, ಮಹಾಆಚಾರ್ಯರು ಮತ್ತು ಭರತಖಂಡದಲ್ಲೆಲ್ಲಾ ಇರುವ ಅವರ ಶಿಷ್ಯರ ಮೂಲಕ್ಕೆ ಹೋಗಬೇಕಾಗಿದೆ.

ಸಹೋದರರೇ, ನೀವು ಗೌತಮನ ಸೂತ್ರದಿಂದ ಪ್ರಾರಂಭ ಮಾಡಿ, ಆಪ್ತ ಎಂಬ ಸಿದ್ಧಾಂತವನ್ನು ವಾತ್ಸಾಯನ ಭಾಷ್ಯದ ಬೆಳಕಿನಲ್ಲಿ ನೋಡಿ. ಮೀಮಾಂಸಕರೊಂದಿಗೆ ಶಬರ ಮುಂತಾದ ಭಾಷ್ಯಕಾರರೊಡನೆ ಅಲೌಕಿಕ ಪ್ರತ್ಯಕ್ಷ ಮತ್ತು ಆಪ್ತ ಎಂದರೆ ಏನು ಅರ್ಥ, ಪ್ರತಿಯೊಬ್ಬರೂ ಆಪ್ತರಾಗಬಲ್ಲರೆ ಇಲ್ಲವೆ, ಮತ್ತು ವೇದಕ್ಕೆ ಪ್ರಮಾಣವೆ ಇಂತಹ ಆಪ್ತರ ವಾಕ್ಯ ಎಂಬುದು ಕಾಣುವುದು. ಯಜುರ್ವೇದಕ್ಕೆ ಮಹೀದರ ಬರೆದ ಮುನ್ನುಡಿಯನ್ನು ಓದುವುದಕ್ಕೆ ಅವಕಾಶವಿದ್ದರೆ ಅಲ್ಲಿ ಮತ್ತೂ ಸರಳವಾಗಿ ವೇದವೆಂದರೆ ಮಾನವನ ಅಂತರಂಗ ಜೀವನದ ನಿಯಮಾವಳಿ, ಆದಕಾರಣ ಅವು ಸನಾತನ ಎಂದು ಸ್ಪಷ್ಟವಾಗಿ ಚರ್ಚಿಸಿರುವರು.

ಸೃಷ್ಟಿಯ ಅನಂತತ್ವದ ವಿಷಯದಲ್ಲಿ, ಈ ಸಿದ್ಧಾಂತ ಹಿಂದೂ ಧರ್ಮದ ಚರಮ ಸಿದ್ಧಾಂತ ಮಾತ್ರವಲ್ಲ, ಜೈನ ಮತ್ತು ಬೌದ್ಧರೂ ಕೂಡ ಇದನ್ನು ನಂಬುವರು.

ಭರತ ಖಂಡದಲ್ಲಿರುವವರನ್ನೆಲ್ಲ ಸಾಮಾನ್ಯವಾಗಿ ಜ್ಞಾನ ಮಾರ್ಗಾವಲಂಬಿಗಳು ಅಥವಾ ಭಕ್ತಿ ಮಾರ್ಗಾವಲಂಬಿಗಳು ಎಂದು ವಿಭಾಗಿಸಬಹುದು. ನೀವು ದಯವಿಟ್ಟು ಶಂಕರಾಚಾರ್ಯರ ಶಾರೀರಕ ಭಾಷ್ಯದ ಮುನ್ನುಡಿಯನ್ನು ಓದಿದರೆ ಅಲ್ಲಿ ಜ್ಞಾನದ ನಿರಪೇಕ್ಷತೆಯನ್ನು ಚೆನ್ನಾಗಿ ಚರ್ಚಿಸಿರುವರು. ಅಲ್ಲಿ ಅವರ ನಿರ್ಣಯವೇನೆಂದರೆ, ಬ್ರಹ್ಮ ಸಾಕ್ಷಾತ್ಕಾರ ಮತ್ತು ಮೋಕ್ಷಪ್ರಾಪ್ತಿ ಬಾಹ್ಯ ಆಚಾರ, ಜಾತಿ ಕುಲ ಗೋತ್ರ ಮತ್ತು ಇತರ ನಂಬಿಕೆಗಳ ಮೇಲೆ ನಿಂತಿಲ್ಲವೆನ್ನುವುದು ವ್ಯಕ್ತ ವಾಗುವುದು. ಯಾರಿಗೆ ಸಾಧನಚತುಷ್ಟಯ ಇದೆಯೊ ಅವರಿಗೆಲ್ಲ ಇದು ಪ್ರಾಪ್ತವಾಗುವುದು. ಇದೇ ಅತ್ಯಂತ ಶ್ರೇಷ್ಠವಾದ ನೈತಿಕ ಧರ್ಮ.

ಭಕ್ತರ ವಿಷಯದಲ್ಲಿ, ಬಂಗಾಳದ ವಿಮರ್ಶಕರು ಕೂಡ, ಕೆಲವರು ಅಧಿಕಾರ ಪುರುಷರೇ ಭಕ್ತರಲ್ಲಿ ಜಾತಿ ಕುಲ ಲಿಂಗಭೇದ ಅಥವಾ ಮಾನವ ಜನ್ಮ ಕೂಡ ಅವಶ್ಯಕವಿಲ್ಲ ಎಂದು ಸಾರುವುದು ಗೊತ್ತಿದೆ. ಭಕ್ತಿಯೊಂದೇ ಮುಖ್ಯವಾಗಿ ಪ್ರತಿಯಲ್ಲಿ ಬೇಕಾಗಿರುವುದು.

ಜ್ಞಾನ ಮತ್ತು ಭಕ್ತಿಯನ್ನು ಎಲ್ಲಾ ಕಡೆಯಲ್ಲಿಯೂ ಯಾವ ಷರತ್ತುಗಳೂ ಇಲ್ಲದೆ ಸಾರಿರುವರು. ಆದಕಾರಣವೇ ಯಾರೂ ಕೂಡ ಮೋಕ್ಷಸಂಪಾದನೆಗೆ ಇಂತಹ ವರ್ಣವೇ ಇರಬೇಕು, ಇಂತಹ ಜಾತಿ ಯವರೇ ಆಗಿರಬೇಕು, ಇಂತಹ ಜನಾಂಗದವರೇ ಆಗಿರಬೇಕು ಎಂದು ಸಾರುವುದಿಲ್ಲ. ವ್ಯಾಸಸೂತ್ರದಲ್ಲಿ ಬರುವ "ಅನ್ತರಾ ಚಾಪಿತು ತದು ದೃಷ್ಟೇಃ" ಸೂತ್ರಕ್ಕೆ ಶಂಕರ, ರಾಮಾನುಜ, ಮಧ್ವರ ಭಾಷ್ಯಗಳನ್ನು ನೋಡಿ (ಬ್ರ: ಸೂ. III. IV. ೩೬) ಮಧ್ಯದಲ್ಲಿರುವವರು ಕೂಡ ಜ್ಞಾನಕ್ಕೆ ಯೋಗ್ಯರು ಅದನ್ನು ನೋಡುತ್ತೇವೆ.

ನೀವು ಉಪನಿಷತ್ತನ್ನೆಲ್ಲ ನೋಡಬಹುದು, ಸಂಹಿತೆಗೂ ಹೋಗಬಹುದು. ಇತರ ಧರ್ಮಗಳಲ್ಲಿ ಇರುವಂತೆ ಇಲ್ಲಿ ಎಲ್ಲಿಯೂ ಒಂದು ಮಿತಭಾವನೆ ಇಲ್ಲ. ಪರಮತ ಸಹಿಷ್ಣುತೆಯಾದರೊ ಅದು

ಎಲ್ಲಾ ಕಡೆಯಲ್ಲಿಯೂ ಇದೆ. ಅಥರ್ವ್ವ ವೇದದ ಸಂಹಿತಾ ಭಾಗ-ದಲ್ಲಿ ಹದಿನಾಲ್ಕನೆಯ ಅಧ್ಯಾಯದ ಮೂರು ಮತ್ತು ನಾಲ್ಕನೆ ಮಂತ್ರಗಳಲ್ಲಿವೆ. ನನ್ನ ನೆನಪು ಸರಿಯಾಗಿದ್ದರೆ ಅದು ಹೀಗೆ ಪ್ರಾರಂಭವಾಗು-ವುದು : " ನ ಬುದ್ಧಿ ಭೇದಂ ಜನಯೇದ ಜ್ಞಾನಂ ಕರ್ಮ ಸಂಗೀನಾಮು " (ಬುದ್ಧಿವಂತರು ಕರ್ಮಕ್ಕೆ ಆಸಕ್ತರಾಗಿ ಕೆಲಸಮಾಡುವವರ ಮನಸ್ಸನ್ನು ಚಂಚಲಗೊಳಿಸಕೂಡದು.) ಇದು ಎಲ್ಲಾ ಕಡೆಯಲ್ಲಿಯೂ ಇದೆ. ಇಂಡಿಯಾ ದೇಶದಲ್ಲಿ ಎಲ್ಲಿಯವರೆಗೆ ಒಬ್ಬ ಸಮಾಜದ ಕಾನೂನನ್ನು ಪಾಲಿಸುತ್ತಿರುವನೋ ಅಲ್ಲಿಯವರೆಗೆ ಅವನು ಯಾವ ಇಷ್ಟದೇವತೆಯ-ನ್ನಾದರೂ ಆರಿಸಿಕೊಳ್ಳಲಿ, ಅವನು ನಾಸ್ತಿಕನಾಗಲೀ, ಅನುಮಾನ ವಾದಿಯಾಗಲಿ ಅವನನ್ನು ಯಾರಾದರೂ ಹಿಂಸಿಸುವರೆ? ಸಮಾಜ ತನ್ನ ಕಾನೂನಿಗೆ ವಿರೋಧವಾಗಿ ಹೋಗಿರುವವರನ್ನು ದಂಡಿಸಬಹುದು. ಆದರೆ ಒಬ್ಬ ಪತಿತನ ಗುಂಪಿಗೆ ಸೇರಿದ ಅಧಮಾಧಮನಾಗಲಿ ಯಾರೂ ಅವನನ್ನು ಮೋಕ್ಷಕ್ಕೆ ಬಾಹಿರನನ್ನಾಗಿ ಮಾಡಿಲ್ಲ. ಇವೆರಡನ್ನೂ ಬೆರಸ ಕೂಡದು. ಇವಕ್ಕೆ ಉದಾಹರಣೆಯಾಗಿ ಮಲಬಾರಿನಲ್ಲಿ ಚಂಡಾಲ ಕುಲೀನ ಹಿಂದೂ ಹೋಗುವ ದಾರಿಯಲ್ಲಿ ಹೋಗಕೂಡದು. ಆದರೆ ಅವನು ಮುಹಮ್ಮದೀಯನಾಗಲೀ, ಕ್ರೈಸ್ತನಾಗಲಿ ಆದರೆ ಅವನು ಎಲ್ಲಿಗೆ ಬೇಕಾದರೂ ಹೋಗಬಹುದು. ಈ ನಿಯಮ ಹಿಂದೂ ರಾಜ್ಯ-ದಲ್ಲಿ ಹಲವು ಶತಮಾನಗಳಿಂದ ಇದೆ. ಇದು ವಿಚಿತ್ರವಾಗಿ ಕಾಣ ಬಹುದು, ಆದರೆ ಎಂತಹ ಹೀನಸ್ಥಿತಿಯಲ್ಲಿಯೂ ಪರಮತಸಹಿಷ್ಣುತೆ-ಯನ್ನು ತೋರುವುದು.

ಹಿಂದೂಧರ್ಮಕ್ಕೂ, ಇತರ ಧರ್ಮಗಳಿಗೂ ಇರುವ ಭಾವನೆ-ಯಲ್ಲಿ ಒಂದು ವ್ಯತ್ಯಾಸವೆ, ಯಾವ ಒಂದು ಭಾವನೆಯನ್ನು ವಿವರಿಸು-ವುದಕ್ಕೆ ಹಿಂದುಗಳು ಸಂಸ್ಕೃತ ಭಾಷೆಯ ಭಂಡಾರವನ್ನೆ ಬರಿದು-ಮಾಡುವರೊ ಅದೇ, ಮಾನವ ಈ ಜನ್ಮದಲ್ಲೆ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬುದು. '' ದೇವರನ್ನು ಅರಿಯುವು-ದೆಂದರೆ ದೇವರಾದಂತೆ '' ಎಂಬುದು.

ಇದರ ಪರಿಣಾಮವಾಗಿ ಅತಿ ವಿಶಾಲವಾದ ಅದ್ಭುತವಾದ ಪ್ರತಿಭಾಪೂರ್ಣ ಭಾವನೆ ಹೊರಹೊಮ್ಮಿದೆ. ವೇದಕಾಲದ ಋಷಿಗಳು-

ಸಮರ್ಥಿಸಿದ್ದು ಮಾತ್ರವಲ್ಲ. ಇತ್ತೀಚಿಗೆ ದಾದುಪಂಥಿಗೆ ಸೇರಿದ ನಿಶ್ಚಲದಾಸಕೂಡ ಧೈರ್ಯದಿಂದ ತನ್ನ ವಿಚಾರಸಾಗರದಲ್ಲಿ ಹೀಗೆ ಹೇಳುವನು: "ಯಾರು ಬ್ರಹ್ಮನನ್ನು ಅರಿತಿರುವನೊ ಅವನು ಬ್ರಹ್ಮನಾಗಿರುವನು. ಅವನ ಮಾತು ವೇದ. ಅವು ಅಜ್ಞಾನದ ಅಂಧಕಾರವನ್ನು ಹೋಗಲಾಡಿಸುವುವು" ಅವು ದೇವಭಾಷೆಯಾದ ಸಂಸ್ಕೃತದಲ್ಲಿ ವ್ಯಕ್ತವಾಗಿರಲಿ, ಇಲ್ಲವೆ ಸಾಧಾರಣ ಭಾಷೆಯಲ್ಲಿ ವ್ಯಕ್ತವಾಗಿರಲಿ ಚಿಂತೆಯಿಲ್ಲ."

ದ್ವೈತಿಗಳು ಹೇಳುವಂತೆ ದೇವರನ್ನು ಕಾಣುವುದು, ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದು, ಅಥವಾ ಅದ್ವೈತಿಗಳು ಹೇಳುವಂತೆ ಬ್ರಹ್ಮನಾಗುವುದು, ಇವೇ ವೇದ ಸಂದೇಶದ ಪರಮಗುರಿ. ಅಲ್ಲಿರುವ ಇತರ ಬೋಧನೆಗಳೆಲ್ಲ ಅದರೆಡೆಗೆ ಒಯ್ಯುವ ಸೋಪಾನ ಪಂಕ್ತಿಯಂತೆ ಇದೆ. ಶಂಕರಭಗವತ್ಪಾದರ ಮಹಾಕೀರ್ತಿ ನಿಂತಿರುವುದೇ ಅವರು ತಮ್ಮ ಅದ್ಭುತ ಪ್ರತಿಭೆಯಿಂದ ವ್ಯಾಸರ ಭಾವನೆಯನ್ನು ಅತಿ ಅಮೋಘವಾಗಿ ವರ್ಣಿಸಿರುವುದರ ಮೇಲೆ.

ನಿರಪೇಕ್ಷ ದೃಷ್ಟಿಯಿಂದ ಬ್ರಹ್ಮನೊಬ್ಬನೇ ಸತ್ಯ. ಸಾಪೇಕ್ಷ ದೃಷ್ಟಿಯಿಂದ ಭರತಖಂಡದಲ್ಲಿ ಮತ್ತು ಇತರ ಕಡೆ ಒಂದೇ ಬ್ರಹ್ಮನ ಭಿನ್ನ ಭಿನ್ನ ಭಾವನೆಗಳ ಮೇಲೆ ನಿಂತ ಪಂಥಗಳೆಲ್ಲ ಸತ್ಯ. ಕೆಲವು ಇತರ ಕೆಲವಕ್ಕಿಂತ ಮೇಲು ಅಷ್ಟೆ. ಒಬ್ಬ ಸೂರ್ಯನ ಕಡೆ ನೇರ ಹೋದ ಎಂದು ಭಾವಿಸಿ. ಅವನು ಸೂರ್ಯನ ಸಮೀಪಕ್ಕೆ ಹೋದಂತೆಲ್ಲ ಹೊಸ ಹೊಸದಾದ ಸೂರ್ಯನ ದೃಶ್ಯವನ್ನು ನೋಡುವನು. ಅವನು ಕೊನೆಗೆ ನಿಜವಾದ ಸೂರ್ಯನನ್ನು ಸೇರುವವರೆಗೆ ಸೂರ್ಯನ ಗಾತ್ರ ದೃಶ್ಯ, ಬೆಳಕು ಪ್ರತಿ ನಿಮಿಷವೂ ಹೊಸ ಹೊಸದಾಗಿ ಕಾಣುವುದು. ಮೊದಲು ಸೂರ್ಯ ದೊಡ್ಡ ಚಂಡಿನಂತೆಯೂ ಇರಲಿಲ್ಲ, ತನ್ನ ಪ್ರಯಾಣದಲ್ಲಿ ಕಂಡ ಹಲವು ಸೂರ್ಯರಂತೆಯೂ ಇಲ್ಲ. ಆದರೂ ನಮ್ಮ ಪ್ರಯಾಣಿಕ ಯಾವಾಗಲೂ ಸೂರ್ಯನನ್ನು ಕಂಡದ್ದು ಮತ್ತಾವುದನ್ನೂ ಅಲ್ಲ ಎಂಬುದು ಸತ್ಯವಲ್ಲವೆ? ಇದರಂತೆಯೇ ಭಿನ್ನ ಭಿನ್ನ ಪಂಗಡಗಳೂ ಕೂಡ ಸತ್ಯ. ಕೆಲವು ನಿಜವಾದ ಸೂರ್ಯನಿಗೆ ಸಮೀಪದಲ್ಲಿವೆ,

ಮತ್ತೆ ಕೆಲವು ಬಹಳ ದೂರದಲ್ಲಿವೆ, ಆ ನಮ್ಮ ಸೂರ್ಯನೇ "ಏಕಮೇವಾ ದ್ವಿತೀಯ."

ನಿಜವಾದ ನಿರಪೇಕ್ಷ ಬ್ರಹ್ಮನನ್ನು ಬೋಧಿಸುವುದು ವೇದ ಮಾತ್ರ. ಇತರ ಭಗವಂತನ ಭಾವನೆಗಳೆಲ್ಲ ಅಂಶಮಾತ್ರ, ಮಿತಿಯಿಂದ ಕೂಡಿದವು. "ಸರ್ವಲೋಕ ಹಿತೈಷಿಣಿ"ಯಾದ ಶ್ರುತಿ ಎಲ್ಲರನ್ನೂ ಮಧುರವಾಗಿ ತನ್ನ ಕೈಗಳಿಂದ ಹಿಡಿದುಕೊಂಡು, ಪರಮಗುರಿಯನ್ನು ಸೇರುವವರೆಗೆ ಮೆಟ್ಟಲು ಮೆಟ್ಟಲಾಗಿ ಒಯ್ಯುವುದು. ಇತರ ಧರ್ಮಗಳೆಲ್ಲ ವಿಕಾಸವಾಗದ, ಘನೀಭೂತವಾದ ಇದರ ಒಂದು ಅವಸ್ಥೆಗೆ ಅನ್ವಯಿಸುವುದರಿಂದ ಹೆಸರಿಲ್ಲದ ಮೇರೆ ಇಲ್ಲದ ಸನಾತನ ವೈದಿಕ ಧರ್ಮದಲ್ಲಿ ಸಂಲಗ್ನವಾಗಿವೆ.

ನೂರಾರು ಜನ್ಮಗಳೆತ್ತಿ ಬರಬಹುದು, ಹಲವುಕಾಲ ನಿಮ್ಮ ಮನಸ್ಸನ್ನು ಹುಡುಕಾಡಬಹುದು, ಆದರೂ ಅನಂತ ಆಧ್ಯಾತ್ಮಿಕತೆಯ ಗಣಿಯಂತೆ ಇರುವ ಹಿಂದೂಧರ್ಮದಲ್ಲಿ ಇಲ್ಲದ ಯಾವ ಒಂದು ಭವ್ಯ ಭಾವನೆಯೂ ಹೊರಗೆ ಇಲ್ಲ.

ಇನ್ನು ಹಿಂದುಗಳ ವಿಗ್ರಹಾರಾಧನೆಯ ವಿಷಯ—ಮೊದಲು ಅವರು ಮಾಡುತ್ತಿರುವುದನ್ನೆಲ್ಲ ತಿಳಿಯಿರಿ. ಭಕ್ತರು ಎಲ್ಲಿ ನಿಜವಾಗಿ ಪೂಜೆ ಮಾಡುತ್ತಿರುವರು ಎನ್ನುವುದನ್ನು ನೋಡಿ. ಹೊರಗೆ ದೇವಸ್ಥಾನದಲ್ಲೆ, ವಿಗ್ರಹದಲ್ಲೆ ಅಥವಾ ತಮ್ಮ ದೇಹ ದೇವಾಲಯದಲ್ಲೆ. ಮೊದಲು ಅವರು ಏನು ಮಾಡುತ್ತಿರುವರು ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿ. ಇದನ್ನು ಟೀಕಿಸುವವರಲ್ಲಿ ಶೇಕಡ ತೊಂಭತ್ತು ಜನಕ್ಕೆ ಇದರ ಸತ್ಯವೇ ತಿಳಿಯದು. ಅನಂತರ ವೇದಾಂತದ ಬೆಳಕಿನಲ್ಲಿ ಇದು ಚೆನ್ನಾಗಿ ಅರ್ಥವಾಗುವುದು.

ಆದರೂ ಎಲ್ಲರೂ ಈ ಆಚಾರವನ್ನು ಅನುಸರಿಸಬೇಕೆಂಬ ಆಜ್ಞೆಯೇನೂ ಇಲ್ಲ. ಅದರ ಬದಲು ಮನು ಧರ್ಮಸೂತ್ರವನ್ನು ತೆಗೆದುನೋಡಿ. ಪ್ರತಿಯೊಬ್ಬ ವಯಸ್ಸಾದವನೂ ಸನ್ಯಾಸವನ್ನು ತೆಗೆದುಕೊಳ್ಳಬೇಕು ಎನ್ನುವನು. ಒಂದುವೇಳೆ ಹಾಗೆ ತೆಗೆದುಕೊಳ್ಳಲು ಸಾಧ್ಯವಿಲ್ಲದೆ ಇದ್ದರೆ ಈ ಕರ್ಮವನ್ನೆಲ್ಲ ತ್ಯಜಿಸಬೇಕೆಂದು ಇದೆ.

ಎಲ್ಲಾ ಕಡೆಗಳಲ್ಲಿಯೂ ಕರ್ಮಗಳೆಲ್ಲ ಜ್ಞಾನದಲ್ಲಿ ಪರ್ಯವಸಾನವಾಗುವುದು, ಎಂದು ಸಾರಿದೆ.

ಇತರ ದೇಶದ ಒಬ್ಬ ಸಭ್ಯನಿಗಿಂತ ಹೆಚ್ಚಾಗಿ ಭರತಖಂಡದ ರೈತರಿಗೆ ಹೆಚ್ಚು ಧರ್ಮ ಗೊತ್ತಿದೆ. ನನ್ನ ಸ್ನೇಹಿತನೊಬ್ಬ ನಾನು ಐರೋಪ್ಯ ಧರ್ಮ ಮತ್ತು ತತ್ತ್ವಕ್ಕೆ ಸಂಬಂಧಪಟ್ಟ ಪದಗಳನ್ನು ಉಪಯೋಗಿಸಿದುದಕ್ಕಾಗಿ ನನ್ನಲ್ಲಿ ತಪ್ಪು ಕಂಡುಹಿಡಿದನು. ಸಂಸ್ಕೃತ ಶಬ್ದಗಳನ್ನು ಉಪಯೋಗಿಸುವುದಕ್ಕೆ ನನಗೇನೊ ಸಂತೋಷವೇ ಆಗುತ್ತಿತ್ತು. ಇದು ನನಗೆ ಬಹಳ ಸುಲಭವೇ ಆಗುತ್ತಿತ್ತು. ಇದೇ ಧಾರ್ಮಿಕ ಭಾವನೆಗಳನ್ನು ವ್ಯಕ್ತಗೊಳಿಸುವುದಕ್ಕೆ ಸರಿಯಾದ ಪದಗಳು. ಆದರೆ ಆ ಸ್ನೇಹಿತ ನಾನು ಪಾಶ್ಚಾತ್ಯರನ್ನು ಉದ್ದೇಶಿಸಿ ಮಾತನಾಡುತ್ತಿರುವೆ ಎಂಬುದನ್ನು ಮರೆತಿದ್ದ. ಅಲ್ಲಿ ಇಂಡಿಯಾದೇಶದಿಂದ ಬಂದ ಪಾದ್ರಿಯೊಬ್ಬ "ಹಿಂದುಗಳಿಗೆ ಸಂಸ್ಕೃತವೇ ಮರೆತು ಹೋಗಿತ್ತು, ಪಾದ್ರಿಗಳೇ ಅದನ್ನು ಹೊಸದಾಗಿ ಹೇಳಿಕೊಟ್ಟರು!" ಎಂದನು. ಆದರೂ ಅಷ್ಟೊಂದು ಜನ ಪಾದ್ರಿಗಳ ತಂಡದಲ್ಲಿ ಒಂದು ಸಂಸ್ಕೃತ ನುಡಿಯನ್ನಾದರೂ ಅರ್ಥಮಾಡಿಕೊಳ್ಳುವಂತಹವರು ಇರಲಿಲ್ಲ. ಆದರೂ ಅವರಲ್ಲಿ ಕೆಲವರು ವೇದ ಮತ್ತು ಹಿಂದುಗಳ ಅನೇಕ ಪವಿತ್ರ ಗ್ರಂಥಗಳನ್ನು ಟೀಕಿಸುವ ಪಾಂಡಿತ್ಯದಿಂದ ಕೂಡಿದ ಲೇಖನಗಳನ್ನು ಓದಿದರು!

ನಾನು ಯಾವ ಧರ್ಮಕ್ಕೂ ವಿರೋಧಿಯಲ್ಲ ಎಂಬುದು ಸತ್ಯ. ಭರತಖಂಡದಲ್ಲಿರುವ ಕ್ರೈಸ್ತಪಾದ್ರಿಗಳನ್ನು ಕಂಡರೆ ನನಗೆ ಆಗುವುದಿಲ್ಲ ಎಂಬುದು ಅಷ್ಟೇ ಅಸತ್ಯ. ಆದರೆ ಅವರು ಅಮೆರಿಕಾದೇಶದಲ್ಲಿ ಹಣ ವಸೂಲಿ ಮಾಡುವ ಕೆಲವು ರೀತಿಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಮಕ್ಕಳ ಶಾಲೆಯ ಪುಸ್ತಕದಲ್ಲಿ ಹಿಂದೂ ತಾಯಿ ತನ್ನ ಮಗುವನ್ನು ಗಂಗಾನದಿಯ ಮೊಸಳೆಗೆ ಬಿಸಾಡುತ್ತಿರುವಂತೆ ಚಿತ್ರಿಸಿರುವರು. ಏಕೆಂದರೆ ಹೆಚ್ಚು ಕರುಣೆ ಹುಟ್ಟುವಂತೆ ಮಾಡುವುದಕ್ಕೆ ಮತ್ತು ದ್ರವ್ಯ ವಸೂಲಿ ಮಾಡುವುದಕ್ಕೆ. ಗಂಡ ತಾನು ಹೆಂಡತಿಯನ್ನು ಬದುಕಿರುವಾಗಲೆ ಚಿತೆಯಮೇಲೆ ಇಟ್ಟು ಪಿಶಾಚಿಯಾಗಿ ತನ್ನ ವೈರಿಗಳನ್ನು ಕಾಡಲಿ ಅವಳು ಎಂದು ಚಿತೆಗೆ ಬೆಂಕಿ ಹಚ್ಚುತ್ತಿರುವ ಚಿತ್ರದ ಅರ್ಥ

ವೇನು? ಸಾವಿರಾರು ಜನರ ಮೇಲೆ ಅವರನ್ನು ನುಚ್ಚುನೂರುಮಾಡಿ ಕೊಂಡು ಹೋಗುತ್ತಿರುವ ತೇರಿನ ಚಿತ್ರದ ಅರ್ಥವೇನು? ಕೆಲವು ದಿನಗಳ ಹಿಂದೆ ಈ ದೇಶದ ಮಕ್ಕಳಿಗೆ ಒಂದು ಪುಸ್ತಕವನ್ನು ಪ್ರಕಟ ಪಡಿಸಿದರು. ಅದರಲ್ಲಿ ಒಬ್ಬ ಕಲ್ಕತ್ತೆಯಲ್ಲಿ ತಾನು ನೋಡಿದುದನ್ನು ಹೇಳುವನು. ಅವನು ಕಲ್ಕತ್ತೆಯಲ್ಲಿ ಮತಾಂಧರ ಮೇಲೆ ರಥ ಹರಿದುಕೊಂಡು ಹೋಗುತ್ತಿರುವದನ್ನು ಕಂಡೆನೆನ್ನುವನು. ಅವರಲ್ಲಿ ಒಬ್ಬ ಉಪನ್ಯಾಸ ಮಾಡುವುದನ್ನು ನಾನು ಕೇಳಿದೆ. ಅವನು ಇಂಡಿಯಾ ದೇಶದ ಪ್ರತಿಯೊಂದು ಹಳ್ಳಿಯಲ್ಲಿ ಇರುವ ಕೊಳ ಮಕ್ಕಳ ಮೂಳೆ ಯಿಂದ ತುಂಬಿಹೋಗಿದೆ ಎನ್ನುವನು!

ಕ್ರೈಸ್ತನ ಅನುಯಾಯಿಗಳಿಗೆ ಹಿಂದುಗಳು ಮಾಡಿರುವ ಅನ್ಯಾಯವೇನು? ಪ್ರತಿಯೊಂದು ಕ್ರೈಸ್ತಮಗುವಿಗೂ ಹಿಂದುಗಳು ನೀಚರು, ಪಾಪಿಗಳು, ಅತಿ ಭಯಂಕರವಾದ ರಾಕ್ಷಸರು ಅವರು ಪ್ರಪಂಚದಲ್ಲಿ ಎಂದು ಬೋಧಿಸುವರು. ಇಲ್ಲಿ ಮಕ್ಕಳಿಗೆ ಭಾನುವಾರ ಮಾಡುವ ಪಾಠದ ಕೆಲವು ಭಾಗವೆ, ಯಾರು ಕ್ರೈಸ್ತರಲ್ಲವೊ ಅವರನ್ನೆಲ್ಲ ದ್ವೇಷಿಸುವಂತೆ ಮಾಡುವುದು. ಅದರಲ್ಲೂ ಹಿಂದುಗಳನ್ನು ಹೆಚ್ಚು ದ್ವೇಷಿಸುವಂತೆ ಮಾಡುವರು. ಏಕೆಂದರೆ ಬಾಲ್ಯದಿಂದಲೇ ಅವರು ಪಾದ್ರಿಗಳಿಗೆ ಕಾಸನ್ನು ಚಂದ ಕೊಡಲಿ ಎಂದು. ಸತ್ಯ ದೃಷ್ಟಿಯಿಂದ ಅಲ್ಲದೇ ಇದ್ದರೆ, ತಮ್ಮ ಮಕ್ಕಳ ನೈತಿಕ ದೃಷ್ಟಿಯಿಂದಲಾದರೂ ಇಂತಹ ವಿಷಯಗಳ ಪ್ರಚಾರವನ್ನು ತಡೆಯಬೇಕು. ಇಂತಹ ಮಕ್ಕಳು ಕ್ರಮೇಣ ಅತಿ ಕ್ರೂರಿಗಳಾದ ನಿರ್ದಾಕ್ಷಿಣ್ಯಪರರಾದ ಸ್ತ್ರೀ ಪುರುಷ ರಾಗುವುದರಲ್ಲಿ ಸಂದೇಹವೇನಿದೆ? ಅನಂತ ನರಕಯಾತನೆಯನ್ನು ಹೆಚ್ಚು ಮನೋಜ್ಞವಾಗಿ ಚಿತ್ರಿಸಿದಷ್ಟೂ, ನರಕ ಜ್ವಾಲೆಯನ್ನು ಹೆಚ್ಚು ಹೇಳಿದಷ್ಟೂ, ಅಲ್ಲಿಯ ಬೋಧಕರು ಅಲ್ಲಿಯ ಆಚಾರಶೀಲರಲ್ಲಿ ಅಷ್ಟು ಉತ್ತಮರು ಎಂದು ಪರಿಗಣಿಸಲ್ಪಟ್ಟಿರುವರು. ನನ್ನ ಸ್ನೇಹಿತನ ಮನೆ ಯಲ್ಲಿ ಕೆಲಸಮಾಡುತ್ತಿದ್ದ ಹುಡುಗಿಯೊಬ್ಬಳು ಇಂತಹ "ಜಾಗ್ರತ ಪ್ರಬೋಧನೆ" ಎಂಬ ಉಪನ್ಯಾಸವನ್ನು ಕೇಳಿದಮೇಲೆ ಅವಳನ್ನು ಹುಚ್ಚರ ಆಸ್ಪತ್ರೆಗೆ ಸೇರಿಸಬೇಕಾಯಿತು! ಈ ನರಕಜ್ವಾಲೆ ಮತ್ತು ಕುದಿಯುತ್ತಿರುವ ಪಾಷಾಣವನ್ನು ಅವಳು ಸಹಿಸಲು ಅಸಾಧ್ಯವಾ

ಯಿತು. ಹಿಂದೂ ಧರ್ಮಕ್ಕೆ ವಿರೋಧವಾಗಿ ಮದ್ರಾಸಿನಲ್ಲಿ ಪ್ರಕಟವಾದ ಪುಸ್ತಕಗಳನ್ನು ನೋಡಿ. ಯಾವನಾದರೊಬ್ಬ ಹಿಂದೂ ಕ್ರೈಸ್ತರ ಮೇಲೆ ಇಂತಹ ಒಂದು ಪಂಕ್ತಿಯನ್ನು ಬರೆದರೆ ಸಾಕು ಪಾದ್ರಿಗಳು ಬೆಂಕಿಯನ್ನೆ ಕಾರುವರು, ಸೇಡನ್ನು ತೀರಿಸಿಕೊಳ್ಳಬೇಕು ಎನ್ನುವರು.

ನನ್ನ ದೇಶಬಾಂಧವರೆ ನಾನು ಈ ದೇಶದಲ್ಲಿ (ಅಮೆರಿಕ) ಒಂದು ವರುಷಕ್ಕಿಂತ ಹೆಚ್ಚು ಇರುವೆನು. ನಾನು ಅವರ ಸಮಾಜವನ್ನು ಆಮೂಲಾಗ್ರವಾಗಿ ಪರೀಕ್ಷಿಸಿರುವೆನು. ನಮ್ಮನ್ನು ಅವರೊಂದಿಗೆ ಹೋಲಿಸಿ ನೋಡಿದ ಮೇಲೆ ಮಿಷನರಿಗಳು ಪ್ರಪಂಚಕ್ಕೆ ಸಾರುವ ಸೈತಾನರೂ ನಾವಲ್ಲ, ಅಥವಾ ಅವರು ದೇವತೆಗಳೆಂಬುದೂ ಸರಿಯಲ್ಲ ಎಂಬುದನ್ನು ನಿಮಗೆ ಹೇಳುತ್ತೇನೆ. ಪಾದ್ರಿಗಳು ಎಷ್ಟು ಅಧರ್ಮ, ಶಿಶುಹತ್ಯೆ, ಹಿಂದೂ ಮದುವೆಯಲ್ಲಿರುವ ನ್ಯೂನಾತಿರೇಕಗಳನ್ನು ಕಡಿಮೆ ಹೇಳಿದರೆ ಅಷ್ಟು ಅವರಿಗೇ ಮೇಲು. ಕೆಲವು ದೇಶದಲ್ಲಿ ಈಗಿರುವ ಸ್ಥಿತಿಯೊಂದಿಗೆ ಹೋಲಿಸಿ ನೋಡಿದರೆ ಪಾದ್ರಿಗಳ ಹಿಂದೂ ಸಮಾಜದ ಕಾಲ್ಪನಿಕ ಚಿತ್ರಗಳೂ ಕೂಡ ಭಯಾನಕವೆನಿಸುವುದಿಲ್ಲ. ಅಂತಹ ದೇಶಗಳಿರಬಹುದು. ಆದರೆ ಜೀವನದಲ್ಲಿ ನನ್ನ ಉದ್ದೇಶ ಕೇವಲ ತಪ್ಪು ಕಂಡು ಹಿಡಿಯುವ ಚಾಕರನಾಗುವುದಲ್ಲ. ಹಿಂದೂಸಮಾಜ ಪರಿಪೂರ್ಣ ಸ್ಥಿತಿಗೆ ಬಂದಿದೆ ಎಂದು ನಾನು ಹೇಳಲಾರೆ. ಅಲ್ಲಿರುವ ನ್ಯೂನಾತಿರೇಕಗಳು, ಹಲವು ಶತಮಾನಗಳ ದೌರ್ಭಾಗ್ಯಕ್ಕೆ ಈಡಾಗಿ ಅದರಿಂದ ಪ್ರಾಪ್ತವಾದ ಹಲವು ಅಯೋಗ್ಯ ವಸ್ತುಗಳು, ನನಗಿಂತ ಹೆಚ್ಚಾಗಿ ಇತರರಿಗೆ ಗೊತ್ತಿಲ್ಲ. ಪರದೇಶದ ಸ್ನೇಹಿತರೆ, ನೀವು ನಿಜವಾದ ಕರುಣೆಯಿಂದ ಪ್ರೇರಿತರಾಗಿ ಅವರಿಗೆ ಸಹಾಯಮಾಡಬೇಕು, ಅವರನ್ನು ನಾಶಮಾಡುವುದಿಲ್ಲ ಎಂದು ಬಂದರೆ ದೇವರು ನಿಮ್ಮನ್ನು ಆಶೀರ್ವದಿಸಲಿ. ಆದರೆ ಅಧೋಗತಿಗೆ ಇಳಿದ ಜನಾಂಗದ ಮೇಲೆ ನೀವು ಅವ್ಯಾಹತವಾಗಿ ನಿಂದೆಯ ಸುರಿಮಳೆಯನ್ನು ಕರೆದರೆ ನೀವು ಇತರರಿಗಿಂತ ನೀತಿಯಲ್ಲಿ ಪರಮೋತ್ಕೃಷ್ಟರು ಎಂದು ಸಾರಿದಂತೆ ಆಗದು. ಆದರೆ ನಾನು ಸಾಧಾರಣವಾಗಿ ಹೇಳುತ್ತೇನೆ ಕೇಳಿ, ಯಾವುದಾದರೂ ನ್ಯಾಯದೃಷ್ಟಿಯಿಂದ ತುಲನೆಮಾಡಿನೋಡಿದರೆ ಹಿಂದುಗಳು ನೈತಿಕ

ದೃಷ್ಟಿಯಲ್ಲಿ ಪ್ರಪಂಚದಲ್ಲಿ ಇತರರಿಗಿಂತ ಎಷ್ಟೋ ಮೇಲಿರುವರು ಎಂದು ವ್ಯಕ್ತವಾಗುವುದು.

ಭರತಖಂಡದಲ್ಲಿ ಧರ್ಮಕ್ಕೆ ಎಂದಿಗೂ ಸಂಕೋಲೆಯನ್ನು ತೊಡಿಸಿರಲಿಲ್ಲ. ಯಾರಿಗೂ ನೀನು ಇಂತಹ ಇಷ್ಟದೇವತೆಯನ್ನು ತೆಗೆದುಕೊಳ್ಳಬೇಕು, ಇಂತಹ ಜಾತಿಗೇ ಸೇರಬೇಕು, ಇಂತಹ ಗುರುವನ್ನೇ ಆರಿಸಿಕೊಳ್ಳಬೇಕು, ಎಂದು ಒತ್ತಾಯ ಮಾಡಿರಲಿಲ್ಲ. ಆದ ಕಾರಣವೇ • ಪೃಥ್ವಿಯ ಬೇರೆ ಭಾಗದಲ್ಲಿ ಎಲ್ಲಿಯೂ ಅಷ್ಟೊಂದು ಚೆನ್ನಾಗಿ ಅಭಿವೃದ್ಧಿಯಾಗದಂತೆ ಧರ್ಮ ಬೆಳೆಯಿತು. ಧರ್ಮದಲ್ಲಿ ಅನಂತ ವೈವಿಧ್ಯತೆ ಇರಬೇಕಾದರೆ ಒಂದು ಸ್ಥಾಯಿಯ ಕೇಂದ್ರ ಆವಶ್ಯಕವಾಯಿತು. ಭರತಖಂಡದಲ್ಲಿ ಸಮಾಜವನ್ನು ಅಂತಹ ಕೇಂದ್ರವನ್ನಾಗಿ ಮಾಡಿಕೊಂಡರು. ಆವಕಾರಣವೇ ಸಮಾಜ ಸಂಕುಚಿತವಾಯಿತು. ಬೆಳವಣಿಗೆಗೆ ಅವಕಾಶವೇ ಇಲ್ಲದಂತೆ ಆಯಿತು. ಬೆಳವಣಿಗೆಗೆ ಸ್ವಾತಂತ್ರ್ಯವೇ ಪ್ರಥಮ ಆವಶ್ಯಕತೆ.

ಇದಕ್ಕೆ ವಿರೋಧವಾಗಿ ಪಾಶ್ಚಾತ್ಯರಲ್ಲಿ ಬದಲಾಯಿಸುವುದು ಸಮಾಜವಾಯಿತು, ಸ್ಥಾಯಿಯಾಗಿರುವುದು ಧರ್ಮವಾಯಿತು. ಐರೋಪ್ಯ ಧರ್ಮಗಳಲ್ಲಿ ಒಪ್ಪಿಕೊಳ್ಳುವುದೇ ಮೂಲಮಂತ್ರವಾಯಿತು. ಈಗಲೂ ಕೂಡ ಅದು ಹಾಗೆಯೇ ಇರುವುದು. ಧರ್ಮದಲ್ಲಿ ಇಟ್ಟ ಪ್ರತಿಯೊಂದು ಹೆಜ್ಜೆಯೂ ರಕ್ತದ ಕೋಡಿಯ ಮೂಲಕ ಹೋಗಬೇಕಾಯಿತು. ಇದರ ಪರಿಣಾಮವಾಗಿಯೆ ಒಂದು ಅದ್ಭುತ ಸಮಾಜ ವ್ಯೂಹ ರಚಿತವಾಯಿತು. ಆದರೆ ಧರ್ಮ ಅತಿ ಸ್ಥೂಲವಾದ ಜಡ ಭಾವನೆಗಳನ್ನು ಮೀರಿ ಹೋಗಲಿಲ್ಲ.

ಈಗ ಪಾಶ್ಚಾತ್ಯರು ಜಾಗ್ರತರಾಗಿ ತಮ್ಮ ಕೊರತೆಯನ್ನು ಮನಗಾಣುತ್ತಿರುವರು. ಮುಂದುವರಿದ ಪಾಶ್ಚಾತ್ಯ ಶಾಸ್ತ್ರಾನುಯಾಯಿಗಳ ಪಲ್ಲವಿ ಈಗ "ಮಾನವನ ನಿಜವಾದ ಆತ್ಮ, ಆಧ್ಯಾತ್ಮಿಕತೆ" ಆಗಿದೆ. ಸಂಸ್ಕೃತ ತತ್ತ್ವವನ್ನು ಅಧ್ಯಯನ ಮಾಡುತ್ತಿರುವವರಿಗೆ ಈ ಬದಲಾವಣೆಗೆ ಮೂಲ ಎಲ್ಲಿಯದು ಎಂಬುದು ಗೊತ್ತಿದೆ. ಎಲ್ಲಿಯವರೆಗೆ ಅದೊಂದು ಹೊಸ ಚೇತನವನ್ನು ತರುವುದೋ ಅಲ್ಲಿಯವರೆಗೆ ಆ ಬೆಳಕು ಎಲ್ಲಿಂದ ಬಂದರೂ ಚಿಂತೆಯಿಲ್ಲ.

ಭರತಖಂಡದಲ್ಲಿ ಕೂಡ ಹೊಸ ಸನ್ನಿವೇಶಗಳು ಸಮಾಜವನ್ನು ಈಗಿನ ವಾತಾವರಣಕ್ಕೆ ಹೋಗುವಂತೆ ಬಲಾತ್ಕರಿಸುತ್ತಿವೆ. ಕಳೆದ ಮುಕ್ಕಾಲು ಶತಮಾನದಿಂದ ಭರತಖಂಡ ಸಮಾಜಸುಧಾರಕರು ಮತ್ತು ಸುಧಾರಣ ಸಂಸ್ಥೆಗಳಿಂದ ತುಂಬಿ ತುಳುಕಾಡುತ್ತಿದೆ. ಅಯ್ಯೋ, ಆದರೆ ಅವೆಲ್ಲ ನಿರರ್ಥಕವಾಗಿವೆ. ಅವರಿಗೆ ಇದರ ರಹಸ್ಯ ಗೊತ್ತಿರಲಿಲ್ಲ. ಕಲಿಯಬೇಕಾದ ದೊಡ್ಡ ನೀತಿಯನ್ನು ಅವರು ಕಲಿಯಲಿಲ್ಲ. ಸುಧಾರಣೆಯ ಕಾತುರದಲ್ಲಿ ಸಮಾಜದ ನ್ಯೂನಾತಿರೇಕಗಳಿಗೆಲ್ಲ ಧರ್ಮವನ್ನು ದೂರಿದರು. ಒಂದು ಕಥೆಯಲ್ಲಿ ಸೊಳ್ಳೆಯೊಂದು ಮನುಷ್ಯನನ್ನು ಕಚ್ಚುತ್ತಿತ್ತು. ಆ ಸೊಳ್ಳೆಯನ್ನು ಕೊಲ್ಲಲು ಕೊಟ್ಟ ಪೆಟ್ಟು ಮನುಷ್ಯನನ್ನೂ ಜೊತೆಗೆ ಕೊಲ್ಲುವಂತೆ ಆಯಿತು. ಆದರೆ ಅದೃಷ್ಟವಶಾತ್ ಸಮಾಜಸುಧಾರಕರು ಇಲ್ಲಿ ಅಭೇದ್ಯವಾದ ವಜ್ರಸಮನಾದ ಕೋಟೆಗೆ ಡಿಕ್ಕಿಹೊಡೆದರು. ಇದರ ಪರಿಣಾಮವಾಗಿ ಅವರು ನುಚ್ಚುನೂರಾಗಿ ಹೋದರು. ತಮ್ಮ ತಪ್ಪು ತಿಳುವಳಿಕೆಯಿಂದ ಹೋರಾಡಿ ಸೋತ ಆ ನಿಸ್ವಾರ್ಥಬುದ್ಧಿಯ ಉದಾರಹೃದಯರು ಸುವಿಖ್ಯಾತರು. ಸುಧಾರಣೆ ಎಂಬ ಪ್ರಚಂಡ ವಿದ್ಯುತ್ ಚಾವಟಿಯ ಪೆಟ್ಟುಗಳು ನಿದ್ರಿಸುತ್ತಿರುವ ಭರತಖಂಡವನ್ನು ಎಚ್ಚರಿಸುವುದಕ್ಕೆ ಆವಶ್ಯಕವಾಗಿತ್ತು. ಆದರೆ ಅವೆಲ್ಲ ಧ್ವಂಸಕಾರಕ, ಸೃಷ್ಟಿಕಾರಕವಾಗಿರಲಿಲ್ಲ, ಆದಕಾರಣವೆ ಅವೆಲ್ಲ ನಶ್ವರವಾಗಿ ನಿರ್ನಾಮವಾಗಿಹೋದವು.

ಅವರನ್ನು ಆಶೀರ್ವದಿಸುವ. ಅವರ ಅನುಭವದಿಂದ ನಾವು ಬುದ್ಧಿಯನ್ನು ಕಲಿಯುವ. ಎಲ್ಲಾ ಬೆಳವಣಿಗೆ ಒಳಗಿನಿಂದ ಪ್ರಾರಂಭವಾಗಬೇಕು, ಎಲ್ಲಾ ವಿಕಾಸವೂ ಸುಪ್ತವಾಗಿರುವ ಅದರ ಹಿಂದಿನ ವಸ್ತುವಿನ ಬೆಳವಣಿಗೆ ಎಂಬುದನ್ನು ಅವರು ಇನ್ನೂ ಅರಿತಿರಲಿಲ್ಲ. ಬೀಜ ತನ್ನ ಸುತ್ತಲೂ ಇರುವ ವಸ್ತುವನ್ನು ಹೀರಿಕೊಂಡು ತನ್ನ ಸ್ವಭಾವಕ್ಕೆ ಅನುಗುಣವಾಗಿ ಮರವಾಗುವುದು, ಎಂಬುದನ್ನು ಅವರು ಅರಿಯರು. ಹಿಂದೂ ಜನಾಂಗವೆಲ್ಲ ನಿರ್ನಾಮವಾಗಿ ಬೇರೊಂದು ಜನಾಂಗ ಈ ದೇಶವನ್ನು ಆಕ್ರಮಿಸಿದಾಗ ಮಾತ್ರ ಇದು ಸಾಧ್ಯ. ಪೌರಾತ್ಯವಾಗಲಿ, ಪಾಶ್ಚಾತ್ಯವಾಗಲಿ ಭರತಖಂಡ ತಾನು ಬದುಕಿರುವವರೆಗೆ ಐರೋಪ್ಯರನ್ನು ಅನುಕರಿಸಲಾರದು.

ಭರತಖಂಡ ನಶಿಸುವುದೆ? ಭವ್ಯವಾಗಿರುವುದಕ್ಕೆಲ್ಲ, ನೀತಿಗೆಲ್ಲ, ಆಧ್ಯಾತ್ಮಕ್ಕೆಲ್ಲ ತೌರೂರಾದ ಭರತಖಂಡ ನಶಿಸುವುದೆ? ಪುರಾತನ ಮಾತೆಯಾದ ಈ ಭರತಖಂಡ, ಸಾಧುಸಂತರ ಪಾದಧೂಳಿಯಿಂದ ಪವಿತ್ರವಾದ ಭರತಖಂಡ, ಈಗಲೂಕೂಡ ಭಗವತ್ ಸ್ವರೂಪರಾದ ಮಹಾಮಹಿಮರು ಜೀವಿಸುತ್ತಿರುವ ಭರತಖಂಡ ನಶಿಸುವುದೆ? ಸಹೋದರನೆ, ನಾನು ಅಥೆನ್ಸ್ ನಗರದ ಜ್ಞಾನಿಯ ಜ್ಯೋತಿಯನ್ನು ಎರವಲಾಗಿ ತೆಗೆದುಕೊಂಡು ಈ ವಿಶಾಲ ಪ್ರಪಂಚದ ಗ್ರಾಮನಗರಿಗಳನ್ನು ಬಯಲು ಕಾನನಗಳನ್ನು ಹುಡುಕಾಡಲು ನಿನ್ನೊಡನೆ ಬರುವೆನು. ಸಾಧ್ಯವಿದ್ದರೆ ಇತರ ದೇಶಗಳಲ್ಲಿ ಇಂತಹ ವ್ಯಕ್ತಿಗಳನ್ನು ತೋರಿಸಿ. ಹಣ್ಣಿಂದ ಮರದ ಯೋಗ್ಯತೆ ಗೊತ್ತಾಗುವುದೆಂದು ಮಾವಿನ ಮರದ ಕೆಳಗೆ ಹೋಗಿ, ಇನ್ನೂ ಮಾಗದ, ಹುಳು ಹೊಡೆದ, ಕೆಳಗೆ ಬಿದ್ದ ಕಾಯಿಗಳನ್ನು ರಾಶಿ ಹಾಕಿ, ಅವುಗಳಲ್ಲಿ ಪ್ರತಿಯೊಂದರ ಮೇಲೂ, ಪ್ರೌಢ ಗ್ರಂಥಗಳನ್ನು ಬರೆಯಬಹುದು. ಆದರೂ ನೀವು ಒಂದು ಮಾವಿನ ಹಣ್ಣನ್ನೂ ವಿವರಿಸಿದಂತೆ ಆಗಲಿಲ್ಲ. ಚೆನ್ನಾಗಿ ಬಲಿತ ರುಚಿಕರವಾದ, ರಸಭರಿತವಾದ, ಒಂದು ಹಣ್ಣನ್ನು ಮರದಿಂದ ಕಿತ್ತರೆ ಆಗ ಮಾವಿನ ಹಣ್ಣಿನ ಸ್ವಭಾವವೆಲ್ಲ ಗೊತ್ತಾಗುವುದು.

ಇದರಂತೆಯೇ ಇಂತಹ ದೇವಮಾನವರು ಹಿಂದೂಧರ್ಮವೆಂದರೆ ಏನೆಂಬುದನ್ನು ತೋರುವರು. ಅವರು ಜನಾಂಗದ ತರುವಿನ ಶೀಲ ಶಕ್ತಿ ಮತ್ತು ಅದರ ಸಾಧ್ಯತೆಗಳನ್ನು ತೋರುವರು. ಆ ತರು ತನ್ನ ಸಂಸ್ಕೃತಿಯನ್ನು ಶತಮಾನಗಳ ಪರಿಮಿತಿಯಲ್ಲಿ ಅಳೆಯುವುದು. ಅದು ಸಹಸ್ರಾರು ವರುಷಗಳ ಚಂಡಮಾರುತವನ್ನು ಎದುರಿಸಿ ನಿಂತಿರುವುದು. ಈಗಲೂ ಕೂಡ ಚಿರಂತನ ಯೌವನದಂತೆ ಸ್ವಲ್ಪವೂ ಅಚ್ಚಳಿಯದಂತೆ ನಿಂತಿರುವುದು.

ಭರತಖಂಡ ನಾಶವಾಗುವುದೆ? ಆಗ ಪ್ರಪಂಚದಿಂದ ಆಧ್ಯಾತ್ಮಿಕತೆಯೆಲ್ಲ ಮಾಯವಾಗುವುದು; ನೈತಿಕೋನ್ನತಿಯೆಲ್ಲ ನಿರ್ನಾಮವಾಗುವುದು. ಧಾರ್ಮಿಕಭಾವನೆಗಳಿಗೆ ತೋರುವ ಹೃತ್ಪೂರ್ವಕ ಸಹಾನುಭೂತಿ ಮಾಯವಾಗುವುದು. ಎಲ್ಲಾ ಭವ್ಯ ಉದ್ದೇಶಗಳೂ ಮಾಯವಾಗುವುದು. ಅದರ ಸ್ಥಳದಲ್ಲಿ ಕಾಮ ಮತ್ತು ಭೋಗವೆಂಬ

ಸ್ತ್ರೀಪುರುಷ ದೇವರು ಆಳುವರು. ಹಣವೇ ಪುರೋಹಿತನಲ್ಲಿ, ಮೋಸ ಬಲಾತ್ಕಾರ ಸ್ಪರ್ಧೆಯೇ ಆಚಾರಗಳಲ್ಲಿ; ಜೀವಾತ್ಮನೇ ಯಜ್ಞಪಶುವಲ್ಲಿ. ಇಂತಹ ಪ್ರಸಂಗ ಎಂದಿಗೂ ಬರಲಾರದು. ಕೆಲಸ ಮಾಡುವ ಶಕ್ತಿಗಿಂತ ಸಹನಶಕ್ತಿ ಹೆಚ್ಚಿನದು. ಕೋಟಿಪಾಲು ಹೆಚ್ಚಿನದು. ದ್ವೇಷಕ್ಕಿಂತ ಪ್ರೀತಿಯ ಶಕ್ತಿ ಅದ್ಭುತ ಪರಿಣಾಮಕಾರಿ. ಹಿಂದೂಧರ್ಮದ ಆಧುನಿಕ ಜಾಗ್ರತಿಯನ್ನು ಇದು ಕೇವಲ ದೇಶಭಕ್ತಿಯ ಆವಿರ್ಭಾವನೆ ಎಂದು ಪರಿಗಣಿಸುವವರು ಮೂಢರು.

ಮೊದಲು ಈ ವಿಚಿತ್ರ ನಡವಳಿಕೆಯನ್ನು ಗಮನಿಸೋಣ.

ಆಧುನಿಕ ವೈಜ್ಞಾನಿಕ ಆವಿಷ್ಕಾರಗಳ ಆಘಾತಕ್ಕೆ ಪಾಶ್ಚಾತ್ಯ ಧರ್ಮದ ಮೂಢ ನಂಬಿಕೆಯ ದುರ್ಗಗಳು ಚೂರು ಚೂರಾಗುತ್ತಿರುವುದು ಒಂದು ವಿಚಿತ್ರವಲ್ಲವೆ? ಆಧುನಿಕ ವೈಜ್ಞಾನಿಕ ವಜ್ರಾಘಾತಕ್ಕೆ ಜನರ ಶ್ರದ್ಧೆ ನಂಬಿಕೆ ಮತ್ತು ಚರ್ಚಿಗೆ ಹೋಗುವ ಜನರ ಬಹುಮತದ ಓಟಿನ ಆಧಾರದ ಮೇಲೆ ನಿಂತ ಧರ್ಮ ಕುಸಿದು ಬೀಳುತ್ತಿರುವುದು. ಮೇಲೆ ಮೇಲೆ ನುಗ್ಗುತ್ತಿರುವ ಆಧುನಿಕ ವಿಚಾರ ವಾಹಿನಿಯನ್ನು ಎದುರಿಸುವುದು ಪಾಶ್ಚಾತ್ಯ ಶಾಸ್ತ್ರ ಜಿಜ್ಞಾಸುಗಳಿಗೆ ಸಾಧ್ಯವಾಗದೆ ಇದೆ. ಆಧುನಿಕ ಭಾವನೆಯ ಭಾರಕ್ಕೆ ಪಾಶ್ಚಾತ್ಯ ಶಾಸ್ತ್ರಗಳು ಮೇರೆ ಮೀರಿ ವಿಸ್ತಾರವಾಗುತ್ತಿರುವಾಗ, ಅವುಗಳಲ್ಲಿ ಎಷ್ಟೋ ಆಗಲೆ ಮುರಿದು ಹೋಗಿವೆ. ಇವೆಲ್ಲ ಈಗ ಪ್ರಾಚೀನವಸ್ತುಸಂಗ್ರಹಾಲಯದಲ್ಲಿವೆ. ಪಾಶ್ಚಾತ್ಯ ವಿಚಾರಪತಿಗಳೆಲ್ಲ ತುಂಡರಿಸಿ ಸ್ಥಿಮಿತವಿಲ್ಲದ ಸಾಗರದ ಮೇಲೆ ದುಸ ಬಂದಂತೆ ಅಲೆಯುತ್ತಿರುವರು. ವೇದಗಳೆಂಬ ಜ್ಞಾನ ಚಿಲುಮೆಯಲ್ಲಿ ಜೀವದಾನ ಮಾಡಬಲ್ಲ ಅಮೃತವನ್ನು ಹೀರಿದ ಹಿಂದೂ ಮತ್ತು ಬೌದ್ಧ ಧರ್ಮಗಳು ಮಾತ್ರ ಈಗ ಚೇತರಿಸಿಕೊಳ್ಳುತ್ತಿವೆ.

ಚಂಚಲಚಿತ್ತರಾದ ಪಾಶ್ಚಾತ್ಯ ನಾಸ್ತಿಕರು ಅಥವಾ ಅನುಮಾನವಾದಿಗಳು ಗೀತಾ ಅಥವಾ ಧರ್ಮಪದದಲ್ಲಿ ಮಾತ್ರ ತಮ್ಮ ಚಿತ್ತಕ್ಕೆ ಸ್ವಾಸ್ಥ್ಯವನ್ನು ಕಂಡುಕೊಳ್ಳಬಲ್ಲರು.

ಈಗ ಸ್ಥಿತಿ ಬದಲಾಯಿಸಿದೆ. ಯಾವ ಹಿಂದು ನಿರಾಶಾ ಕಂಬನಿಯ ಮೂಲಕ ನೋಡಿದಾಗ ತನ್ನ ಮನೆಯನ್ನು ಸ್ನೇಹಿತರಲ್ಲದವರು

ಸುಡುವುದಕ್ಕೆ ಬೆಂಕಿ ಹಚ್ಚುವುದನ್ನು ನೋಡಿದನೊ ಅವನು, ಈಗ, ಆಧುನಿಕ ವಿಚಾರದ ಜ್ಯೋತಿ, ಹೊಗೆಯನ್ನೆಲ್ಲ ಆಚೆಗೆ ಓಡಿಸಿದ ಮೇಲೆ, ತನ್ನ ಮನೆ ಮಾತ್ರ ಭದ್ರವಾಗಿ ಇರುವುದನ್ನು ನೋಡುತ್ತಿರುವನು. ಇತರ ಮನೆಗಳೆಲ್ಲ ನಿರ್ನಾಮವಾಗಿವೆ, ಇಲ್ಲವೆ ಅವರ ಮನೆಗಳನ್ನು ಹಿಂದೂಗಳ ಮನೆಯ ರೀತಿಯಲ್ಲಿ ಕಟ್ಟುತ್ತಿರುವರು. ಹಿಂದೂ ಕಂಬನಿಯನ್ನು ಒರಸಿಕೊಂಡಿರುವನು. ಬೇರನ್ನು ನಿರ್ಮೂಲ ಮಾಡಬೇಕೆಂದು ಉಪಯೋಗಿಸಿದ ಕೊಡಲಿಯೇ ಚಿಕಿತ್ಸಕನ ಕೈಯ್ಯಲ್ಲಿರುವ ಶಸ್ತ್ರವಾಗಿದೆ.

ತನ್ನ ಧರ್ಮವನ್ನು ಉಳಿಸಿಕೊಳ್ಳಬೇಕಾದರೆ ಅವನೀಗ ಶಾಸ್ತ್ರ ಪೀಡನೆಯ ಗೋಜಿಗೆ ಹೊಗಬೇಕಾಗಿಲ್ಲ, ಅಥವಾ ಮತ್ತಾವ ಅಯುಕ್ತವಾದ ವಿಷಯಕ್ಕೂ ಕೈಹಾಕಬೇಕಾಗಿಲ್ಲ ಎಂಬುದನ್ನು ತಿಳಿದಿರುವನು. ತನ್ನ ಶಾಸ್ತ್ರದಲ್ಲಿರುವ ಇಂತಹ ಭಾವನೆಗಳನ್ನೆಲ್ಲ ದುರ್ಬಲವೆಂದು ಕರೆಯಬಹುದು. ಹಿಂದಿನ ಋಷಿಗಳು ದುರ್ಬಲರಿಗೆ ಇವು ಸಹಾಯವಾಗಲಿ ಎಂದು ಅರುಂಧತಿ ನ್ಯಾಯದಂತೆ ಇವನ್ನು ಬಿಟ್ಟುಹೋದರು. ಇಂತಹ ಸರ್ವವ್ಯಾಪಿಯಾದ ಅನುಗಾಲವೂ ವಿಕಾಸವಾಗುತ್ತಿರುವ, ಧರ್ಮವನ್ನು ಕಂಡುಹಿಡಿದ ಪುರಾತನ ಋಷಿಗಳಿಗೆ ಧನ್ಯವಾದಗಳು. ಈ ಧರ್ಮ ಭೌತಿಕಪ್ರಪಂಚದಲ್ಲಿ ಕಂಡುಹಿಡಿದಿರುವುದನ್ನೆಲ್ಲ, ತಿಳಿದುಕೊಳ್ಳಬೇಕಾಗಿರುವುದನ್ನೆಲ್ಲಾ ಎದುರಿಸಬಲ್ಲದು. ಅವನೀಗ ಅದನ್ನು ಹೊಸದಾಗಿ ಮೆಚ್ಚಲು ಪ್ರಾರಂಭಿಸಿರುವನು, ಹೊಸದಾಗಿ ಪುನಃ ಕಂಡುಹಿಡಿಯಲು ಪ್ರಾರಂಭಿಸಿರುವನು. ಕ್ಷುದ್ರಧರ್ಮಗಳಿಗೆ ಕುಠಾರಪ್ರಾಯವಾದ ನವನವಾನ್ವೇಷಣೆಗಳು, ಯಾವುದನ್ನು ಇಂದಿನವರು ತಮ್ಮ ಬುದ್ಧಿವಂತಿಕೆಯಿಂದ ಇಂದ್ರಿಯಗಳ ಮೂಲಕ ಕಂಡುಹಿಡಿದರೊ, ಅವನ್ನೆ ಅವನ ಪೂರ್ವಿಕರು ಹಲವು ಶತಮಾನಗಳ ಹಿಂದೆ ಅತೀಂದ್ರಿಯ ಶಕ್ತಿಗಳ ಮೂಲಕ, ಸ್ಫೂರ್ತಿಯ ಮೂಲಕ, ಕಂಡುಹಿಡಿದರು ಎಂಬುದು ಅರಿವಾಗುತ್ತಿದೆ:

ಆದಕಾರಣ ಹಿಂದು ಈಗ ಏನನ್ನೂ ತ್ಯಜಿಸಬೇಕಾಗಿಲ್ಲ, ಅಥವಾ ಎಲ್ಲಿಯಾದರೂ ಏನನ್ನೂ ಹುಡುಕಾಡಲೂ ಬೇಕಾಗಿಲ್ಲ. ತನಗೆ ವಂಶಾನುಗತವಾಗಿ ಬಂದ ಅನಂತ ಆಸ್ತಿಯಲ್ಲಿ ಕಿಂಚಿತ್ತನ್ನು ಉಪಯೋಗಿಸಿಕೊಂಡರೆ ಸಾಕಾಗಿದೆ. ಅವನು ಅದನ್ನು ಮಾಡಲು ಆರಂಭಿಸಿರುವನು,

ಮುಂದೆ ಹೆಚ್ಚು ಹೆಚ್ಚು ಮಾಡುತ್ತಾ ಹೋಗುವನು. ಈ ಜಾಗೃತಿಗೆ ಇದೇ ನಿಜವಾದ ಕಾರಣವಲ್ಲವೆ ?

ವಂಗದೇಶದ ತರುಣರೆ ನಿಮ್ಮನ್ನು ಪ್ರತ್ಯೇಕವಾಗಿ ಕೇಳಿ ಕೊಳ್ಳುತ್ತೇನೆ. ಸಹೋದರರೆ, ನಮಗೆ ನಾಚಿಕೆಯಾಗುವುದು. ಅನ್ಯ ಜನಾಂಗದವರು ಹಿಂದುಗಳಲ್ಲಿರುವ ಲೋಪದೋಷಗಳನ್ನು ದೂರಿದರೆ ಅದಕ್ಕೆ ನಾವೇ ಕಾರಣರು. ಭರತಖಂಡದಲ್ಲಿ ಅನ್ಯಜನಾಂಗದವರ ಮೇಲೆ ಅನೇಕ ಅಪವಾದಗಳು ಬರುವುದಕ್ಕೆ ನಾವೇ ಮುಖ್ಯ ಕಾರಣರು. ಆದರೆ ದೇವರಿಗೆ ಧನ್ಯವಾದಗಳು. ನಾವೀಗ ಪೂರ್ಣ ಎಚ್ಚೆತ್ತಿರುವೆವು. ಅವನ ಆಶೀರ್ವಾದದಿಂದ ನಾವು ಮಾತ್ರ ಪರಿಶುದ್ಧ ರಾಗುವುದಲ್ಲ, ಸನಾತನ ಧರ್ಮದಲ್ಲಿ ಸಾರಿದ ಆದರ್ಶವನ್ನು ಸೇರಲು ಇಡೀ ಭರತಖಂಡಕ್ಕೆ ಸಹಾಯಮಾಡುವೆವು.

ಮೊದಲು ಪ್ರಕೃತಿ ಗುಲಾಮನ ಹಣೆಯ ಮೇಲೆ ಬರೆಯುವ ಅಸೂಯೆ ಎಂಬ ಬರಹವನ್ನು ತೊಡೆದುಹಾಕುವ. ಯಾರ ಮೇಲೂ ಅಸೂಯೆ ಪಡಬೇಡಿ. ಒಳ್ಳೆಯ ಕೆಲಸ ಮಾಡುವವರಿಗೆಲ್ಲ ನೆರವಾಗಲು ಸಿದ್ಧರಾಗಿರಿ. ತ್ರಿಭುವನಗಳಲ್ಲಿರುವ ಪ್ರತಿಯೊಬ್ಬರಿಗೂ ಶುಭ ಆಲೋಚನೆಗಳನ್ನು ಕಳುಹಿಸಿ.

ನಮ್ಮ ಧರ್ಮದ ಏಕಮಾತ್ರ ಸತ್ಯವಾದ, ಹಿಂದೂ ಬೌದ್ಧ ಮತ್ತು ಜೈನ ಧರ್ಮಗಳ ಸಾಮಾನ್ಯ ಆನುವಂಶಿಕ ಆಸ್ತಿಯಾದ, ಮನುಷ್ಯನ ಆತ್ಮದ ಮೇಲೆ, ಅವನ ಆಧ್ಯಾತ್ಮದ ಮೇಲೆ ನಿಲ್ಲುವ. ಆತ್ಮ ಅಮೃತಸ್ವರೂಪ, ಅನಾದಿ, ಸರ್ವವ್ಯಾಪಿ ಸನಾತನವಾದುದು. ಅವನ ಮಹಾತ್ಮ್ಯೆಯನ್ನು ವೇದಗಳು ಕೂಡ ಸಾರಲಾರವು. ಅವನ ಭವ್ಯತೆಯ ಎದುರಿಗೆ ಅನಂತ ಸೂರ್ಯ, ತಾರೆ, ನಿಹಾರಿಕಾ ಮಂಡಲಗಳ ನ್ನೊಳಗೊಂಡ ಬ್ರಹ್ಮಾಂಡವೂ ಒಂದು ಬಿಂದುವಿಗೆ ಸಮ. ಪ್ರತಿಯೊಬ್ಬ ಸ್ತ್ರೀಪುರುಷನೂ, ಮಹತ್ವಪೂರ್ಣ. ದೇವತೆಯಿಂದ ಹಿಡಿದು ನಮ್ಮ ಕಾಲಕೆಳಗೆ ತೆವಳುತ್ತಿರುವ ಕೀಟದವರೆಗೆ ಎಲ್ಲವೂ ವ್ಯಕ್ತವಾದ ಅಥವಾ ಸುಪ್ತವಾದ ಅಂತಹ ಆತ್ಮ. ವ್ಯತ್ಯಾಸ ಭಿನ್ನತೆಯಲ್ಲಿ ಅಲ್ಲ, ಒಂದೇ ವಸ್ತುವಿನ ಆವಿರ್ಭಾವದ ತರತಮದಲ್ಲಿ ಮಾತ್ರ.

ಈ ಆತ್ಮದ ಅನಂತ ಶಕ್ತಿಯನ್ನು ಭೌತಿಕ ಪ್ರಪಂಚದ ಮೇಲೆ ಬೀರಿದರೆ ಹಲವು ಭೌತಿಕ ಆವಿರ್ಭಾವಗಳಾಗುವುವು, ಆಲೋಚನಾ ಪ್ರಪಂಚದ ಮೇಲೆ ಬೀರಿದ್ದರೆ ಬುದ್ಧಿ ತನ್ನ ಪರಾಕಾಷ್ಠತೆಯನ್ನು ಮುಟ್ಟುವುದು, ತನ್ನ ಮೇಲೆಯೆ ಅದನ್ನು ಬೀರಿಕೊಂಡರೆ ಮಾನವನನ್ನು ದೇವನನ್ನಾಗಿ ಮಾಡುವುದು.

ಮೊದಲು ನಾವು ದೇವರಾಗೋಣ. ಅನಂತರ ಇತರರು ದೇವರಾಗಲು ಅವರಿಗೆ ಸಹಾಯ ಮಾಡೋಣ. ಇದು ನಮ್ಮ ಮೂಲ ಮಂತ್ರವಾಗಲಿ. ಮನುಷ್ಯನನ್ನು ಪಾಪಿ ಎಂದು ಕರೆಯದಿರಿ. ಅವನು ದೇವರು ಎಂದು ಸಾರಿ. ಒಂದು ಸೈತಾನನಿದ್ದರೂ ನಾವು ಯಾವಾಗಲೂ ಅಲ್ಲಿ ದೇವರನ್ನು ನೋಡುವುದು ನಮ್ಮ ಕರ್ತವ್ಯ, ಸೈತಾನನನ್ನು ನೋಡುವುದಲ್ಲ.

ಕೋಣೆ ಕತ್ತಲೆಯಾಗಿದ್ದರೆ, ಯಾವಾಗಲೂ ಕತ್ತಲೆ ಕತ್ತಲೆ ಎಂದು ಹೇಳುತ್ತಿದ್ದರೆ ಅದು ಕಡಿಮೆಯಾಗುವುದಿಲ್ಲ. ಆದರೆ ಬೆಳಕನ್ನು ತನ್ನಿ, ಯಾವುದು ನಿಷೇಧಾತ್ಮಕವೊ, ಯಾವುದು ಧ್ವಂಸಕಾರಿಯೊ, ಯಾವುದು ಕೇವಲ ಟೀಕಾತ್ಮಕವೊ ಅವೆಲ್ಲ ಮಾಯವಾಗಿ ಹೋಗುವುದು. ನಿಷೇಧಾತ್ಮಕವಲ್ಲದ, ಇತಿ ಎಂದು ಸಾರುವ, ನಿರ್ಮಾಣಕಾರಿ ಯಾವುದೇ ನಿತ್ಯ. ಅದೇ ಎಂದೆಂದಿಗೂ ಉಳಿಯುವುದು. "ನಾವಿರುವೆವು", "ದೇವರಿರುವನು", "ನಾವು ದೇವರು" (ಶಿವೋಹಂ) ಎಂದು ಮುಂದೆ ಸಾಗುವ. ಜಡವಲ್ಲ ಆತ್ಮ. ನಾಮರೂಪಗಳಿರುವುದೆಲ್ಲ ಇದಿಲ್ಲದಿರುವುದಕ್ಕೆ ದಾಸ. ಶ್ರುತಿ ಸಾರುವ ಸನಾತನ ಸತ್ಯವೇ ಇದು. ಬೆಳಕನ್ನು ತನ್ನಿ, ಕತ್ತಲೆ ತಾನಾಗಿ ಹೋಗುವುದು. ವೇದಾಂತಕೇಸರಿ ಘರ್ಜಿಸಲಿ; ನರಿಗಳು ತಮ್ಮ ಬಿಲಕ್ಕೆ ಓಡಿಹೋಗುವುವು. ಭಾವನೆಗಳನ್ನು ಸುತ್ತ ಚೆಲ್ಲಿ, ಪ್ರಸಾರ ಮಾಡಿ. ಪರಿಣಾಮದ ಪಾಡಿಗೆ ಪರಿಣಾಮವಿರಲಿ. ರಸಾಯನ ದ್ರವ್ಯಗಳನ್ನು ಒಟ್ಟಿಗೆ ಸೇರಿಸುವ. ಸ್ಫಟಿಕ ತನ್ನ ಸ್ವಭಾವಕ್ಕೆ ಅನುಗುಣವಾಗಿ ಆಗುವುದು. ಆತ್ಮಶಕ್ತಿಯನ್ನು ಪ್ರಕಟಗೊಳಿಸಿ. ಭರತಖಂಡದಲ್ಲೆಲ್ಲ ಅದನ್ನು ಬೀರಿ. ಆವಶ್ಯಕವಾಗಿರುವುದೆಲ್ಲ ಸ್ವಭಾವತಃ ತಾನೇ ಅಣಿಯಾಗುವುದು.

ನಿಮ್ಮಲ್ಲಿರುವ ಪವಿತ್ರತೆಯನ್ನು ಪ್ರಕಟಗೊಳಿಸಿ. ಪ್ರತಿಯೊಂದೂ ತಾನಾಗಿ ಅದರ ಸುತ್ತಲೂ ಅಣಿಯಾಗುವುದು. ವೇದದಲ್ಲಿ ಬರುವ ಇಂದ್ರ ಮತ್ತು ವಿರೋಚನರ ದೃಷ್ಟಾಂತವನ್ನು ನೆನಪಿನಲ್ಲಿಡಿ. ಅವರಿಬ್ಬರಿಗೂ ದೈವತ್ವವನ್ನು ಬೋಧಿಸಿದರು. ಆದರೆ ಅಸುರನಾದ ವಿರೋಚನ ದೇಹವೇ ದೇವರೆಂದು ಬಗೆದ. ನೀವು ಇಂದ್ರನ ಮಕ್ಕಳು. ನೀವು ದೇವವಂಶೋತ್ಪನ್ನರು. ಜಡವಸ್ತು ಎಂದಿಗೂ ನಿಮ್ಮ ದೇವರಾಗದು, ದೇಹ ಎಂದಿಗೂ ನಿಮ್ಮ ದೇವರಾಗದು.

ಭರತಖಂಡ ಉದ್ಧಾರವಾಗುವುದು, ದಂಷ್ಟ್ರ ನಖಗಳ ಶಕ್ತಿಯಿಂದಲ್ಲ, ಆತ್ಮಶಕ್ತಿಯಿಂದ. ಐಶ್ವರ್ಯದ ಶಕ್ತಿಯಿಂದಲ್ಲ, ಭಿಕ್ಷಾಪಾತ್ರೆಯ ಶಕ್ತಿಯಿಂದ. ಅದರಧ್ವಜ ವಿನಾಶಹೇತುವಲ್ಲ, ಶಾಂತಿ ಪ್ರೀತಿಯನ್ನು ಸೂಚಿಸುವ ಸನ್ಯಾಸಿಯ ಗೈರಿಕ ವಸನವೆ ಅದರ ಲಾಂಛನ. ನೀನು ಕೈಲಾಗದವನೆಂದು ಹೇಳಬೇಡ. ಆತ್ಮ ಸರ್ವಶಕ್ತಿಮಾನ್. ಶ್ರೀ ರಾಮಕೃಷ್ಣರ ಪವಿತ್ರ ಪದಸ್ಪರ್ಶದಿಂದ ಜಾಗ್ರತರಾದ ಆ ಕೆಲವು ಯುವಕರನ್ನು ನೋಡಿ. ಅವರು ಸಂದೇಶವನ್ನು ಅಸ್ಸಾಂ ದೇಶದಿಂದ ಸಿಂಧೂ ದೇಶದವರೆಗೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಒಯ್ದರು. ಅವರು ಇಪ್ಪತ್ತುಸಹಸ್ರ ಅಡಿಗಳ ಎತ್ತರದಲ್ಲಿ ಹಿಮದ ಮೇಲೆ ಬರೀ ಕಾಲಿನಲ್ಲಿ ಹಿಮಾಲಯುವನ್ನು ದಾಟಿ ಟಿಬೆಟ್ ದೇಶದ ರಹಸ್ಯಗಳನ್ನು ಭೇದಿಸಿರುವರು. ಅವರು ಭಿಕ್ಷೆ ಬೇಡಿರುವರು, ಚಿಂದಿ ಹೊದ್ದಿರುವರು. ಪೋಲೀಸಿನವರು ಅವರನ್ನು ಹಿಂಸಿಸಿರುವರು, ಅವರನ್ನು ಹಿಂಬಾಲಿಸಿ ಸೆರೆಯಲ್ಲಿಟ್ಟಿದ್ದರು. ಕೊನೆಗೆ ಸರ್ಕಾರಕ್ಕೆ ಅವರ ನಿರಪರಾಧ ಗೊತ್ತಾಗಿ ಅವರನ್ನು ಬಿಡುಗಡೆ ಮಾಡಿರುವರು.

ಅವರು ಈಗ ಇಪ್ಪತ್ತು ಮಂದಿ. ಮುಂದೆ ಅವರನ್ನು ಎರಡು ಸಾವಿರ ಮಂದಿಗಳನ್ನಾಗಿ ಮಾಡಿ. ವಂಗದೇಶದ ತರುಣರೆ, ನಿಮ್ಮ ದೇಶಕ್ಕೆ ಇವರು ಬೇಕಾಗಿದೆ. ಪ್ರಪಂಚಕ್ಕೆ ಇವರು ಬೇಕಾಗಿದೆ. ನಿಮ್ಮಲ್ಲಿರುವ ಪವಿತ್ರತೆಯನ್ನು ಜಾಗ್ರತಗೊಳಿಸಿ. ಹಸಿವು ದಾಹಗಳನ್ನು ಶೀತೋಷ್ಣಗಳನ್ನು ಸಹಿಸಲು ಇದು ನೆರವಾಗುವುದು. ಎಲ್ಲಾ ಬಗೆಯ ಸುಖದಿಂದ ಆವೃತವಾದ ಮನೆಯಲ್ಲಿ ಇದ್ದುಕೊಂಡು, ಎಲ್ಲಾ ಬಗೆಯ ಭೋಗಗಳಿಂದ ಆವೃತರಾಗಿ, ಸ್ವಲ್ಪ ಧರ್ಮವನ್ನು ದಾನ

ಮಾಡುವಂತೆ ನಟಿಸುವುದು ಇತರ ದೇಶಗಳಿಗೆ ಯೋಗ್ಯವಾಗಬಲ್ಲದು. ಆದರೆ ಭರತಖಂಡದ ಸ್ವಭಾವವೇ ಬೇರೆ. ಅದು ಮಾಯೆಯೊಡ್ಡಿದ ಜಾಲವನ್ನು ಕಂಡುಹಿಡಿಯುವುದು. ನೀವು ತ್ಯಜಿಸಬೇಕು. ನೀವು ಮಹಾತ್ಮರಾಗಿ. ತ್ಯಾಗವಿಲ್ಲದೆ ಯಾವ ಮಹಾಕಾರ್ಯವೂ ಸಾಧ್ಯವಾಗಲಾರದು. ಪುರುಷನೇ ಪ್ರಪಂಚ ಸೃಷ್ಟಿಗೆ ತನ್ನನ್ನು ತ್ಯಾಗಮಾಡಿಕೊಳ್ಳಬೇಕಾಯಿತು. ನಿಮ್ಮ ಸುಖಭೋಗಗಳನ್ನು ತ್ಯಜಿಸಿ, ನಿಮ್ಮ ಹೆಸರು, ಕೀರ್ತಿ, ಅಂತಸ್ತು, ಇಲ್ಲ ನಿಮ್ಮ ಇಡೀ ಜೀವನವನ್ನೆ ಅರ್ಪಿಸಿ ಮಾನವ ದೇಹದ ಒಂದು ಸರಪಳಿಯಿಂದ ಭವಸಾಗರದ ಮೇಲೆ ಜನ ಪಾರಾಗುವುದಕ್ಕೆ ಒಂದು ಸೇತುವೆಯನ್ನು ನಿರ್ಮಿಸಿ. ಶುಭಶಕ್ತಿಗಳನ್ನೆಲ್ಲ ಒಟ್ಟುಗೂಡಿಸಿ. ಯಾವ ಹೆಸರಿನಲ್ಲಿ ನೀವು ಮುಂದೆ ಹೋಗುತ್ತೀರೋ ಅದನ್ನು ಲೆಕ್ಕಿಸಬೇಡಿ. ನಿಮ್ಮ ಬಣ್ಣ ಹಳದಿಯೆ, ನೀಲಿಯೆ, ಕೆಂಪೆ, ಅದನ್ನು ಲೆಕ್ಕಿಸಬೇಡಿ. ಅದನ್ನೆಲ್ಲ ಮಿಲನಮಾಡಿ ಪ್ರೀತಿಯ ಬಣ್ಣವಾದ ಕೋರೈಸುವ ಶ್ವೇತವರ್ಣವನ್ನು ನಿರ್ಮಿಸಿ. ಕೆಲಸ ಮಾಡುವುದು ಮಾತ್ರ ನಮ್ಮ ಕರ್ತವ್ಯ. ಫಲ ತನ್ನನ್ನು ತಾನು ಅನುಸರಿಸುವುದು. ಯಾವುದಾದರೂ ಸಮಾಜದ ಸಂಸ್ಥೆಗಳು ನೀನು ದೇವರಾಗುವುದಕ್ಕೆ ಅಡ್ಡಿ ಬಂದರೆ ಕ್ರಮೇಣ ಆತ್ಮಶಕ್ತಿಯ ಎದುರಿಗೆ ಅವು ಬಾಗಿ ದೂರ ಸರಿಯುವುವು. ನಾನು ಭವಿಷ್ಯವನ್ನು ನೋಡುವುದಿಲ್ಲ, ನೋಡುವುದಕ್ಕೆ ಇಚ್ಛೆಯೂ ಇಲ್ಲ. ಒಂದು ದೃಶ್ಯ ಮಾತ್ರ ಹಗಲಿನಂತೆ ಸ್ಪಷ್ಟವಾಗಿ ನನ್ನ ಕಣ್ಣ ಮುಂದೆ ಕಾಣುತ್ತಿದೆ. ಅದೇ ಪುರಾತನ ಮಾತೆ ಪುನಃ ಜಾಗ್ರತಳಾಗಿರುವಳು, ತನ್ನ ಸಿಂಹಾಸನದ ಮೇಲೆ ಮಂಡಿಸಿರುವಳು. ಎಂದಿಗಿಂತ ಹೆಚ್ಚು ಶೋಭಾಯಮಾನಳಾಗಿರುವಳು. ಆ ಮಹಾ ತಾಯಿಯನ್ನು ಜಗತ್ತಿಗೆಲ್ಲ ಶಾಂತಿವಾಣಿಯಲ್ಲಿ, ಆಶೀರ್ವಾದ ವಾಣಿಯಲ್ಲಿ ಸಾರಿ.

ಅನವರತವೂ ನಿಮ್ಮ ಪ್ರೀತಿ ಮತ್ತು ಸೇವೆಗಳಲ್ಲಿ ಒಡನಿರುವ,

**ವಿವೇಕಾನಂದ.**

# ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

| | | ರೂ. | ಆ. | ಪಾ. |
|---|---|---|---|---|
| ಶ್ರೀ ರಾಮಕೃಷ್ಣ ವಚನವೇದ ಉತ್ತರಾರ್ಧ | | ೧೦ | ೦ | ೦ |
| ಕೊಲಂಬೊ ಇಂದ ಆಲ್ಮೋರಕೆ | .... | ೫ | ೦ | ೦ |
| ಸಂವಾದ ತರಂಗಿಣಿ | .... | ೫ | ೦ | ೦ |
| ಶ್ರೀ ರಾಮಕೃಷ್ಣ ಉಪದೇಶಾಮೃತ | .... | ೩ | ೮ | ೦ |
| ಸ್ವಾಮಿ ವಿವೇಕಾನಂದ (ಕುವೆಂಪು) | .... | ೩ | ೮ | ೦ |
| ಭಗವಾನ್ ಶ್ರೀ ರಾಮಕೃಷ್ಣ | .... | ೩ | ೦ | ೦ |
| ಪತ್ರಮಾಲೆ | .... | ೩ | ೦ | ೦ |
| ಜ್ಞಾನಯೋಗ | .... | ೩ | ೦ | ೦ |
| ಗುರುವಿನೊಡನೆ ದೇವರಡಿಗೆ | .... | ೩ | ೦ | ೦ |
| ಜೀವ ಈಶ್ವರ ಧರ್ಮ | .... | ೩ | ೦ | ೦ |
| ರಾಜಯೋಗ | .... | ೨ | ೧೦ | ೦ |
| ಶ್ರೀ ಶಾರದಾದೇವಿ ಸಂಭಾಷಣೆ | .... | ೨ | ೮ | ೦ |
| ಗೀತಾಪತ್ರಗಳು | .... | ೨ | ೮ | ೦ |
| ಮಿಂಚುನೋಟಕೆ ಹಿಂದೂಧರ್ಮ | .... | ೨ | ೮ | ೦ |
| ಶ್ರೀ ಶಾರದಾದೇವಿ | .... | ೨ | ೦ | ೦ |
| ಸಾಧಕನ ಕೈದೀವಿಗೆ | .... | ೨ | ೦ | ೦ |
| ಪರಮಾರ್ಥ ಪ್ರಸಂಗ | .... | ೨ | ೦ | ೦ |
| ಹೈಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ) | .... | ೨ | ೦ | ೦ |
| ಕರ್ಮಯೋಗ | .... | ೧ | ೮ | ೦ |
| ಸನಾತನ ಭಾರತ | .... | ೧ | ೮ | ೦ |
| ಬ್ರಹ್ಮಾನಂದ ವಚನ ಸುಧೆ | .... | ೧ | ೪ | ೦ |
| ಶ್ರೀ ರಾಮಕೃಷ್ಣ ಉಪನಿಷತ್ | .... | ೧ | ೪ | ೦ |
| ಪರಿವ್ರಾಜಕ | .... | ೧ | ೪ | ೦ |
| ಪ್ರಾಚ್ಯ ಮತ್ತು ಪಾಶ್ಚಾತ್ಯ | .... | ೧ | ೪ | ೦ |
| ಭಕ್ತಿಯೋಗ | .... | ೧ | ೦ | ೦ |

| | | ರೂ. | ಆ. | ಪಾ. |
|---|---|---|---|---|
| ಭಕ್ತಿ : ಗೌಣೀ ಮತ್ತು ಪರಾ | .... | ೧ | ೦ | ೦ |
| ದಾರಿಯಲ್ಲಿ ದೀಪಧಾರಿ | .... | ೧ | ೦ | ೦ |
| ಶ್ರೀ ಗುರುದೇವರ ವಚನ | .... | ೧ | ೦ | ೦ |
| ಅಮರನಾಥ ಯಾತ್ರೆ | .... | ೧ | ೦ | ೦ |
| ಧನ್ಯತೆಗೆ ದಾರಿ | .... | ೧ | ೦ | ೦ |
| ಅನುಷ್ಠಾನ ವೇದಾಂತ | .... | ೧ | ೦ | ೦ |
| ವೇದಾಂತ | .... | ೦ | ೧೦ | ೦ |
| ವಿದ್ಯಾಭ್ಯಾಸ | .... | ೦ | ೧೦ | ೦ |
| ಹಿಂದೂ ಧರ್ಮಸಾರ | .... | ೦ | ೧೦ | ೦ |
| ವರ್ತಮಾನ ಭಾರತ | .... | ೦ | ೧೦ | ೦ |
| ವಿವೇಕವಾಣಿ | .... | ೦ | ೧೦ | ೦ |
| ಜ್ಞಾನಮಾರ್ಗ | .... | ೦ | ೮ | ೦ |
| ನನ್ನ ಗುರುದೇವ | .... | ೦ | ೮ | ೦ |
| ಭಕ್ತಿಮಾರ್ಗ | .... | ೦ | ೮ | ೦ |
| ಚಿಕಾಗೋ ಉಪನ್ಯಾಸ | .... | ೦ | ೬ | ೦ |
| ಆರತಿ | .... | ೦ | ೬ | ೦ |
| ಶ್ರೀರಾಮಕೃಷ್ಣ (ಸಂಕ್ಷಿಪ್ತ ಜೀವನ) | .... | ೦ | ೫ | ೦ |
| ಸ್ವಾಮಿ ವಿವೇಕಾನಂದ ,, | .... | ೦ | ೫ | ೦ |
| ಶ್ರೀ ಶಾರದಾದೇವಿ ,, | .... | ೦ | ೫ | ೦ |
| ಮುಮುಕ್ಷು ಲಕ್ಷಣ | .... | ೦ | ೪ | ೦ |
| ನನ್ನ ಜೀವನ ಮತ್ತು ಧ್ಯೇಯ | .... | ೦ | ೪ | ೦ |
| ಈಶ್ವರಾನುರಾಗ | .... | ೦ | ೪ | ೦ |
| ನೊಂದ ಜೀವಕ್ಕೆ ಭರವಸೆ | .... | ೦ | ೪ | ೦ |
| ಭಾರತ ಮಹಿಳೆ | .... | ೦ | ೪ | ೦ |
| ಕರ್ಮರಹಸ್ಯ | .... | ೦ | ೪ | ೦ |
| ಸಾಧನ | .... | ೦ | ೪ | ೦ |
| ಪವಹಾರಿ ಬಾಬಾ | .... | ೦ | ೪ | ೦ |
| ದೇವದೂತ ಏಸುಕ್ರಿಸ್ತ | .... | ೦ | ೪ | ೦ |
| ಧ್ಯಾನ | .... | ೦ | ೪ | ೦ |

**ಶ್ರೀ ರಾಮಕೃಷ್ಣಾಶ್ರಮ, ಮೈಸೂರು.**

ಭರತಖಂಡ ನಾಶವಾಗುವುದೆ? ಆಗ ಪ್ರಪಂಚದಿಂದ ಆಧ್ಯಾತ್ಮಿಕತೆಯೆಲ್ಲ ಮಾಯವಾಗುವುದು; ನೈತಿಕೋನ್ನತಿಯೆಲ್ಲ ನಿರ್ನಾಮವಾಗುವುದು. ಧಾರ್ಮಿಕಭಾವನೆಗಳಿಗೆ ತೋರುವ ಹೃತ್ಪೂರ್ವಕ ಸಹಾನುಭೂತಿ ಮಾಯವಾಗುವುದು. ಎಲ್ಲಾ ಭವ್ಯ ಉದ್ದೇಶಗಳೂ ಮಾಯವಾಗುವುವು. ಅದರ ಸ್ಥಳದಲ್ಲಿ ಕಾಮ ಮತ್ತು ಭೋಗವೆಂಬ ಸ್ತ್ರೀಪುರುಷ ದೇವರು ಆಳುವರು. ಹಣವೇ ಪುರೋಹಿತನಲ್ಲಿ, ಮೋಸ ಬಲಾತ್ಕಾರ ಸ್ಪರ್ಧೆಯೇ ಆಚಾರಗಳಲ್ಲಿ; ಜೀವಾತ್ಮನೇ ಯಜ್ಞಪಶುವಲ್ಲಿ. ಇಂತಹ ಪ್ರಸಂಗ ಎಂದಿಗೂ ಬರಲಾರದು. ಕೆಲಸ ಮಾಡುವ ಶಕ್ತಿಗಿಂತ ಸಹನಶಕ್ತಿ ಹೆಚ್ಚಿನದು. ಕೋಟಿಪಾಲು ಹೆಚ್ಚಿನದು. ದ್ವೇಷಕ್ಕಿಂತ ಪ್ರೀತಿಯ ಶಕ್ತಿ ಅದ್ಭುತ ಪರಿಣಾಮಕಾರಿ.

*　　*　　*　　*

ಭರತಖಂಡ ಉದ್ಧಾರವಾಗುವುದು, ದಂಷ್ಟ್ರನಖಗಳ ಶಕ್ತಿಯಿಂದಲ್ಲ, ಆತ್ಮಶಕ್ತಿಯಿಂದ. ಐಶ್ವರ್ಯದ ಶಕ್ತಿಯಿಂದಲ್ಲ, ಭಿಕ್ಷಾಪಾತ್ರೆಯ ಶಕ್ತಿಯಿಂದ. ಅದರ ಧ್ವಜ ವಿನಾಶಹೇತುವಲ್ಲ, ಶಾಂತಿ ಪ್ರೀತಿಯನ್ನು ಸೂಚಿಸುವ ಸನ್ಯಾಸಿಯ ಗೈರಿಕ ವಸನವೆ ಅದರ ಲಾಂಛನ. ನೀನು ಕೈಲಾಗದವನೆಂದು ಹೇಳಬೇಡ. ಆತ್ಮ ಸರ್ವಶಕ್ತಿಮಾನ್.